‘ಮ್ಯಾಂಗಲೋರ್ ಮ್ಯಾಗಜೀನ್’ನಲ್ಲಿ ಬಿಂಬಿತ ದಕ್ಷಿಣಕನ್ನಡ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ. ಫಿಲ್ ಪದವಿಗಾಗಿ
[ಸಮಾಜ ವಿಜ್ಞಾನ ನಿಕಾಯ] ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ
ಅಶೋಕ ರಾಖೇಶ್ ಡಿ’ಸೋಜ

ಮಾರ್ಗದರ್ಶಕರು
ಡಾ. ಡೆನಿಸ್ ಫೆರ್ನಾಂಡಿಸ್

2008

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

412

'[illegible] ಮ್ಯಾಗಜೀನ್'ನಲ್ಲಿ

ಪ್ರಕಟಿತ ದಕ್ಷಿಣಕನ್ನಡ

[illegible]

ಸಂಶೋಧಕ

[illegible]

ಮಾರ್ಗದರ್ಶಕರು

ಡಾ. [illegible]

[illegible]

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

‘ಮ್ಯಾಂಗಲೋರ್ ಮ್ಯಾಗಜೀನ್’ನಲ್ಲಿ ಬಿಂಬಿತ ದಕ್ಷಿಣಕನ್ನಡ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ. ಫಿಲ್ ಪದವಿಗಾಗಿ
[ಸಮಾಜ ವಿಜ್ಞಾನ ನಿಕಾಯ] ಸಾದರಪಡಿಸಿದ ಸಂಪ್ರಬಂದ

ಸಂಶೋಧಕ
ಅಶೋಕ ರಾಖೇಶ್ ಡಿ’ಸೋಜ

ಮಾರ್ಗದರ್ಶಕರು
ಡಾ. ಡೆನಿಸ್ ಫೆರ್ನಾಂಡಿಸ್

2008

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಯೋಗ್ಯತಾ ಪತ್ರ

ಅಶೋಕ ರಾಖೇಶ್ ಡಿ'ಸೋಜ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಬಿಂಬಿತ ದಕ್ಷಿಣಕನ್ನಡ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ. ಫಿಲ್ ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ಅಭಿಪ್ರಾಯ ಸಂಗ್ರಹ, ಭೋಧನೆ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಡಾ. ಡೆನಿಸ್ ಫೆರ್ನಾಂಡಿಸ್
ಸಂಶೋಧನ ಮಾರ್ಗದರ್ಶಕರು.

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ. ಫಿಲ್ ಪದವಿಗಾಗಿ ಸಾದರಪಡಿಸಿದ "ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಬಿಂಬಿತ ದಕ್ಷಿಣಕನ್ನಡ" ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ಡೆನಿಸ್ ಫೆರ್ನಾಂಡಿಸ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

Ashok R. D'souza

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಅಶೋಕ ರಾಖೇಶ್ ಡಿ'ಸೋಜ

ನೆನಕೆ

'ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಬಿಂಬಿತ ದಕ್ಷಿಣ ಕನ್ನಡ' ಎಂಬ ಶೀರ್ಷಿಕೆಯ ಮಹಾಪ್ರಬಂಧವು ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಡಿಯಲ್ಲಿ ನಡೆಸಿದ ಕಾಲಬದ್ಧ ಸಂಶೋಧನೆ. ಈ ಸಂಶೋಧನಾ ಕಾರ್ಯಕ್ಕೆ ಎಲ್ಲ ಬಗೆಯ ವ್ಯವಸ್ಥಾಪನ ನೆರವು ನೀಡಿದ ಪ್ರೇರಕ ಕೇಂದ್ರಗಳಾದ ಕನ್ನಡ ವಿಶ್ವವಿದ್ಯಾನಿಲಯ , ಹಂಪಿ ಹಾಗೂ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಮಂಗಳೂರು ಇವೆರಡನ್ನು ಹೃತ್ಪೂರ್ವಕವಾಗಿ ನೆನೆಯುತ್ತೇನೆ.

ಈ ಮಹಾಪ್ರಬಂಧ ರಚನೆಯ ಸಂದರ್ಭದಲ್ಲಿ ಮಾರ್ಗದರ್ಶಕರಾಗಿ ನನಗೆ ಸೂಕ್ತ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿದ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದ ಮಾರ್ಗದರ್ಶಕರು ಹಾಗೂ ಸಂತ ಅಲೋಶಿಯಸ್ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಡಾ। ಡೆನಿಸ್ ಫೆರ್ನಾಂಡಿಸ್‌ರಿಗೆ ನನ್ನ ವಿಶೇಷ ವಂದನೆಗಳು. ಸಂಶೋಧನೆಯ ಸಂದರ್ಭದಲ್ಲಿ ನನಗೆ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಹುರಿದುಂಬಿಸಿದ ಮಂಗಳೂರು ವಿಶ್ವವಿದ್ಯಾನಿಲಯದ, ಇತಿಹಾಸ ವಿಭಾಗದ ಪ್ರೊ. ಬಿ ಸುರೇಂದ್ರ ರಾವ್ ಇವರಿಗೂ ನನ್ನ ಕೃತಜ್ಞತಾಪೂರ್ವಕ ನಮನಗಳು. ಆಡಳಿತಾತ್ಮಕ ಸಹಕಾರ ನೀಡಿ ನನ್ನ ಸಂಶೋಧನೆಗೆ ಪೂರ್ಣ ಬೆಂಬಲ ನೀಡಿದ ಕರ್ನಾಟಕ ತಿಯೋಲಾಜಿಕಲ್ ಕಾಲೇಜಿನ ಪ್ರಾಂಶುಪಾಲರಾದ ರೆ। ಡಾ। ಜೆ. ಎಸ್ ಸದಾನಂದರನ್ನು ಹಾಗೂ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ। ಎ. ವಿ ನಾವಡರನ್ನು ಗೌರವ ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ.

ಸಂಶೋಧನೆಯ ಸಂದರ್ಭದಲ್ಲಿ ಅಪೂರ್ವ ದಾಖಲೆಗಳನ್ನು ಬಳಸಲು ಸಹಾಯಿಸಿದ ಸಂತ ಅಲೋಶಿಯಸ್ ಕಾಲೇಜಿನ ಆಡಳಿತ ಮಂಡಳಿ, ಗ್ರಂಥಪಾಲಕರಾದ ಶ್ರೀ ಜೋರ್ಜ್ ರೋಡ್ರಿಗಸ್ ಮತ್ತು ಗ್ರಂಥಪಾಲಯದ

ನೌಕರ ವರ್ಗ, ಕರ್ನಾಟಕ ತಿಯೋಲಾಜಿಕಲ್ ಕಾಲೇಜಿನ ಗ್ರಂಥಪಾಲಕರಾದ ಶ್ರೀ ಬೆನೆಟ್ ಅಮ್ಮನ್ನ ಮತ್ತು ನೌಕರ ವರ್ಗ ಇವರಿಗೂ ನನ್ನ ಹೃತ್ಪೂರ್ವಕ ನಮನಗಳು. ಸಂಶೋಧನೆಯ ಸಂದರ್ಭದಲ್ಲಿ ಸೂಕ್ತ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿದ ಪೊಂಪೈ ಕಾಲೇಜು, ಐಕಳದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ। ರಾಧಾಕೃಷ್ಣ ಭಟ್. ಎಂ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಯೋಗೀಂದ್ರ ಬಿ ಇವರನ್ನು ಗೌರವ ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತಿದ್ದೇನೆ.

ಈ ಸಂಶೋಧನೆಯ ಸಂದರ್ಭದಲ್ಲಿ ನನ್ನನ್ನು ಹುರಿದುಂಬಿಸಿದ ಪೊಂಪೈ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಪೇಟ್ರಿಕ್ ಮಿನೇಜಸ್, ಕಛೇರಿ ಅಧೀಕ್ಷಕರಾದ ಶ್ರೀ ರೋಕಿ ಜಿ. ಲೋಬೊ, ಕಾಲೇಜಿನ ಆಡಳಿತ ಮಂಡಳಿ, ಗ್ರಂಥಪಾಲಕರಾದ ಮೈಕಲ್ ಪಿಂಟೊ ಮತ್ತು ಗ್ರಂಥಾಲಯದ ನೌಕರ ವರ್ಗ, ತಾಂತ್ರಿಕ ಸಹಾಯ ನೀಡಿದ ರೋಶನ್ ಡಿ' ಸೋಜ, ಎಲ್ಲರನ್ನೂ ನಾನು ನೆನಪಿಸಿಕೊಳ್ಳುತ್ತೇನೆ.

ನನ್ನ ಸಂಶೋಧನೆಯ ಸಮಯದಲ್ಲಿ ಎಲ್ಲಾ ರೀತಿಯಲ್ಲೂ ಸಹಕರಿಸಿದ ನನ್ನ ತೀರ್ಥರೂಪರಾದ ಶ್ರೀ ವಿಕ್ಟರ್ ಡಿ' ಸೋಜ, ಮಾತೃಶ್ರಿ ಬೆನೆಡಿಕ್ಟ ಡಿ' ಸೋಜ ಹಾಗೂ ತಂಗಿ ಎಲಿಜಬೆತ್ ರೇಶ್ಮಾ ಡಿ' ಸೋಜ ಇವರಿಗೂ ನನ್ನ ನೆನಕೆಗಳು.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಅಶೋಕ ರಾಖೇಶ್ ಡಿ'ಸೋಜ
ಸಂಶೋಧಕ

'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಬಿಂಬಿತ ದಕ್ಷಿಣಕನ್ನಡ

ಅಧ್ಯಾಯಗಳ ವಿವರ

ಅಧ್ಯಾಯ : ಒಂದು
ಪೀಠಿಕೆ

ಅಧ್ಯಾಯ : ಒಂದು
ಪೀಠಿಕೆ

ವಸಾಹತುಶಾಹಿ ಬರವಣಿಗೆಗಳಲ್ಲಿ ದಕ್ಷಿಣ ಕನ್ನಡವು 'ಕೆನರಾ/ಸೌತ್ ಕೆನರಾ' ಎಂದೇ ಪರಿಚಿತವಾಗಿದೆ. ಡಾ। ಪಿ. ಗುರುರಾಜ ಭಟ್ಟರ ಪ್ರಕಾರ ಪೋರ್ಚುಗೀಸರು ಈ ಪ್ರದೇಶಕ್ಕೆ ಬಂದಾಗ ಸಾಮಾನ್ಯ ಭಾಷೆಯಾದ ಕನ್ನಡವನ್ನು ಮಾತನಾಡುವ ಜನರನ್ನು ಕಂಡು, ಈ ಪ್ರದೇಶವನ್ನು 'ಕೆನರಾ' ಎಂದು ಕರೆದರು. ಪೋರ್ಚುಗೀಸರಲ್ಲಿ ಡಿ(d) ಎಂಬ ಅಕ್ಷರದ ಬಳಕೆ ಬಹಳ ಕಡಿಮೆಯಾಗಿದ್ದು ಈ ರೀತಿ ಕರೆದರು. ಈ ಹೆಸರು ಇಡೀ ಕರ್ನಾಟಕ ಕರಾವಳಿ ಪ್ರದೇಶಕ್ಕೂ ಸಂಬಂಧಿಸಿದ್ದು ನಂತರ ಬ್ರಿಟಿಷರು ಇದೇ ಪದವನ್ನು ಬಳಸಿದರು.[1] ಕ್ರಿ.ಶ 1799 ರಲ್ಲಿ ಬ್ರಿಟಿಷರು ಟಿಪ್ಪುವನ್ನು ನಾಲ್ಕನೇ ಆಂಗ್ಲೋ-ಮೈಸೂರು ಕದನದಲ್ಲಿ ಸೋಲಿಸುವುದರೊಂದಿಗೆ ಈ ಪ್ರದೇಶವು ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ 1863ರಲ್ಲಿ ಬ್ರಿಟಿಷರು ಈ ಪ್ರದೇಶವನ್ನು ನಾರ್ತ್ ಮತ್ತು ಸೌತ್ ಕೆನರಾವನ್ನಾಗಿ ವಿಭಜಿಸಿ 'ನಾರ್ತ್' ಕೆನರಾವನ್ನು ಮುಂಬಾಯಿ ಪ್ರಾಂತ್ಯಕ್ಕೆ ಸೇರಿಸಿದರು. 'ಸೌತ್ ಕೆನರಾ'ವನ್ನು ಮದ್ರಾಸ್ ಪ್ರಾಂತ್ಯದಲ್ಲಿಯೇ ಮುಂದುವರಿಸಲಾಯಿತು.[2] ಕ್ರಿ.ಶ 1799ರಲ್ಲಿ ಕೆಪ್ಟನ್ ಥೊಮಸ್ ಮುನ್ರೋ ಎಂಬ ಸೇನಾಧಿಪತಿಯು ಕೆನರಾದ ಮೊದಲನೆಯ ಕಲೆಕ್ಟರನಾಗಿ ನೇಮಿಸಲ್ಪಟ್ಟನು.[3] ಸೌತ್ ಕೆನರವು ಉತ್ತರದಲ್ಲಿನಾರ್ತ್ ಕೆನರಾ, ದಕ್ಷಿಣದಲ್ಲಿ ಮಲಬಾರ್, ಪೂರ್ವದಲ್ಲಿ ಮೈಸೂರು ಮತ್ತು ಕೂರ್ಗ್ ಹಾಗೂ ಪಶ್ಚಿಮದಲ್ಲಿ ಹಿಂದೂ ಮಹಾಸಾಗರದಿಂದ ಸುತ್ತುವರಿದಿತ್ತು. ಸೌತ್ ಕೆನರಾ ಪ್ರದೇಶವು 150 ಮೈಲಿ ಉದ್ದವಿದ್ದು ಕಿರಿದಾದ ಪ್ರದೇಶಗಳಲ್ಲಿ 25 ಮೈಲಿ ಹಾಗೂ ವಿಸ್ತೃತ ಪ್ರದೇಶಗಳಲ್ಲಿ 50 ಮೈಲಿ ಅಗಲವಿದೆ.[4] ಪ್ರಸ್ತುತ ಅವಿಭಜಿತ ದಕ್ಷಿಣ ಕನ್ನಡವನ್ನು ತುಳುನಾಡು ಎಂದು ಕರೆಯುವ ಪದ್ಧತಿಯು ಕ್ರಿಸ್ತ ಶಕಾರಂಭದಿಂದ ಹಿಡಿದು ಕೆಳದಿ ಅರಸರ ಆಳ್ವಿಕೆಯವರೆಗೆ ಎಂದರೆ 17ನೇ ಶತಮಾನದ ಕೊನೆಯವರೆಗೆ ಇತ್ತು.[5] ಪ್ರಾಚೀನ ತುಳುವ ಪ್ರದೇಶವು ಸಂಪೂರ್ಣ ಸೌತ್ ಕೆನರಾ ಮತ್ತು ನಾರ್ತ್ ಕೆನರಾದ ಕೆಲವು ಭಾಗಗಳನ್ನು ಒಳಗೊಂಡಿತ್ತು.[6]

ದಕ್ಷಿಣ ಕನ್ನಡದ ವಸಾಹತು ಪೂರ್ವಕಾಲದ ಕುರಿತಾದ ಅಧ್ಯಯನಕ್ಕೆ ಹೋಲಿಸಿದರೆ ವಸಾಹತುಕಾಲದ ಈ ಪ್ರದೇಶದ ಬಗ್ಗೆ ನಡೆದ ಅಧ್ಯಯನ ಬಹಳ ವಿರಳವಾಗಿದೆ. ವಿದ್ವಾಂಸರಾದ ಗಣಪತಿರಾವ್ ಐಗಳ್, ಬಿ.ಎ.ಸಾಲೆತ್ತೋರ್, ಕೆ.ವಿ ರಮೇಶ, ಪಿ ಗುರುರಾಜ ಭಟ್, ಕೆ.ಜಿ.ವಸಂತ ಮಾಧವ ಮತ್ತು ಸೂರ್ಯನಾಥ್ ಯು ಕಾಮತ್‌ರವರು ಮಧ್ಯಯುಗೀನ ತುಳುನಾಡಿನ ಕುರಿತು ಅಪಾರವಾದ ಸಂಶೋಧನೆ ನಡೆಸಿದ್ದಾರೆ.[7] ಈ ಗ್ರಂಥಗಳು ಮುಖ್ಯವಾಗಿ ಶಾಸನಗಳ ಆಧಾರಗಳ ಮೇಲೆ ಬೆಳಕು ಚೆಲ್ಲುತ್ತವೆ. ಆದಾಗ್ಯೂ ಅವರ ಬರವಣಿಗೆಗಳು ರಾಷ್ಟ್ರೀಯತೆ ಮತ್ತು ಸ್ಥಳೀಯತೆಯ ಪ್ರತಿಷ್ಠೆಯಿಂದ

ತುಂಬಿದ್ದು, ಆವರು ನಿಗದಿತ ಐತಿಹಾಸಿಕ ಬರವಣಿಗೆಗಳನ್ನು ಬಳಸಿದ್ದಾರೆ. ಆವರ ದೃಷ್ಟಿಯಲ್ಲಿ ತುಳುನಾಡಿನ ಇತಿಹಾಸವು ಈ ಪ್ರದೇಶದ ಮೇಲೆ ಆಳ್ವಿಕೆ ನಡೆಸಿರುವ ರಾಜವಂಶಗಳ ಚರಿತ್ರೆಯಾಗಿದೆ.

ಆಧುನಿಕ ತುಳುನಾಡಿನ ಬಗ್ಗೆ ಕೆಲವೊಂದು ಅಪ್ರಕಟಿತ ಪ್ರಬಂಧಗಳಿವೆ. ವಿಲಿಯಂ ಎಕ್ಸ್. ಮಸ್ಕರೇನಸ್‌ರವರು ಎಂ.ಎ ಪದವಿಯ ಪೂರೈಕೆಗಾಗಿ ಮುಂಬಾಯಿ ವಿಶ್ವ ವಿದ್ಯಾನಿಲಯಕ್ಕೆ 1931 ರಲ್ಲಿ ಸಲ್ಲಿಸಲಾದ 'ಹೈದರಾಲಿ ಆ್ಯಂಡ್ ಟಿಪ್ಪು ಸುಲ್ತಾನ್ ಇನ್ ಕೆನರಾ' ಎಂಬ ಪ್ರಬಂಧವಿದ್ದು ಇದು ಪ್ರಬಲ ಪೂರ್ವ ಕಲ್ಪಿತವಾದ ಅಭಿಪ್ರಾಯಗಳಿಂದ ತುಂಬಿದೆ. ಇಲ್ಲಿ ಟಿಪ್ಪು ಸುಲ್ತಾನನ್ನು ಈ ಪ್ರದೇಶದಲ್ಲಿ ಕ್ರೈಸ್ತರ ವೈರಿಯಾಗಿ ಬಿಂಬಿಸಲಾಗಿದ್ದು, ಟಿಪ್ಪುವಿನ ಮುಖ್ಯ ಉದ್ದೇಶ ಇವರನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡುವುದಾಗಿದ್ದು, ಸಂಪೂರ್ಣ ಪ್ರಬಂಧದಲ್ಲಿ ಕ್ರಿಶ್ಚಿಯನರ ಮೇಲಿನ ಕ್ರೂರತ್ವವನ್ನು ಚಿತ್ರಿಸಲಾಗಿದೆ. ಶ್ಯಾಮ್ ಭಟ್‌ರವರು 1987 ರಲ್ಲಿ ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಸಲ್ಲಿಸಿದ "ಸೌತ್ ಕೆನರಾ 1799–1860 : ಎ ಸ್ಟಡಿ ಇನ್ ಕೋಲೋನಿಯಲ್ ಎಡ್‌ಮಿನಿಸ್ಟ್ರೇಶನ್ ಆ್ಯಂಡ್ ರಿಜಿನಲ್ ರೆಸ್‌ಪೋನ್ಸ್",[8] ಮತ್ತು ಮಾಲತಿ ಕೆ. ಮೂರ್ತಿಯವರು ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ 1991ರಲ್ಲಿ ಸಲ್ಲಿಸಿದ "ಟ್ರೇಡ್ ಆ್ಯಂಡ್ ಕೋಮರ್ಸ್ ಇನ್ ಕೋಲೋನಿಯಲ್ ಸೌತ್ ಕೆನರಾ: 1799–1862" ಇವು ಸಮಕಾಲೀನ ಭಾರತದ ವಸಾಹತುಶಾಹಿ ಅಂಶದೊಳಗೆ ಚರ್ಚೆ ನಡೆಸುತ್ತವೆ. ಶ್ಯಾಮ್ ಭಟ್‌ರವರು ಪ್ರಾರಂಭದ ವಸಾಹತುಶಾಹಿ ಕಾಲದಲ್ಲಿ ರಚಿತವಾದ ಚಿಂತನೆಗಳು ಹಾಗೂ ಕೆನರಾದ ಕಂದಾಯ ಆಳ್ವಿಕೆಯ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ವಸಾಹತುಶಾಹಿ ಆಳ್ವಿಕೆಯಿಂದಾಗಿ ಈ ಪ್ರದೇಶವು ಪ್ರತಿಭಟನೆ ಮತ್ತು ದಂಗೆಗಳನ್ನು ಎದುರಿಸಿತು. ಇನ್ನೊಂದೆಡೆ ಮಾಲತಿ ಮೂರ್ತಿಯವರು ವಸಾಹತುಶಾಹಿಯ ಬೇಡಿಕೆಯನ್ನು ಪೂರೈಸುವ ಸಲುವಾಗಿ ಅನುಸರಿಸಿದ ವಸಾಹತುಶಾಹಿ ವ್ಯಾಪಾರ ನೀತಿ ಮತ್ತು ಅದರಿಂದಾಗಿ ಈ ಪ್ರದೇಶದ ಆರ್ಥಿಕತೆಯ ಮೇಲಾದ ಪರಿಣಾಮಗಳ ಬಗ್ಗೆ ಚರ್ಚಿಸಿದ್ದಾರೆ. ಹೆಚ್.ಆರ್.ಕರುಣಾಕರ್‌ರವರು (ಮೈಸೂರು) 1985 ರಲ್ಲಿ ಸಲ್ಲಿಸಿದ ಅಪ್ರಕಟಿತ ಪಿ.ಎಚ್.ಡಿ ಪ್ರಬಂಧವಾದ 'ಸೋಶಿಯೋ ಇಕೋನೋಮಿಕ್ ಕಂಡಿಷನ್ಸ್ ಇನ್ ಸೌತ್ ಕೆನರಾ: 1860–1956 ; ಎ.ಕೆ ಹಿಮಕರ (Himakara)ರವರು 1987ರಲ್ಲಿ ಸಲ್ಲಿಸಿದ ಅಪ್ರಕಟಿತ ಪಿ.ಎಚ್.ಡಿ ಪ್ರಬಂಧವಾದ 'ದಿ ಹಿಸ್ಟರಿ ಆಫ್ ಎಗ್ರಿಕಲ್ಚರಲ್ ಪ್ರೊಡಕ್ಷನ್ ಇನ್ ಸೌತ್ ಕೆನರಾ ಡ್ಯೂರಿಂಗ್ ದಿ 18ನೇ ಸೆಂಚುರಿ' ಇವು ಮೇಲಿನ ಗ್ರಂಥಗಳ ಜೊತೆ ಸಾಮ್ಯತೆ ಇರುವ ಇತರ ಗ್ರಂಥಗಳಾಗಿವೆ.

1987ರಲ್ಲಿ ಪೀಟರ್ ವಿಲ್ಸನ್ ಪ್ರಭಾಕರ್ ರವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ 'ಬಾಸೆಲ್ ಮಿಶನ್ ಇನ್ ಸೌತ್ ಕೆನರಾ 1834–1947' ಎನ್ನುವ ಶಿರೋನಾಮೆಯ ಪಿ.ಎಚ್.ಡಿ ಪ್ರಬಂಧವು ದಕ್ಷಿಣ ಕೆನರಾದಲ್ಲಿ ಬಾಸೆಲ್ ಮಿಶನಿನ ಕಾರ್ಯಚರಣೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತದೆ. ಶೀರ್ಷಿಕೆ ಸೂಚಿಸುವಂತೆ ಇದು ಬಾಸೆಲ್ ಮಿಶನ್ ಶಿಕ್ಷಣ, ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಗಳಿಸಿದ

ಸಾಧನೆಗಳ ದಾಖಲೆಯಾಗಿದೆ. ಬಾಸೆಲ್ ಮಿಶನ್ ತಾನು ನಿರ್ಧರಿಸಿದಷ್ಟು ಸ್ಥಳಿಯರನ್ನು ಮತಾಂತರ ಮಾಡುವಲ್ಲಿ ವಿಫಲವಾದರೂ, ಇದು ಈ ಪ್ರದೇಶದ ಭಾಷೆ ಮತ್ತು ಸಾಹಿತ್ಯಕ್ಕೆ ತನ್ನ ಪ್ರೆಸ್ ಮೂಲಕ ಕೊಡುಗೆಯನ್ನು ನೀಡಿದೆ ಹಾಗೂ ಕೊನೆಗೆ ಈ ಪ್ರದೇಶದಲ್ಲಿ ವ್ಯಾಪಿಸುತ್ತಿರುವ ಕ್ರಿಶ್ಚಿಯಾನಿಟಿಯಿಂದ ಅದು ಸಮಾಧಾನ ಪಟ್ಟುಕೊಂಡಿದೆ. ಡೆನಿಸ್ ಫೆರ್ನಾಂಡಿಸ್‌ರವರು 2006 ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ "ದಿ ತುಳು ವರ್ಲ್ಡ್ ಇನ್ ಯೂರೋಪಿಯನ್ ರೈಟಿಂಗ್ಸ್" ಪಿ.ಎಚ್.ಡಿ ಪ್ರಬಂಧವು ವಸಹಾತುಶಾಹಿ ಬರವಣಿಗಳಲ್ಲಿ ವಿಶೇಷವಾಗಿ ಮಿಶನರಿ ಬರವಣಿಗೆಗಳಲ್ಲಿ ಬಿಂಬಿತ ದಕ್ಷಿಣ ಕನ್ನಡದ ಬಗ್ಗೆ ಚಿತ್ರಣ ಕೊಡುತ್ತದೆ.

ಪ್ರಸ್ತುತ ಅಧ್ಯಯನವು ಪ್ರಾಥಮಿಕ ಮತ್ತು ದ್ವಿತೀಯ ಆಕರಗಳನ್ನು ಆಧರಿಸಿದೆ. ಮ್ಯಾಂಗಲೋರ್ ಮ್ಯಾಗಜೀನ್‌ನ ಎಂಟು ಸಂಪುಟಗಳು, ಸ್ಟರಕ್ (sturrock) ರವರ ಮೆಡ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್ : ಸೌತ್ ಕೆನರಾ ಹಾಗೂ ಸಂತ ಅಲೋಶಿಯಸ್ ಕಾಲೇಜಿನ ಸೆಂಟಿನರಿ ಸಾವೆನಿಯರ್, 1980, ಇವು ಪ್ರಮುಖ ಪ್ರಾಥಮಿಕ ಆಕರಗಳಾದರೆ ಇತರ ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳನ್ನು ದ್ವಿತೀಯ (secondary source)ಆಕರಗಳಾಗಿ ಬಳಸಲಾಗಿದೆ[9].

ಕ್ರಿ.ಶ ಒಂದನೆಯ ಶತಮಾನದಲ್ಲಿಯೇ ಕ್ರೈಸ್ತ ಮತವು ದಕ್ಷಿಣ ಭಾರತದಲ್ಲಿ ಹಬ್ಬಿತೆಂದು ತಿಳಿಯುತ್ತದೆ. ಏಸುವಿನ ಶಿಷ್ಯರಲ್ಲಿ ಒಬ್ಬನಾದ ತೋಮಸನು ಕೇರಳ ಹಾಗೂ ತಮಿಳುನಾಡಿನಲ್ಲಿ ಇದನ್ನು ಭೋಧಿಸಿದನು ಎಂಬ ಬಲವಾದ ನಂಬಿಕೆಯಿದೆ. ಆದರೆ ಕೆನರಾದಲ್ಲಿ ಅದರ ಇರುವಿಕೆಯ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ.[10] ಕೆನರಾದಲ್ಲಿ ಪೋರ್ಚುಗೀಸ್ ನಿಯಂತ್ರಣವಿದ್ದಂತಹ ಕಾಲದಲ್ಲಿ ಕೆಥೋಲಿಕ್ ಸಮುದಾಯ ಈ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂತು. ಇಲ್ಲಿನ ಬಹುತೇಕ ಕೆಥೋಲಿಕರು ಗೋವಾದಿಂದ ವಲಸೆ ಬಂದವರು. ಗೋವಾದಲ್ಲಿ ಪೋರ್ಚುಗೀಸರ ಕಾಲದಲ್ಲಿ ಇವರು ವಿವಿಧ ರೀತಿಯ ಸಮಸ್ಯೆಗಳಿಂದಾಗಿ ಗೋವಾವನ್ನು ಬಿಟ್ಟು ಕೆನರಾ ಕರಾವಳಿಗೆ ಬಂದು ನೆಲೆ ನಿಂತರು. [11] ಬಿದನೂರು ಅರಸರು ಇವರಿಗೆ ಭೂಮಿಯನ್ನು ದಾನವಾಗಿ ನೀಡಿದರು. ಈ ರೀತಿ 17ನೇ ಶತಮಾನಾರ್ಧಕ್ಕೆ ಕೆನರಾದಲ್ಲಿ 25 ಚರ್ಚ್‌ಗಳು ಅಸ್ಥಿತ್ವಕ್ಕೆ ಬಂದವು.[12] ಟಿಪ್ಪುವಿನ ಅಧೀನದಲ್ಲಿದ್ದ ಕೆನರಾ ಪ್ರದೇಶವನ್ನು ವಶಪಡಿಸುವ ಸಲುವಾಗಿ ಬ್ರಿಟಿಷರು ಆಂಗ್ಲೋ-ಮೈಸೂರು ಯುದ್ಧಗಳನ್ನು ಮಾಡಿದರು.[13] ಕ್ರಿ.ಶ 1783ರ ಯುದ್ಧದ ಸಂದರ್ಭದಲ್ಲಿ ಕೆನರಾದ ಕ್ರೈಸ್ತರು ಬ್ರಿಟಿಷರಿಗೆ ಮಂಗಳೂರನ್ನು ಆಕ್ರಮಿಸಲು ಸಹಾಯ ಮಾಡಿದರೆಂಬ ಆಪಾದನೆಗಾಗಿ ಟಿಪ್ಪುವು ಕ್ರಿ.ಶ 1784 ರಲ್ಲಿ 60,000(?) ಕ್ರೈಸ್ತರನ್ನು ಸೆರೆ ಹಿಡಿದು ಶ್ರೀರಂಗ ಪಟ್ಟಣಕ್ಕೆ ಕಳುಹಿಸಿದನು [14] ಹಾಗೂ 25 ಚರ್ಚ್ ಮತ್ತು ಚಾಫೆಲ್‌ಗಳನ್ನು ನಾಶಪಡಿಸಿದನು.[15] ಟಿಪ್ಪು ಬಂಧಿಸಿದ ಕ್ರೈಸ್ತರ ಸಂಖ್ಯೆಯ ಬಗ್ಗೆ ಹಲವು ವಿಭಿನ್ನ ಅಭಿಪ್ರಾಯಗಳಿವೆ.[16] ಕ್ರಿ.ಶ 1799 ರಲ್ಲಿ ನಡೆದ ಕೊನೆಯ ನಾಲ್ಕನೇ ಆಂಗ್ಲೋ-ಮೈಸೂರು

ಯುದ್ಧದಲ್ಲಿ ಬ್ರಿಟಿಷರು ಟಿಪ್ಪುವನ್ನು ಪತನಗೊಳಿಸುವುದರೊಂದಿಗೆ ಕೆನರಾ ಬ್ರಿಟಿಷರ ವಶವಾಗಿ ಮದ್ರಾಸ್ ಪ್ರಾಂತ್ಯದ ಒಂದು ಭಾಗವಾಯಿತು [17] ಹಾಗೂ ನೇರವಾಗಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟಿತು. ಟಿಪ್ಪುವಿನ ಕಾಲದಲ್ಲಿ ಸೆರೆಯಾಳಾಗಿದ್ದ ಬಹುತೇಕ ಕ್ರೈಸ್ತರು ಈ ಸಂದರ್ಭದಲ್ಲಿ ಕೆನರಾ ಜಿಲ್ಲೆಗೆ ವಾಪಸಾದರು ಹಾಗೂ ತಮ್ಮ ಪ್ರಧಾನ ಉದ್ಯೋಗವಾದ ಕೃಷಿಯಲ್ಲಿ ತೊಡಗಿಸಿಕೊಂಡರು. ಇವರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸಲು ಈ ಕಾಲದಲ್ಲಿ ಕಾರ್ಮೆಲೈಟ್ ಮಿಶನರಿಗಳು 1878ರವರೆಗೆ ಕೆನರಾದಲ್ಲಿ ನೆಲೆಸಿದ್ದರು.

1834 ರಲ್ಲಿ ಬಾಸೆಲ್ ಮಿಶನ್ ತನ್ನ ಕಾರ್ಯವನ್ನು ಮಂಗಳೂರಿನಲ್ಲಿ ಪ್ರಾರಂಭಿಸಿತು[18] ಹಾಗೂ ಸ್ಥಳೀಯರನ್ನು ಪ್ರೊಟೆಸ್ಟೆಂಟ್ ಧರ್ಮಕ್ಕೆ ಮತಾಂತರಿಸುವ ಕಾರ್ಯವನ್ನು ಆರಂಭಿಸಿತು. ಮಿಶನರಿ ಶಿಕ್ಷಣ ಸಂಸ್ಥೆಗಳು ತಲೆಯೆತ್ತಿದವು. ಇದರಿಂದ 1858 ರಿಂದ ಮಂಗಳೂರಿನ ಕ್ಯಾಥೋಲಿಕರು ಇಲ್ಲಿನ ಚರ್ಚ್ ಆಡಳಿತವನ್ನು ಜೆಸ್ಯೂಟರಿಗೆ ವರ್ಗಾಯಿಸಬೇಕೆಂದು ರೋಮ್‌ಗೆ ಬೇಡಿಕೆ ಮಂಡಿಸಲು ಆರಂಭಿಸಿದರು.[19] ಜೆಸ್ಯೂಟರು ಬಾಂಬೆ, ಕಲ್ಕತ್ತ ಮತ್ತು ಟ್ರಿಚ್ಚಿ (Trichy)ಯಲ್ಲಿ ಶೈಕ್ಷಣಿಕ ರಂಗದಲ್ಲಿ ಗಳಿಸಿರುವ ಸಾಧನೆಯಿಂದ ಆಕರ್ಷಿತರಾದ ಕೆನರಾ ಕೆಥೊಲಿಕ್ ಕ್ರೈಸ್ತರು ಅವರಿಗಾಗಿ ಬೇಡಿಕೆ ಮಂಡಿಸಿದರು.[20] ಕೊನೆಗೂ ಕ್ರಿ.ಶ 1878 ರಲ್ಲಿ ಪೋಪರಾದ 13ನೇ ಲೀಯೋರವರು ಮಂಗಳೂರು ಮಿಷನನ್ನು ಇಟಲಿಯ ವೆನಿಸ್ ಪ್ರಾಂತ್ಯದ ಜೆಸ್ಯೂಟರಿಗೆ ಹಸ್ತಾಂತರಿಸುವ ನಿರ್ಧಾರ ಕೈಗೊಂಡರು.[21] ಮಂಗಳೂರಿನ ಕ್ರೈಸ್ತರು ಮುಖ್ಯವಾಗಿ ಜರ್ಮನ್ ಜೆಸ್ಯೂಟರನ್ನು ನೀಡಬೇಕೆಂಬ ಬೇಡಿಕೆಯನ್ನು ಮಂಡಿಸಿದ್ದರು. ಜೆಸ್ಯೂಟರ ಬಹುಮುಖ್ಯ ಉದ್ದೇಶವೆಂದರೆ ಮಂಗಳೂರಿನಲ್ಲಿ ಒಂದು ಕಾಲೇಜು ಪ್ರಾರಂಭಿಸುವುದಾಗಿತ್ತು.[22] ಅದೇ ರೀತಿ ಸೆಪ್ಟಂಬರ್ 27, 1878ರಂದು ಕೆನರಾದ ವಿಕಾರೇಟನ್ನು ವೇರಪೋಲಿ (verapoly)ನಿಂದ ಪ್ರತ್ಯೇಕಿಸಿ ಇಟಲಿಯ ವೆನಿಸ್ ಪ್ರಾಂತ್ಯದ ಜೆಸ್ಯೂಟರಿಗೆ ನೀಡಲಾಯಿತು.[23] ಡಿಸೆಂಬರ್ 31, 1878 ರಂದು 9 ಜೆಸ್ಯೂಟರಿದ್ದ ಎಸ್.ಎಸ್.ಕಾಂಡ್ಲ (Khanddla) ಹಡಗು ಮಂಗಳೂರಿಗೆ ತಲುಪಿತು. ಜನವರಿ 12, 1880 ರಂದು ಕೊಡಿಯಾಲ್ ಬೈಲಿನಲ್ಲಿ ಮೇರಿ ಮ್ಯಾಗ್ದಲಿನ್ ಕೂವೆಲ್ಲೋರವರಿಂದ ಬಾಡಿಗೆ ಪಡೆದ ಬಂಗಲೆಯಲ್ಲಿ 150 ವಿದ್ಯಾರ್ಥಿಗಳೊಂದಿಗೆ ಸಂತ ಅಲೋಶಿಯಸ್ ಕಾಲೇಜು ಆರಂಭವಾಯಿತು.[24] ಕ್ರಿ.ಶ 1879 ಡಿಸೆಂಬರ್ 19ರಂದು ಫಾ। ವಿಲ್ಲಿ ಎಸ್.ಜೆರವರು ಕಾಲೇಜಿನ ಪ್ರಥಮ ರೆಕ್ಟರ್ ಹಾಗೂ ಪ್ರಾಂಶುಪಾಲರಾಗಿ ನೇಮಕಗೊಂಡರು.[25] ಕ್ರಿ.ಶ 1882 ರಲ್ಲಿ ಅಲೋಶಿಯಸ್ ಕಾಲೇಜು ಮದ್ರಾಸ್ ವಿಶ್ವವಿದ್ಯಾನಿಲಯದಿಂದ ದ್ವಿತೀಯ ದರ್ಜೆ ಕಾಲೇಜಾಗಿ ಸಂಯೋಜನೆಗೊಂಡಿತು. ಜನವರಿ 12, 1885 ರಂದು ಲಾರೆನ್ಸ್ ಲೋಬೋ ಪ್ರಭುರವರು ಇಡ್ಯಾ ಹಿಲ್ ನಲ್ಲಿ ಕಾಲೇಜಿಗೆ ದಾನ ನೀಡಿದ 9 ಎಕರೆ ಪ್ರದೇಶದಲ್ಲಿ ಕಟ್ಟಿದ ಕಾಲೇಜಿನ ಹೊಸ ಕಟ್ಟಡ ಉದ್ಘಾಟನೆಗೊಂಡಿತು [26] ಹಾಗೂ ಕ್ರಿ.ಶ 1887 ರಲ್ಲಿ ಪ್ರಥಮ ದರ್ಜೆ ಕಾಲೇಜಾಗಿ ಮಾನ್ಯತೆ ಪಡೆಯಿತು. ಕ್ರಿ.ಶ 1923 ರವರೆಗೆ ದಕ್ಷಿಣ ಭಾರತದ ಪಶ್ಚಿಮ

ಕರಾವಳಿಯಲ್ಲಿದ್ದ ಎರಡು ಪ್ರಮುಖ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಆಲೋಶಿಯಸ್ ಕಾಲೇಜು ಪ್ರಮುಖವಾಗಿತ್ತು.[27]

ಹೀಗೆ ಪ್ರಾರಂಭವಾದ ಕಾಲೇಜು ಕ್ರಿ.ಶ 1897 ರಲ್ಲಿ ಒಂದು ತ್ರೈಮಾಸಿಕ ಪತ್ರಿಕೆಯನ್ನು 'ಮ್ಯಾಂಗಲೋರ್ ಮ್ಯಾಗಜೀನ್' ಎಂಬ ಹೆಸರಿನಿಂದ ಆರಂಭಿಸಿತು. ಇದು ತನ್ನ ಮೊದಲ ಪ್ರಕಟನೆಯಲ್ಲಿಯೇ ಈ ಪತ್ರಿಕೆಯ ಉದ್ದೇಶವನ್ನು ಅದು ಸ್ಪಷ್ಟವಾಗಿ ತಿಳಿಸಿದೆ. "ಈ ಮ್ಯಾಗಜೀನ್‌ನನ್ನು ಕಾಲೇಜಿನ ಆಸಕ್ತ ಪದವಿಪೂರ್ವ ಮತ್ತು ಪದವೀಧರ ಹಾಗೂ ಮಂಗಳೂರು ಮತ್ತು ದಕ್ಷಿಣ ಕೆನರಾದವರಿಗಾಗಿ ಆರಂಭಿಸಲಾಗಿದೆ. ಇದು ಕಾಲೇಜಿನ ಒಂದು ಮಾಧ್ಯಮ ಹಾಗೂ ದಾಖಲೆಯಾಗಿದೆ. ಅದೇ ರೀತಿ ಇದು ಈಗಿನ ಮತ್ತು ಹಳೆ ವಿದ್ಯಾರ್ಥಿಗಳ ನಡುವಿನ ಒಂದು ಕೊಂಡಿಯಾಗಿದೆ."[28] ಇದು ಸಾಮಾನ್ಯ ಜನರ ಪತ್ರಿಕೆಯಾಗಿರದೇ, ಸಮಾಜದ ವಿದ್ಯಾವಂತರ ಹಾಗೂ ಸಿರಿವಂತರ ಪತ್ರಿಕೆಯಾಗಿತ್ತು ಎಂದೇ ಹೇಳಬಹುದು.ಯಾಕೆಂದರೆ 1897ರಲ್ಲೇ ಇದರ ವಾರ್ಷಿಕ ಚಂದಾ ಒಂದು ರೂಪಾಯಿಯಾಗಿತ್ತು.ಇದು ಬಡವರ ಪಾಲಿಗೆ ಕೈಗೆಟಕದ ಸಂಗತಿ.

'ಮ್ಯಾಂಗಲೋರ್ ಮ್ಯಾಗಜೀನ್'ನ ಪ್ರಥಮ ಸಂಪಾದಕರಾಗಿದ್ದ ರೆ।ಫಾ। ಜೋನ್ ಮೋರ್‌ರವರು ಒಬ್ಬ ಐರಿಷ್ ಪಾದ್ರಿಯಾಗಿದ್ದರು. ತಮ್ಮ ದೀಕ್ಷೆ ಸ್ವೀಕಾರದ ನಂತರ ಕ್ಯಾಲಿಫೋರ್ನಿಯಾದಲ್ಲಿ ಕೆಲಸ ನಿರ್ವಹಿಸಲು ಆಸಕ್ತಿ ತೋರಿದರೂ, ಅವರ ವರಿಷ್ಠರು ಅವರನ್ನು ಮಂಗಳೂರಿನಲ್ಲಿ ಸ್ಥಾಪನೆಯಾದ ಹೊಸ ಕಾಲೇಜಿಗೆ ಕಳುಹಿಸಿದರು. ಸಂತ ಅಲೋಶಿಯಸ್ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಅವರು ನಂತರ ಪ್ರಾಂಶುಪಾಲರು ಹಾಗೂ 1900 ರಿಂದ 1904 ರ ವರೆಗೆ ಕಾಲೇಜಿನ ರೆಕ್ಟರ್ ಆಗಿ ಕಾರ್ಯನಿರ್ವಹಿಸಿದರು. ಈ ಪತ್ರಿಕೆಗೆ ಕಾಲೇಜಿನ ವಿದ್ಯಾರ್ಥಿಗಳು ಮಾತ್ರವಲ್ಲದೆ, ಹಳೇ ವಿದ್ಯಾರ್ಥಿಗಳು, ಕೆನರಾದ ಪ್ರಸಿದ್ಧ ವ್ಯಕ್ತಿಗಳು ಲೇಖನಗಳನ್ನು ಬರೆಯುತ್ತಿದ್ದುದನ್ನು ಗಮನಿಸಬಹುದು. ಇದರ ಪ್ರಥಮ ಪ್ರಕಟನೆಯಲ್ಲಿ ಮಂಗಳೂರು ಬಂದರಿನ ಬಗ್ಗೆ ಇ.ಬಿ ಪಾಮರ್ ರವರು ಲೇಖನ ರಚಿಸಿದ್ದಾರೆ. ಅದೇ ರೀತಿ ಇಂಗ್ಲೆಂಡಿನ ರಾಣಿಯ ವಜ್ರಮಹೋತ್ಸವ ಸಂಭ್ರಮದ ಬಗ್ಗೆ ಹಾಗೂ ಕಾಲೇಜಿನ ಮತ್ತು ಅದರ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಾರ್ತೆಗಳಿವೆ. ಅದೇ ರೀತಿ ಕಾಲೇಜಿಗೆ ಸಂಬಂಧಿಸಿದ ಮರಣ ಹೊಂದಿದ ವಿದ್ಯಾರ್ಥಿಗಳು, ಪೋಷಕರು ಹಾಗೂ ಇತರರಿಗೆ ಶ್ರದ್ಧಾಂಜಲಿ ಅರ್ಪಿಸಿರುವುದನ್ನು ಕಾಣಬಹುದು.[29]

ರೆ।ಫಾ। ಮೋರ್ ಈ ಪತ್ರಿಕೆಯ ಸಂಪಾದಕರಾಗಿರುವಷ್ಟು ಕಾಲ ಈ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಸಾಹಿತ್ಯ ಶೈಲಿ, ಪದ ವಿನ್ಯಾಸವು ಸಾಮ್ಯತೆಯನ್ನು ಹೊಂದುತ್ತಿರುವುದನ್ನು ಕಾಣಬಹುದು. ಇದಕ್ಕೆ ಕಾರಣವೆಂದರೆ ಹೆಚ್ಚಿನ ಲೇಖನಗಳನ್ನು ಫಾ। ಮೋರ್‌ರವರು ಪುನರ್‌ರಚಿಸುತ್ತಿದ್ದಿರಬೇಕು ಹಾಗೂ ಲೇಖನಗಳ ಆಯ್ಕೆ ಸಂಬಂಧಿಸಿದಂತೆ ತಮ್ಮದೇ ನಿಲುವು ಪಾಲಿಸುತ್ತಿದ್ದಿರಬೇಕು. ಇಲ್ಲಿ ಸಿಗುವ ಹೆಚ್ಚಿನ

ಮಾಹಿತಿಗಳು ಕಾಲೇಜಿನ, ಜೆಸ್ಯೂಟರ ಬಗ್ಗೆ ಆದರೂ ಕೂಡ ಇತರ ಅನೇಕ ಕ್ರೈಸ್ತ ಸಮುದಾಯಕ್ಕೆ ಸಂಬಂಧಿಸಿದ ವಿಷಯಗಳು, ಪ್ರಾಚೀನ ಕಾಲದ ನಾವಿಕರ ಬಗ್ಗೆ ಕಥೆಗಳು ಇಲ್ಲಿ ದೊರಕುತ್ತವೆ. ಕೊಂಕಣಿ ಭಾಷೆ, ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು, ಇಲ್ಲಿನ ವಾಣಿಜ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ಮಂಗಳೂರಿನ ಬಂದರು ಮತ್ತು ರೈಲ್ವೆ ಬಗ್ಗೆ ಲೇಖನಗಳು, ದಕ್ಷಿಣ ಕನ್ನಡದ ಇತಿಹಾಸ, ಮಂಗಳೂರು ಧರ್ಮ ಪ್ರಾಂತ್ಯದ ಬಗ್ಗೆಗಿನ ದೀರ್ಘವಾದ ಲೇಖನಗಳು, ಪೂಜ್ಯ ಜೋಸೆಪ್‌ವಾಜ್‌ರ ಬಗ್ಗೆ ಲೇಖನಗಳು, ಟಿಪ್ಪುವಿನ ಬಗ್ಗೆ ಇರುವ ಕಟ್ಟು ಕಥೆಗಳು, ಪ್ರಖ್ಯಾತ ವರ್ತಕರ ಜಾಹೀರಾತುಗಳು, ಇಂಗ್ಲೀಷ್ ಮತ್ತು ಲ್ಯಾಟೀನ್ ಭಾಷೆಗಳಲ್ಲಿರುವ ವಿವಿಧ ಪದ್ಯಗಳು, ಹಾಗೂ ಧಾರ್ಮಿಕ ಆಸಕ್ತಿಯ ಲೇಖನಗಳನ್ನು ಬಹುಮುಖ್ಯವಾಗಿ ಗುರುತಿಸಬಹುದು. ಈ ಪತ್ರಿಕೆಯಲ್ಲಿ ಬ್ರಿಟಿಷ್ ಆಡಳಿತ ವರ್ಗಕ್ಕೆ ಹಾಗೂ ಜೆಸ್ಯೂಟರಿಗೆ ಮುಜುಗರ ತರುವಂತಹ ಯಾವುದೇ ವಿಷಯಗಳು ಕಾಣಲಾರವು. ಟಿಪ್ಪು ಈ ಪತ್ರಿಕೆಯಲ್ಲಿ ಹಲವು ಲೇಖಕರಿಂದ ಖಂಡನೆಗೆ ಒಳಗಾಗಿದ್ದರೆ, ಇನ್ನೊಂದೆಡೆ ವಸಾಹತುಶಾಹಿಯನ್ನು ಮುಕ್ತವಾಗಿ ಹೊಗಳಿರುವುದನ್ನು ಕಾಣಬಹುದು. ಇಲ್ಲಿ ಕಾಣಸಿಗುವ ಜಾಹೀರಾತುಗಳು ವಸಾಹತುಶಾಹಿ ವ್ಯವಸ್ಥೆಯಲ್ಲಿ ಮಂಗಳೂರಿನಲ್ಲಿ ತಳವೂರಿದ ಕಾರ್ಖಾನೆಗಳ (ಹೆಂಚಿನ ಕಾರ್ಖಾನೆ), ವಿದೇಶಿ ವಸ್ತುಗಳ ಮಾರಾಟಕ್ಕೆ ಸಂಬಂಧಿಸಿದವುಗಳಾಗಿವೆ.

ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿರುವ ಲೇಖನಗಳು ಅಧ್ಯಯನಾತ್ಮಕವಾಗಿ ಬರೆದ ಲೇಖನಗಳಿಗಿಂತ ಅವು ಓದುವಿಕೆ, ಅನುಭವ ಮತ್ತು ಅವಲೋಕನಗಳಿಂದ ಕೂಡಿವೆ. ಆಧುನಿಕ ಕಾಲದ ವೈಜ್ಞಾನಿಕ ಸಂಶೋಧನಾ ಮಾದರಿಯಲ್ಲಿ ಈ ಲೇಖನಗಳು ಸಿದ್ಧವಾಗಿರದಿದ್ದರೂ ಅವು ತಮ್ಮ ಉತ್ಕೃಷ್ಟತೆಗೆ ಹೆಸರುವಾಸಿಯಾಗಿವೆ. ಆದರೆ ಮ್ಯಾಂಗಲೋರ್ ಮ್ಯಾಗಜೀನ್ ತನ್ನ ಬರವಣಿಗೆಗಳಲ್ಲಿ ಏಕರೂಪತೆಯನ್ನು ಕೊನೆವರೆಗೆ ಕಾಯ್ದುಕೊಂಡಿದೆ ಎಂದು ಹೇಳುವುದು ಕಷ್ಟ. ಈ ಪತ್ರಿಕೆಯು ಕೇವಲ ಕೆನರಾದಲ್ಲಿ ಮಾತ್ರ ಓದುಗರನ್ನು ಹೊಂದದೇ ದೇಶ ವಿದೇಶಗಳಿಗೂ ತಲುಪಿತ್ತು ಹಾಗೂ ವಿದೇಶಿ ಪತ್ರಿಕೆಗಳು ಮ್ಯಾಂಗಲೋರ್ ಮ್ಯಾಗಜೀನ್‌ನ ಬಗ್ಗೆ ಹೊಗಳಿಕೆಯ ಮಾತುಗಳನ್ನು ಹೇಳಿರುವುದನ್ನು ಕಾಣಬಹುದು.[30] ಅನಿವಾಸಿ ಭಾರತೀಯರು ಇಲ್ಲಿ ತಮ್ಮ ಅನಿಸಿಕೆಗಳನ್ನು, ಬರವಣಿಗೆಗಳನ್ನು ಕೊಟ್ಟಿರುವುದನ್ನು ಕಾಣಬಹುದು. ಪತ್ರಿಕೆಗಳಾದ 'ದಿ ಐರಿಷ್ ಮಂತ್ಲಿ', 'ದಿ ನೋಟ್ರಾಡಾಮ್ ಸ್ಕೋಲಾಸ್ಟ್‌ಕ್', 'ದಿ ಕೆಥೋಲಿಕ್ ಟೈಮ್ಸ್', 'ಮೆಡ್ರಾಸ್ ಮೈಲ್', 'ಮೆಡ್ರಾಸ್ ಟೈಮ್ಸ್', ಇತ್ಯಾದಿ, ಪತ್ರಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿವೆ. ಅದೇ ರೀತಿ ಮ್ಯಾಂಗಲೋರ್ ಮ್ಯಾಗಜೀನ್ ಕೇವಲ ಓದುಗರಿಗೆ ಮಾತ್ರ ಮುಖ್ಯವಾಗಿರದೇ ಅಥವಾ ಕಾಲೇಜಿನ ದಾಖಲೆಯಾಗಿರದೇ ನ್ಯಾಯಾಲಗಳಲ್ಲಿ ಇದನ್ನು ಒಂದು ಪ್ರಮುಖ ದಾಖಲೆಯಾಗಿ ಪರಿಗಣಿಸಲಾಗಿತ್ತು ಎಂದು ತಿಳಿದು ಬರುತ್ತದೆ. ಮಂಗಳೂರಿನ ಜಿಲ್ಲಾ ನ್ಯಾಯಲಯ ಈ ದಾಖಲೆಯನ್ನು ಬಳಸಿಕೊಂಡಿರುವುದನ್ನು ಗಮನಿಸಬಹುದು. ಕ್ರಿ.ಶ 1897 ರಲ್ಲಿ

ಪ್ರಾರಂಭವಾದ ಈ ತ್ರೈಮಾಸಿಕ ಪತ್ರಿಕೆಯು 1914ರಲ್ಲಿ ವಾರ್ಷಿಕ ಸಂಚಿಕೆಯಾಗುತ್ತದೆ ಹಾಗೂ 1933 ರಲ್ಲಿ ತನ್ನ ಪ್ರಕಟನೆಯನ್ನು ನಿಲ್ಲಿಸುತ್ತದೆ. ಪತ್ರಿಕೆಯು ಅಂತಿಮ ಹಂತಗಳಲ್ಲಿ ಅಥವಾ ಕೊನೆಯ ಸಂಚಿಕೆಗಳು ತನ್ನ ಗುಣಮಟ್ಟವನ್ನು ಕಳಕೊಂಡಿರುವುದು ಕಂಡು ಬರುತ್ತದೆ ಹಾಗೂ ಕಾಲೇಜಿಗೆ ಸಂಬಂಧಿಸಿದ ವಿಷಯಗಳೇ ಹೆಚ್ಚಾಗಿ ಅವುಗಳಲ್ಲಿರುವುದನ್ನು ಕಾಣಬಹುದು. ಕ್ರಿ.ಶ 1934ರಿಂದ 'ಕಾಲೇಜು ವಾರ್ಷಿಕ ಸಂಚಿಕೆ' ಪ್ರಾರಂಭವಾಗುತ್ತದೆ.

ಅಧ್ಯಯನದ ವ್ಯಾಪ್ತಿ:-

ಈ ಪ್ರಬಂಧದಲ್ಲಿ 'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಬಿಂಬಿತ ದಕ್ಷಿಣ ಕನ್ನಡವನ್ನು ಪ್ರಸ್ತುತ ಪಡಿಸುವುದೇ ಮುಖ್ಯ ಉದ್ದೇಶವಾದುದರಿಂದ ಈ ಅಧ್ಯಯನವು 'ಮ್ಯಾಂಗಲೋರ್ ಮ್ಯಾಗಜೀನ್'ಗಷ್ಟೇ ಸೀಮಿತವಾಗಿದೆ. ಯಾವಾಗಲೂ ವಸಾಹತುಶಾಹಿ ಆಡಳಿತ ವ್ಯವಸ್ಥೆಯ ಪರವಾಗಿರುವ ಆ ಕಾಲದ ಮಿಶನರಿ ಸಂಸ್ಥೆಗಳು ತಮ್ಮ ಬರವಣಿಗೆಗಳಲ್ಲೂ ನಿಷ್ಠೆಯನ್ನು ವ್ಯಕ್ತ ಪಡಿಸುವುದು ಕಾಣಬಹುದು. ಇಲ್ಲಿ ಸಿಗುವ ಚಿತ್ರಣ 19 –20ನೇ ಶತಮಾನದ ದಕ್ಷಿಣ ಕನ್ನಡದ ಮಿಶನರಿಗಳ ಹಾಗೂ ಮಿಶಿನರಿಗಳಿಂದ ಶಿಕ್ಷಿತ ಮೇಲ್ ವರ್ಗದ ಕ್ರೈಸ್ತರ ಸಾಮಾಜಿಕ, ಧಾರ್ಮಿಕ ಹಾಗೂ ಇತರ ನಿಲುವುಗಳನ್ನು ಪ್ರತಿಬಿಂಬಿಸುತ್ತದೆ. ಅದೆಂದೂ ವಸಾಹತುಶಾಹಿಯ ವಿರುದ್ಧ ಸವಾಲೆತ್ತಲಾರದು. ಬದಲು, ಅದರೊಂದಿಗೆ ಕೈ ಜೋಡಿಸುತ್ತದೆ ಹಾಗೂ ವಸಾಹತುಶಾಹಿಯ ಕಾಲದಲ್ಲಾಗುವ ಬದಲಾವಣೆಗಳನ್ನು ಅದೇ ನಿಜವಾದ ಬೆಳವಣಿಗೆ ಎಂದು ಪ್ರತಿಪ್ರಾದಿಸುತ್ತದೆ.

ಪೀಠಿಕೆಯ ನಂತರ ಬರುವ ಎರಡನೇ ಅಧ್ಯಯನವು 'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಬರುವ ವಿವಿಧ ವಿಷಯಗಳ ಬಗ್ಗೆ ಒಂದು ಅವಲೋಕನವನ್ನು ಮಾಡುತ್ತದೆ. ಈ ಅಧ್ಯಾಯದಲ್ಲಿ ಕಾಲೇಜಿನ ಪ್ರಥಮ ಮುಖ್ಯಾಧಿಕಾರಿಯಾದ ಫಾ। ವಿಲ್ಲಿಯವರ ಜೀವನ ಹಾಗೂ ಸಾಧನೆಗಳ ಬಗ್ಗೆ ಒಂದು ಚಿತ್ರಣವನ್ನು ನೀಡಲಾಗಿದೆ. ಆದೇ ರೀತಿ ಈ ಪತ್ರಿಕೆ ಪ್ರಾರಂಭವಾಗುವ ಮೊದಲು ಜಾಲ್ತಿಯಲ್ಲಿದ್ದ ಪತ್ರಿಕೆಯ ಬಗ್ಗೆ ಚರ್ಚಿಸಲಾಗಿದೆ. ಮ್ಯಾಂಗಲೋರ್ ಮ್ಯಾಗಜೀನ್ ಜೆಸ್ಯೂಟ್ ಹಾಗೂ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದಂತೆ ಅದಕ್ಕಿದ್ದ ಕಾಳಜಿಯನ್ನು ಈ ಒಟ್ಟು ವಿಷಯಗಳ ಅಧ್ಯಾಯನದಿಂದ ತಿಳಿಯಬಹುದು. ಇದೇ ಸಂದರ್ಭದಲ್ಲಿ ಅವರು ವಸಾಹತುಶಾಹಿಯನ್ನು ಪ್ರಶಂಸಿಸುವ ಕೆಲಸವನ್ನು ಮರೆಯಲೇ ಇಲ್ಲ. ಅದೇ ರೀತಿ ಬ್ರಿಟಿಷ್ ಸಾಮ್ರಾಜ್ಞಿಯ ವಜ್ರಮಹೋತ್ಸವದ ಆಚರಣೆ, ರಾಣಿಯು ಮರಣ ಹೊಂದಿದ್ದು ಹಾಗೂ ಎಡ್ವರ್ಡ್‌ನ ಬಗ್ಗೆ ಬಹು ಅಮೂಲ್ಯವಾದ ಮಾಹಿತಿಗಳಿವೆ. ಈ ಪತ್ರಿಕೆಯಲ್ಲಿ ಮೊಂಟೆ ಮಾರಿಯನೋ ಹಾಗೂ ಫರಂಗಿಪೇಟೆ ಸ್ಥಳ ಹಿನ್ನಲೆಯನ್ನು ತಿಳಿಸುವ ಲೇಖನವು ಐತಿಹಾಸಿಕ ಹಾಗೂ ಧಾರ್ಮಿಕ ಹಿನ್ನಲೆಯನ್ನು ಹೊಂದಿದ್ದರೆ, ಬಲ್ಮಠ ಸ್ಥಳನಾಮದ ಉಗಮದ ಬಗ್ಗೆ ಇರುವ ಚರ್ಚೆಯು ವಸಾಹತುಶಾಹಿ ಪಳೆಯುಳಿಕೆಗಳು ಇನ್ನೂ

ಉಳಿದು ಕೊಂಡಿರುವುದರ ಬಗ್ಗೆ ಚಿತ್ರಣ ನೀಡುತ್ತದೆ. ಬಾಲ್ತಜಾರ್ ಹೇಳಿರುವ ಕಥೆಗಳ ಚರ್ಚೆಯನ್ನು ಇದು ಹೊಂದಿದ್ದು, ಇಲ್ಲಿ ಪತ್ರಿಕೆಯು ಕ್ರೈಸ್ತರ ಬಂಧನ ಹಾಗೂ ಅವರ ಕಷ್ಟಕರ ದಿನಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ನಡೆಸಿದೆ. ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಟಿಪ್ಪುವನ್ನು ಬಹಳಷ್ಟು ಟೀಕೆಗೆ ಗುರಿಪಡಿಸಲಾಗಿದೆ. ಅದೇ ರೀತಿ ಕೆಲವು ಲೇಖನಗಳ ಅಧ್ಯಯನದಿಂದ 19ನೇ ಶತಮಾನದ ಕೊನೆಯ ಹಾಗೂ 20ನೇ ಶತಮಾನದ ಆರಂಭದ ಮಂಗಳೂರಿನ ಬಗ್ಗೆ ಚಿತ್ರಣ ಸಿಗುತ್ತದೆ. ಈ ಅಧ್ಯಾಯವು ಕೆನರಾದ ಕೆಲವು ಐತಿಹಾಸಿಕ ಸ್ಥಳಗಳ ಬಗ್ಗೆ ಚರ್ಚೆಯನ್ನು ನಡೆಸುತ್ತದೆ.

ಮೂರನೇ ಅಧ್ಯಾಯವು 'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ನಿರೂಪಿತವಾದ ಹಲವು ಕಂತುಗಳ ದಕ್ಷಿಣ ಕನ್ನಡದ ಇತಿಹಾಸವನ್ನು ವಿವರವಾಗಿ ಚರ್ಚಿಸುತ್ತದೆ. ಲೇಖಕರು ಕೆನರಾ ಪದದ ಉಗಮದಿಂದ ಚರ್ಚೆ ಆರಂಭಿಸಿದ್ದು, ಕದಂಬರ ಕಾಲಕ್ಕೆ ಸಂಬಂಧಿಸಿದಂತೆ ಬಹಳಷ್ಟು ಪ್ರಾಮುಖ್ಯತೆ ಕೊಟ್ಟಿರುವುದನ್ನು ಕಾಣಬಹುದು. ನಂತರ ಮುಂದುವರಿದು ಕೆಳದಿಯ ಅರಸರವರೆಗೆ ಆಳ್ವಿಕೆಮಾಡಿರುವ ಬೇರೆ ಯಾವುದೇ ರಾಜವಂಶಗಳು ದಕ್ಷಿಣ ಕೆನರಾಕ್ಕೆ ಸಂಬಂಧಿಸಿದಂತೆ ಮಹತ್ವದ್ದಲ್ಲ ಎಂಬ ನಿರ್ಧಾರ ತಳೆದಿದ್ದಾರೆ. ಆದರೆ ಕೆಳದಿ ಅರಸರ ಆಳ್ವಿಕೆಯು 'ಕೆನರಾ' ಇತಿಹಾಸದಲ್ಲಿ ಬಹುಮುಖ್ಯ ಎಂದು ಪರಿಗಣಿಸಲಾಗಿದ್ದು, ಈ ಕಾಲದಲ್ಲಿ ಕ್ರೈಸ್ತರು ಗೋವಾದಿಂದ ವಲಸೆ ಬಂದು, ಕೆಳದಿ ಸಾಮ್ರಾಜ್ಯದಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿದರು. ಅದೇ ರೀತಿ ಬಿದನೂರು ಅರಸರು ಅವರನ್ನು ಬರಮಾಡಿಕೊಂಡು ಪೋಷಿಸಿದರು ಎನ್ನುವ ವಾದವಿದೆ. ನಂತರ ಲೇಖಕರು ಹೈದರ್ ಮತ್ತು ಟಿಪ್ಪುವಿನ ಬಗ್ಗೆ ವಿವರಿಸುತ್ತಾ ಟಿಪ್ಪುವನ್ನು ಮತಾಂಧ, ಕ್ರೂರಿ ಎಂಬ ಚಿತ್ರಣ ನೀಡಲು ಪ್ರಯತ್ನಿಸಿದ್ದಾರೆ. ಇದಕ್ಕೆ ಕಾರಣವೆಂದರೆ ಕ್ರೈಸ್ತರನ್ನು ಶ್ರೀರಂಗಪಟ್ಟಣಕ್ಕೆ ಬಂದಿಗಳಾಗಿ ಕಳುಹಿಸಿರುವುದು. ಇದು ಕ್ರೈಸ್ತರಿಗೆ ಕತ್ತಲೆಯ ಕಾಲವಾಗಿದ್ದರೆ, ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಅದು ಅನಭಿವೃದ್ಧಿಯ ಕಾಲವಾಗಿದೆ ಎಂದು ಬಣ್ಣಿಸಲಾಗಿದೆ. ಆದರೆ ಇದು ಹೆಚ್ಚು ಕಾಲ ಮುಂದುವರಿಯದೇ ಕ್ರಿ.ಶ.1799 ರಲ್ಲಿ ಬ್ರಿಟಿಷರು ಟಿಪ್ಪುವನ್ನು ಪತನಗೊಳಿಸುವುದರೊಂದಿಗೆ 'ಕೆನರಾ' ಇತಿಹಾಸದಲ್ಲಿ ಸುವರ್ಣಯುಗ ಆರಂಭವಾಯಿತು ಹಾಗೂ ಇದನ್ನು ಸಂಭ್ರಮಿಸಬೇಕಾಗಿದೆ ಎನ್ನುವ ವಾದವಿದೆ. ಉತ್ತರ ಕೆನರಾವನ್ನು ಬ್ರಿಟಿಷರು ಮುಂಬಾಯಿ ಪ್ರಾಂತ್ಯಕ್ಕೆ ಹಸ್ತಾಂತರಿಸಿರುವುದನ್ನು ಬೆಂಬಲಿಸುತ್ತಾ, ದಕ್ಷಿಣ ಕೆನರಾವನ್ನೂ ಮುಂಬಾಯಿಗೆ ಹಸ್ತಾಂತರಿಸಬೇಕು ಎನ್ನುವ ಅಭಿಪ್ರಾಯ ಮಂಡಿಸಲಾಗಿದೆ. ಲೇಖಕರು ಕೆಳದಿ ಸಾಮ್ರಾಜ್ಯ ಸ್ಥಾಪನೆಯವರೆಗೆ 'ಕೆನರಾ'ದಲ್ಲಿ ಜೈನ ಧರ್ಮ ತನ್ನ ಪ್ರಭುತ್ವವನ್ನು ಮೆರೆದಿತ್ತು ಎಂದಿದ್ದಾರೆ. ಕೆನರಾದ ವಾಣಿಜ್ಯ ಇತಿಹಾಸದ ಬಗ್ಗೆಯೂ ವಿವರಣೆ ಲಭ್ಯವಿದೆ.

ನಾಲ್ಕನೇ ಅಧ್ಯಾಯದಲ್ಲಿ ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿನ ಧರ್ಮಪ್ರಾಂತ್ಯದ ಇತಿಹಾಸವನ್ನು ಚರ್ಚೆಗೆ ಗುರಿಪಡಿಸಲಾಗಿದೆ. ಇಲ್ಲಿ ಲೇಖಕರು ಮುಖ್ಯವಾಗಿ ಪೋಪರು, ಬಿಷಪರು ಹಾಗೂ ಮಿಶಿನರಿ ಪಾದ್ರಿಗಳ ಇತಿಹಾಸವನ್ನು ರಚಿಸಿರುವುದು ಎದ್ದು ಕಾಣುತ್ತದೆ. ಈ ಅಧ್ಯಾಯವು ಕ್ರಿಸ್ತಶಕರಾಂಭದಲ್ಲಿಯೇ

ಕೆನರಾದಲ್ಲಿ ಕ್ರೈಸ್ತ ಧರ್ಮ ಹರಡಿರಬೇಕೆಂಬ ಊಹನೆಯೊಂದಿಗೆ ಆರಂಭವಾಗಿ, 20ನೇ ಶತಮಾನದ ಎಂದರೆ ಕ್ರಿ.ಶ.1903ರವರೆಗಿನ ಧರ್ಮಪ್ರಾಂತ್ಯದ ಇತಿಹಾಸವನ್ನು ವಿವರವಾಗಿ ಚರ್ಚಿಸಲಾಗಿದೆ. ಯೇಸುವಿನ ಶಿಷ್ಯರ ಕಾಲದಲ್ಲಿಯೇ ಇಲ್ಲಿ ಕ್ರೈಸ್ತ ಧರ್ಮ ಬೋಧನೆಯಾಗಿರಬೇಕು ಎಂದು ವಿವರಿಸಿರುವ ಲೇಖಕರು, ಪೋರ್ಚುಗೀಸರ ಕಾಲದಲ್ಲಿ ಕೆನರಾಕ್ಕೆ ಕ್ರೈಸ್ತ ಧರ್ಮವು ಒಂದು ಹೊಸ ಶಕ್ತಿಯಾಗಿ ಹುರುಪಿನೊಂದಿಗೆ ಪ್ರವೇಶಿಸಿತು ಎನ್ನುವ ವಿವರಣೆ ನೀಡಿದ್ದಾರೆ. ಪೋರ್ಚುಗೀಸರು ಎಲ್ಲೆಲ್ಲಿ ಅವರ ರಾಜಕೀಯ ಶಕ್ತಿಯನ್ನು ಸ್ಥಾಪಿಸಿದರೋ, ಅದರ ಪಕ್ಕದಲ್ಲೇ ಶಿಲುಬೆಯನ್ನು ನೆಟ್ಟರು ಎಂದಿದ್ದಾರೆ. ಬಿದನೂರು ಅರಸರ ಕಾಲದಲ್ಲಿ ಅವರು ಯೂರೋಪಿಯನ್ ಮಿಶನರಿಗಳನ್ನು ವಿರೋಧಿಸಿದರೂ, ಕ್ರೈಸ್ತಧರ್ಮವನ್ನು ಬಹುವಾಗಿ ಪೋಷಿಸಿದರು ಎಂದಿದ್ದಾರೆ. ಅದೇ ರೀತಿ ಹೈದರ್ ಕೂಡಾ ಬಿದನೂರಿನ ಅರಸರಂತೆ ಕ್ರೈಸ್ತರನ್ನು ಉತ್ತಮವಾಗಿ ನೋಡಿಕೊಂಡ ಎಂದಿರುವ ಲೇಖಕರು, ಆತ ಕ್ರೈಸ್ತರನ್ನು ಬಿದನೂರಿಗೆ ಆಮಂತ್ರಿಸಿದ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ಟಿಪ್ಪು ಕ್ರೈಸ್ತರ ವಿರುದ್ಧ ನಡೆಸಿರುವ ಕುಕೃತ್ಯಗಳನ್ನು ಮತ್ತು ಆ ಸಮಯದಲ್ಲಿ ಕ್ರೈಸ್ತರು ಪಟ್ಟ ಕಷ್ಟವನ್ನು ಬಹಳಷ್ಟು ವಿವರಿಸಿದ್ದಾರೆ. ಕ್ರೈಸ್ತರ ಬಂಧನ ಅಂತ್ಯಗೊಳಿಸಿದ ಕೀರ್ತಿ ಬ್ರಿಟಿಷರಿಗೆ ಸಲ್ಲುತ್ತದೆ ಎನ್ನುತ್ತಾ, ಕೊಡಗಿನ ಅರಸ, ಅವರನ್ನು ಆದರದಿಂದ ನೋಡಿಕೊಂಡ ಬಗ್ಗೆ ಮಾಹಿತಿ ಇದೆ. ಕ್ರೈಸ್ತರು ಬಂಧನದಿಂದ ಮರಳಿ ಕೆನರಾಕ್ಕೆ ಬಂದಾಗ ವಸಾಹತುಶಾಹಿ ಸರಕಾರ ಬಹಳಷ್ಟು ಸಹಾಯ ನೀಡಿದೆ. ಅವರ ಸಂಪತ್ತನ್ನು ಮರಳಿ ಪಡೆಯಲು ಸಹಾಯ ಮಾಡಿದೆ ಎನ್ನುವ ಅಂಶವನ್ನು ವಿವರಿಸಲಾಗಿದೆ. ಈ ಅಧ್ಯಾಯವು 'ಪಾದ್ರಾವ್ದೊ' ಬಿಕ್ಕಟ್ಟಿನ ಬಗ್ಗೆ ಮಾಹಿತಿಯನ್ನು ಹೊಂದಿದ್ದು, ಸುಂಕಾರಿ ಮಿಶನ್ ಹಾಗೂ ಅಲ್ಲಿ ಕಾರ್ಯ ನಿರ್ವಹಿಸಿರುವ ವಿವಿಧ ಮಿಶನರಿಗಳ ಬಗ್ಗೆ, ಅವರ ಜೀವನ ಸಾಧನೆಗಳ ಬಗ್ಗೆ ಚರ್ಚೆ ಇದೆ. ಜೆಸ್ಯೂಟ್ ಕಾಲಾವಧಿಯ ಬಗ್ಗೆ ವಿವರಣಾತ್ಮಕ ಮಾಹಿತಿಯನ್ನು ನೀಡಿದ್ದಾರೆ. ಅಂತಿಮವಾಗಿ 1887ರಲ್ಲಿ ಮಂಗಳೂರು ಧರ್ಮಪ್ರಾಂತ್ಯದ ರಚನೆ, ಅದರ ವಿವಿಧ ಬಿಷಪರು ಹಾಗೂ ಲೇಖಕರು ನೀಡಿರುವ ವಿವಿಧ ವಾರಾಡೋಗಳ ಬಗ್ಗೆ ಮಾಹಿತಿ ಇದ್ದು, 1903ರವರೆಗೆ ಧರ್ಮಪ್ರಾಂತ್ಯ ಹೊಂದಿದ್ದ ಜನಸಂಖ್ಯೆಯ ಬಗ್ಗೆ ಚಿತ್ರಣ ಇದರಲ್ಲಿ ಲಭ್ಯವಿದೆ.

ಐದನೇಯ ಅಧ್ಯಾಯವು 'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಬಿಂಬಿತ ವಸಾಹತುಶಾಹಿಯ ಪರವಾದ ಲೇಖನಗಳ ಬಗ್ಗೆ ಚರ್ಚೆಯನ್ನು ನಡೆಸುತ್ತದೆ. ಈ ಪತ್ರಿಕೆಯಲ್ಲಿ ವಸಾಹತುಶಾಹಿಗೆ ಬಹಿರಂಗ ಸಮರ್ಥನೆ ನೀಡಿರುವುದನ್ನು ನಾವು ಗಮನಿಸಬಹುದು. ಸಂತ ಅಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ನಡೆದ ರಾಣಿಯ ವಜ್ರಮಹೋತ್ಸವದ ಆಚರಣೆ ಬಗ್ಗೆ ವಿವರವಾದ ಮಾಹಿತಿಯನ್ನು ಹೊಂದಿದೆ. ಇಲ್ಲಿ ರಾಣಿಯ ಆಳ್ವಿಕೆಯ ಬಗ್ಗೆ ವಿಜೃಂಭಣೆಯ, ವೈಭವಪೂರಿತವಾದ ಮಾಹಿತಿ ಹೊಂದಿರುವುದನ್ನು ಕಾಣಬಹುದು. ಅದೇ ರೀತಿ ರಾಣಿಯ ಮರಣದ ಸಂದರ್ಭದಲ್ಲಿ ಅರ್ಪಿಸಲಾದ ಶೋಕಚರಣೆಯ ಬಗ್ಗೆ ಹಾಗೂ ರಾಜ ಎಡ್ವರ್ಡ್‌ಗೆ ಮಂಗಳೂರಿನ ಜನಪ್ರತಿನಿಧಿಗಳು, ವಿವಿಧ ಸಮುದಾಯಗಳ ನಾಯಕರು ವ್ಯಕ್ತಪಡಿಸಿರುವ ನಿಷ್ಠೆಯ ಬಗ್ಗೆ ಅತ್ಯಮೂಲ್ಯ ಮಾಹಿತಿಯನ್ನು ಕಲೆ ಹಾಕುತ್ತದೆ. ರಾಣಿಯ ಆಳ್ವಿಕೆಯ

ಸಂದರ್ಭದಲ್ಲಿ ಕೆನರಾವು ಹಿಂದೆಂದೂ ಕಾಣದ, ವ್ಯವಸ್ಥಿತವಾದ ಬೆಳವಣಿಗೆಯನ್ನು ಕಂಡಿದೆ ಎಂಬ ಮಾಹಿತಿಯನ್ನು ಇದು ಹೊಂದಿದೆ. ದೆಹಲಿ ದರ್ಬಾರಿನ ಸಂದರ್ಭದಲ್ಲಿ ಅದನ್ನು ಮಂಗಳೂರಿನಲ್ಲೂ ವಿಜೃಂಭಣೆಯಿಂದ ಆಚರಿಸಿದ ಬಗ್ಗೆ ವಿವರಣೆ ಇದೆ. ಮದ್ರಾಸ್ ಪ್ರಾಂತ್ಯದ ಗವರ್ನರುಗಳು ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ನೀಡಿದ ವೈಭವೋಪಿತ ಸ್ವಾಗತದ ಬಗ್ಗೆ ವಿವರಣೆ ಇದೆ. ಇಲ್ಲಿ ಟಿಪ್ಪುವಿನ ಆಳ್ವಿಕೆಯನ್ನು ಕೆಟ್ಟ ಆಳ್ವಿಕೆಯೆಂದು ಚಿತ್ರಿಸಿ, ಬ್ರಿಟಿಷರ ಆಳ್ವಿಕೆಯನ್ನು ಹೊಗಳಿದ ಲೇಖನಗಳಿವೆ. ಇಲ್ಲಿ ವಸಾಹತುಶಾಹಿ ಆಳ್ವಿಕೆಯೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಜೆಸ್ವೂಟರು ಅದನ್ನು ತಮ್ಮ ಪತ್ರಿಕೆಯಲ್ಲಿ ಸಮರ್ಥಿಸುವ, ವೈಭವೀಕರಿಸುವ ಅಂಶವನ್ನು ಮರೆತಿಲ್ಲ.

ಆರನೇ ಅಧ್ಯಾಯವು ಈ ಮೇಲಿನ ಅಧ್ಯಯನದಿಂದ ಹೊರಹೊಮ್ಮುವ ಚರ್ಚೆಯ ಉಪಸಂಹಾರವನ್ನು ಒಳಗೊಂಡಿದೆ.

ಸಂದರ್ಭ ಸೂಚಿ

1. ಪಿ. ಗುರುರಾಜ ಭಟ್, *ಸ್ಟಡಿಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್*, ಮಣಿಪಾಲ, 1975, ಪುಟ ii.
2. ವಿಶಾಂಜ್ ಪಿಂಟೊ, 'ಕೆನರಾ ಕ್ಯಾಥೋಲಿಕ್ಸ್ ಇನ್ ದಿ ಬೊಂಬೆ ಪ್ರೆಸಿಡೆನ್ಸೀ : ಎ ಸ್ಟಡಿ ಇನ್ ದಿ ಪ್ರೋಸೆಸ್ ಆ್ಯಂಡ್ ಇಂಪ್ಯಾಕ್ಟ್ ಆಫ್ ಮೈಗ್ರೇಶನ್ C 1850 – 1947', *ಪ್ರೋಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್*, 66 ನೇ ಅಧಿವೇಶನ, ಶಾಂತಿನಿಕೇತನ, 2005–06, ಪುಟ 785.
3. ಎಂ. ಗಣಪತಿರಾವ್ ಐಗಳ್, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*, ಶಾರದ ಪ್ರೆಸ್, ಮಂಗಳೂರು, 1923, ಪುಟ 164.
4. ಜೆ. ಸ್ಟರಕ್, *ಮೆಡ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್ಸ್ : ಸೌತ್ ಕೆನರಾ*, ಸಂಚಿಕೆ 1, ಗವರ್ನಮೆಂಟ್ ಪ್ರೆಸ್, ಮದ್ರಾಸ್, 1894, ಪುಟ 1.
5. ಪಿ. ಗುರುರಾಜ ಭಟ್, *ಆ್ಯಂಟಿಕ್ವಿಟೀಸ್ ಆಫ್ ಸೌತ್ ಕೆನರಾ*, ಉಡುಪಿ, 1969, ಪುಟ 1.
6. ಬಿ.ಎ. ಸಾಲೆತ್ತೋರ್, *ಎನ್ಸಿಯಂಟ್ ಕರ್ನಾಟಕ, ಸಂಚಿಕೆ – 1, ತುಳುವ ಇತಿಹಾಸ*, ಓರಿಯಂಟಲ್ ಬುಕ್ ಏಜನ್ಸೀ, ಪೂನಾ, 1936, ಪುಟ 1.
7. ಗಣಪತಿರಾವ್ ಐಗಳ್, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*, ಮಂಗಳೂರು, 1923. ಬಿ.ಎ.ಸಾಲೆತ್ತೋರ್, *ಎನ್ಸಿಯಂಟ್ ಕರ್ನಾಟಕ, ಸಂಚಿಕೆ 1, ಹಿಸ್ಟರಿ ಆಫ್ ತುಳುವ*, ಪೂನಾ, 1936 [ಆಂಗ್ಲ ಭಾಷೆಯಲ್ಲಿ]. ಕೆ.ವಿ. ರಮೇಶ, *ಎ ಹಿಸ್ಟರಿ ಆಫ್ ಸೌತ್ ಕೆನರಾ*, ಧಾರವಾಡ, 1970 [ಆಂಗ್ಲ ಭಾಷೆಯಲ್ಲಿ], ಮತ್ತು *ತುಳುನಾಡಿನ ಇತಿಹಾಸ*, ಮೈಸೂರು, 1968. ಪಿ. ಗುರುರಾಜ ಭಟ್, *ಅಂಟ್ಯಿಕ್ವಿಟಿಸ್ ಆಫ್ ಸೌತ್ ಇಂಡಿಯಾ*, ಉಡುಪಿ, 1969 [ಆಂಗ್ಲ ಭಾಷೆಯಲ್ಲಿ] ಮತ್ತು *ಸ್ಟಡಿಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್*, ಮಣಿಪಾಲ, 1975 [ಆಂಗ್ಲ ಭಾಷೆಯಲ್ಲಿ]. ಕೆ.ಜಿ. ವಸಂತ ಮಾಧವ, *ಪೊಲಿಟಿಕಲ್ ಹಿಸ್ಟರಿ ಆಫ್ ಕೆನರಾ* 1565–1763 [ಆಂಗ್ಲ ಭಾಷೆಯಲ್ಲಿ] ಇದು ಧಾರವಾಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿ.ಹೆಚ್.ಡಿ. ಪ್ರಬಂಧ. *ರಿಲಿಜಿಯನ್ ಇನ್ ಕೋಸ್ಟಲ್ ಕರ್ನಾಟಕ 1500 – 1763*, ನ್ಯೂ ಡೆಲ್ಲಿ, 1985 [ಆಂಗ್ಲ ಭಾಷೆಯಲ್ಲಿ]. *ವೆಸ್ಟರ್ನ್ ಕರ್ನಾಟಕ: ಇಟ್ಸ್ ಅಗ್ರೇರಿಯನ್ ರಿಲೇಶನ್ಸ್ ಕ್ರಿ.ಶ.1500–1800*, ನ್ಯೂ ಡೆಲ್ಲಿ, 1991 [ಆಂಗ್ಲ ಭಾಷೆಯಲ್ಲಿ]. ಸೂರ್ಯನಾಥ್ ಯು. ಕಾಮತ್, *ತುಳುವ ಅಂಡರ್ ವಿಜಯನಗರ*, ಇದು ಬಾಂಬೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿ.ಹೆಚ್.ಡಿ. ಪ್ರಬಂಧ, 1961 [ಆಂಗ್ಲ ಭಾಷೆಯಲ್ಲಿ].
8. ಈ ಪ್ರಬಂಧ ಪ್ರಕಟಗೊಂಡಿದೆ. *ಸೌತ್ ಕೆನರಾ 1799–1860 : ಎ ಸ್ಟಡಿ ಇನ್ ಕೊಲೋನಿಯಲ್ ಎಡ್‌ಮಿನಿಸ್ಟ್ರೇಶನ್ ಆ್ಯಂಡ್ ರೀಜನಲ್ ರೆಸ್ಪೋನ್ಸ್*, ಮಿತ್ತಲ್ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, 1998.

9. ಪಿ ಗುರುರಾಜ್ ಭಟ್, *ಸ್ಟಡಿಸ್ ಇನ್ ತುಳುವ ಇಸ್ಟರಿ ಆ್ಯಂಡ್ ಕಲ್ಚರ್*, ಮಣಿಪಾಲ, 1975.ಪಿ ಗುರುರಾಜ್ ಭಟ್, ತುಳುನಾಡು, ಭವ್ಯವಾಣಿ ಪಬ್ಲಿಕೇಶನ್, ಉಡುಪಿ, 1963.ಪಿ ಗುರುರಾಜ್ ಭಟ್, *ಆಂಟ್ಯಿಕ್ವಿಟೀಸ್ ಆಫ್ ಸೌತ್ ಕೆನರಾ*, ಉಡುಪಿ, 1969. ಎ. ಎಲ್. ಪಿ ಡಿ'ಸೋಜ, *ಹಿಸ್ಟರಿ ಆಫ್ ದಿ ಕೆಥೋಲಿಕ್ ಕಮ್ಯೂನಿಟಿ ಆಫ್ ಸೌತ್ ಕೆನರಾ*, ಸಲಕ್ ಪ್ರಿಂಟರ್ಸ್, ಮಂಗಳೂರು. 1983. ಗಣಪತಿ ರಾವ್ ಐಗಳ್, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*, ಶಾರದ ಪ್ರೆಸ್, ಮಂಗಳೂರು, 1923.ಪಿಯುಸ್ ಫಿಡೆಲಿಸ್ ಪಿಂಟೊ, *ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (ಕ್ರಿ.ಶ. 1500–1763)*, ಸಮನ್ವಯ ಪ್ರಕಾಶನ, ಮಂಗಳೂರು, 1999. ಪಿಯುಸ್ ಫಿಡೆಲಿಸ್ ಪಿಂಟೊ, *ಆಂಗ್ಲೋ–ಮೈಸೂರು ಸಂಬಂಧದ ಹಿನ್ನಲೆಯಲ್ಲಿ ಕರಾವಳಿ ಕರ್ನಾಟಕದ ಕೊಂಕಣಿ ಕ್ರೈಸ್ತರು (ಕ್ರಿ.ಶ. 1761–1799)*, ಸಮನ್ವಯ ಪ್ರಕಾಶನ, ಮಂಗಳೂರು, 1999. ಕೆ. ವಿ ರಮೇಶ, *ಎ ಹಿಸ್ಟರಿ ಆಫ್ ಸೌತ್ ಕೆನರಾ*, ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ, 1970.ಸೆವ್ರಿನ್ ಸಿಲ್ವಾ, *ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ*, ಸ್ಟಾರ್ ಅಫ್ ಕೆನರಾ ಪ್ರೆಸ್, ಕುಮುಟಾ,1957.

10. ಎಂ. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 138. ಸಂತ ಅಲೋಶಿಯಸ್ ಕಾಲೇಜು, *ಸೆಂಟಿನರಿ ಸವೆನಿರ್*, ಶಾರದ ಪ್ರೆಸ್, ಮಂಗಳೂರು, 1980, ಪುಟ 14.

11. *ಪರ್ಸ್ಪೆಕ್ಟಿವ್ಸ್ ಆನ್ ದಕ್ಷಿಣ ಕನ್ನಡ ಆ್ಯಂಡ್ ಕೊಡಗು*, ದಶವಾರ್ಷಿಕ ಸಂಪುಟ, ಮಂಗಳೂರು ವಿಶ್ವವಿದ್ಯಾನಿಲಯ, ಶಾರದ ಪ್ರೆಸ್ 1991, ಪುಟ 97. ಪಿಯುಸ್ ಫಿಡೆಲಿಸ್ ಪಿಂಟೊ, *ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ [ಕ್ರಿ.ಶ. 1500–1763]*, ಸಮನ್ವಯ ಪ್ರಕಾಶನ, ಮಂಗಳೂರು, 1999, ಪುಟ 110–132. ಪಿಯುಸ್ ಫಿಡೆಲಿಸ್ ಪಿಂಟೊ, *ಆಂಗ್ಲೋ – ಮೈಸೂರು ಸಂಬಂಧದ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ಕೊಂಕಣಿ ಕ್ರೈಸ್ತರು* [ಕ್ರಿ.ಶ. 1761–1799], ಸಮನ್ವಯ ಪ್ರಕಾಶನ, ಮಂಗಳೂರು, 1999, ಪುಟ 11- 17. ವಿಶಾಂಜ್ ಪಿಂಟೊ, ಪೂರ್ವೋಕ್ತ, ಪುಟ 785.

12. '*ಮ್ಯಾಂಗಲೋರ್ ಮ್ಯಾಗಜೀನ್*', ಸಂಪುಟ vi, ನಂ:1, 1919, ಪುಟ 2.

13. ಜೋರ್ಜ್ ಪೌಲಿನೋ ಡಾ.ಪಿ.ಸಿಕ್ವೇರಾ, *ಟೈಗರ್ ಆಫ್ ಮೈಸೂರ್ ಆಂಡ್ ಕೆನರಾ* ಕ್ರಿಶ್ಚಿಯನ್ಸ್,ಕೋಡಿಯಲ್ ಬೈಲ್ ಪ್ರೆಸ್, ಮಂಗಳೂರು,1986, ಪುಟ 14–22. ಬಿ. ಬೌರಿಂಗ್, *ಹೈದರ್ ಆಲಿ ಆ್ಯಂಡ್ ಟಿಪ್ಪುಸುಲ್ತಾನ್*,ಆಕ್ಸ್‌ಪರ್ಡ್,1969, ಪುಟ 124–126. ಎನ್. ಶ್ಯಾಮ್ ಭಟ್, *ಸೌತ್ ಕೆನರಾ 1799–1860 : ಎ ಸ್ಟಡಿ ಇನ್ ಕೊಲೋನಿಯಲ್* ಎಡ್‌ಮಿನಿಸ್ಟ್ರೇಶನ್ *ಆ್ಯಂಡ್ ರೀಜನಲ್ ರೆಸ್‌ಪೋನ್ಸ್*, ಮಿತ್ತಲ್ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, 1998, ಪುಟ 48–49.

14. ವಿಶಾಂಜ್ ಪಿಂಟೊ, ಪೂರ್ವೋಕ್ತ, ಪುಟ 786.

15. ಜೋರ್ಜ್ ಪೌಲಿನೋ ಡಾ.ಪಿ. ಸಿಕ್ವೇರಾ, *ಟೈಗರ್ ಆಫ್ ಮೈಸೂರ್ ಆ್ಯಂಡ್ ಕೆನರಾ ಕ್ರಿಶ್ಚಿಯನ್ಸ್*, ಕೋಡಿಯಲ್ ಬೈಲ್ ಪ್ರೆಸ್, ಮಂಗಳೂರು,1986,ಪುಟ 38.

16. ಬಂಧಿತ ಕ್ರೈಸ್ತರ ಬಗ್ಗೆ ವಿವಿಧ ಮೂಲಗಳು ಬೇರೆ ಬೇರೆ ಸಂಖ್ಯೆಗಳನ್ನು ಕೊಡುತ್ತವೆ. 1) 80,000 – ಮೆಮೋರಿಯಲ್ ಆಫ್ ರೋಸಾರಿಯೋ ಪ್ಯಾರಿಷನರ್ಸ್ 2) 70,000 – ಕರ್ಕ್ ಪ್ಯಾಟ್ರಿಕ್ 3) 70,000 – ಏಷಿಯಾಟಿಕ್ ರಿಜಿಸ್ಟರ್ 1979. 4) 70,000 – ಸ್ಟುವರ್ಟ್ 5) 70,000 ಅಬೆ–ದುಬ್ವಾ 6) 60,000 – ಟಿಪ್ಪು 7) 60,000 – ಮೆಮೋರಿಯಲ್ ಆಫ್ 1860. 8) 60,000 – ಧಾಮಸ್ ಮುನ್ರೋ 9) 60,000 – ಹ್ಯಾಮಿಲ್ಟನ್ 10) 40,000 – ಫಾ। ಮಿರಾಂಡಾ 11) 40,000 – ಬ್ರಿಸ್ಟೋ 12) 30,000 – ಸ್ಕರ್ರಿ 13) 30,000 – ಮಿಲ್ಕ್ಸ್ 14) 30,000 – ಇಂಪೀರಿಯಲ್ ಗೆಜೆಟಿಯರ್ 15) 30,000 – ಬೌರಿಂಗ್ 16) 20,000 – ಪೋರ್ಚುಗೀಸ್ ಗವರ್ನಮೆಂಟ್ ರಿಕಾರ್ಡ್.

ಪಿಯುಸ್ ಫಿಡೆಲಿಸ್ ಪಿಂಟೊ, ಪೂರ್ವೋಕ್ತ [ಕ್ರಿ.ಶ. 1761 – 1799], ಪುಟ 96.

17. ಎನ್. ಶ್ಯಾಮ್ ಭಟ್, ಪೂರ್ವೋಕ್ತ, ಪುಟ 46.

18. *ಪರ್ಸ್ಪೆಕ್ಟಿವ್ಸ್ ಆನ್ ದಕ್ಷಿಣ ಕನ್ನಡ ಆ್ಯಂಡ್ ಕೊಡಗು*, ಪೂರ್ವೋಕ್ತ, ಪುಟ 35.

19. *ಸಂತ ಅಲೋಶಿಯಸ್ ಕಾಲೇಜು: ಸೆಂಟಿನರಿ ಸವೆನಿರ್*, ಪೂರ್ವೋಕ್ತ, ಪುಟ 2.

20. ಅದೇ, ಪುಟ 11.

21. ಅದೇ, ಪುಟ 11 – 12.

22. ಡೆನ್ನಿಸ್ ಫೆರ್ನಾಂಡಿಸ್, 'ಯೂಸಿಂಗ್ ದಿ ಪಾಸ್ಟ್ : ಮ್ಯಾಂಗಲೋರ್ ಮ್ಯಾಗಜೀನ್ ಎಂಡ್ ದಿ ಹಿಸ್ಟರಿ ಆಫ್ ಕೆನರಾ', ಪ್ರೋಸಿಡಿಂಗ್ಸ್ ಆಪ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, 66 ನೇ ಅಧಿವೇಶನ, ಶಾಂತಿನಿಕೇತನ, 2005–06, ಪುಟ 918. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:1, 1897, ಪುಟ 3.

23. ದೇವದತ್ತ ಕಾಮತ್, *ದಿ ಬರ್ನಿಂಗ್ ಬುಶ್ : ದಿ ಹಿಸ್ಟರಿ ಆಪ್ ದಿ ಕರ್ನಾಟಕ ಜೆಸ್ಯೂಟ್* ಪ್ರಾವಿನ್ಸ್, ಡೆಕ್ಕನ್ ಡಾಟ ಪೋರ್ಮ್ಸ್, ಬೆಂಗಳೂರು, 2006, ಪುಟ 26.

24. ಎ.ಎಲ್.ಪಿ.ಡಿ'ಸೋಜ, *ಹಿಸ್ಟರಿ ಆಫ್ ದಿ ಕೆಥೋಲಿಕ್ ಕಮ್ಯೂನಿಟಿ ಆಫ್ ಸೌತ್ ಕೆನರಾ*, ಸಲಕ್ ಪ್ರಿಂಟರ್ಸ್, ಮಂಗಳೂರು 1983, ಪುಟ 67.

25. ಸಂತ ಅಲೋಶಿಯಸ್ ಕಾಲೇಜು: *ಸೆಂಟಿನರಿ ಸವೆನಿರ್, ಎ ಹಿಸ್ಟರಿ ಆಫ್ ಕಾಲೇಜ್*, ಡಾ। ಡಿ.ಎನ್. ನಾರಾಯಣ ರಾವ್, ಪೂರ್ವೋಕ್ತ 1980, ಪುಟ 12.

9 ಮಂದಿ ಜೆಸ್ಯೂಟರೆಂದರೆ 1) Rt. Rev. Nicholas Pagani, 2) Fr. Angelo Mutti. 3) Fr. Angelo Maffei 4) Fr. Augustus Muller 5) Fr. Otto Ehrle 6) Fr. Quntinus Sani 7) Fr. Urban Stein. 8) Br. Francis Zomboni 9) Br. Mathew Meneghetti

26. ಸಂತ ಅಲೋಶಿಯಸ್ ಕಾಲೇಜು: *ಸೆಂಟಿನರಿ ಸವೆನಿರ್*, ಪೂರ್ವೋಕ್ತ, ಪುಟ 64.

27. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ viii, ನಂ:1, 1928, ಪುಟ 1.

ಇನ್ನೊಂದು ಕಾಲೇಜೆಂದರೆ The Maharaja's College, Trivandrum.

28. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:1, 1897, ಪುಟ – 17.

This magazine published in the interests of the college, its graduates and under graduates, and incidentally in those of the city of Mangalore and South Canara. It is the organ of the college and the record of its doing, as well as a bond of union between its present and past students. It will be issued quarterly for the first year. The subscription for the four numbers is One Rupee or Four annas a copy.

29. ಡೆನಿಸ್ ಫೆರ್ನಾಂಡಿಸ್, ಪೂರ್ವೋಕ್ತ, ಪುಟ 918.

30. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ IV, ನಂ:1, 1907, ಪುಟ 441.

* "The Mangalore Magazine is full of excellent matter excellently set both" - The Irish monthly.

* "The Magazine is well written and the printing and binding are in excellent taste" – N.D. Scholastic.

* "The Mangalore Magazine is well edited and well got up" – The Madras Standard.

ಅಧ್ಯಾಯ: ಎರಡು

ಮ್ಯಾಂಗಲೋರ್ ಮ್ಯಾಗಜೀನ್- ವಿವಿಧ ವಿಷಯಗಳ ಭಂಡಾರ

ಅಧ್ಯಾಯ: ಎರಡು

ಮ್ಯಾಂಗಲೋರ್ ಮ್ಯಾಗಜೀನ್– ವಿವಿಧ ವಿಷಯಗಳ ಭಂಡಾರ

'ಮ್ಯಾಂಗಲೋರ್ ಮ್ಯಾಗಜೀನ್' ಸಂತ ಅಲೋಶಿಯಸ್ ಕಾಲೇಜಿನ ಒಂದು ಮಾಧ್ಯಮ ಹಾಗೂ ದಾಖಲೆಯಾಗಿದೆ. ಇದು ಕಾಲೇಜಿಗೆ ಮತ್ತು ಮಂಗಳೂರಿಗೆ ಸಂಬಂಧಿಸಿದ ಹಾಗೂ ಇತರ ವಿಷಯಗಳ ಬಗ್ಗೆ ಬಹಳಷ್ಟು ಅಪೂರ್ವ ಮಾಹಿತಿಗಳನ್ನು ಕಲೆಹಾಕುತ್ತದೆ. ಇದರಲ್ಲಿನ ಬಹಳಷ್ಟು ಲೇಖನಗಳು ಶೈಕ್ಷಣಿಕ, ಧಾರ್ಮಿಕ ಹಾಗೂ ಐತಿಹಾಸಿಕ ನೆಲೆಯಲ್ಲಿವೆ. ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ, ಕಾಲೇಜು ಮತ್ತು ಸೆಕೆಂಡರಿ ಶಿಕ್ಷಣ ವ್ಯವಸ್ಥೆ ಹಾಗೂ ಶಾಲಾ ಕಾಲೇಜು ಪರೀಕ್ಷೆಗಳ ಕುರಿತಾದ ಮಾಹಿತಿಗಳಿದ್ದರೆ, ಧಾರ್ಮಿಕವಾಗಿ ಜೆಸ್ಯೂಟರ ಜೀವನ ಸಾಧನೆ, ಸಾಲ್ಸೆಟ್‌ನ ಹುತಾತ್ಮರ ಹಾಗೂ ಪೂಜ್ಯ ಜೋಸೆಫ್ ವಾಜ್‌ರ ಬಗ್ಗೆ ಲೇಖನಗಳಿವೆ. ಐತಿಹಾಸಿಕವಾಗಿ ಫಾ। ಮಾಫಾಯಿರವರ ದಕ್ಷಿಣ ಕನ್ನಡದ ಐತಿಹಾಸಿಕ ಸ್ಥಳಗಳ ಬಗ್ಗೆ ಮಾಹಿತಿ, ಜೆ.ಎ. ಸಲ್ಡಾನರವರಿಂದ ಕೆನರಾದ ಇತಿಹಾಸ ಹಾಗೂ ಇತರ ಲೇಖನಗಳಿವೆ.

'ಮ್ಯಾಂಗಲೋರ್ ಮ್ಯಾಗಜೀನ್'ನ ಪ್ರಕಟಣೆಯ ಮೊದಲು ರೆ। ಫಾ। ಸಾರ್‌ಜೆಂಟ್‌ರವರ ಮುಂದಾಳುತನದಲ್ಲಿ ಒಂದು ಮಾಸಿಕ ಪತ್ರಿಕೆಯು ಚಾಲ್ತಿಯಲ್ಲಿತ್ತು. ಮ್ಯಾಂಗಲೋರ್ ಮ್ಯಾಗಜೀನ್‌ನ ಮೊದಲ ಪ್ರಕಟಣೆಯಲ್ಲಿ ಇದರ ಉಲ್ಲೇಖವಿದೆ. ಈ ಪತ್ರಿಕೆಗೆ ಕಾಲೇಜಿನ ವಿದ್ಯಾರ್ಥಿಗಳು ಲೇಖನ ಮತ್ತು ಪದ್ಯಗಳು ಹಾಗೂ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಯೊಬ್ಬ ಬರೆದ ಕಥೆಯೊಂದನ್ನು ಹೊಂದಿತ್ತು. ಇದು ಕೈ ಬರಹದ ಮೂಲಕ ಬರೆದು ಕಾಲೇಜಿನ ತರಗತಿಗಳಿಗೆ ಮಾತ್ರ ಹಂಚಲಾಗುತ್ತಿತ್ತು. ಆದರೆ ಇದು ದೀರ್ಘಕಾಲ ಮುಂದುವರಿಯಲಿಲ್ಲ[1] ಎಂಬ ಮಾಹಿತಿ ಇದೆ. 'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಕಾಲೇಜಿನ ಪ್ರಥಮ ರೆಕ್ಟರ್ ಹಾಗೂ ಪ್ರಾಂಶುಪಾಲರಾಗಿದ್ದ ಫಾ। ವಿಲ್ಲಿಯವರ ಜೀವನದ ಬಗ್ಗೆ ಸುದೀರ್ಘ ವಿವರಣೆ ಇದೆ. ಕ್ರಿ.ಶ.1824 ಸೆಪ್ಟೆಂಬರ್ 29ರಂದು ಸ್ವಿಜರ್‌ಲ್ಯಾಂಡ್‌ನಲ್ಲಿ ಹುಟ್ಟಿದ ಫಾ। ಜೋಸೆಫ್ ಆ್ಯಂಟೋನಿ ವಿಲ್ಲಿಯವರು ಕ್ರಿ.ಶ 1844 ಅಕ್ಟೋಬರ್ 1ರಂದು ತಮ್ಮ 20ನೇ ವಯಸ್ಸಿನಲ್ಲಿ ಸೊಸೈಟಿ ಆಫ್ ಜೀಸಸ್‌ಗೆ ಸೇರಿದರು. ನಂತರ ಬಾಂಬೆ ಧರ್ಮ ಪ್ರಚಾರಕ ಮಂಡಳಿಯ ಪವಿತ್ರ ಕೆಲಸವನ್ನು ಜರ್ಮನ್ ಪ್ರಾಂತ್ಯದ ಜೆಸ್ಯೊಟರಿಗೆ ನೀಡದಂತಹ ಸಂದರ್ಭದಲ್ಲಿ ಅಕ್ಟೋಬರ್ 27, 1858ರಲ್ಲಿ ಅವರು ಬಾಂಬೆಗೆ ಆಗಮಿಸಿದರು. ಕ್ರಿ.ಶ 1878ರಲ್ಲಿ ಮಂಗಳೂರು ಧರ್ಮ ಪ್ರಾಂತ್ಯವನ್ನು ಇಟಲಿಯ ವೇನಿಸ್ ಪ್ರಾಂತ್ಯದ ಜೆಸ್ಯೂಟರಿಗೆ ನೀಡಿದ ಸಂದರ್ಭದಲ್ಲಿ ಫಾ। ವಿಲ್ಲಿ 1879ರಂದು ಮಂಗಳೂರಿಗೆ ಆಗಮಿಸಿದರು. ಇಲ್ಲಿ ಸಂತ ಅಲೋಶಿಯಸ್ ಕಾಲೇಜಿನ ಮುಖ್ಯಧಿಕಾಯಾಗಿ [Rector] ಕ್ರಿ.ಶ 1879 ರಿಂದ 1885 ರವರೆಗೆ ಕಾರ್ಯ ನಿರ್ವಹಿಸಿದರು. ಅವರು ಜೀವಿಸಿದ್ದ 72 ವರ್ಷಗಳಲ್ಲಿ ಅಮೂಲ್ಯವಾದ 39 ವರ್ಷಗಳನ್ನು ಇಲ್ಲಿಯೇ [ಯುರೋಪಿಗೆ ಮರಳದೇ] ಕಳೆದರು. ಕ್ರಿ.ಶ. 1868ರಲ್ಲಿ ಅವರು ಬಾಂಬೆ ವಿಶ್ವವಿದ್ಯಾನಿಲಯದ ಸಹಚರರಾಗಿ [Fellow] ನಂತರ ಎಂ.ಎ ಪದವಿಯ ಪರೀಕ್ಷಕ ಮತ್ತು ಸಿಂಡಿಕೇಟ್‌ನ ಸದಸ್ಯರಾಗಿದ್ದರು.

ಕ್ರಿ.ಶ 1885 ನವೆಂಬರ್‌ನಲ್ಲಿಅವರನ್ನು ಬಾಂಬೆಗೆ ವಾಪಾಸು ಕರೆಸಿಕೊಳ್ಳಲಾಯಿತು. ಫಾ। ಜೆ.ಎ. ವಿಲ್ಲಿ 1897 ಎಪ್ರಿಲ್ 17ರಂದು ದೈವಾಧೀನರಾದರು.[2]

ಈ ಮ್ಯಾಗಜೀನ್‌ನಲ್ಲಿ ಮಂಗಳೂರಿನ ಆಸುಪಾಸಿನಲ್ಲಿರುವ ಕೆಲವು ಕ್ರೈಸ್ತ ಚರ್ಚುಗಳ ಹಾಗೂ ಇತರ ಧಾರ್ಮಿಕ ಕ್ಷೇತ್ರಗಳ ವಿವರಗಳು ಸವಿಸ್ತಾರವಾಗಿ ನಮಗೆ ಕಾಣಸಿಗುತ್ತದೆ. ಮಂಗಳೂರಿನಿಂದ 9ಮೈಲಿ ದೂರವಿರುವ ಅರ್ಕಲ್ [Arkal] ಪರ್ವತದ ಮೇಲಿರುವ ಮೊಂಟೆ ಮಾರಿಯಾನೋ [Monte Mariano] ಬಗ್ಗೆ ಹೆಸರಿಸಿ, ಕ್ರಿಶ್ಚಿಯನರು ಪವಿತ್ರ ಸ್ಥಳಗಳನ್ನು ಭೂಮಿಯ ಮೇಲಿರುವ ಸ್ವರ್ಗವೆಂದೇ ಭಾವಿಸುತ್ತಾರೆ ಎಂಬ ಉಲ್ಲೇಖವಿದೆ.ಫಾ। ಮಿರಾಂದರವರು ಇಲ್ಲಿದ್ದ ಹೆಸರುವಾಸಿ ಮಿಶನರಿ ಎಂದು ತಿಳಿಸಲಾಗಿದೆ. ಈ ಸ್ಥಳದ ಹತ್ತಿರವಿರುವ ಗ್ರಾಮ ಮತ್ತು ಸಂತೆಯ ಸ್ಥಳವನ್ನು ಫರಂಗಿಪೇಟೆ ಎಂದು ಕರೆಯುತ್ತಾರೆ. ಸಂಪ್ರದಾಯಗಳ ಪ್ರಕಾರ ಈ ಹೆಸರು ಕೆನರೀಸ್ ಶಬ್ದಗಳಾದ ಫರಂಗಿ [Pheranghi] ಎಂದರೆ ಬಂದೂಕು ಮತ್ತು ಪೇಟ್ [Pet] ಎಂದರೆ ಬಜಾರ್ ಶಬ್ದಗಳಿಂದ ಬಂದಿದೆ. 18ನೇ ಶತಮಾನದ ಕೊನೆಗೆ ಟಿಪ್ಪುಸುಲ್ತಾನ್ ಮಂಗಳೂರಿನಲ್ಲಿದ ತನ್ನ ಫಿರಂಗಿ ದಳವನ್ನು ಕಡಿತಗೊಳಿಸಿ ಈ ಪ್ರದೇಶದಲ್ಲಿ ನೆಲೆಗೊಳಿಸಿದ್ದ. ಇನ್ನೊಂದು ಆಧಾರದ ಪ್ರಕಾರ ಈ ಹೆಸರು ಬಂದಿರುವುದು ಪರಂಗಿ [Feranghi] ಎಂದರೆ ಅಪರಿಚಿತ ಎಂಬ ಶಬ್ದದಿಂದಾಗಿದ್ದು ಇದು ಇಲ್ಲಿನ ಪವಿತ್ರ ಸ್ಥಳದ ಉಗಮದೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ[3]. ಫರಂಗಿಪೇಟೆಯ ಸಾಹಿತಿಕ ಅರ್ಥವೆಂದರೆ ಪರಂಗಿಗಳ ಬಜಾರ್ ಎಂದಾಗಿದೆ. ನಂತರ ಯುರೋಪಿಯನರನ್ನು ಫರಂಗಿಗಳೆಂದು ಕರೆಯಲಾಗಿದೆ. ಅದೇ ರೀತಿ ಪೋರ್ಚುಗೀಸರನ್ನು ಫರಂಗಿಗಳೆಂದು ಕರೆಯುತ್ತಿದ್ದು, ಪ್ರಸ್ತುತ ತುಳುಭಾಷೆಯಲ್ಲಿ ಇದು ಬಳಕೆಯಲ್ಲಿದೆ.[4] ಕ್ರಿ.ಶ. 1526ರಲ್ಲಿ ಮಂಗಳೂರನ್ನು ವಶಪಡಿಸಿದ ನಂತರ ಪೋರ್ಚುಗೀಸರು ಈ ಪ್ರದೇಶದಲ್ಲಿ ತಮ್ಮ ವ್ಯಾಪಾರ ಕೋಠಿ ಆರಂಭಿಸಿದ್ದು, ಸ್ಥಳೀಯರು ಇದನ್ನು ಫರಂಗಿಗಳ ಬಜಾರ್ ಅಥವಾ ವಿದೇಶಿಯರ ಬಜಾರ್ ಎಂದು ಪೋರ್ಚುಗೀಸರನ್ನು ಕರೆದರು[5]. ಹೆಚ್ಚು ಸೂಕ್ತವಾಗಿರುವ ಈ ವಾದ ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ವಿವರಿಸಿಲ್ಲದಿರುವುದು ಆಕರಗಳ ಕೊರತೆಯನ್ನು ತೋರಿಸುತ್ತದೆ.

ಫಾ। ಮಿರಾಂದರವರನ್ನು ಅವರ ವರಿಷ್ಠರು ದಕ್ಷಿಣ ಕೆನರಾದ ಮಿಶನರಿ ಕಾರ್ಯಕ್ಕೆ ಕಳುಹಿಸಿಕೊಟ್ಟಾಗ ಅವರು ಹೈದರಾಲಿಯ ಅಧೀನವಿದ್ದ ಪ್ರದೇಶಗಳಲ್ಲಿ ಚರ್ಚ್‌ಗಳ ಕೊರತೆಯನ್ನು ಕಂಡು ಅವುಗಳನ್ನು ಕಟ್ಟಲು ಒಪ್ಪಿಗೆ ಮತ್ತು ಭದ್ರತೆಯ ಭರವಸೆಯನ್ನು ಪಡೆದರು. ನಂತರ ಅವರು ಫರಂಗಿಪೇಟ್‌ನಲ್ಲಿ ಚರ್ಚ್ ಮತ್ತು ಕಾನ್ವೆಂಟ್‌ಗಳನ್ನು ನಿರ್ಮಿಸಿದರು. ಇದನ್ನು ಸಂತ ಅಸ್ಸಿಸಿಗೆ [Saint of Assisi] ಸಮರ್ಪಿಸಲಾಗಿದೆ. ಮೊಂಟೆ ಮಾರಿಯನೋ ಪದವು ಮೋನ್ಸ್ ಮಿರಾಂದ ಎಂಬ ಪದದಿಂದ ಬಂದಿದೆ. ಕರ್ಮೆಲಿತರು ದಕ್ಷಿಣ ಕೆನರಾಕ್ಕೆ ಬಂದಾಗ ಇಲ್ಲಿನ ಕಟ್ಟಡಗಳನ್ನು ಮರುನಿರ್ಮಿಸಿ, ಸೆಮಿನರಿಯನ್ನು ಜೆಪ್ಪುವಿಗೆ ಸ್ಥಳಾಂತರಿಸಿದರು. ಇಲ್ಲಿ ಅಕ್ಟೋಬರ್ 4 ಬುಧವಾರದಂದು ವರ್ಷವಾರು ಹಬ್ಬ ಆಚರಿಸುವ

ಸಂದರ್ಭದಲ್ಲಿ ಚರ್ಚ್‌ನ್ನು ತಾಳೆ ಮತ್ತು ಮಾವಿನ ಎಲೆಗಳಿಂದ ಶೃಂಗರಿಸಿ ಜನರು ಸಂಭ್ರಮದಲ್ಲಿ ಭಾಗಿಯಾಗುತ್ತಾರೆ.[6] ಇತರ ದಾಖಲೆಗಳ ಪ್ರಕಾರ ವಿಜಯನಗರ ಅರಸರ ಕಾಲದಲ್ಲಿ ಪ್ರಾನ್ಸಿಸ್ಕನರು [Franciscans] ಮಂಗಳೂರಿನಲ್ಲಿ 3 ಚರ್ಚ್‌ಗಳನ್ನು ಕಟ್ಟಿದರು. ಅದರಲ್ಲಿ ಫರಂಗಿಪೇಟೆಯ ಸಂತ ಪ್ರಾನ್ಸಿಸ್ ಅಸ್ಸಿಸಿಯ ಚರ್ಚ್ ಕೂಡಾ ಒಂದಾಗಿದೆ.[7]

ಬ್ರಿಟಿಷ್ ರಾಣಿಯ ವಜ್ರಮಹೋತ್ಸವವನ್ನು ದೇಶದೆಲ್ಲೆಡೆ ಆಚರಿಸಿದಾಗ ಸಂತ ಅಲೋಶಿಯಸ್ ಕಾಲೇಜಿನಲ್ಲಿ 22ನೇ ಜೂನ್ 1897ರಂದು ಇದನ್ನು ಸಂಭ್ರಮಿಸಿದ ಉಲ್ಲೇಖವನ್ನು ಮ್ಯಾಂಗಲೋರ್ ಮ್ಯಾಗಜೀನ್ ಮಾಡುತ್ತದೆ. ಆ ಸಂದರ್ಭದಲ್ಲಿ ರೆ। ಫಾ। ಜೋನ್ ಮೋರ್ ರಾಣಿಯ ಬಗೆಗೆ ಮಾಡಿದ ಪ್ರಷಂಶನೀಯ ಭಾಷಣದ ವಿವರವನ್ನು ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಕೊಡಲಾಗಿದೆ. ರಾಣಿಯು ತನ್ನ ಪ್ರಾರಂಭದ ಕಷ್ಟಕರ ದಿನಗಳನ್ನು ಸಮರ್ಥವಾಗಿ ಎದುರಿಸಿ, ಮೊದಲಿದ್ದ ಕೆಟ್ಟ ಪರಿಸ್ಥಿತಿಗಳನ್ನು ನಿರ್ಮೂಲನೆಗೊಳಿಸಿ, ಸಾಂವಿಧಾನಿಕ ಹಾಗೂ ಪಾರ್ಲಿಮೆಂಟರಿ ಸರಕಾರವನ್ನು ಸಂಪೂರ್ಣವಾಗಿ ಜಾರಿಗೊಳಿಸಿದಳು. ರಾಣಿಯ ಆಳ್ವಿಕೆಯ ಕಾಲದಲ್ಲಿ ಇಂಗ್ಲೆಂಡ್ ಸ್ವಾಯತ್ತ ಅಧಿಕಾರವಿರುವ [Self Government] ವಸಾಹತುಗಳನ್ನು ಸ್ಥಾಪಿಸಿದೆ[8] ಎಂಬುದಾಗಿ ಬರೆಯಲಾಗಿದೆ. ಕ್ರಿ.ಶ 1901 ಜನವರಿ 31 ರಂದು ಬ್ರಿಟಿಷ್ ಸಾಮ್ರಾಜ್ಞಿಯು ಮರಣ ಹೊಂದಿದ ವಾರ್ತೆ ಮಂಗಳೂರು ತಲುಪಿತು. ಕೂಡಲೇ ಶಾಲೆಗಳನ್ನು ಮುಚ್ಚಲಾಯಿತು. ಹಾಗೂ ಎಲ್ಲಾ ರೀತಿಯ ಕ್ರೀಡೆಗಳನ್ನು ಸೋಮವಾರದ ವರೆಗೆ ಮುಂದೂಡಲಾಯಿತು. ಫೆಬ್ರವರಿ 1 ಶುಕ್ರವಾರದಂದು ಮುನ್ಸಿಪಾಲ್ ಕೌನ್ಸಲ್‌ನ ಸಭಾಧ್ಯಕ್ಷರಾದ ರಾವ್ ಸಾಹೇಬ್ ಎಸ್. ಎಫ್. ಬ್ರಿಟ್ಟೋರವರ ನೇತ್ರತ್ವದಲ್ಲಿ ಮಂಗಳೂರಿನ ಜನರ ಪ್ರತಿನಿಧಿಗಳ ಸಭೆ ಜರುಗಿತು. ಈ ಸಭೆಯ ಉದ್ದೇಶವೆಂದರೆ ಸಾಮ್ರಾಜ್ಞಿಯ ಮರಣಕ್ಕೆ ಶೋಕ ವ್ಯಕ್ತಪಡಿಸುವುದು ಹಾಗೂ ರಾಜ ಎಡ್ವರ್ಡ್ VII ಗೆ ನಂಬಿಕೆ ಮತ್ತು ರಾಜನಿಷ್ಠೆಯನ್ನು ವ್ಯಕ್ತಪಡಿಸುವುದುದಾಗಿತ್ತು.[9] ಎಡ್ವರ್ಡ್ VII ರಾಜನಾಗಿ ಸಿಂಹಾಸನಾರೂಢನಾದುದನ್ನು ಮಂಗಳೂರಿನಲ್ಲಿಯೂ ಆಚರಿಸಲಾಯಿತು. ಈ ದಿನದ ಸಂಭ್ರಮಕ್ಕಾಗಿ ಕಾಲೇಜಿನಲ್ಲಿ "ಸೀಡೀಸಿಯಸ್ ದಿ ಲಾಸ್ಟ್ ಕಿಂಗ್ ಆಫ್ ಜೂದಾ" ಎಂಬ ನಾಟಕವನ್ನು ಪ್ರದರ್ಶಿಸಲಾಯಿತು.[10] ಅದೇ ರೀತಿ ವಿವಿಧ ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಎಚ್.ಎಸ್. ಬ್ರೌನ್‌ರವರ ನೇತ್ರತ್ವದಲ್ಲಿ ಬಂದರಿನಲ್ಲಿ ದೋಣಿ ಸ್ಪರ್ಧೆಗಳು ನಡೆದವು.[11] ಈ ರೀತಿ ಮ್ಯಾಂಗಲೋರ್ ಮ್ಯಾಗಜೀನ್ ತನ್ನ ಬರವಣಿಗೆಗಳಲ್ಲಿಸಂತ ಅಲೋಶಿಯಸ್ ಕಾಲೇಜು, ಬ್ರಿಟಿಷ್ ಆಡಳಿತದೊಂದಿಗೆ ತನ್ನನ್ನು ಹೇಗೆ ಗುರುತಿಸಿಕೊಂಡಿದೆ ಎಂಬುದಾಗಿ ವಿವರಿಸಿದೆ.

ಸಂತ ಅಲೋಶಿಯಸ್ ಕಾಲೇಜಿನಲ್ಲಿ ಶಿಕ್ಷಣ ಪಡೆದ ಯುವಕರು ಉದ್ಯೋಗವನ್ನು ಅರಸಿ ಮುಂಬಾಯಿ ಹಾಗೂ ಇತರ ಪ್ರದೇಶಗಳಿಗೆ ವಲಸೆ ಹೋದರೂ ತಮ್ಮ ಮಾತೃಸಂಸ್ಥೆ ಹಾಗೂ ಅದರ ಪತ್ರಿಕೆಯ ಬಗ್ಗೆ ಕಾಳಜಿ ಹೊಂದಿದ್ದ ಉದಾಹರಣೆಗಳು ಸಿಗುತ್ತವೆ.[12] ಸರಕಾರಿ, ಅರೆ ಸರಕಾರಿ ಹಾಗೂ

ಖಾಸಗಿ ಕೆಲಸಗಳಲ್ಲಿ ಸೇರಿದ ಯುವಕರು 1898ರಲ್ಲಿ ಸಭೆ ಸೇರಿ ಅಲೋಶಿಯಸ್ ಅಸೋಶಿಯೇಷನನ್ನು ಕಟ್ಟಿಕೊಳ್ಳುತ್ತಾರೆ ಹಾಗೂ ಇದರ ಮೊದಲ ಅಧ್ಯಕ್ಷರಾಗಿ ಜೆ.ಎ. ಸಲ್ದಾನರು ಆಯ್ಕೆಯಾಗುತ್ತಾರೆ.[13] ಮಂಗಳೂರಿನ ಆಸುಪಾಸಿನ ಸ್ಥಳಗಳ ಬಗ್ಗೆ ಅವುಗಳ ಪ್ರಾಮುಖ್ಯತೆಯ ಬಗ್ಗೆ ಈ ಮ್ಯಾಗಜೀನ್‌ನಲ್ಲಿ ವಿವರಗಳಿವೆ. ಮಂಗಳೂರಿನಲ್ಲಿರುವ ‘ಬಲ್ಮಠ’ ಎಂಬ ಹೆಸರು ಹೇಗೆ ಬಂತು ಎಂಬುದು ಆಸಕ್ತಿಯ ವಿಷಯವಾಗಿದ್ದು, ದಕ್ಷಿಣ ಕೆನರಾದ ಕಲೆಕ್ಟರ್ ಥೋಮಸ್ ಹ್ಯಾರಿಸ್ [Harris] ರವರು ತಮ್ಮ ಮನೆಗೆ ಕೊಟ್ಟಂತಹ ಹೆಸರು ಅದಾಗಿತ್ತು. ಅವರ ಮನೆಯು ಪ್ರಸ್ತುತವಿರುವ ಬಾಸೆಲ್ ಮಿಶನ್ ಮುದ್ರಣಾಲಯದ ಹತ್ತಿರವಿತ್ತು. ಗುಡ್ಡದ ಮೇಲಿನ ಅವರ ಮನೆಗೆ ಜನರು ‘ಬೆಲ್ ಮಾಂಟ್’ [Belmont] ಎಂದು ಕರೆಯುತ್ತಿದ್ದರು. ನಂತರ ಅದು ಬಲ್ಮಠ ಆಯಿತು. ಅದೇ ರೀತಿ ಇದಕ್ಕೆ ಸಂಬಧಿಸಿದಂತೆ ಇಲ್ಲಿ ಪ್ರೊಟೆಸ್ಟೆಂಟ್ ಚರ್ಚ್ ಇದ್ದುದರಿಂದ ಈ ಪದ ಬಂತೆಂದೂ, ಗುಡ್ಡವು ಗಂಟೆಯಾಕಾರದಲ್ಲಿರುವುದರಿಂದ ಈ ಹೆಸರು ಬಂತೆಂದೂ ವಾದವಿದೆ. ಆದರೆ ಬಾಸೆಲ್ ಮಿಶನ್ ಬರುವ ಮೊದಲು ಈ ಪದವಿತ್ತು.[14] ಇಲ್ಲಿ ಕೊನೆಗೆ ಲೇಖಕರು ನಿಜಾಂಶವನ್ನು ಪತ್ತೆಹಚ್ಚುವ ಕೆಲಸವನ್ನು ಓದುಗರಿಗೆ ಬಿಟ್ಟು ಬಿಟ್ಟಿದ್ದಾರೆ.

ಮ್ಯಾಂಗಲೋರ್ ಮ್ಯಾಗಜೀನ್ ನಲ್ಲಿ ಎರಡು ಭೂಪಟಗಳಿದ್ದು, ಒಂದು ದಕ್ಷಿಣ ಭಾರತದ ರೈಲ್ವೆ ಹಾಗೂ ಮತ್ತೊಂದು ಮಂಗಳೂರು ನಗರಕ್ಕೆ ಸಂಬಂಧಿಸಿದುದಾಗಿದೆ. ಇದನ್ನು ಜೆಪ್ಪು ಸೆಮಿನರಿಯ ಫಾ। ಜೋಸೆಫ್ ಜೆಯೋನಿನಿ [Gioanini] ಎಸ್.ಜೆ. ಬಿಡಿಸಿದಾಗಿದ್ದು, ಕೋಡಿಯಾಲ್ ಬೈಲ್ ಮುದ್ರಣಾಲಯದಲ್ಲಿ ಮುದ್ರಿಸಲಾಗಿದೆ.[15] ಪ್ರಾಚೀನ ಕಾಲದಲ್ಲಿ ಮಂಗಳೂರಿನ ಕೆಥೋಲಿಕರಲ್ಲಿ ಆಚರಣೆಯಲ್ಲಿದ್ದ ವಿವಾಹ ವ್ಯವಸ್ಥೆಯ ಬಗ್ಗೆ ವಿವರವಾದ ಚರ್ಚೆ ಇದ್ದು, ಇದೊಂದು ಬರೆ ಕಾಲಹರಣದ ಸಂಪ್ರದಾಯ ಎಂಬುದೇ ಇಲ್ಲಿಯ ಅಭಿಪ್ರಾಯ. ಈಗ ಕ್ರಿಶ್ಚಿಯನರು ಸರಕಾರಿ ಕಛೇರಿಗಳಲ್ಲಿ ಉದ್ಯೋಗದಲ್ಲಿದ್ದು ಹಾಗೂ ಅವರು ಶಿಕ್ಷಿತರಾಗಿದ್ದು, ಹೊಸ ತರಹದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಆದ್ದರಿಂದ ಅವರು ಮದುವೆಗಾಗಿ ಸಮಯ ವಿನಿಯೋಗಿಸುದಕ್ಕಿಂತ ಅಗತ್ಯದ ವಿಚಾರಗಳಿಗೆ ಸಮಯ ವಿನಿಯೋಗಿಸುತ್ತಾರೆ. ಇದಕ್ಕೆ ಕಾರಣವೆನೆಂದರೆ ಯೂರೋಪಿನ ನಾಗರಿಕತೆ ಮತ್ತು ಸಂಸ್ಕೃತಿ ಭಾರತದಲ್ಲಿ ಹರಡಿರುವುದಾಗಿರುತ್ತದೆ.[16]

ಟಿಪ್ಪುವಿನ ಬಗ್ಗೆ ಹಲವಾರು ಕಥೆ, ವಿಷಯಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಅವುಗಳಲ್ಲಿ ಟಿಪ್ಪುವಿನ ಅಡುಗೆಯವರಲ್ಲಿ ಒಬ್ಬನಾದ ಬಾಲ್ತಜಾರ್ [Balthajar] [ಬಾಲ್ತು ಚಟ್ನಿ] ಎಂಬವನು ಹೇಳಿದನೆಂಬ ಕಥೆಗಳಿವೆ. ಆತ ಟಿಪ್ಪು ಸುಲ್ತಾನನಿಗೆ ಬರೇ ರುಚಿಕರವಾದ ವಿವಿಧ ರೀತಿಯ ಚಟ್ನಿಯನ್ನು ಮಾತ್ರ ತಯಾರಿಸಿಕೊಡುತ್ತಿದ್ದನು. ಅದಕ್ಕಾಗಿ ಆತನಿಗೆ ಬಾಲ್ತು ಚಟ್ನಿ ಎಂಬ ಹೆಸರು ಬಂದಿದೆ ಎಂದು ತಿಳಿಸಲಾಗಿದೆ. ಆತನು ಟಿಪ್ಪುವಿನ ಬಗ್ಗೆ ಹೇಳಿದನೆಂದಿರುವ ಕಥೆಗಳು ಬಹಳ ಸ್ವಾರಸ್ಯದಿಂದ ಕೂಡಿವೆ. ಈ ಎಲ್ಲಾ ಕಥೆಗಳನ್ನು ಹೈದರಾಲಿ ಹಾಗೂ ಟಿಪ್ಪುವಿನ ಕಾಲದಲ್ಲಿ ಇದ್ದಂತಹ ದಕ್ಷಿಣ ಕನ್ನಡದ ಕ್ರೈಸ್ತರ

ಹಾಗೂ ಈ ಅರಸರ ಸಂಬಂಧಗಳ ಬಗ್ಗೆ ಹೆಣೆಯಲಾಗಿದೆ. ಮುಖ್ಯವಾಗಿ ಕೆಥೋಲಿಕ್ ಕ್ರೈಸ್ತರ ಬಂಧನ ಹಾಗೂ ಅವರ ಕಷ್ಟಕಾರ್ಪಣ್ಯಗಳ ಬಗ್ಗೆ ಹೆಚ್ಚಿನ ಮಾಹಿತಿ ಈ ಕಥೆಗಳಲ್ಲಿ ಕೊಡಲಾಗಿದೆ.[17] ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಸ್ಥಾನದಲ್ಲಿ ಉದ್ಯೋಗದಲ್ಲಿದ್ದ ಬಾಲ್ತು ಚಟ್ನಿಯು ಆತ ಹೇಳಿರುವ ಟಿಪ್ಪುವಿನ ಕಥೆಗಳು ಅವರ ಕ್ರೌರ್ಯವನ್ನು ಸಾರುವುದರೊಂದಿಗೆ, ಧರ್ಮಕ್ಕಾಗಿ ಇಲ್ಲಿನ ಕ್ರೈಸ್ತರು ಮಾಡಿದ ತ್ಯಾಗ ಹಾಗೂ ಬಲಿದಾನವನ್ನು ಈ ಪತ್ರಿಕೆಯ ಓದುಗರಿಗೆ ಮನದಟ್ಟು ಮಾಡುವಲ್ಲಿ ಸಫಲವಾಗಿವೆ. ಇದನ್ನೇ ಮುಂದಿನ ಜನಾಂಗಕ್ಕೆ ಬಂಡವಾಳವಾಗಿ ಉಪಯೋಗಿಸಲು ಪ್ರಯತ್ನಿಸಿದೆ.[18]

'ಮ್ಯಾಂಗಲೋರ್ ಮ್ಯಾಗಜೀನ್'ನ ಬಹಳಷ್ಟು ಪುಟಗಳು ಮಂಗಳೂರಿನಲ್ಲಿರುವ ಪ್ರೊಟೆಸ್ಟೆಂಟ್ ಬಾಸೆಲ್ ಜರ್ಮನ್ ಮಿಶನ್ ಹಾಗೂ ಕೆಥೋಲಿಕರ, ಪ್ರತ್ಯೇಕವಾಗಿ ಜೆಸ್ಯೂಟರ ನಡುವಿನ ಸಂಘರ್ಷಕ್ಕೆ ಮೀಸಲಿರಿಸಲಾಗಿದೆ. ಈ ತರಹದ 'ವಾಕ್ ಕಲಹ' ಈ ಪ್ರದೇಶಕ್ಕೆ ಮಾತ್ರ ಸೀಮಿತವಲ್ಲ. 19ನೇ ಹಾಗೂ 20ನೇ ಶತಮಾನಗಳಲ್ಲಿ ಭಾರತಕ್ಕೆ ಬಂದಂತಹ ಪ್ರೊಟೆಸ್ಟೆಂಟ್ ಹಾಗೂ ಕೆಥೋಲಿಕ್ ಮಿಶನರಿಗಳು ಒಬ್ಬರಿಗೊಬ್ಬರು ದೂಷಿಸುವುದು ಹಾಗೂ ತಮ್ಮ ಪತ್ರಿಕೆಗಳ ಮೂಲಕ ಇನ್ನೊಂದು ಪಂಥದ ಲೋಪದೋಷಗಳನ್ನು ಎತ್ತಿ ಹಿಡಿಯುವುದು ಸರ್ವೇಸಾಮಾನ್ಯವಾಗಿತ್ತು.[19] "ಮ್ಯಾಂಗಲೋರ್ ಮ್ಯಾಗಜೀನ್‌ನ ಓದುಗರು ಅರ್ಥಮಾಡಿಕೊಂಡಿರುವಂತೆ ಹಾಗೂ ಅದರ ಉದ್ದೇಶದಂತೆ ಅದು ನೇರವಾಗಿ ಧಾರ್ಮಿಕವು ಅಲ್ಲ ಹಾಗೂ ವಿವಾದಾಸ್ಪದವೂ ಅಲ್ಲ. ಆದರೆ ಮಂಗಳೂರಿನಲ್ಲಿ ನಮ್ಮ ನೆಲೆ ಮತ್ತು ವೇದಿಕೆಯನ್ನು ಅವಲಂಬಿಸಲು ನಮಗೆ ಬೇರೆ ಮಾಧ್ಯಮಗಳಿಲ್ಲದಿದ್ದು, ನಮಗೆ ಇಷ್ಟವಾದಂತಹ ಎಲ್ಲವನ್ನು ರಕ್ಷಿಸಲು, ಇದರ ಕೆಲವು ಪುಟಗಳನ್ನು ಬಳಸಿದಲ್ಲಿ ಅದು ಅನ್ಯವೆಂದು ನಮಗೆ ಅನಿಸುವುದಿಲ್ಲ. ನಾವು ಅವಕಾಶ ನೀಡಿದ್ದಲ್ಲಿ ಬಾಸೆಲ್ ಮಿಶನ್ ನಮ್ಮ ಮೌನವನ್ನು ತಪ್ಪಾಗಿ ಭಾವಿಸಿದ್ದು ಹಾಗೂ ಅದರ ಹೊಸ ಸ್ನೇಹಿತರು ಒಂದು ಮಾತನ್ನು ಹೇಳದೆ ನಿರುದ್ದೇಶದ ದಾಳಿ ಮಾಡಿದ್ದಾರೆ".[20] ಮಂಗಳೂರಿನ ಬಾಸೆಲ್ ಮಿಶನರಿಗಳು ಕೆಥೋಲಿಕರ ವಿರುದ್ಧ ಕರಪತ್ರಗಳನ್ನು ಮಂಗಳೂರಿನ ಛಾಪಖಾನೆಯಲ್ಲಿ ಮುದ್ರಿಸಿ ಹಂಚುವಾಗ 'ಮ್ಯಾಂಗಲೋರ್ ಮ್ಯಾಗಜೀನ್' ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತದೆ. ಈ ಪಿತೂರಿಯ ವಿರುದ್ಧ ಹೋರಾಡಲು "ಕೆಥೋಲಿಕ್ ಟ್ರೂಥ್ ಸೊಸೈಟಿ"ಯ ಸ್ಥಾಪನೆ ಮಾಡಲಾಗಿದೆ ಎಂದು ಘೋಷಿಸುತ್ತದೆ. ಈ ತರಹದ ಹೋರಾಟ ಹೊಸದೇನಲ್ಲ, ಯುರೋಪಿನಲ್ಲಿಯೂ ತಾವು ಹೋರಾಟ ಮಾಡಿ ಜಯಗಳಿಸಿದವರು ಹಾಗೂ ಇಲ್ಲಿಯೂ ಅದನ್ನೇ ಸಾಧಿಸುತ್ತೇವೆ ಎಂಬ ಆತ್ಮ ವಿಶ್ವಾಸವನ್ನು ಅದು ಓದುಗರಲ್ಲಿ ಮೂಡಿಸಲು ಪ್ರಯತ್ನಿಸುತ್ತದೆ.[21]

ಮಂಗಳೂರಿನಲ್ಲಿರುವ ವಿವಿಧ ವರ್ಗಗಳ ಬಗ್ಗೆ ವಿವರಗಳು ಇಲ್ಲಿ ಸಿಗುತ್ತವೆ ಹಾಗೂ ಈ ವರ್ಗಗಳ ಬಗ್ಗೆ ಇರುವಂತಹ ಪೂರ್ವಾಗ್ರಹ ಪೀಡಿತ ಬರವಣಿಗೆಗಳನ್ನು ಇಲ್ಲಿ ಕಾಣಬಹುದು. ಇಲ್ಲಿ ಮಹಮಡನರು

ಕಡಿಮೆ ಸಂಖ್ಯೆಯಲ್ಲಿದ್ದು, ಕಡಿಮೆ ಗೌರವವಿರುವ ವರ್ಗವಾಗಿದೆ. ಇವರಲ್ಲಿ ಕೆಲವರು ಶ್ರೀಮಂತ ವ್ಯಾಪಾರಿಗಳಾಗಿದ್ದಾರೆ. ಮಂಗಳೂರಿನಲ್ಲಿರುವ ಕ್ರೈಸ್ತರು ಪ್ರಾಮಾಣಿಕ ಮತ್ತು ಶಿಕ್ಷಿತ ವರ್ಗವಾಗಿದ್ದು,ಇವರು ಬಹುಸಂಖ್ಯೆಯಲ್ಲಿರುವ ಪ್ರಭಾವಶಾಲಿ ಸಮುದಾಯವರಾಗಿದ್ದಾರೆ. ಇವರ ಪೂರ್ವಜರು ಶಿವನ ಆರಾಧಕರಾಗಿದ್ದು, ಪೋರ್ಚುಗೀಸರ ಧಾರ್ಮಿಕ ನೀತಿಯಿಂದ ಮತಾಂತರ ಹೊಂದಿದವರಾಗಿದ್ದಾರೆ. ಕ್ರಿಶ್ಚಿಯನ್ನರು ಭೂ ಮಾಲೀಕರು ಮತ್ತು ವ್ಯಾಪಾರಿಗಳಾಗಿದ್ದು, ಸರಕಾರದಡಿಯಲ್ಲಿ ಅಧಿಕಾರಿಗಳಾಗಿ ಉದ್ಯೋಗದಲ್ಲಿದ್ದರು. ಚರ್ಚುಗಳು ಬಲು ಸಂಖ್ಯೆಯಲ್ಲಿದ್ದು ಪೋರ್ಚುಗೀಸ್ ಶೈಲಿಯಲ್ಲಿವೆ ಹಾಗೂ ಪಾದ್ರಿಗಳು ಸ್ಥಳೀಯರಾಗಿದ್ದು, ಗೋವಾದಲ್ಲಿ ತರಬೇತಿ ಪಡೆದವರಾಗಿದ್ದಾರೆ. ಮಂಗಳೂರಿನ ಅವನತಿಗೆ ಹೈದರಾಲಿ ಮತ್ತು ಟಿಪ್ಪುವೇ ಕಾರಣವೆಂದು ಪುನಃ ಇಲ್ಲಿ ದೂಷಿಸಲಾಗಿದ್ದು, ವಸಾಹತುಶಾಹಿ ಇತಿಹಾಸದ ಮುಂದುವರಿಕೆ ಇಲ್ಲಿ ಕಾಣಸಿಗುತ್ತದೆ. ಹೈದರಾಲಿಯ ಕಾಲದಿಂದ ಮಂಗಳೂರಿನಲ್ಲಿ ವ್ಯಾಪಾರ ಇಳಿಮುಖವಾಗಿದೆ. ಆ ಕಾಲದ ಪ್ರಮುಖ ಆಮದುಗಳೆಂದರೆ ಮಸ್ಕತ್‌ನಿಂದ ಮ್ಯಾಡರ್ ಸಸ್ಯದ ಬೇರು [Madder root] ಸೂರತ್ ಮತ್ತು ಖಚ್‌ನಿಂದ ಹತ್ತಿ ಬಟ್ಟೆ ಮತ್ತು ತುಪ್ಪ, ಗೋವಾ ಮತ್ತು ಮುಂಬಾಯಿಂದ ಉಪ್ಪು, ಮದ್ರಾಸ್ ನಿಂದ ಸಿದ್ಧ ಬಟ್ಟೆಗಳು, ಬೆಂಗಾಲದಿಂದ ಸಕ್ಕರೆ ಹಾಗೂ ಚೈನಾದಿಂದ ಚಿಕ್ಕ ಮೊತ್ತದ ಖಚ್ಚಾ ಸಿಲ್ಕ್ ಹಾಗೂ ಪ್ರಮುಖ ರಫ್ತುಗಳೆಂದರೆ ಭತ್ತ, ಕರಿಮೆಣಸು, ಶ್ರೀಗಂಧ, ಅಡಿಕೆ, ಅರಸಿನ ಮತ್ತು ದಾಲಚಿನ್ನಿ [Cassia] ಇತ್ಯಾದಿ. ಹತ್ತಿರದ ಪ್ರದೇಶಗಳ ಉತ್ಪಾದನೆಯನ್ನು ಅರಬ್ ಮತ್ತು ಇಂಗ್ಲೀಷ್ ನೌಕೆಗಳಿಗೆ ಸಾಗಿಸಲಾಗುತಿತ್ತು[22]. 1658 ರಲ್ಲಿ ಫಾ। ವಿನ್ಸ್ಂಟ್ ಕೆನರಾಕ್ಕೆ ಭೇಟಿ ನೀಡಿದಾಗ ಇದು ಶಿವಪ್ಪ ನಾಯಕನ [1645-1660] ಅಧೀನದಲ್ಲಿದ್ದು, ಈ ಪ್ರದೇಶ ಇವನ ಕಾಲದಲ್ಲಿ ಸುವರ್ಣಯುಗವನ್ನು ಕಂಡಿತು ಎಂದಿದ್ದಾರೆ[23].

ಲೇಖಕರಾದ ವಿಕ್ಟರ್ ಸಲ್ದಾನರು ಕೆನರಾವು ಬ್ರಿಟಿಷ್ ಸರಕಾರದ ಕೈಕೆಳಗೆ ಎಲ್ಲಾ ರೀತಿಯಲ್ಲೂ ಅಭಿವೃದ್ಧಿ ಹೊಂದಿದ್ದು, ಶಿಕ್ಷಣ, ಜನಸಂಖ್ಯೆ ಹೆಚ್ಚಳ, ವಾಣಿಜ್ಯ, ಉತ್ಪಾದನೆ ಹಾಗೂ ನಾಗರಿಕತೆಯುಳ್ಳ ರಾಷ್ಟ್ರದ ಸಂಸ್ಥೆಗಳನ್ನು ಹೊಂದಿದೆ. ಇಲ್ಲಿ ಲೇಖಕರ ಉದ್ದೇಶ ಕ್ರಿ.ಶ 1799ರ ಮೊದಲು ಹಿಂದೂ ಅರಸ, ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿನ ಕ್ರೈಸ್ತಧರ್ಮದ ಬೆಳವಣಿಗೆ ಹಾಗೂ ಬ್ರಿಟಿಷರ ಕಾಲದಲ್ಲಿ ಅದರ ಸ್ಥಾನದ ಕಡೆ ಗಮನ ಹರಿಸುವುದಾಗಿದೆ[24]. ಆದರೆ ಇಲ್ಲಿ ಲೇಖಕರು ಬ್ರಿಟಿಷರ ಕಾಲದಲ್ಲಿ ಕೆನರಾ ಅಪರಿಮಿತ ಬೆಳವಣಿಗೆಯಾಯಿತು. ಅದೇ ರೀತಿ ಬ್ರಿಟಿಷ್ ಮತ್ತು ಕ್ರೈಸ್ತರ ನಡುವೆ ಬಹಳ ಪುರಾತನ ಕಾಲದಿಂದಲೇ ಒಂದು ರೀತಿ ಉತ್ತಮ ಸಂಬಂಧವಿತ್ತು ಹಾಗೂ ಅವರನ್ನು ಕ್ರೈಸ್ತರು ಬೆಂಬಲಿಸಿದ್ದರು ಎಂದು ವಾದಿಸುತ್ತಾರೆ ಮತ್ತು ಬ್ರಿಟಿಷರ ಹಾಗೂ ಕ್ರೈಸ್ತರ ನಡುವೆ ಆತ್ಮೀಯ ನಂಟನ್ನು ಕಂಡು ಕೊಂಡಿದ್ದಾರೆ. ಕ್ರಿ.ಶ 1799ರಲ್ಲಿ ಥಾಮಸ್ ಮುನ್ರೋ ತನ್ನ ಚಾಕಚಕ್ಯತೆಯಿಂದ ಕೆನರಾದಲ್ಲಿ ಶಾಂತಿ ಸ್ಥಾಪಿಸಿದ. ಕೆನರಾ ಬ್ರಿಟಿಷರ ಸ್ಥಿರ ಸರಕಾರದಿಂದ ಸಂಪದ್ಭರಿತವಾಗಿ ಬೆಳೆದಿದೆ. ವಾಣಿಜ್ಯ, ಕೈಗಾರಿಕೆ,

ಉತ್ಪಾದನೆ ವಿಸ್ತೃತವಾದ ಶಿಕ್ಷಣ ಇವೆಲ್ಲವೂ ಬ್ರಿಟಿಷ್ ಆಳ್ವಿಕೆಯ ಪ್ರೋತ್ಸಾಹದ ಲಕ್ಷಣಗಳಾಗಿವೆ. ಕೆನರಾದಲ್ಲಿ ಮೊದಲಿದ್ದ ಜೀತದಾಳು ಪದ್ಧತಿ ಸಂಪೂರ್ಣ ನಾಶವಾಗಿದೆ. 1799ರ ನಂತರ ಕ್ರೈಸ್ತರು ಸಂಪದ್ಭರಿತವಾಗಿ ಬೆಳೆದಿದ್ದಾರೆ. ಕ್ರೈಸ್ತರ ಮತ್ತು ಬ್ರಿಟಿಷರ ಸಂಬಂಧ 17ನೇ ಶತಮಾನದ ಮಧ್ಯಭಾಗಕ್ಕೆ ಸಂಬಂಧಿಸಿದ್ದು, ಅವರಿಗೆ ಭತ್ತ, ಕರಿಮೆಣಸು ಹಾಗೂ ಇತರ ವಸ್ತುಗಳನ್ನು ಸರಭರಾಜು ಮಾಡಿದ್ದರು. ಬ್ರಿಟಿಷರು ಭಾರತಕ್ಕೆ ಬಂದಾಗಿನಿಂದ ಕ್ರೈಸ್ತರು ಅವರೊಂದಿಗೆ ಪ್ರಾಮಾಣಿಕತೆಯಿಂದ ವ್ಯವಹರಿಸುತ್ತಿದ್ದರು. ಕ್ರಿ.ಶ 1857ರ ಸಿಪಾಯಿ ದಂಗೆಯ ಸಂದರ್ಭದಲ್ಲಿಯೂ, ಇಡೀ ಭಾರತ ಬ್ರಿಟಿಷರ ವಿರುದ್ಧ ದಂಗೆ ಎದ್ದಾಗ ಕೆನರಾದ ಕ್ರೈಸ್ತರು ಅವರಿಗೆ ಪ್ರಾಮಾಣಿಕರಾಗಿಯೇ ಉಳಿದಿದ್ದರು. ಕ್ರೈಸ್ತರು ಶಾಂತಿ ಸುರಕ್ಷತೆ ಮತ್ತು ಸಮೃದ್ಧಿಯನ್ನು ಅನುಭವಿಸುತ್ತಿದ್ದು ಇಂತಹ ದಿನಗಳನ್ನು ಈ ಮೊದಲು ಅನುಭವಿಸಿಲ್ಲ ಹಾಗೂ ಈ ಆಳ್ವಿಕೆ ಮುಂದುವರಿಯುವಂತೆ ಪ್ರಾರ್ಥಿಸುವುದು ಮತ್ತು ಆಳ್ವಿಕೆಯನ್ನು ಹೊಗಳುವುದು ನಮ್ಮ ಧರ್ಮವಾಗಿದೆ[25] ಎಂಬ ಉತ್ಪ್ರೇಕ್ಷಿತ ಬರಹಗಳು ಈ ಮ್ಯಾಗಜೀನ್‌ನಲ್ಲಿ ದೊರಕುತ್ತವೆ.

ದಕ್ಷಿಣ ಕೆನರಾದ ಬಂದರಿನ ಬಗ್ಗೆ ಅದರ ಬೆಳವಣಿಗೆಯ ಕುರಿತು ವಿವಿಧ ಲೇಖನಗಳು 'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಪ್ರಮುಖ ಸ್ಥಾನ ಪಡೆಯುತ್ತವೆ. ಮಂಗಳೂರಿನಲ್ಲಿದ್ದ ಇಂಗ್ಲೀಷ್ ಕಮೀಶನ್ ಎಜೆಂಟರಾಗಿದ್ದ ಪಾಮರ್‌ರವರು ಈ ಬಗ್ಗೆ ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಹಲವು ಕಂತುಗಳ ದೀರ್ಘ ಲೇಖನ ಬರೆದಿದ್ದಾರೆ. 'ಮ್ಯಾಂಗಲೋರ್ ಮ್ಯಾಗಜೀನ್'ನ ಪ್ರಥಮ ಪ್ರಕಟನೆಯಿಂದಲೇ ಮಂಗಳೂರು ಬಂದರಿನ ಬಗ್ಗೆ ಲೇಖನಗಳು ಪ್ರಾರಂಭವಾಗಿವೆ. ಮಂಗಳೂರಿನ ಲೈಟ್‌ಹೌಸ್ ಹಾಗೂ ಸಂತ ಅಲೋಶಿಯಸ್ ಕಾಲೇಜನಿಂದ ಬಂದರವನ್ನು ಕಾಣಬಹುದು. ಬಂದರಿನಿಂದ ಈ ಮೇಲಿನ ಎರಡೂ ಪ್ರದೇಶಗಳು ಅರ್ಧ ಮೈಲಿ ಒಳ ಪ್ರದೇಶದಲ್ಲಿದ್ದು, ಸಮುದ್ರ ಮಟ್ಟಕ್ಕಿಂತ 240 ಅಡಿ ಎತ್ತರದಲ್ಲಿವೆ. ಉತ್ತರದಲ್ಲಿ ಗುರುಪುರ ನದಿ, ದಕ್ಷಿಣದಲ್ಲಿ ನೇತ್ರಾವತಿ ಹರಿಯುತ್ತಿದ್ದು ಇವುಗಳ ಮಧ್ಯೆ ಹೆಚ್ಚು ಕಡಿಮೆ 2 ಮೈಲಿ ಉದ್ದ ಮತ್ತು 1000 ಯಾರ್ಡ್ಸ್ ಅಗಲವಿರುವ ಬಯಲು ಪ್ರದೇಶವಿದೆ. ಮಂಗಳೂರು ಪಟ್ಟಣವು ಸುಮಾರು ಅರ್ಧ ಮೈಲಿ ದೂರದಲ್ಲಿ ಕೇಂದ್ರೀಕೃತವಾಗಿದೆ. ಈ ಪ್ರದೇಶದೂದ್ದಕ್ಕೂ ಹಂಚಿನ ಕಾರ್ಖಾನೆಗಳ ಚಿಮಿನಿಗಳನ್ನು [Chimney's] ಕಾಣಬಹುದು[26].

ಗುರುಪುರ ನದಿಗಿರುವ ಇನ್ನೊಂದು ಅಳಿವೆಗೆ ತಡೆಯೊಡ್ಡುವ ಯೋಜನೆಯನ್ನು ಸರಕಾರ ರೂ. 10,000 ಖರ್ಚು ಮಾಡಿ ಕೈಗೆತ್ತಿಕೊಂಡಿತು ಹಾಗೂ ಇದರಿಂದಾಗಿ ನದಿಗೆ ಒಂದು ಪ್ರಬಲ ಅಳಿವೆ ಉಳಿದಂತಾಗುತ್ತದೆ. ಕ್ರಿ.ಶ 1869ರಲ್ಲಿ ಗುರುಪುರ ನದಿಗೆ ಹೈದರ್ ಅಥವಾ ಟಿಪ್ಪು ಕಾಲದಲ್ಲಿ ರಚಿಸಲಾಗಿದ್ದ ಸುಲ್ತಾನ್ ಭತ್ತೇರಿಯ ಸ್ವಲ್ಪ ದಕ್ಷಿಣಕ್ಕೆ ಈ ಅಳಿವೆ ಇತ್ತು. ಇದೊಂದು ಪ್ರಮುಖ ಆಮದು – ರಫ್ತು ಕೇಂದ್ರವೆಂದು ಚಿತ್ರಿಸಲಾಗಿದೆ. ಈ ಬಂದರು ದಕ್ಷಿಣ ಭಾರತ ಮತ್ತು ಇಂಗ್ಲೆಂಡಿನ ಮಧ್ಯೆ ರಾಜ ಮಾರ್ಗಕ್ಕೆ ಕೊಂಡಿ ಎಂದು ಬಣ್ಣಿಸಲಾಗಿದೆ[27]. ಕ್ರಿ.ಶ 1847 ರಿಂದ 1881 ರವರೆಗೆ ವಸಾಹತು ಸರಕಾರ

ವಿವಿಧ ರೀತಿಯಲ್ಲಿ ಬಂದರು ಅಭಿವೃದ್ಧಿಗೆ ಶ್ರಮಿಸಿದುದರ ಬಗ್ಗೆ ಮಾಹಿತಿಯನ್ನು ಪಾಮರ್ ನೀಡಿದ್ದಾರೆ. ಕ್ರಿ.ಶ 1885ರಲ್ಲಿ ಸರಕಾರ ಲ್ಯಾಂಡಿಂಗ್ ಮತ್ತು ಶಿಪ್ಪಿಂಗ್ ತೆರಿಗೆ ಅಧಿನಿಯಮ– III ನ್ನು ಬಂದರಿನಲ್ಲಿ ಪರಿಚಯಿಸಿತು ಹಾಗೂ ಇದರಿಂದ ಬರುವ ಮೊತ್ತವನ್ನು ಬಳಸಿ ಬಂದರವನ್ನು ಅಭಿವೃದ್ಧಿ ಪಡಿಸಲು ನಿರ್ಧರಿಸಲಾಯಿತು. ಮಂಗಳೂರಿನ ವ್ಯಾಪಾರಸ್ಥರು ಬಂದರಿನ ಅಭಿವೃದ್ಧಿಗೆ ಬೇಡಿಕೆಯನ್ನು ಮಂಡಿಸುತ್ತಾ ಇದ್ದರು. ಕ್ರಿ.ಶ 1896ರಲ್ಲಿ ಗವರ್ನರ್ ಭೇಟಿ ಸಂದರ್ಭದಲ್ಲಿ ಬಂದರದ ಅಭಿವೃದ್ಧಿಯ ಬಗ್ಗೆ ಅವರ ಗಮನಕ್ಕೆ ತರಲಾಯಿತು. ಮಂಗಳೂರಿಗೆ ಬಂದರು ಹಾಗೂ ವ್ಯವಸ್ಥಿತವಾದ ರೈಲ್ವೆ ಎರಡೂ ಅಂಶಗಳನ್ನು ಮಹತ್ವದ್ದಾಗಿ ಪರಿಗಣಿಸಲಾಗಿತ್ತು. ಈ ಪ್ರದೇಶವು ಸರಕಾರಕ್ಕೆ 10ಲಕ್ಷ ಆದಾಯ ತರುತ್ತಿದ್ದರೂ, ಇಲ್ಲಿ ಸಾರ್ವಜನಿಕ ಕೆಲಸವಾಗಿಲ್ಲ, ಇತರೆಡೆ ರೈಲ್ವೆ ಸಂಪರ್ಕವಿದೆ ಹಾಗೂ ಇತರ ಸಾರ್ವಜನಿಕ ಕೆಲಸಗಳು ನಡೆದಿವೆ. ಕೆನರಾದಲ್ಲಿ ವ್ಯಾಪಾರ ಮತ್ತು ರೈಲ್ವೆ ಸಂಪರ್ಕದಿಂದ ಸರಕಾರದ ಆದಾಯ ಬೆಳೆಯಲಿದೆ[28]. ಮಂಗಳೂರಿಗೆ ಬಂದರು ಮತ್ತು ರೈಲ್ವೆ ಎರಡೂ ವ್ಯವಸ್ಥೆಗಳ ಅಗತ್ಯವನ್ನು ಒತ್ತಿ ಹೇಳಲಾಗಿದೆ. ಮಂಗಳೂರು ಬಂದರಿನಿಂದ ಪ್ರಮುಖವಾಗಿ ಅಡಿಕೆ, ಹಂಚುಗಳು, ಕಾಫಿ, ಮೀನು, ಭತ್ತ, ಸಂಬಾರ ಪದಾರ್ಥಗಳು ಮುಖ್ಯವಾಗಿ ರಫ್ತಾಗುತ್ತಿದ್ದ ವಸ್ತುಗಳಾಗಿದ್ದವು. ಈ ಬಂದರು ಸರಕಾರಕ್ಕೆ ಹೆಚ್ಚು ಆದಾಯ ತರುತ್ತಿದ್ದರೂ, ಸರಕಾರ ಇಲ್ಲಿನ ಅಭಿವೃದ್ಧಿಯ ಕಡೆ ಗಮನಹರಿಸುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾ, ಅಸಮಾಧಾನ ವ್ಯಕ್ತಪಡಿಸಲಾಗಿದೆ.

ಈ ಪ್ರತಿಕೆಯಲ್ಲಿ ಮರ್ಕೆರಾದಿಂದ ಮಂಗಳೂರಿಗೆ ರೈಲ್ವೆ ಪ್ರಾರಂಬಿಸಲು ಕೇಳಿಕೊಳ್ಳಲಾಗಿದೆ. ಇದರ ಉದ್ದೇಶವೆಂದರೆ ಬೃಹತ್ ಮರಗಳ ಸಾಗಾಟ ಮತ್ತು ಕೊಡಗಿನ ಪ್ಲಾಂಟರ್‌ಗಳಿಗೆ ಅನುಕೂಲ ಕಲ್ಪಿಸುವುದು. ಕ್ರಿ.ಶ 1892ರಲ್ಲಿ ಕೆನರಾದ ಜನರು ಜಿಲ್ಲಾಧಿಕಾರಿಯವರ ಮೂಲಕ ಇದರ ಬಗ್ಗೆ ಮನವಿಯೊಂದನ್ನು ಕಳುಹಿಸಿದರು ಹಾಗೂ ಮಂಗಳೂರು–ಮೈಸೂರು ರೈಲ್ವೆಯ ಅಗತ್ಯವನ್ನು ಒತ್ತಿ ಹೇಳಿದ ಬಗ್ಗೆ ವಿವರಗಳಿವೆ. ಸರಕಾರವು ಈ ವರೆಗೆ ಕೆನರಾದಲ್ಲಿ ಯಾವುದೇ ಸಾರ್ವಜನಿಕ ಯೋಜನೆ ಕೈಗೊಂಡಿಲ್ಲ. ಆದರೆ ಇಲ್ಲಿಂದ 11 ಲಕ್ಷ ಆದಾಯ ವಸಾಹತು ಖಜಾನೆಗೆ ಸೇರುತ್ತಿದೆ. ಮಂಗಳೂರು ಕೈಗಾರಿಕಾ ಮತ್ತು ಕೃಷಿ ಉತ್ಪಾದನಾ ದೃಷ್ಟಿಯಿಂದ ಇಲ್ಲಿಗೆ ರೈಲ್ವೆ ಅಗತ್ಯ. ಅದೇ ರೀತಿ ಬರಗಾಲದ ಸಂದರ್ಭದಲ್ಲಿ ಕೆನರಾ ಪ್ರದೇಶವು ಧಾನ್ಯಗಳನ್ನು ಒದಗಿಸಬಹುದು ಹಾಗೂ ಮಂಗಳೂರು– ಮೈಸೂರು ನಡುವಿನ ವ್ಯವಹಾರ ನೋಡಿದಾಗ ರೈಲ್ವೆಯು ಹಣಕಾಸಿನ ದೃಷ್ಟಿಯಿಂದಲೂ ಉತ್ತಮವಾಗಿದೆ. ಈ ರೀತಿ ಕ್ರಿ.ಶ 1895ರ ವರೆಗೆ ರೈಲ್ವೆಗಾಗಿ ಮಂಡಿಸಿದ ಬೇಡಿಕೆಗಳು ಹಾಗೂ ನಡೆಸಿದ ವಿವಿಧ ಪ್ರಯತ್ನಗಳ ಬಗ್ಗೆ ಮಾಹಿತಿ ಇಲ್ಲಿ ಇದೆ. ನಗರದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಾಗಿಲ್ಲ. ಮುನ್ಸಿಪಾಲಿಟಿಯನ್ನು ನೋಡಿಕೊಳ್ಳುವವರು ಎಚ್ಚರಗೊಂಡಿಲ್ಲ. ಆದ್ದರಿಂದ ನಾವು ಹೊರಗಿನವರನ್ನು ದೂರುವುದು ಸರಿಯಲ್ಲ. ನಾವು ಮದ್ರಾಸ್ ಪ್ರಾಂತ್ಯದಿಂದ ದೂರವಿರುವುದು ನಮ್ಮ ಪ್ರಯತ್ನಗಳು ಸಫಲವಾಗದಿರಲು ಕಾರಣವಾಗಿದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.[29]

ಮಂಗಳೂರಿನ ವಾಣಿಜ್ಯದ ಬಗ್ಗೆ ವಿವರಿಸುತ್ತಾ, ಮಂಗಳೂರಿಗೆ ಬರುವ ಕಾಫಿಯು ಮುಖ್ಯವಾಗಿ ಮೈಸೂರು ಮತ್ತು ಕೂರ್ಗಿನಿಂದಾಗಿದೆ. ಮಂಗಳೂರಿನ ಬಂಡವಾಳವು ಮೈಸೂರು ಮತ್ತು ಕೂರ್ಗಿನಲ್ಲಿ ಹೂಡಿಕೆಯಾಗಿದ್ದ ಬಗ್ಗೆ, ಕಾಫಿ ವ್ಯವಸಾಯದ ಬಗ್ಗೆ ವಿವರಗಳಿವೆ. ಕಾಫಿ ಬೀಜವನ್ನು ಅದರ ದರ್ಜೆಗೆ ತಕ್ಕಂತೆ ವಿಭಾಗಿಸುವ ಕೆಲಸವು ಕೈಯಿಂದಲೇ ಮಾಡುವುದಾಗಿದ್ದು, ಇದು ಮಂಗಳೂರಿನ ಬಡ ಮಹಿಳೆ ಮತ್ತು ಮಕ್ಕಳಿಗೆ ವರದಾನವಾಗಿದ್ದು, ಸುಮಾರು 3000 ಕಾರ್ಮಿಕರು ಡಿಸೆಂಬರ್‌ನಿಂದ ಎಪ್ರಿಲ್ ತನಕ ಈ ಕೆಲಸದಲ್ಲಿರುತ್ತಾರೆ. ಪ್ರತಿಯಾಗಿ ಅವರು ದಿನಕ್ಕೆ ಸಾಧಾರಣ ಕೂಲಿಯಾಗಿ 4 ಆಣೆಯನ್ನು [4 Annas] ಪಡೆಯುತ್ತಾರೆ. ಈ ರೀತಿ ವಾರ್ಷಿಕವಾಗಿ ಒಂದು ಲಕ್ಷ ರೂಪಾಯಿ ಈ ಜನರ ಪಾಲಾಗುತ್ತದೆ.[30] ಕಾಫಿ ವ್ಯಾಪಾರವು ನಿಶ್ಚಯವಿಲ್ಲದ ಒಂದು ವ್ಯಾಪಾರವಾಗಿದ್ದು, ಹವಾಮಾನದ ಬದಲಾವಣೆ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬದಲಾವಣೆಗಳು ಈ ಅನಿಶ್ಚಿತತೆಗೆ ಕಾರಣವೆಂದಿದ್ದಾರೆ. ಕಾಫಿ ವ್ಯಾಪಾರದಲ್ಲಿ ಜಿಲ್ಲೆಯ ವ್ಯಾಪಾರಿಗಳ ಮಧ್ಯೆ, ಬಂಡವಾಳ ಹೂಡಿಕೆದಾರರ ಮಧ್ಯೆ ಅನಾರೋಗ್ಯಕರವಾದ ಸ್ಪರ್ಧೆ ಇದ್ದು, ಕಾಫಿಯನ್ನು ಪಡೆಯಲು ಮೊದಲೇ ಪ್ಲಾಂಟರ್‌ಗಳಿಗೆ ಮುಂಗಡ ಹಣ ನೀಡುವುದು ಹಾಗೂ ಇದರ ಅನಾಹುತಗಳ ಬಗ್ಗೆ ಗಮನಹರಿಸುತ್ತಾ, ಈ ವ್ಯಾಪಾರದಿಂದ ಮಂಗಳೂರಿನ ಜನರು 1869ಕ್ಕಿಂತಲೂ ಬಡವರಾಗಿದ್ದಾರೆ ಎಂದು ತಿಳಿಸಲಾಗಿದೆ.[31]

ಫಾ। ಮಾಫಾಯಿರವರು ಬಿಟ್ಟು ಹೋಗಿರುವ ಐತಿಹಾಸಿಕ ದಾಖಲೆಗಳಾಗಿರುವ ಹಸ್ತ ಪ್ರತಿಗಳಿದ್ದು, ಅವುಗಳಿಂದ ದಕ್ಷಿಣ ಕೆನರಾದಲ್ಲಿನ ಆಸಕ್ತಿಯ ಪ್ರದೇಶಗಳು ಎಂಬ ಶೀರ್ಷಿಕೆಯಡಿ ಹಲವು ನಿರಂತರ ಲೇಖನಗಳನ್ನು ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಮುದ್ರಿಸಲಾಗಿದೆ. ಮಂಗಳೂರನ್ನು ಕೋಡ್ಯಾಲ್ [Kodyal] ಎಂದು ಕರೆಯಲಾಗಿದ್ದು, ನಗರವು ದೋಆಬ್ ಪ್ರದೇಶದ ಮೇಲೆ ನೆಲೆಗೊಂಡಿದೆ. ಕೋಡ್ಯಾಲ್ ಎನ್ನುವ ಹೆಸರು ಈಗ ಕೋಡಿಯಾಲ್ ಬೈಲ್ ಎನ್ನುವ ಗ್ರಾಮಕ್ಕಿದ್ದು, ಸಾಹಿತಿಕ ಅರ್ಥವೆಂದರೆ, 'ತೇವದಿಂದ ಕೂಡಿದ ಕೋಡ್ಯಾಲದ ಭೂಮಿ' ಎಂದಾಗಿದೆ. ಮಂಗಳೂರನ್ನು 'ಮಂಗಳಾದೇವಿಯ ನಗರ' 'ಮಂಗಳೂರ್' ಮತ್ತು 'ಮಂಗಳಾಪುರಿ' ಎಂಬೆಲ್ಲಾ ಹೆಸರುಗಳಿಂದ ಕರೆಯಲಾಗಿದೆ. ನಗರದಲ್ಲಿ ಮಹಮಡನರು, ಹಿಂದುಗಳು, ಕೊಂಕಣಿ ಮತ್ತು ಸಾರಸ್ವತ ಬ್ರಾಹ್ಮಣರಿದ್ದಾರೆ. ಮಂಗಳೂರಿನಲ್ಲಿರುವ ಪ್ರಮುಖ ಆಕರ್ಷಣೆಯ ಸ್ಥಳಗಳೆಂದರೆ ಮಂಗಳೂರಿನ ಕೋಟೆಗಳು ಮತ್ತು ಕದ್ರಿ ದೇವಾಲಯವಾಗಿದೆ. ಇಲ್ಲಿ ಲೇಖಕರ ಗಮನಕ್ಕೆ ಬಂದ ಕೋಟೆಗಳೆಂದರೆ ಮಂಗಳೂರಿನಲ್ಲಿ ಕಲೆಕ್ಟರ್ ಕಛೇರಿಯ ನಿವೇಶನದಲ್ಲಿರುವ ಕೋಟೆ, ಬೋಳಾರದ ಸಂತ ಸೆಬೆಸ್ಟಿಯನ್ ಕೋಟೆ, ಅಲೋಶಿಯಸ್ ಕಾಲೇಜಿನ ಹತ್ತಿರದ ಇದ್ಗಾ (Edgah)ಅಥವಾ ಲೈಟ್ ಹೌಸ್ ಪರ್ವತದಲ್ಲಿ ಮತ್ತು ಬಂಗೇಲ್ (Banghel) ಅಥವಾ ಬಂಗೇರ್, ಉರ್ವದ ಹತ್ತಿರದ ಕೋಟೆಗಳಾಗಿವೆ.[32] ಲೇಖಕರ ಪ್ರಕಾರ ಮಂಗಳೂರಿನ ಕೋಟೆಯು ಬಹು ಪ್ರಮುಖವಾಗಿದ್ದು, ಅದರ ಪಳೆಯುಳಿಕೆಗಳು ಈಗಲೂ ಉಳಿದಿವೆ. ಈ ಕೋಟೆಯನ್ನು ಕೆಳದಿ ರಾಜವಂಶದ

ಬಸಪ್ಪನಾಯಕನು ತನ್ನ ಆಳ್ವಿಕೆಯಲ್ಲಿ ಕಟ್ಟಿರಬೇಕೆಂದು ಹೇಳಲಾಗಿದೆ. ಕ್ರಿ.ಶ 1783–84ರಲ್ಲಿ ಬ್ರಿಟಿಷರು ಮಂಗಳೂರನ್ನು ಆಕ್ರಮಿಸಿದ ಸಂದರ್ಭದಲ್ಲಿ ಬ್ರಿಟಿಷ್ ಸೈನ್ಯ ಇಲ್ಲಿ 9 ತಿಂಗಳು ನೆಲೆ ಕಂಡಿತ್ತು. 1783ರ ಮಾರ್ಚ್‌ನಲ್ಲಿ ಟಿಪ್ಪುವಿನ ಕಮಾಂಡರ್ ರುಸ್ತುಮ್ ಅಲಿ ಬೆಗ್‌ನಿಂದ ಈ ಪ್ರದೇಶವನ್ನು ಜನರಲ್ ಮ್ಯಾಥ್ಯೂಸ್ ಆಕ್ರಮಿಸಿದ ನಂತರ ಮ್ಯಾಥ್ಯೂಸ್ ಆದನ್ನು ಜನರಲ್ ಕ್ಯಾಂಪ್‌ಬೇಲ್ (Campbell) ಗೆ ಒಪ್ಪಿಸಿ, ಬಿದನೂರು ಆಕ್ರಮಣಕ್ಕೆ ಮುಂದುವರಿದನು. ಟಿಪ್ಪು ಮೇ 16ರಂದು ತನ್ನ ಒಂದು ಲಕ್ಷ ಸೈನ್ಯ ಹಾಗೂ 95 ಬಂದೂಕುಗಳೊಂದಿಗೆ ಕೋರ್ಡೆಲ್ (Cordel) ನಲ್ಲಿ ಪ್ರತ್ಯಕ್ಷನಾದನು. ಬ್ರಿಟಿಷ್ ಸೈನ್ಯವು 210 ಯೂರೋಪಿಯನ್ ಮತ್ತು 1,500 ಸಿಪಾಯಿಗಳನ್ನು ಹೊಂದಿತ್ತು. ಕ್ರಿ.ಶ 1784 ಜನವರಿ 30 ರಂದು ಒಪ್ಪಂದವಾಗಿ ಈ ಪ್ರದೇಶ ಟಿಪ್ಪುವಿನ ವಶವಾಯಿತು. ಇನ್ನೊಂದು ಕೋಟೆಯಾಗಿರುವ ಬೋಳಾರದ ಸಂತ ಸಬೆಸ್ಟಿಯನ್ ಕೋಟೆಯನ್ನು ಕ್ರಿ.ಶ 1568 ರಲ್ಲಿ ಪೋರ್ಚುಗೀಸರು ಕಟ್ಟಿದರು. ಈ ಪ್ರದೇಶವನ್ನು ಬತ್ತೇರಿ (Battery) ಎಂದು ಕರೆಯಲಾಗಿದೆ. ಇಡ್ಯಾ (Edya) ಪರ್ವತದಲ್ಲಿ ಕೋಟೆಯ ಕೆಲವೊಂದು ಅಂಶಗಳನ್ನು ಕಾಣಬಹುದು. ಕ್ರಿ.ಶ 1623 ರಲ್ಲಿ ಡೆಲ್ಲಾವೆಲ್ಲಿ ಕೆನಾರಕ್ಕೆ ಬಂದಿದ್ದು, ಆದರ ಮೊದಲೇ ಬಂಗೇರ್ ಕೋಟೆ ಇದ್ದುದರ ಬಗ್ಗೆ ಹೇಳಿದ್ದಾನೆ. ಇದು ಕೂಳೂರಿಗೆ ಹೋಗುವ ದಾರಿಯಲ್ಲಿ ಮಂಗಳೂರಿನಿಂದ ಒಂದು ಮೈಲಿ ದೂರವಿದೆ. ಆದರೆ ಇದು ನಿಖರವಾಗಿ ಎಲ್ಲಿದೆ ಎಂದು ಹೇಳಲು ಕಷ್ಟವಾಗಿದೆ. ಇಕ್ಕೇರಿಯ ವೆಂಕಟಪ್ಪ ನಾಯಕ ಇದನ್ನು ನಾಶಪಡಿಸುವುದರ ಬಗ್ಗೆ ಮಾಹಿತಿ ಇದೆ.[33]

ಉಳ್ಳಾಲದ ಬಗ್ಗೆ ಮಾಹಿತಿ ಇಲ್ಲಿ ಕಂಡು ಬರುತ್ತದೆ. ದಕ್ಷಿಣ ಕೆನರಾದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿರುವ ಈ ಪ್ರದೇಶವು ಜೈನ ರಾಜನಿಂದ ಆಳಲ್ಪಡುತಿತ್ತು. ಉಳ್ಳಾಲವು ಹಿಂದೂ ಮತ್ತು ಮಲಬಾರ್‌ನ ಮೋಪ್ಲಾಗಳನ್ನು (Moplahs) ಹೊಂದಿದೆ. ಡೆಲ್ಲಾವೆಲ್ಲಿಯು ಹೇಳುವಂತೆ ಉಳ್ಳಾಲದ ರಾಣಿಯು ಸೋಮನಾಥನ ಆರಾಧಕಳಾಗಿದ್ದು, ಅಲ್ಲಿನ ದೇವಾಲಯವನ್ನು ರಾಜವಂಶದ ಅಗತ್ಯಕ್ಕಾಗಿ ಕಟ್ಟಲಾಗಿದೆ. ಈ ದೇವಾಲಯ ಉಳ್ಳಾಲದಿಂದ 2 ಮೈಲಿ ದಕ್ಷಿಣಕ್ಕಿದೆ. ಲೇಖಕರು ಇಲ್ಲಿ ಶಾಸನಗಳನ್ನು ಗುರುತಿಸಿದ್ದು, ಉಳ್ಳಾಲದ ಪೇಟೆಯಲ್ಲಿರುವ ಶಾಸನವು ಅಸ್ಪಷ್ಟವಾಗಿದೆ ಎಂದಿದ್ದಾರೆ. ಅದರಲ್ಲಿನ ಸಿಂಹ, ಸೂರ್ಯ, ಚಂದ್ರ ಮತ್ತು ಖಡ್ಗದ ಚಿತ್ರಗಳನ್ನು ಕಂಡು ಸೂರ್ಯ ಮತ್ತು ಚಂದ್ರರ ಚಿತ್ರಗಳನ್ನು ಸೂರ್ಯವಂಶ ಮತ್ತು ಚಂದ್ರವಂಶದ ಜೊತೆ ಸಂಬಂಧ ಕಲ್ಪಿಸಿದ್ದಾರೆ.[34]

ಮಂಜೇಶ್ವರವು ಮಂಗಳೂರಿನಿಂದ 10 ಮೈಲಿ ದಕ್ಷಿಣಕ್ಕಿದ್ದು ಸುಬ್ರಮಣ್ಯನಿಗೆ ಅರ್ಪಿತವಾದ ಕೊಂಕಣಿಗಳ ದೇವಾಲಯವಿದೆ. ಲೇಖಕರು ಮಂಜೇಶ್ವರ ಪದವನ್ನು ಮಂಚ (Mancha) ಎಂದರೆ ಪಲ್ಲಕ್ಕಿ ಮತ್ತು ಈಶ್ವರ ಎಂದರೆ ದೇವರು (Lord) ಎಂಬ ಅಂಶಗಳಿಂದ ಉದ್ಭವವಾಗಿದೆ ಎಂದಿದ್ದಾರೆ. ಮಂಜೇಶ್ವರವು ಮೂರ್ತಿ ಆರಾಧನೆಗೆ ಸಂಬಂಧಿಸಿದಂತೆ ಪ್ರಮುಖ ಪ್ರದೇಶವೆಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. ಪಟ್ಟಣದ ದಕ್ಷಿಣ ಭಾಗವು ಜೈನ ಬಂಗೇರ ರಾಜನ ಅಧೀನವಿದ್ದು, ಉತ್ತರ ಭಾಗವು ವಿಠ್ಠಲ

ರಾಜನ ಅಧೀನದಲ್ಲಿದೆ. ಟಿಪ್ಪುವಿನ ಕಾಲದಲ್ಲಿ ಬಂಗೇರ ರಾಜನನ್ನು ನೇಣು ಹಾಕಿದರೆ, ವಿಠ್ಠಲ ರಾಜ ತಲಚೇರಿಗೆ ಓಡಿಹೋದನು. ಕುಂಬಳೆಯು ಇನ್ನೊಂದು ಚಿಕ್ಕ ಪಟ್ಟಣವಾಗಿದ್ದು, ಮಂಜೇಶ್ವರದಿಂದ 10ಮೈಲಿ ಉತ್ತರದಲ್ಲಿದೆ. ಪ್ರಾಚೀನ ಕಾಲದಿಂದ ಪ್ರಮುಖ ಪ್ರದೇಶವಾಗಿದ್ದು, ಕುಂಬಳೆಯ ರಾಜರು ತುಳುವರ ಮೇಲೆ ಹತೋಟಿ ಹೊಂದಿದ್ದರು. ಕ್ರಿ.ಶ 1514 ರ ಮೊದಲು ಇದು ವಿಜಯನಗರದ ಗವರ್ನರ್‌ನ ಪ್ರದೇಶವಾಗಿದ್ದು, ಇಲ್ಲಿಂದ ಆಳ್ವಿಕೆ ನಡೆಸಿದ್ದ. ಕುಂಬಳೆ ಅರಸರು ಮಲಯಾಳಿಗಳಾಗಿರದೇ, ಅವರು ಬಹುಶ: ಚೌಟರ ಅಥವಾ ಬಂಗೇರರ ಶಾಖೆಗೆ ಸೇರಿರಬೇಕು. ಟಿಪ್ಪುವಿನ ಆಕ್ರಮಣದ ಕಾಲದಲ್ಲಿ ತಲಚೇರಿಗೆ ಓಡಿ ಹೋಗಿದ್ದ ಅರಸ, ಕ್ರಿ.ಶ 1799ರಲ್ಲಿ ಮರಳಿ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯಿಂದ ನಿವೃತ್ತಿ ವೇತನ ಪಡೆದಿದ್ದ. ಮತ್ತೊಂದು ಪ್ರಮುಖ ಪ್ರದೇಶವಾಗಿರುವ ಕಾಸರಗೋಡು ಮಂಗಳೂರಿನಿಂದ 28 ಮೈಲಿ ದೂರದಲ್ಲಿದ್ದು, ತಾಲೂಕಿನ ಕೇಂದ್ರವಾಗಿದೆ. 9ನೇ ಶತಮಾನದಲ್ಲಿ ಚೇರಮನ್ ಪೆರುಮಾಲ್ (cheraman Perumal) ಎಂಬ ಮಲಬಾರ್‌ನ ಅರಸ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿ ಮಸೀದಿಯನ್ನು ಕಟ್ಟಿಸಿದ. ಚಂದ್ರಗಿರಿ ನದಿಯು ಪ್ರಾಚೀನ ಕಾಲದಲ್ಲಿ ಮಳಯಾಳಿ ಮತ್ತು ತುಳು ಮಾತನಾಡುವ ದಕ್ಷಿಣ ಕೆನರಾ ಜಿಲ್ಲೆಯನ್ನು ವಿಭಜಿಸುತಿತ್ತು. ಶಿವಪ್ಪನಾಯಕ ತನ್ನ ಕಾಲದಲ್ಲಿ ಸಂಪೂರ್ಣ ಗಂಗಾವಳ್ಳಿ ನದಿವರೆಗಿನ ಉತ್ತರ ಕೆನರಾ ಮತ್ತು ದಕ್ಷಿಣ ಕೆನರಾ ಪ್ರದೇಶಗಳನ್ನು ಕೆಳದಿ ಸಾಮ್ರಾಜ್ಯಕ್ಕೆ ಸೇರಿಸಿದ್ದ. ಬೇಕಲ್ ಮಂಗಳೂರಿನಿಂದ 36 ಮೈಲಿ ದೂರವಿದ್ದು, ದಕ್ಷಿಣ ಕೆನರಾದ ಬೃಹತ್ ಕೋಟೆಯನ್ನು ಹೊಂದಿದೆ. ಇದನ್ನು ಶಿವಪ್ಪನಾಯಕ ಕಟ್ಟಿದ್ದು, ಕೋಟೆ ಕಟ್ಟುವ ಕಾಲದಲ್ಲಿ ಯೂರೋಪಿಯನ್ ಇಂಜಿನಿಯರ್‌ನ ಸಹಾಯ ಪಡೆದಿರಬೇಕು ಎನ್ನಲಾಗಿದೆ. ಪ್ರಾಚೀನ ಕಾಲದಲ್ಲಿ ಬೇಕಲವನ್ನು ಕದಂಬರು ಆಳಿದ್ದು, ನಂತರ ವಿಜಯನಗರದ ವಶವಾಯಿತು. ಕ್ರಿ.ಶ 1565 ರಲ್ಲಿ ಇದನ್ನು ಬಿದನೂರಿನ ರಾಜ ಆಕ್ರಮಿಸಿದನು. ನಂತರ ಕ್ರಿ.ಶ 1763ರಲ್ಲಿ ಹೈದರನು ಆಕ್ರಮಿಸಿದರೆ; 1799 ರಲ್ಲಿ ಅದು ಈಸ್ಟ್ ಇಂಡಿಯ ಕಂಪೆನಿಯ ಕೈ ಸೇರಿತು. ಹೊಸದುರ್ಗವು ಮಂಗಳೂರಿನಿಂದ 41ಮೈಲಿ ದೂರವಿದ್ದು ಮಳೆಯಾಳದಲ್ಲಿ ಇದನ್ನು ಪುದ್ರಕೋಟೆ (pudrakote)ಎಂದು ಕರೆಯುತ್ತಾರೆ. ಇಲ್ಲಿ 1737 ರಲ್ಲಿ ಇಕ್ಕೇರಿ ರಾಜ ಕಟ್ಟಿಸಿದ ಒಂದು ಬೃಹತ್ ಕೋಟೆ ಇದೆ[35] ಎಂಬ ವಿವರಗಳು ಸಿಗುತ್ತವೆ.

ಕಾರ್ಕಳ, ಮೂಡಬಿದ್ರೆ ಮತ್ತು ವೇಣೂರು ಇವು ದಕ್ಷಿಣ ಕೆನರಾದಲ್ಲಿನ ಜೈನರ ಪ್ರಮುಖ ಪಟ್ಟಣಗಳಾಗಿವೆ ಎಂಬುದಾಗಿ ಮ್ಯಾಗಜೀನ್‌ನಲ್ಲಿ ಉಲ್ಲೇಖಿಸಲಾಗಿದೆ. ಕಾರ್ಕಳವು ಮಂಗಳೂರಿನಿಂದ 30 ಮೈಲಿ ಉತ್ತರಕ್ಕಿದ್ದು, ಹುಮ್ಚ ಅರಸನ ಕೇಂದ್ರ ಸ್ಥಾನವಾಗಿದೆ. ಹುಮ್ಚ ಅರಸರು 6 ಅಥವಾ 7 ಶತಮಾನಗಳಷ್ಟು ಮೊದಲು ಕುದುರೆಮುಖದ ಹತ್ತಿರವಿರುವ ಕಳಸದಿಂದ ವಲಸೆ ಬಂದು ತಮ್ಮನ್ನು ಬೈರರಸು ಓಡೆಯರ್ ಎಂದು ಕರೆದುಕೊಂಡು ದಕ್ಷಿಣ ತುಳುವರ ಮೇಲೂ ತಮ್ಮ ಪ್ರಭುತ್ವ ಸಾಧಿಸಿದರು. ಜೈನ ಅರಸರ ಹಲವು ಪ್ರಖ್ಯಾತ ಸ್ಮಾರಕಗಳಿದ್ದು ಅವರಲ್ಲಿ ಬೈರಸರ ನಂತರ ಮೂಡಬಿದರೆಯ ಚೌಟರು, ನಂದಾವರದ ಬಂಗರರು, ಬೈಲಂಗಡಿಯ ಮೂಲರರು, ಅಲದಂಗಡಿಯ ಅಗಲರು ಮತ್ತು ಮೂಲ್ಕಿಯ

ಸಾವಂತರು ಪ್ರಮುಖರಾಗಿದ್ದಾರೆ. ಅವರು ಕಟ್ಟಿರುವ ಸ್ಮಾರಕಗಳಲ್ಲಿ ಬಸದಿಗಳು ಬಹುಮುಖ್ಯವಾಗಿವೆ. ಲೇಖಕರು ಜೈನ ಸ್ಮಾರಕಗಳ ಬಗ್ಗೆ ವಿವರಿಸಲು ಫರ್ಗ್ಯೂಸನ್ಸ್ ರವರ 'ಹಿಸ್ಟರಿ ಆಫ್ ಇಂಡಿಯನ್ ಆ್ಯಂಡ್ ಈಸ್ಟರ್ನ್ ಆರ್ಕಿಟೆಕ್ಚರ್' ಗ್ರಂಥವನ್ನು ಅವಲಂಬಿಸಿದ್ದಾರೆ.[36]

ಜನವರಿ 31, 1784 ರಲ್ಲಿ ಮಂಗಳೂರನ್ನು ಬ್ರಿಟಿಷರಿಂದ ವಶಪಡಿಸಿಕೊಂಡ ನಂತರ ದಕ್ಷಿಣ ಕೆನರಾದಲ್ಲಿ ಜಮಾಲಾಬಾದ್ ಟಿಪ್ಪು ಸುಲ್ತಾನನ ಪ್ರಮುಖ ಪ್ರದೇಶವಾಯಿತು. ಟಿಪ್ಪು ಶ್ರೀರಂಗ ಪಟ್ಟಣಕ್ಕೆ ಮರಳುವಾಗ ನರಸಿಂಗನ ಅಂಗಡಿ ಎಂಬ ಪ್ರದೇಶದಲ್ಲಿ ತಂಗಿದ್ದು, ಅಲ್ಲಿಂದ ಒಂದು ಬೃಹತ್ ಕಲ್ಲನ್ನು ಗಮನಿಸಿ ತಕ್ಷಣ ಅಲ್ಲಿ ಕೋಟೆ ಕಟ್ಟಬಹುದಾದ ಸಾಧ್ಯತೆಗಳ ಬಗ್ಗೆ ನೋಡಲು ತನ್ನ ಇಬ್ಬರು ಅಧಿಕಾರಿಗಳನ್ನು ಕಳುಹಿಸಿದನು. ಅವರ ವರದಿಯಂತೆ ಟಿಪ್ಪು ಕೋಟೆ ಕಟ್ಟಲುಬೇಕಾದ ಹಣ ಹಾಗೂ ಇದರ ಬುಡದಲ್ಲಿನ ಹೊಸ ನಗರಕ್ಕೆ ಜನರನ್ನು ಕಳುಹಿಸಿ ಕೊಡುತ್ತಾನೆ. ನಂತರ ಈ ಪ್ರದೇಶವನ್ನು 'ಜಮಾಲಾಬಾದ್' ಎಂದು ಕರೆಯುತ್ತಾನೆ. ಇದರ ಅರ್ಥವೆಂದರೆ ಸುಂದರವಾದ ನಗರ ಎಂದಾಗಿದೆ. ಈ ಹೆಸರನ್ನು ಸುಲ್ತಾನ ತನ್ನ ತಾಯಿ 'ಜಮಾಲ್ ಬೀ'(Jammal Bee) ರವರ ಸವಿನೆನಪಿಗಾಗಿ ಇಟ್ಟಿದ್ದಾನೆ. ಕೋಟೆ ಸಿದ್ಧವಾದ ನಂತರ ಒಬ್ಬ ಕಿಲ್ಲೇದಾರ್ (Khiladar) ಜೊತೆಗೆ 400 ಸೈನಿಕರನ್ನು ಇಲ್ಲಿ ಇರಿಸಿದನು. ಅದೇ ರೀತಿ ಈ ನಗರವು ಟಿಪ್ಪುವಿನ ದಕ್ಷಿಣ ಕೆನರಾದ ಆಳ್ವಿಕೆ ನೋಡಿಕೊಳ್ಳುತ್ತಿದ್ದ ಗವರ್ನರನ ಪ್ರಮುಖ ಪ್ರದೇಶವಾಗಿತ್ತು. ಜಮಾಲಾಬಾದ್ ಕಲ್ಲಿನ ಬುಡದಲ್ಲಿ ಸಾಳುವ ವಂಶದ ಸ್ಥಾಪಕನಾದ ನರಸಿಂಗ ರಾಯನು ಕೋಟೆಯನ್ನು ಕಟ್ಟಿದ್ದ ಹಾಗೂ ಅದೇ ರೀತಿ ಶ್ರೀರಂಗ ಪಟ್ಟಣವನ್ನು ಈತನೇ ಸ್ಥಾಪಿಸಿದ್ದ. ಆದರೆ ಆಕಸ್ಮಿಕ ಎಂಬಂತೆ ಈ ಎರಡೂ ಪ್ರದೇಶಗಳನ್ನು ಟಿಪ್ಪು ತನ್ನ ಪ್ರಮುಖ ಕೇಂದ್ರಗಳಾಗಿ ಮಾಡಿಕೊಂಡಿದ್ದನು.[37]

ದಕ್ಷಿಣ ಕೆನರಾದಲ್ಲಿ ಉಡುಪಿಯು ಒಂದು ಪ್ರಮುಖ ಹಿಂದೂ ಧರ್ಮದ ಕೇಂದ್ರವಾಗಿದೆ. ಇದು ಮಂಗಳೂರಿನಿಂದ 37 ಮೈಲಿ ಉತ್ತರಕ್ಕಿದೆ. ತುಳು ಅಥವಾ ಶಿವಳ್ಳಿ ಬ್ರಾಹ್ಮಣರು ಇಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಧಾರ್ಮಿಕವಾಗಿ ಇಲ್ಲಿ ಮುಖ್ಯ ಆಕರ್ಷಣೆಯ ಅಂಶವೆಂದರೆ ಕೃಷ್ಣನ ದೇವಾಲಯ ಹಾಗೂ ಅಷ್ಟ ಮಠಗಳಾಗಿವೆ. ಈ ದೇವಾಲಯವನ್ನು 12ನೇ ಶತಮಾನದಲ್ಲಿ ಮಧ್ವಾಚಾರ್ಯರು ಕಟ್ಟಿದ್ದಾರೆ ಎಂದು ಹೇಳಲಾಗಿದೆ. ಈ ದೇವಾಲಯದ ಸೇವೆಗಳನ್ನು ಸ್ವಾಮಿಗಳು ಮಾಡುತ್ತಾರೆ. ಈ ದೇವಾಲಯದ ಸಂಭ್ರಮದ ಹಬ್ಬವೆಂದರೆ ಜನವರಿ ತಿಂಗಳಲ್ಲಿ ನಡೆಯುವ ರಥದ ಹಬ್ಬವಾಗಿದ್ದು 8ರಿಂದ 10 ದಿನಗಳ ಕಾಲವಿರುತ್ತದೆ.[38] ಮುಲ್ಕಿಯು ಮಂಗಳೂರಿನಿಂದ 16 ಮೈಲಿ ಉತ್ತರಕ್ಕಿದ್ದು, 'ಮುಲ್ಕ್' ಎಂದರೆ ಒಂದು ರಾಜ್ಯ ಎಂದಾಗಿದೆ. ಇದು ಸಣ್ಣ ಮೊತ್ತದ ಸಾಗರ ವ್ಯಾಪರವನ್ನು ಹೊಂದಿದ್ದು, ಮೀನುಗಾರಿಕೆ ಮತ್ತು ಕರಕುಶಲತೆಗಳು ಇತರ ಉದ್ಯೋಗಗಳಾಗಿವೆ. ಕ್ರಿ.ಶ 17 ನೇ ಶತಮಾನದ ಪ್ರಾರಂಭದಲ್ಲಿ ಇಕ್ಕೇರಿಯ

ವೆಂಕಟಪ್ಪ ನಾಯಕನು ಇದನ್ನು ಕಾರ್‌ನಾಡ್ ರಾಣಿಯಿಂದ ವಶಪಡಿಸಿಕೊಂಡನು. ಈಗ ಬಾಸೆಲ್ ಮಿಶನ್ ಇರುವ ಪ್ರದೇಶದಲ್ಲಿ ಹಳೆಯ ಕೋಟೆಯ ಪಳೆಯುಳಿಕೆಗಳಿದ್ದು, ಮುಲ್ಕಿಯು ಮಾವಿನ ಹಣ್ಣು ಮತ್ತು ಅದರ ಭತ್ತಕ್ಕೆ ಹೆಸರು ವಾಸಿಯಾಗಿದೆ. ಪೋರ್ಚುಗೀಸ್ ವೈಸ್‌ರಾಯ್ ಲೋಫೆಸ್ ವಾಸ್ ಡಿ ಸ್ಯಾಂಪ್‌ಯೋ ನ (Lopes Vas de Sampoyo) ಕಾಲದಲ್ಲಿ ಅವರು ಕಾರ್‌ನಾಡ್ ರಾಜನಿಂದ ವಾರ್ಷಿಕವಾಗಿ 800 ಮೂಟೆ (800 Loads) ಅಕ್ಕಿಯನ್ನು ಕಪ್ಪವಾಗಿ ಪಡೆಯುತ್ತಿದ್ದರು. ಕಾಪು ಮಂಗಳೂರಿನಿಂದ 25 ಮೈಲಿ ಉತ್ತರಕ್ಕಿರುವ ಗ್ರಾಮವಾಗಿದ್ದು, ಎರಡು ಕೋಟೆಗಳ ಪಳೆಯುಳಿಕೆಗಳನ್ನು ಕಾಣಬಹುದು. ಇವುಗಳನ್ನು ಇಕ್ಕೇರಿ ದೊರೆ ಬಸಪ್ಪನಾಯಕ (1739–1754) ನು ಕಟ್ಟಿರಬೇಕೆಂದು ಹೇಳಲಾಗಿದೆ. ಇಕ್ಕೇರಿ ಅರಸರು ತುಳುವರ ಮೇಲೆ ದಾಳಿ ಮಾಡುವ ಮೊದಲು ಇದನ್ನು ಸ್ಥಳೀಯ ಅರಸರು ಆಳ್ವಿಕೆ ಮಾಡಿರಬೇಕು. ಇಲ್ಲಿ ಇತ್ತೀಚೆಗೆ ಒಂದು ದೀಪ ಸ್ತಂಭವನ್ನು ಸ್ಥಾಪಿಸಲಾಗಿದೆ ಎಂದು ಲೇಖಕರಾದ ಫಾ। ಮಾಫಾಯಿ ಹೇಳಿದ್ದಾರೆ.[39]

'ಮ್ಯಾಂಗಲೋರ್ ಮ್ಯಾಗಜೀನ್' ನಲ್ಲಿ ದಕ್ಷಿಣ ಕನ್ನಡದ ಕಲ್ಯಾಣಪುರ ಹಾಗೂ ಮಹಾರಾಷ್ಟ್ರದ ಕಲ್ಯಾಣದ ಬಗ್ಗೆ ಗೊಂದಲ ಸೃಷ್ಟಿಸಲಾಗಿದೆ. ಕಲ್ಯಾಣಪುರ ತುಳುವ ಇತಿಹಾಸದಲ್ಲಿ ಪ್ರಮುಖವಾಗಿದ್ದು, ಪೆರಿಪ್ಲಸ್ ಇದನ್ನು ಕಲ್ಯಾಣವೆಂದು ಕರೆದಿದ್ದಾನೆ. 'ಕೋಸ್‌ಮೋಸ್ ಇಂಡಿಕೋ ಪ್ಲೇಯುಸ್‌ಟಸ್' ಕ್ರಿ.ಶ 6ನೇ ಶತಮಾನದಲ್ಲಿ ಒಬ್ಬ ಬಿಷಪ್ ಇಲ್ಲಿ ಇದ್ದ ಬಗ್ಗೆ ಹೇಳಿದ್ದಾನೆ. ಇಲ್ಲಿನ ಎನ್.ಎಸ್.ಡಿ ಮಿಲಾಗ್ರಿಸ್ ಚರ್ಚ್ ದಕ್ಷಿಣ ಕೆನರಾದ ಪ್ರಾಚೀನ ಚರ್ಚ್ ಗಳಲ್ಲಿ ಒಂದಾಗಿದೆ. ಗೋವಾದ ಅನ್ನ್ಯೂರಿಯೋ (Annuario) ಇದನ್ನು 1700 ರಲ್ಲಿ ಕಟ್ಟಿದ್ದು, ಕ್ರಿ.ಶ 1806 ರಲ್ಲಿ ಮರು ನಿರ್ಮಿಸಲಾಗಿದೆ ಎಂದಿದ್ದಾರೆ. ಕಲ್ಯಾಣಪುರದಲ್ಲಿನ ಬೆಳ್ಳಿಗ್ರಾಮದ ಪಾಜಕ ಕ್ಷೇತ್ರವು ವೈಷ್ಣವ ಸುಧಾರಕರಾದ ಮಧ್ವಾಚಾರ್ಯರು ಹುಟ್ಟಿದ ಸ್ಥಳವಾಗಿದೆ. (1199 AD) ಪೋರ್ಚುಗೀಸರು ಕ್ರಿ.ಶ 1678 ರಲ್ಲಿ ಕಲ್ಯಾಣಪುರದಲ್ಲಿ ಕೋಟೆ ಮತ್ತು ಚರ್ಚ್ ಕಟ್ಟಲು ಅನುಮತಿ ಪಡೆದರೂ, 1713 ರಲ್ಲಿ ಬಾರಕೂರು ಮತ್ತು ಕಲ್ಯಾಣಪುರದ ಕೋಟೆಯನ್ನು ಆಕ್ರಮಿಸುವವರೆಗೆ ಅದನ್ನು ಕಟ್ಟಿರಲಿಲ್ಲ. ಬಾರಕೂರು ಮಂಗಳೂರಿನಿಂದ 55 ಮೈಲಿ ಉತ್ತರಕ್ಕಿದೆ. ಇದು ಒಂದು ಕಾಲದಲ್ಲಿ ತುಳುವರ ರಾಜಧಾನಿಯಾಗಿತ್ತು. ಕ್ರಿ,ಶ ಒಂದುವರೆ ದಶಕದಲ್ಲಿ ಇದನ್ನು ಪುರಾತನ ಹುಮ್ಚ ರಾಜವಂಶದ ಲೆಫ್ಟಿನೆಂಟ್ (?) ಒಬ್ಬ ಆಳ್ವಿಕೆ ಮಾಡುತ್ತಿದ್ದು, ಇವರನ್ನು ತುಳುವ ಇತಿಹಾಸದಲ್ಲಿ ಬೈರರಸು ಒಡೆಯರ್ ಎಂದು ಕರೆಯಲಾಗಿದೆ. ಇವರು ಕಾರ್ಕಳದಿಂದ ಆಳುತ್ತಿದ್ದು, ಸ್ವಲ್ಪ ಕಾಲದ ನಂತರ ಬೈರರಸು ಒಡೆಯರು ಲಿಂಗಾಯಿತರಾದಾಗ, ಬಾರಕೂರಿನ ಜೈನ ಲೆಫ್ಟಿನೆಂಟ್ (?) ಆತನ ಸ್ವಾತಂತ್ರ್ಯವನ್ನು ಘೋಷಿಸಿದ. ಈ ಹೊಸ ರಾಜ್ಯ ನಂತರ ಹೊಯ್ಸಳರ ಕಾಲದಲ್ಲಿ ಪ್ರಾಮುಖ್ಯತೆಗೆ ಬಂದು ಹೊಯ್ಸಳರ ಪತನದ ನಂತರ ಮತ್ತೊಮ್ಮೆ ಸ್ವತಂತ್ರವಾಯಿತು. ಬಾರಕೂರನ್ನು ಆಳ್ವಿಕೆ ಮಾಡಿರುವ ಅರಸರಲ್ಲಿ

ಪ್ರಮುಖನೆಂದರೆ ಭೂತಾಳ ಪಾಂಡ್ಯನಾಗಿದ್ದಾನೆ. ಈತ 'ಮಕ್ಕಳ ಸಂತಾನ ಪದ್ಧತಿ'ಯನ್ನು ನಿಲ್ಲಿಸಿ 'ಅಳಿಯ ಸಂತಾನ ಪದ್ಧತಿ'ಯನ್ನು ಜಾರಿಗೆ ತಂದನು.[40]

ಮೊದಲು ಬಾರಕೂರಿಗೆ 'ಜಯಂತಿಕ' ಎಂಬ ಹೆಸರು ಇತ್ತು. ಕ್ರಿ.ಶ 1336 ರಲ್ಲಿ ಇದು ವಿಜಯನಗರದ ಅರಸನಾದ ಹರಿಹರನ ವಶವಾದರೆ, ಕ್ರಿ.ಶ 1506 ರಲ್ಲಿ ನರಸಿಂಗರಾಯನು ಕೆಳದಿಯ ಬಸವ ಒಡೆಯರನ್ನು ಕೆಳದಿಯ ಅರಸರನ್ನಾಗಿ ನೇಮಿಸಿದನು. ಬಾರಕೂರು ಕೋಟೆಯನ್ನು ಬಹುಶ: ಹರಿಹರ ಕಟ್ಟಿಸಿರಬೇಕು. ನಂತರ ಪೋರ್ಚುಗೀಸರು ಇಲ್ಲಿಂದ ವಾರ್ಷಿಕವಾಗಿ ಒಂದು ಸಾವಿರ ಮೂಟೆ (loads) ಅಕ್ಕಿಯನ್ನು ಕಪ್ಪವಾಗಿ ಪಡೆಯುತ್ತಿದ್ದರು. 1565 ರಲ್ಲಿ ವಿಜಯನಗರದ ಪತನದ ನಂತರ ಇದು ಕೆಳದಿ ಅರಸ ಸದಾಶಿವನಾಯಕನ ಅಧೀನ ಸ್ವತಂತ್ರವಾಯಿತು. ಬಿಜಾಪುರ ಸುಲ್ತಾನನ ಪರವಾಗಿ ಗೇರುಸೊಪ್ಪೆಯ ರಾಣಿ ಬಾರಕೂರನ್ನು ಆಕ್ರಮಿಸಿದಾಗ ವೆಂಕಟಪ್ಪ ನಾಯಕ (1582–1629) ಗೇರುಸೊಪ್ಪೆಯನ್ನು ನಾಶಪಡಿಸಿ ಇದನ್ನು ವಶಪಡಿಸಿಕೊಂಡನು. ಇದರೊಂದಿಗೆ ಬಾರಕೂರಿನಲ್ಲಿ ಜೈನ ಧರ್ಮ ನಾಶವನ್ನು ಕಂಡಿತು. ಹೈದರಾಲಿಯ ಕಾಲದಲ್ಲಿ ಮಹಮದೀಯ ಗವರ್ನರ್ ಬಾರಕೂರನ್ನು ಆಳ್ವಿಕೆ ಮಾಡಿದ್ದು ನಂತರ ಈ ನಗರ ತನ್ನ ಮೊದಲಿದ್ದ ಚಾಪನ್ನು ಕಳೆದುಕೊಂಡಿತು.[41] ಕ್ರಿ.ಶ 1623ರಲ್ಲಿ ಡೆಲ್ಲಾವೆಲ್ಲಿ ಬಾರ್ಸೆಲೋರ್ (Barcelore) ವೆಂಕಟಪ್ಪನಾಯಕನಿಗೆ ಸೇರಿದ್ದು, ಕೆಳ ಬಾರ್ಸೆಲೋರ್ (ಕುಂದಾಪುರ) ಪೋರ್ಚುಗೀಸರ ಅಧೀನವಿತ್ತು ಎಂದು ತಿಳಿಸಿದ್ದಾನೆ. ಕುಂದಾಪುರವು ಮಂಗಳೂರಿನಿಂದ 53 ಮೈಲಿ ಉತ್ತರಕ್ಕಿದ್ದು, ಇದು ಉಪ ಕಲೆಕ್ಟರರ ಕೇಂದ್ರ ಸ್ಥಾನವಾಗಿದೆ. 1565 ರ ವರೆಗೆ ಇಲ್ಲಿನ ಪ್ರಮುಖ ಪ್ರದೇಶಗಳು ವಿಜಯನಗರ ಅರಸರ ಕೈಯಲ್ಲಿದ್ದು, ನಂತರ ಬಿದನೂರು ರಾಜರ ಅಧೀನವಾದವು. ಕ್ರಿ.ಶ 16ನೇ ಶತಮಾನದ ಪ್ರಾರಂಭದಲ್ಲಿ ಕುಂದಾಪುರ ಮತ್ತು ಪಶ್ಚಿಮ ಕರಾವಳಿಯ ಪ್ರಮುಖ ಪ್ರದೇಶಗಳು ಪೋರ್ಚುಗೀಸರ ವಶವಾದವು. ಕ್ರಿ.ಶ 1763ರಲ್ಲಿ ಇವು ಹೈದರಾಲಿಯ ಅಧೀನವಾಗಿ, ನಂತರ ಕ್ರಿ.ಶ 1799 ರಲ್ಲಿ ಬ್ರಿಟಿಷರ ವಶವಾದವು. ಪೋರ್ಚುಗೀಸರ ಕಾಲದ ಕೋಟೆ ಕುಂದಾಪುರದಲ್ಲಿದ್ದು, 18ನೇ ಶತಮಾನದಲ್ಲಿ ಡಚ್ಚರು ಒಂದು ಕೋಠಿ (Factory) ಯನ್ನು ನಿರ್ಮಿಸಿದರು. ಕ್ರಿ.ಶ 1793 ರಲ್ಲಿ ಜನರಲ್ ಮ್ಯಾಥ್ಯೂಸ್ ಕುಂದಾಪುರದಲ್ಲಿ ಇಳಿದು ಬಿದನೂರು ವಿರುದ್ಧ ದಂಡೆತ್ತಿ ಹೋಗಿದ್ದ. ಕುಂದಾಪುರವು ಅದರ ಇತಿಹಾಸಕ್ಕಿಂತ ಅಲ್ಲಿ ಸಿಗುವ ವಿವಿಧ ಬಗೆಯ ಮೀನಿನ ತಳಿಗೆ ಪ್ರಖ್ಯಾತವಾಗಿದೆ ಎಂದು ಲೇಖಕರು ತಿಳಿಸಿದ್ದಾರೆ.[42]

ಫಾ। ಮಾಫಾಯಿಯವರ ಲೇಖನಗಳು ಆಸಕ್ತಿಯಿಂದ ಕೂಡಿದ್ದರೂ ಕೆಲವೊಂದು ಅಸ್ಪಷ್ಟ ವಿಷಯಗಳನ್ನು ಹೊಂದಿವೆ. ಈ ಪ್ರದೇಶ ಚಿರಪರಿಚಿತರಲ್ಲದವರಿಗೆ ಈ ವಿವರಣೆಯನ್ನು ಅರ್ಥೈಸುವುದು ಕಷ್ಟ ಸಾಧ್ಯವಾಗಬಹುದು. ಇದಲ್ಲದೇ ಲೇಖಕರು ಇಲ್ಲಿ ಮುಖ್ಯವಾಗಿ ಡೆಲ್ಲಾವೆಲ್ಲಿ ಮತ್ತು ಫರ್ಗ್ಯೂಸನ್‌ರ ಗ್ರಂಥಗಳಿಂದ ವಿಷಯಗಳನ್ನು ಬಹಳವಾಗಿ ಬಳಸಿಕೊಂಡಿದ್ದಾರೆ. ಕೆಲವೊಂದು ಕಡೆ ಲೇಖಕರ ವಿವರಣೆಗಳಿಗಿಂತ ಮೇಲಿನವರ ವಿವರಣೆಗಳೇ ಹೆಚ್ಚಾಗಿದೆ. ಈ ಮೇಲಿನ ಪ್ರಮುಖ ಅಂಶಗಳನ್ನು ಹೊರತು

ಪಡಿಸಿ ಮ್ಯಾಂಗಲೋರ್ ಮ್ಯಾಗಜೀನ್ ಕಾಲೇಜಿಗೆ ಸಂಬಂಧಿಸಿದ ಕ್ರಿಕೆಟ್ ಪಂದ್ಯಾಟಗಳ ಬಗ್ಗೆ ಮಾಹಿತಿ, ಹೆಚ್.ಎಸ್.ಬಿಯವರ ಪ್ರಾಚೀನ ನಾವಿಕರ ಕಥೆಗಳು, ಇತರ ಜೆಸ್ಯೂಟ್ ಸಂಸ್ಥೆಗಳ ಬಗ್ಗೆ ಲೇಖನಗಳು, ಕೊನೆಯ ಸಂಚಿಕೆಗಳಲ್ಲಿ ಮಲೆಯಾಳಿ, ಕನ್ನಡ ಮತ್ತು ಹಿಂದಿ ಲೇಖನಗಳು ಹಾಗೂ ಹಲವು ಸಂಸ್ಥೆಗಳ ಜಾಹೀರಾತುಗಳನ್ನು ಹೊಂದಿದೆ. ಈ ಪತ್ರಿಕೆ ಹಲವು ಕವನಗಳನ್ನು ಹೊಂದಿದ್ದು ಜೋಸೆಫ್ ಸಲ್ಡಾನ, ಎಚ್.ಎಸ್.ಬಿ, ಎಮ್. ಡಬ್ಲ್ಯೂ.ಎಸ್, ಸಿಸ್ಟರ್. ಎಮ್.ಕ್ರಿಸ್ಟೋಪರ್ ಮತ್ತು ಲ್ಯಾಟಿನ್ ಪದ್ಯ ಲೇಖಕರಾದ ಝರ್‌ಬಿನತಿ(Zerbinati S.J) ಎಸ್.ಜೆ ರವರುಗಳು ಪ್ರಮುಖ ಪದ್ಯ ಲೇಖಕರಾಗಿದ್ದಾರೆ.

ಈ ಪತ್ರಿಕೆಯಲ್ಲಿನ ಲೇಖನಗಳು ಪ್ರಾರಂಭದ ಕೆಲವು ಸಂಚಿಕೆಗಳಲ್ಲಿ ಬಹುಮುಖ್ಯವಾಗಿ ಓದುಗರನ್ನು ಆಕರ್ಷಿಸಿದ್ದರೆ, ನಂತರದ ಸಂಚಿಕೆಗಳಲ್ಲಿ (ಕೊನೆಯ) ಆಸಕ್ತಿಯುತ ಲೇಖನಗಳ ಸಂಖ್ಯೆ ಕಡಿಮೆಯಾಗಿ ಅದರ ಮೌಲ್ಯವು ಕುಸಿದದ್ದು ಎದ್ದು ಕಾಣುತ್ತದೆ. ಇ.ಬಿ ಪಾಮರ್ ರವರ ಬಂದರು ಮತ್ತು ರೈಲ್ವೆಯ ಲೇಖನಗಳು ವಸಾಹತುಶಾಹಿ ಸರಕಾರ ಬಂದರು ಮತ್ತು ರೈಲ್ವೆಯ ಅಭಿವೃದ್ಧಿಗೆ ಶ್ರಮಿಸಬೇಕು ಎನ್ನುವ ಅರ್ಥವನ್ನು ಹೊಂದಿದ್ದು, ಕೆಲವೆಡೆ ಲೇಖಕರು ಸರಕಾರ ಕೆನರಾದಿಂದ ಅಪಾರ ಆದಾಯವನ್ನು ಪಡೆಯುತ್ತಿದ್ದರೂ, ಅಭಿವೃದ್ಧಿಗೆ ಒತ್ತು ಕೊಟ್ಟಿಲ್ಲ ಎಂಬುದನ್ನು ಒತ್ತಿ ಹೇಳಿದ್ದಾರೆ. ಇದನ್ನು ಬಿಟ್ಟರೆ ವಸಾಹತುಶಾಹಿಯ ಕಾರ್ಯಾಚರಣೆಯ ಬಗ್ಗೆ ಅವರು ತಮ್ಮ ಲೇಖನಗಳಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. 'ಮ್ಯಾಂಗಲೋರ್ ಮ್ಯಾಗಜೀನ್'ನ ಉದ್ದಗಲಕ್ಕೂ ಟಿಪ್ಪು ಹಲವು ಲೇಖಕರಿಂದ ಖಂಡನೆ ಮತ್ತು ನಿಂದನೆಗೆ ಗುರಿಯಾಗಿರುವುದನ್ನು ಗಮನಿಸಬಹುದು. ಅದೇ ರೀತಿ ಕ್ರೈಸ್ತರ ವಲಸೆ ಹಾಗೂ ಕೆಳದಿಯ ಅರಸರ ಕಾಲದಲ್ಲಿ ಅವರು ಕ್ರೈಸ್ತರನ್ನು ಬರಮಾಡಿಕೊಂಡು ಆಶ್ರಯ ನೀಡಿರುವುದರಿಂದ ಅವರು ಅಭಿವೃದ್ಧಿ ಹೊಂದಿದುದರ ಬಗ್ಗೆ ಮಾಹಿತಿ ಲಭ್ಯವಿದೆ. ಈ ಪತ್ರಿಕೆಯಲ್ಲಿ ವಸಾಹತುಶಾಹಿಯ ಬಗ್ಗೆಗಿನ ಲೇಖನಗಳನ್ನು ಮುದ್ರಿಸುವ ಬಗ್ಗೆ ಉದಾರವಾದ ಧೋರಣೆ ಅನುಸರಿಸಲಾಗಿದ್ದು, ಈ ಬಗ್ಗೆ ಇರುವ ಲೇಖನಗಳು ಬ್ರಿಟನಿನ ಆಳ್ವಿಕೆಯನ್ನು ಸಮರ್ಥಿಸುತ್ತಾ ಹಾಗೂ ಹೊಗಳುತ್ತಾ ಕೆನರಾ ಬ್ರಿಟಿಷ್ ಆಳ್ವಿಕೆಯಲ್ಲಿ ಅಪಾರ ಅಭಿವೃದ್ಧಿಯಾಗಿದೆ ಎಂಬ ವಾದಗಳಿವೆ. ಜೆಸ್ಯೂಟರು 'ಮ್ಯಾಂಗಲೋರ್ ಮ್ಯಾಗಜೀನ್'ನನ್ನು ಧರ್ಮ ಮತ್ತು ಸ್ವರಕ್ಷಣೆಗೋಸ್ಕರ ಬಳಸಿಕೊಂಡಿದ್ದು, ಬಾಸೆಲ್ ಮಿಶನಿನ ವಿರೋಧಿ ಚಟುವಟಿಕೆಗಳ ವಿರುದ್ಧ ಇದರ ಮೂಲಕ ದಾಳಿ ಮಾಡಿದ್ದಾರೆ. ಇದು ಒಂದು ಜೆಸ್ಯೂಟ್ ಸಂಸ್ಥೆಯ ಪತ್ರಿಕೆಯಾಗಿರುವುದರಿಂದ ಧಾರ್ಮಿಕ ಮೌಲ್ಯವಿರುವ ಲೇಖನಗಳು, ಮುಖ್ಯವಾಗಿ ಜೆಸ್ಯೂಟರ ಜೀವನ ಸಾಧನೆಗಳ ಬಗ್ಗೆಗಿನ ಲೇಖನಗಳು ಹಾಗೂ ಶೈಕ್ಷಣಿಕ ಅಂಶಗಳಿಗೆ ಸಂಬಂಧಿಸಿದ ಲೇಖನಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಸಂದರ್ಭಸೂಚಿ

1. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ–1, ನಂ: 1, 1897, ಪುಟ 17.
2. ಅದೇ, ಪುಟ 1–4.
3. ಅದೇ, ಪುಟ 7.
4. ಸೆವ್ರಿನ್ ಸಿಲ್ವಾ, *ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ*, ಸ್ಟಾರ್ ಆಪ್ ಕೆನರಾ ಪ್ರೆಸ್, ಕುಮುಟಾ, 1957, ಪುಟ 37.
5. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ–1, ನಂ: 7, 1899, ಪುಟ 207.
6. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ–1, ನಂ: 1, 1897, ಪುಟ 7.
7. ಸೆವ್ರಿನ್ ಸಿಲ್ವಾ, ಪೂರ್ವೋಕ್ತ, ಪುಟ 37. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ–1, ನಂ: 7, 1899, ಪುಟ 207. ಇನ್ನೆರಡು ಚರ್ಚುಗಳೆಂದರೆ ಮಂಗಳೂರಿನ ಲೇಡಿ ಆಪ್ ದಿ ರೋಜಾರಿ ಮತ್ತು ಉಳ್ಳಾಲದ ಲೇಡಿ ಆಪ್ ಮೇರ್‌ಸೀ.
8. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ–1, ನಂ: 1, 1897, ಪುಟ 13–14.
9. ಅದೇ, ಸಂಪುಟ II, ನಂ : 1, 1901, ಪುಟ 18–19.
10. ಅದೇ, ಸಂಪುಟ II, ನಂ : 8, 1902, ಪುಟ 245.
11. ಅದೇ, ಸಂಪುಟ II, ನಂ : 9, 1903, ಪುಟ 279.
12. ಅದೇ, ಸಂಪುಟ I, ನಂ : 2, 1898, ಪುಟ 33.
13. ಅದೇ, ಸಂಪುಟ I, ನಂ : 3, 1898, ಪುಟ 84–85.
14. ಅದೇ, ಪುಟ 74–75.
15. ಅದೇ, ಪುಟ 81.
16. ಅದೇ, ಸಂಪುಟ I, ನಂ : 4, 1898, ಪುಟ 104–108.

17. ಅದೇ, ಸಂಪುಟ I, ನಂ : 6, 1899, ಪುಟ 179.

18. ಅದೇ, ಸಂಪುಟ I, ನಂ : 8, 1899, ಪುಟ 256.

19. ಕೆಟ್ ಟೆಲ್‌ಶ್ಚರ್, *ಇಂಡಿಯಾ ಇನ್‌ಸ್ಕ್ರೈಬ್‌ಡ್: ಯುರೋಪಿಯನ್ ಅಂಡ್ ಬ್ರಿಟಿಷ್ ರೈಟಿಂಗ್ಸ್ ಆನ್ ಇಂಡಿಯಾ 1600–188,* ನವದೆಹಲಿ : ಆಕ್ಸ್‌ಪರ್ಡ್ ಯೂನಿವರ್ಸಿಟಿ ಪ್ರೆಸ್, 1994, ಪುಟ 92.

20. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ – I, ನಂ : 7, 1899, ಪುಟ 209.

" The object of this magazine as is well understood by it's readers, is not directly religious and controversial. But there being no other organ in Mangalore to defend our altars and our homes, we do not think it alien to its purpose to devote a few of our pages to a defense of all that is most dear to us. Our silence might be misinterpreted if we allowed the basel mission and its new found friend to want only assail us without a word said in our defense"

21. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ – I, ನಂ : 6, 1899, ಪುಟ 189.

Catholic truth society was formed here in Mangalore about 6 months ago to counteract the bad work carried on through the agency of the German basel mission by means of imported anti-Catholic tracts and pamphlets and latterly by productions from their own press. We tolerated patiently for years the circulation of the villainous imported rubbish of the maria monk and chiniquy stamp but with regard to the home productions we deemed it our duty to take the writers to task.

22. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ – iii, ನಂ : 1, 1904, ಪುಟ 37–40.

23. ಅದೇ, ಸಂಪುಟ iii, ನಂ : 3, 1904, ಪುಟ 105.

24. ಅದೇ, ಸಂಪುಟ iii, 1904, ಪುಟ 249.

25. ಅದೇ, ಸಂಪುಟ iii, 1905, ಪುಟ 252–253.

26. ಅದೇ, ಸಂಪುಟ I, ನಂ : 1, 1897, ಪುಟ 9.

27. ಅದೇ, ಪುಟ 10–12.

28. ಅದೇ, ಸಂಪುಟ I, ನಂ : 2, 1898, ಪುಟ 35–37.

29. ಅದೇ, ಸಂಪುಟ I, ನಂ : 3, 1898, ಪುಟ 65–70.

30. ಅದೇ, ನಂ : 6, 1899, ಪುಟ 164–165.

31. ಅದೇ, ನಂ : 8, 1899, ಪುಟ 230–231.

32. ಅದೇ, ನಂ : 7, 1899, ಪುಟ 196–197.

33. ಅದೇ, ಪುಟ 197–199.

34. ಅದೇ, ನಂ : 8, 1899, ಪುಟ 232–235.

35. ಅದೇ, ನಂ : 9, 1900, ಪುಟ 260–262.

36. ಅದೇ, ನಂ : 10, 1900, ಪುಟ 293.

37. ಅದೇ, ನಂ : 11, 1900, ಪುಟ 325.

38. ಅದೇ, ನಂ : 12, 1900, ಪುಟ 355.

39. ಅದೇ, ಸಂಪುಟ ii, ನಂ : 1, 1901, ಪುಟ 5–6.

40. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ ii, ನಂ : 1, 1901, ಪುಟ 6–7.

To him is attributed the supersession of the Makkala Santana custom that sanctioned the descent of ancestral property from father to son, by the Aliya Santana, which established the right of inheritance in the sisters children.

ಇಲ್ಲಿ ಲೇಖಕರಾದ ಫಾ। ಮಾಫಾಯಿಯವರು ಸಾಮಂತ ಅಥವಾ ಸೈನ್ಯಧಿಕಾರಿಯನ್ನು ಉಲ್ಲೇಖಿಸಲು ಲೆಫ್ಟಿನೆಂಟ್ ಎಂಬ ಪದವನ್ನು ಬಳಸಿರಬೇಕು.

41. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ ii, ನಂ : 1, 1901, ಪುಟ 7.

42. ಅದೇ, ನಂ : 2, 1901, ಪುಟ 36–37.

ಅಧ್ಯಾಯ: ಮೂರು

‘ಮ್ಯಾಗಜೀನ್’ನಲ್ಲಿನಿರೂಪಿತವಾದ ದಕ್ಷಿಣ ಕನ್ನಡದ ಇತಿಹಾಸ

ಅಧ್ಯಾಯ: ಮೂರು

‘ಮ್ಯಾಗಜೀನ್’ನಲ್ಲಿನಿರೂಪಿತವಾದ ದಕ್ಷಿಣ ಕನ್ನಡದ ಇತಿಹಾಸ

‘ಮ್ಯಾಂಗಲೋರ್ ಮ್ಯಾಗಜೀನ್’ನಲ್ಲಿ ಪ್ರಕಾಶಿಸಲ್ಪಟ್ಟ ಪ್ರಮುಖ ಲೇಖನಗಳಲ್ಲಿ ಈ ಪ್ರದೇಶದ ಇತಿಹಾಸದ ಲೇಖನವೂ ಒಂದು. ಧಾರಾವಾಹಿ ರೂಪದಲ್ಲಿ ಈ ಲೇಖನಗಳ ಸರಮಾಲೆಯು ಕ್ರಿ.ಶ 1898 ರಿಂದ ಪ್ರಾರಂಭವಾಗಿ 1901 ರ ವರೆಗೆ “ಔಟ್‌ಲೈನ್ಸ್ ಆಫ್ ದಿ ಹಿಸ್ಟರಿ ಆಫ್ ಕೆನರಾ” ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿದೆ. ಇದರ ಲೇಖಕರು ಜೆರೋಮ್ ಆ್ಯಂಟೋನಿ ಸಲ್ಡಾನರು. ಅವರು ತಮ್ಮ ಲೇಖನಗಳನ್ನು 1904 ರ ಸಂಪುಟ ಮೂರರವರೆಗೆ ಮುಂದುವರಿಸಿ ಕೆನರಾದ ಕೆಲವು ಸಮುದಾಯಗಳ ಚರಿತ್ರೆಯ ಬಗ್ಗೆ ಚರ್ಚಿಸಿದ್ದಾರೆ. ಜೆ.ಎ ಸಲ್ಡಾನರು ಮಂಗಳೂರಿನ ಕ್ರೈಸ್ತ ಸಮುದಾಯಕ್ಕೆ ಸೇರಿದವರಾಗಿದ್ದು, ಜೆಸ್ಯೂಟ್ ಸಂಸ್ಥೆಗಳಲ್ಲಿ ಶಿಕ್ಷಿತರಾಗಿದ್ದರು. ಅವರು ಎಫ್.ಎ (F.A) ಶಿಕ್ಷಣವನ್ನು ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಮುಗಿಸಿ ತಮ್ಮ ಬಿ.ಎ ಪದವಿಯನ್ನು ಟ್ರಿಚಿ (Trichy) ಯ ಸಂತ ಜೋಸೆಫ್ ಸಂಸ್ಥೆಯಲ್ಲಿ ಹಾಗೂ ಕಾನೂನು ಪದವಿಯನ್ನು ಬಾಂಬೆ ವಿಶ್ವ ವಿದ್ಯಾನಿಲಯದಿಂದ ಪಡೆದಿದ್ದರು. ಅವರು ಬಾಂಬೆ ಸೇಕ್ರಟೇರಿಯಟ್‌ನ ಕಾನೂನು ವಿಭಾಗದಲ್ಲಿ ಉದ್ಯೋಗಿಯಾಗಿದ್ದರು.[1] ಕ್ರಿ.ಶ 1902 ರಲ್ಲಿ ಅಹಮದಾಬಾದ್‌ನಲ್ಲಿ ಉಪ ನ್ಯಾಯಾಧೀಶರಾಗಿದ್ದು, ಮರು ವರ್ಷ ಶಿರಸಿಯಲ್ಲಿ ಉಪ ನ್ಯಾಯಾಧೀಶರಾಗಿದ್ದರು. ಅದೇ ರೀತಿ ಅವರು ಸಾವಂತ್‌ವಾಡಿಯಲ್ಲಿ ಮುಖ್ಯ ನ್ಯಾಯಧೀಶರಾಗಿ ಹಾಗೂ ಕುಮುಟಾದಲ್ಲಿ ಉಪ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದಾರೆ.

ಈ ಲೇಖನದ ಉದ್ದೇಶವೇ ಪೂರ್ವಾಗ್ರಹ ಪೀಡಿತವಾಗಿದೆ. ಲೇಖಕರ ಪ್ರಕಾರ 1799 ರಲ್ಲಿ ಕೆನರಾದ ಕ್ರೈಸ್ತರು ಟಿಪ್ಪುವಿನ ಬಂಧನದಿಂದ ಬಿಡುಗಡೆಯಾದರು. ಇದರೊಂದಿಗೆ ಅವರ ನಾಡಿನಲ್ಲಿ ಟಿಪ್ಪು ಸುಲ್ತಾನನ ದುರಾಡಳಿತ ಅಂತ್ಯವಾಗಿ ಸುವರ್ಣಯುಗ ಪ್ರಾರಂಭವಾಯಿತು. ಕ್ರಿ.ಶ 1899 ರಲ್ಲಿ ಈ ಘಟನೆಗೆ ಒಂದು ಶತಮಾನವಾಗುವ ಹೊಸ್ತಿಲಲ್ಲಿ ಅವರ ಗತಕಾಲದ ಬಗ್ಗೆ ಒಂದು ದೃಷ್ಟಿಯನ್ನು ಹರಿಸುವುದು ಸಾಮಾನ್ಯವಾಗಿದೆ.[2] ಈ ನಿಟ್ಟಿನಲ್ಲಿ ಲೇಖಕರು ಈ ನಾಡಿನ ಚರಿತ್ರೆಯನ್ನು ಬರೆಯಲು ಉತ್ಸುಹಕರಾಗಿರುವುದಾಗಿ ತಿಳಿಸಿದ್ದಾರೆ.ಕೆನರಾವು ಪಶ್ಚಿಮ ಘಟ್ಟ ಮತ್ತು ಅರಬ್ಬೀ ಸಮುದ್ರದ ಮಧ್ಯೆ ಇದ್ದು, ಪ್ರಸ್ತುತ ಉತ್ತರ ಕೆನರಾ ಮತ್ತು ದಕ್ಷಿಣ ಕೆನರಾಗಳನ್ನು ಆವರಿಸಿದೆ.[3] ಕೆನರಾವು ಉತ್ತರದಲ್ಲಿ ಗೋವಾ ಹಾಗೂ ದಕ್ಷಿಣದಲ್ಲಿ ಮಲಬಾರ್, (ಉತ್ತರ ಪೂರ್ವ) ಈಶಾನ್ಯ ಮತ್ತು ಪೂರ್ವದಲ್ಲಿ ಬೆಳಗಾಂ, ಧಾರವಾಡ, ಮೈಸೂರು, ಮರ್ಕೆರಾ ಮತ್ತು ಪಶ್ಚಿಮ ಘಟ್ಟಗಳಿಂದ ಸುತ್ತುವರಿದಿದೆ. ಇದು 230 ಮೈಲಿ ಕರಾವಳಿ ತೀರ ಪ್ರದೇಶ ಹಾಗೂ 7,812 ಚದರ ಮೈಲಿಯಷ್ಟು ಭೂಪ್ರದೇಶವನ್ನು ಹೊಂದಿದೆ. ಇದರಲ್ಲಿ ಉತ್ತರ ಕೆನರಾವು 3,910 ಹಾಗೂ ದಕ್ಷಿಣ ಕೆನರಾವು 3,902 ಚದರ ಮೈಲಿ ಪ್ರದೇಶಗಳನ್ನು ಒಳಗೊಂಡಿದೆ.

[4] ಕ್ರಿ.ಶ 1862ರಲ್ಲಿ ಕೆನರಾವನ್ನು ವಿಭಜಿಸಿ ಉತ್ತರ ಕೆನರಾವನ್ನು ಮದ್ರಾಸ್‌ನಿಂದ ಬಾಂಬೆ ಪ್ರಾಂತ್ಯಕ್ಕೆ ಸೇರಿಸಿದರೆ, ದಕ್ಷಿಣ ಕೆನರಾ ಮದ್ರಾಸ್ ಪ್ರಾಂತ್ಯದಲ್ಲಿಯೇ ಮುಂದುವರಿಯಿತು. ಉತ್ತರ ಕೆನರಾವನ್ನು ಬಾಂಬೆ ಪ್ರಾಂತ್ಯಕ್ಕೆ ಸೇರಿಸಿದುದರ ಕಾರಣವೆಂದರೆ ಅದು ಬಾಂಬೆ ಜೊತೆ ಹೊಂದಿರುವ ನಿಕಟವಾದ ಭೂ ಮತ್ತು ವಾಣಿಜ್ಯ ಸಂಬಂಧಗಳಾಗಿವೆ.[5]

ಲೇಖಕರು ರೆ। ಕಾಲ್ಡ್‌ವೆಲ್‌ರ 'ದ್ರಾವಿಡಿಯನ್ ಗ್ರಾಮರ್' ಪುಸ್ತಕವನ್ನು ಉಲ್ಲೇಖಿಸುತ್ತಾ ಕೆನರಾ ಪದದ ಉತ್ಪತ್ತಿಯ ಬಗ್ಗೆ ಈ ಕೆಳಗಿನ ವಿವರಣೆ ನೀಡಿದ್ದಾರೆ. ಕರಿ(kari) ಎಂದರೆ ಕಪ್ಪು ಹಾಗೂ ನಾಡು (Nadu)ಎಂದರೆ ದೇಶವಾಗಿದ್ದು, ಪ್ರವಾಸಿಗರು ಈ ಪ್ರದೇಶಕ್ಕೆ ಭೇಟಿ ನೀಡಿದಾಗ ಇದನ್ನು ಕಪ್ಪು ಮಣ್ಣಿನ ದೇಶ (Black soil country) ಎಂದು ಕರೆದಿರಬಹುದು. ಇದು ಸಹ್ಯಾದ್ರಿಯಿಂದ ಪಶ್ಚಿಮಕ್ಕೆ ಇಳಿಜಾರಾಗಿದೆ. ಕನ್ನಡವು ಸ್ಥಳೀಯ ಭಾಷೆಯಾಗಿದ್ದು ಈ ಹೆಸರನ್ನು ದ್ರಾವಿಡಿಯನರು ಕೊಟ್ಟಿರಬೇಕು ಎಂದು ತೋರುತ್ತದೆ. ದ್ರಾವಿಡರು ದಕ್ಷಿಣ ಭಾರತಕ್ಕೆ ವಲಸೆ ಬಂದು ಕಪ್ಪು ಮಣ್ಣಿನ ಪ್ರದೇಶದ ಧಾರವಾಡ, ಬೆಳಗಾಂ ಮತ್ತು ಬಳ್ಳಾರಿಗಳಲ್ಲಿ ನೆಲೆಸಿ ಕ್ರಮೇಣ ಘಾಟ್ಸ್‌ನ ಬಯಲು ಪ್ರದೇಶದಲ್ಲಿ ನೆಲೆಸಿದರು. ನಂತರ ಪೋರ್ಚುಗೀಸರು ಇಲ್ಲಿಗೆ ಬಂದಾಗ ಕಾರವಾರದಿಂದ ಮಂಗಳೂರಿನವರೆಗಿನ ಕರಾವಳಿ ತೀರವನ್ನು ಕೆನರಾ ಎಂದು ಕರೆದರು[6] ಎಂಬುದು ಲೇಖಕರ ಅಭಿಪ್ರಾಯ. ಆದರೆ ವಾಸ್ತವಿಕವಾಗಿ ಕೆನರಾದಲ್ಲಿ ತುಳು ಹಾಗೂ ಕೊಂಕಣಿ ಭಾಷೆಗಳು ಸ್ಥಳೀಯ ಭಾಷೆಗಳಾಗಿವೆ. ಈ ಪ್ರದೇಶದ ಹೆಸರಿನ ಬಗ್ಗೆ ಕ್ರಿ.ಶ 1894ರಲ್ಲಿ ಪ್ರಕಟವಾದ 'ಮೆಡ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವೆಲ್ಸ್: ಸೌತ್ ಕೆನರಾ'ದಲ್ಲಿ ಸ್ಟರಕರು ಹೆಚ್ಚಿನ ಮಾಹಿತಿಯೊಂದಿಗೆ ಚರ್ಚಿಸಿದ್ದಾರೆ. ಹಾಗೂ ಕೊನೆಗೆ ಈ ಪ್ರದೇಶಕ್ಕೆ 'ತುಳುವ' ಹೆಸರೇ ಹೆಚ್ಚು ಸೂಕ್ತ ಎಂಬುದು ಅವರ ಅಭಿಪ್ರಾಯ.[7]

ಕೆನರಾದ ಇತಿಹಾಸ ಅಧ್ಯಾಯನಕ್ಕೆ ಇರುವ ದಾಖಲೆಗಳ ಬಗ್ಗೆ ಲೇಖಕರು ಚರ್ಚಿಸಿದ್ದಾರೆ. ಭಾರತದ ಇತಿಹಾಸದ ಅಧ್ಯಯನಕ್ಕೆ ಇರುವ ದಾಖಲೆಗಳ ಬಗ್ಗೆ ಲೇಖಕರು ವಿವರಿಸುತ್ತಾ, ಭಾರತದ ಇತಿಹಾಸದ ಅಧ್ಯಯನಕ್ಕೆ ಮುಖ್ಯವಾಗಿ ಹಿಂದೂ ಕಾಲದ ಬಗ್ಗೆ ಆಕರಗಳ ಕೊರತೆಯು ವಸಾಹತುಶಾಹಿ ಚರಿತ್ರೆಯ ಒಂದು ಸಾಮಾನ್ಯ ಆರೋಪವಾಗಿದೆ. ಸಿಕ್ಕಿರುವ ದಾಖಲೆಗಳನ್ನು ಕಲ್ಪಿತ, ಅರ್ಥವಿಲ್ಲದ ದಂತ ಕಥೆಗಳ ಅಥವಾ ಸಾಂಪ್ರದಾಯಿಕತೆಯ ಅಂಶದ ಮೇಲೆ ತಿರಸ್ಕರಿಸಲಾಗಿದೆ. ಕೆನರಾದ ಇತಿಹಾಸವು ಇದಕ್ಕೆ ಹೊರತಾಗಿಲ್ಲವಾಗಿದ್ದು, ಇದು "ಆಧಾರರಹಿತವಾದ ದಂತಕಥೆ ಮತ್ತು ಕಟ್ಟುಕತೆಗಳ ಮಿಶ್ರಣವಾಗಿದೆ". ಕೆನರಾ ಇತಿಹಾಸದ ಅಧ್ಯಯನಕ್ಕೆ ಸಂಬಂಧಿಸಿದಂತೆ ಲೇಖಕರು ಕೆಲವೊಂದು ಆಕರಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ಒಂದನೇಯದಾಗಿ ಸಂಸ್ಕೃತ ಮತ್ತು ಇತರ ಭಾಷೆಗಳಲ್ಲಿರುವ ರಾಜರ ಬಗೆಗಿನ ಹೊಗಳಿಕೆಯ ಹಾಡುಗಳು. ಇವು ಸಮಕಾಲೀನ ಘಟನೆಗಳ ಬಗ್ಗೆ, ರಾಜವಂಶಗಳ ಮತ್ತು ರಾಜ್ಯಗಳ ಬಗ್ಗೆ ತಿಳಿಸುತ್ತವೆ.

ಎರಡನೇಯದಾಗಿ ಅರಬ್, ಟರ್ಕ್, ಚೀನಾ ಹಾಗೂ ಇತರ ವಿದೇಶೀ ಯಾತ್ರಿಕರ ಬರವಣಿಗೆಗಳು, ಮೂರನೇಯದಾಗಿ ಶಿಲಾ ಶಾಸನಗಳು ಮತ್ತು ತಾಮ್ರ ಪಟ್ಟಿಗಳು. ಇವು ಬೇರೆ ಬೇರೆಯವರಿಗೆ ಭೂದಾನ ಮಾಡಿರುವುದರ ಬಗ್ಗೆ ಮಾಹಿತಿ ನೀಡುತ್ತವೆ. ಕೊನೆಯದಾಗಿ ನಾಣ್ಯಗಳು, ಕೆನರಾದ ಇತಿಹಾಸದ ಮೇಲೆ ಈವರೆಗೆ ಕಾರ್ಯನಿರ್ವಹಿಸುವವರ ಬಗ್ಗೆ ತಿಳಿಸಿರುವ ಲೇಖಕರು, ಮಿಲಾಗ್ರಿಸ್ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಪ್ರಾನ್ಸಿಸ್‌ರವರು ಕೆನರಾ ಇತಿಹಾಸಕ್ಕೆ ಸಂಬಂಧಿಸಿದಂತೆ ಅಪಾರ ದಾಖಲೆಗಳನ್ನು ಸಂಗ್ರಹಿಸಿದ್ದರು. ಜೋರ್ಜ್ ವಾಸ್‌ರವರು ಕೆನರಾದ ಇತಿಹಾಸದ ಮೇಲೆ ಕೆಲಸ ನಿರ್ವಹಿಸಿದ್ದಾರೆ. ಇವರು ಸಂಗ್ರಹಿಸಿದ ದಾಖಲೆಗಳು ರೆ।ಫಾ। ಮಾಫಾಯಿ ಎಸ್.ಜೆ ರವರ ಬಳಿ ಇತ್ತು ಮತ್ತು ಕೆನರಾದಲ್ಲಿನ ಪೋರ್ಚುಗೀಸ್ ನೆಲೆಗಳ ಮೇಲೆ ಬೆಳಕು ಹರಿಸಿರುವಂತಹ ಡಾ। ಜೊರ್ಸನ್ ಡಿ'ಕುನ್ಹಾರವರ ಬಗ್ಗೆ ಮಾಹಿತಿ ನೀಡಿದ್ದಾರೆ.[8]

ಸಲ್ಡಾನರು ಕೆನರಾದ ಇತಿಹಾಸವನ್ನು ಪರಶುರಾಮನ ದಂತಕಥೆಯೊಂದಿಗೆ ಆರಂಭಿಸಿದ್ದಾರೆ. ಕೆನರಾವನ್ನು ಆಳ್ವಿಕೆ ಮಾಡಿರುವ ರಾಜವಂಶಗಳ ಬಗ್ಗೆ 6ನೇ ಶತಮಾನದವರೆಗೆ ನಮಗೆ ಯಾವುದೇ ಸೂಕ್ತ ಆಧಾರಗಳಿಲ್ಲ. ಆದ್ದರಿಂದ ನಾವು ಕೇವಲ ದಂತಕಥೆಗಳನ್ನು ಆಧರಿಸಬೇಕು. ಒಂದು ಪ್ರಖ್ಯಾತ ದಂತಕಥೆಯಂತೆ ಪರಶುರಾಮನೆಂಬ ಬ್ರಾಹ್ಮಣನಿದ್ದು, ಆತನಿಗೆ ಖಡ್ಗದ ಬಳಕೆ ತಿಳಿದಿತ್ತು. ಪರಶು ಎಂದರೆ ಕೊಡಲಿ ಎಂದಾಗಿದ್ದು, ಇದು ಆತನ ಯುದ್ಧಾಸ್ತ್ರವಾಗಿದೆ. ಈತ 26 ಬಾರಿ ಎಲ್ಲಾ ಕ್ಷತ್ರಿಯರನ್ನು ನಾಶ ಮಾಡಿ ಪಾಪ ವಿಮೋಚನೆಗಾಗಿ ಎಲ್ಲಾ ಭೂಮಿಯನ್ನು ಬ್ರಾಹ್ಮಣರಿಗೆ ನೀಡಿ, ಆತನಿಗಾಗಿ ಒಂದು ಪ್ರದೇಶವನ್ನು ಹುಡುಕುತ್ತಾ ಭಾರತದ ಪಶ್ಚಿಮ ಸಮುದ್ರದ ಕಡೆ ಹೊರಟ. ನಂತರ ಪರಶುರಾಮ ತನ್ನ ಯುದ್ಧಸ್ತ್ರ ಕೊಡಲಿಯನ್ನು ಗೋಕರ್ಣದಿಂದ ಕನ್ಯಾಕುಮಾರಿಯವರಿಗಿನ ಪ್ರದೇಶದ ಮೇಲೆ ಬೀಸಿದ ಹಾಗೂ ಈ ಪ್ರದೇಶದಲ್ಲಿದ್ದ ಸಮುದ್ರದ ನೀರು ದೂರ ಸರಿಯಿತು. ಈ ಪ್ರದೇಶದಲ್ಲಿ ಬ್ರಾಹ್ಮಣರಿಲ್ಲದಿರುವುದನ್ನು ಕಂಡು ಇಲ್ಲಿನ ಕೆಲವು ಮೀನು ಹಿಡಿಯುವವರನ್ನು ಬ್ರಾಹ್ಮಣರಾಗಿ ಪರಿವರ್ತಿಸಿದ. ಈ ರೀತಿ ಬ್ರಾಹ್ಮಣರನ್ನು ಹುಟ್ಟುಹಾಕಿ ಈ ಪ್ರದೇಶವನ್ನು 7 ವಿಭಾಗಗಳಾಗಿ ವಿಭಜಿಸಿದ. ಅವುಗಳೆಂದರೆ ಭರತ್ (Barat) ವರತ್ (Varat) ಮರತ್ (Marat) ಕೊಂಕಣ್ (Konkan) ಹಾವಿಗ (Haviga) ತುಳುವ (Tuluva) ಮತ್ತು ಕೇರಳ (Kerala). ಇವುಗಳಲ್ಲಿ ತುಳುವ ಮತ್ತು ಹಾವಿಗ ಪ್ರದೇಶಗಳು ಕ್ರಮವಾಗಿ ದಕ್ಷಿಣ ಕೆನರಾ ಮತ್ತು ಉತ್ತರ ಕೆನರಾಗಳಾಗಿವೆ. ಕಷ್ಟಕಾಲದಲ್ಲಿ ತನ್ನನ್ನು ಕರೆಯುವಂತೆ ಸೂಚಿಸಿ ಆತ ಕನ್ಯಾಕುಮಾರಿ ಹತ್ತಿರದ ಪರ್ವತಕ್ಕೆ ಧ್ಯಾನಕ್ಕಾಗಿ ತೆರಳಿದನು. ಈ ಬ್ರಾಹ್ಮಣರು ಆತನ ಶಕ್ತಿ ಪರೀಕ್ಷಿಸಲು ಆತನನ್ನು ಕರೆದರು. ತಕ್ಷಣ ಪ್ರತ್ಯಕ್ಷನಾಗಿ ಸಮಸ್ಯೆ ಏನೆಂದು ಕೇಳಿದಾಗ, ಆತನನ್ನು ಪರೀಕ್ಷಿಸಲು ಕರೆದರೆಂದು ತಿಳಿದು ಸಿಟ್ಟಾಗಿ ಅವರನ್ನು ಪುನ: ವೈಶ್ಯರನ್ನಾಗಿ ಮಾಡಿದನು. ನಂತರ ಗೋಕರ್ಣಕ್ಕೆ ಹೋಗಿ ಕೆಲಕಾಲ ರಾಜ್ಯವಾಳಿದನು. ಲೇಖಕರು ತಿಳಿಸಿರುವ ಇನ್ನೊಂದು ದಂತಕಥೆಯ ಪ್ರಕಾರ ಪರಶುರಾಮನು ವಿಷ್ಣುವಿನ

6ನೇ ಅವತಾರವಾಗಿದ್ದು, ಜಮದಗ್ನಿ (Jamadagni)ಯ ಪುತ್ರನಾಗಿ ಬಂದ. ಕ್ಷತ್ರಿಯರಿಂದಾಗಿ ಬ್ರಾಹ್ಮಣರು ತಮ್ಮ ಶಕ್ತಿಯನ್ನು ಕಳಕೊಂಡು ಕಾಡು ಮತ್ತು ಗುಹೆಗಳಲ್ಲಿ ವಾಸಿಸುವಂತಾಗಿದ್ದು, ಇವರ ರಕ್ಷಣೆಗಾಗಿ ಬಂದ. ನಂತರ ಕ್ಷತ್ರಿಯರನ್ನು ನಾಶಪಡಿಸಿ ಸಮುದ್ರದಿಂದ ಬೇರ್ಪಡಿಸಿದ ಪ್ರದೇಶದಲ್ಲಿ ಬ್ರಾಹ್ಮಣರನ್ನು ನೆಲೆನಿಲ್ಲಿಸಿ ಕೆಳವರ್ಗದವರನ್ನು ಭೂಮಿಯ ಉಳುಮೆ ಕಾರ್ಯಕ್ಕೆ ನಿಯುಕ್ತಗೊಳಿಸಿದನು. ಲೇಖಕರು ಈ ದಂತಕಥೆಗಳ ಸಾರಾಂಶವನ್ನು ಈ ರೀತಿ ನೀಡಿದ್ದಾರೆ. ಒಂದಾನೊಂದು ಕಾಲದಲ್ಲಿ ಈ ಪ್ರದೇಶವು ಸಮುದ್ರದಡಿಯಲ್ಲಿದ್ದು ನಂತರ ಸಮುದ್ರದಿಂದ ಮೇಲೆ ಬಂದಿರುವುದು ಜ್ವಾಲಾಮುಖಿಯ ಸ್ಫೋಟದಿಂದಾಗಿಯೇ ಹೊರತು ಪರಶುರಾಮನ ಶಕ್ತಿಯಿಂದಲ್ಲ. ಅದೇ ರೀತಿ ಈ ಪ್ರದೇಶದಲ್ಲಿ ಆರ್ಯನರು ಬರುವ ಮೊದಲು ದ್ರಾವಿಡಿಯನ್ ಪಂಗಡಗಳಾದ ಕೆನರೀಸ್, ತುಳು ಮತ್ತು ಮಲೆಯಾಳಂ ಭಾಷೆ ಮಾತನಾಡುವ ಜನರಿದ್ದರು. ನಂತರ ಆರ್ಯನರು ಇವರನ್ನು ವಶಪಡಿಸಿಕೊಂಡಿದ್ದಾರೆ. ಆದರೆ ಈ ವಶಪಡಿಸಿಕೊಳ್ಳುವಿಕೆ ಎಂಬುದು ಅಪೂರ್ಣವಾಗಿದೆ. ದಕ್ಷಿಣ ಭಾರತದ ಸಮುದಾಯಗಳು ಸುಸಂಘಟಿತರಾಗಿದ್ದು, ಶಕ್ತಿಶಾಲಿ ಸಾಮ್ರಾಜ್ಯಗಳು ಹಾಗೂ ಉನ್ನತವಾಗಿ ಅಭಿವೃದ್ಧಿ ಹೊಂದಿರುವ ಭಾಷೆಗಳನ್ನು ಒಳಗೊಂಡಿವೆ. ಆರ್ಯನರ ಮಿಂಚಿನ ದಾಳಿಗೆ ಇವರು ಕಠಿಣ ಪ್ರತಿರೋಧ ತೋರಿದ್ದಾರೆ. ಆರ್ಯನರ ಪ್ರಭಾವದಿಂದಾಗಿ ದ್ರಾವೀಡಿಯನ್ನರ ಕಸುಬುಗಳಿಗೆ ಸಂಬಂಧಿಸಿದ ವರ್ಗಗಳು (class), ಜಾತಿಗೆ (castes) ಬದಲಾಗಲು ಕಾರಣವಾಯಿತು. ದ್ರಾವಿಡಿಯನರು ಆರ್ಯನರಿಂದ ನಾಗರಿಕ ಮತ್ತು ಧಾರ್ಮಿಕ ಅಂಶಗಳನ್ನು ಪಡೆದಿದ್ದಾರೆ. ಆದರೆ ಅವರು ಇವತ್ತಿಗೂ ಅವರದೇ ಆದ ಜನಾಂಗೀಯ ಮತ್ತು ಭಾಷಾ ಲಕ್ಷಣಗಳನ್ನು ಉಳಿಸಿಕೊಂಡಿದ್ದಾರೆ. ಕೆನರೀಸ್ (Kanarese) ತುಳು ಮತ್ತು ಇತರ ದ್ರಾವಿಡಿಯನ್ ಭಾಷೆಗಳಲ್ಲಿ ಸಣ್ಣ ಮೊತ್ತದ ಸಂಸ್ಕೃತ ಪದಗಳಿದ್ದು, ತುಳು ಮತ್ತು ಕೆನರೀಸ್ ಭಾಷೆ ಮಾತನಾಡುವ ಜನರಲ್ಲಿ ದ್ರಾವಿಡಿಯನರ ತಲೆಬುರುಡೆ (skulls) ಮತ್ತು ಮುಖ ಲಕ್ಷಣ (Physiognomy) ಗಳಿವೆ.[9] ಈ ಬರವಣಿಗೆಯಲ್ಲಿ ರಿಸ್ಲೆಯ ಜನಾಂಗೀಯ ಸಿದ್ಧಾಂತ (Racial theory)ದ ಪ್ರಭಾವವಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಲೇಖಕರು ಕೆನರಾದಲ್ಲಿ ಆರ್ಯನರು ಬಂದಿರಬಹುದಾದ ಕಾಲದ ಬಗ್ಗೆ ಚರ್ಚಿಸುತ್ತಾ, ಕೊಂಕಣಿ ಮಾತನಾಡುವ ಬ್ರಾಹ್ಮಣರು ಆರ್ಯನ್ ರಕ್ತದವರಾಗಿದ್ದಾರೆ ಹಾಗೂ ಡಾ। ಭಂಡಾರ್‌ಕರರ ಅಧ್ಯಯನವನ್ನು ಆಧಾರಿಸಿ ಆರ್ಯನರು ಕೆನರಾಕ್ಕೆ ಕ್ರಿ.ಪೂ 7ರಿಂದ 3ನೇ ಶತಮಾನದ ಮಧ್ಯ ಭಾಗದಲ್ಲಿ ಬಂದಿರಬೇಕೆಂದು ಊಹಿಸಿದ್ದಾರೆ. ಆರ್ಯನರು ಬರುವುದರ ಮೊದಲಿನ ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶದ ಬಗ್ಗೆ ಚರ್ಚಿಸುತ್ತಾ ಅದರ ಬಗ್ಗೆ ಏನೂ ತಿಳಿದಿಲ್ಲ, ಇದನ್ನು ಕೇವಲ ಕಲ್ಪನೆಗಳೊಂದಿಗೆ ಚರ್ಚಿಸಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಪರಶುರಾಮ ಮತ್ತು ಬ್ರಾಹ್ಮಣರು ಘಟ್ಟದಿಂದ ಕೆಳಗೆ ಬರುವ ಮೊದಲು ಕೆನರಾದಲ್ಲಿ ಶಕ್ತಿಶಾಲಿ ದ್ರಾವಿಡಿಯನರು ಮತ್ತು ಸಾಮ್ರಾಜ್ಯಗಳು ಇದ್ದಿರಲೇಬೇಕು. ಇವರು ವಿಭಿನ್ನ

ಸಂಪ್ರದಾಯಗಳನ್ನು ಹೊಂದಿದ್ದು, ಇಲ್ಲಿ ಮುಖ್ಯವಾಗಿ ಮೈಲಾರ್ಸ್ (Mailars) ಎನ್ನುವ ಪಂಗಡದ ಜನರಿದ್ದು, ಈಗ ಅವರು ಘಟ್ಟಗಳ ಬುಡಗಳಲ್ಲಿರುವ ಕಾಡಿನಲ್ಲಿದ್ದಾರೆ. ಬಂಟರು (Bunts) ದಕ್ಷಿಣ ಕೆನರಾದ ಶ್ರೀಮಂತ ಭೂಮಾಲಿಕರಾಗಿದ್ದು, ಶಕ್ತಿಶಾಲಿ ರಾಜರಾಗಿದ್ದಿರಬೇಕು ಎಂದು ಲೇಖಕರು ಊಹಿಸಿದ್ದಾರೆ. ಕೆನರಾದ ಪರ್ವತ ಪಂಗಡಗಳ (Hill tribes) ಮತ್ತು ಬಂಟ್ಸ್ ಗಳ ಪ್ರಾಚೀನ ಕಥೆಗಳ ಅಧ್ಯಯನದಿಂದ ಆರ್ಯನರ ಮೊದಲಿನ ರಾಜಕೀಯ ಮತ್ತು ಸಾಮಾಜಿಕ ಅಂಶಗಳನ್ನು ತಿಳಿಯಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.[10] ಈ ಮೇಲಿನ ಅಂಶಗಳಿಗೆ ಪೂರಕವಾಗುವಂತೆ ಡಾ। ಕೆ.ವಿ ರಮೇಶರು ತುಳುನಾಡಿನಲ್ಲಿ ಮಾನವನ ಇತಿಹಾಸವು ಸುಮಾರು ಮೂರು ಸಾವಿರ ವರ್ಷಗಳ ಹಿಂದೆ ಪ್ರಾರಂಭವಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ. ತುಳುನಾಡಿಗೆ ಬಂದು ನೆಲೆಸಿದ ಆದಿಮಾನವರು ದ್ರಾವಿಡ ಜನಾಂಗಕ್ಕೆ ಸೇರಿದವರು. ಪಶ್ಚಿಮ ಘಟ್ಟವು ಅಡ್ಡವಾಗಿ ನಿಂತಿದ್ದ ಕಾರಣ ಅವರಿಗೂ ಘಟ್ಟದ ಪೂರ್ವಕ್ಕಿದ್ದ ಇತರ ದ್ರಾವಿಡ ಜನಾಂಗಗಳಿಗೂ ಮಧ್ಯೆ ಪರಸ್ಪರ ಸಂಪರ್ಕ ಕಡಿದುಹೋಯಿತು. ಈ ಪ್ರತ್ಯೇಕತೆಯಿಂದಾಗಿ ಅವರು ಮಾತನಾಡುತ್ತಿದ್ದ ದ್ರಾವಿಡ ಭಾಷೆಯಲ್ಲಿ ಕಾಲಕ್ರಮೇಣ ಬದಲಾವಣೆಗಳು ಹುಟ್ಟಿ ಬೆಳೆದು ತುಳುವೆಂಬ ಹೊಸತೊಂದು ದ್ರಾವಿಡ ಭಾಷೆಯು ಅಸ್ತಿತ್ವಕ್ಕೆ ಬಂದಿತು. ಅಶೋಕನ ಸಾಮ್ರಾಜ್ಯದ ಹೊರಗಿದ್ದ ದಕ್ಷಿಣ ಭಾರತದ ಉಳಿದೊಂದು ಪ್ರದೇಶವೆಂದರೆ ತುಳುನಾಡು. ಕ್ರಿ.ಶ 7 ನೇ ಶತಮಾನದ ಮಧ್ಯಭಾಗದಲ್ಲಿ ಇತಿಹಾಸ ಬೆಳಕಿಗೆ ಬಂದಾಗಿನಿಂದಲೂ ತುಳುನಾಡು ತನ್ನದೇ ಆದ ರಾಜಕೀಯ ಮತ್ತು ಸಾಂಸ್ಕೃತಿಕ ನಿಯಮಗಳನ್ನು, ಭಾಷೆಯನ್ನು ಬೆಳೆಸಿಕೊಂಡು ಬಂದಿದೆ[11] ಎಂದು ಡಾ। ಕೆ.ವಿ ರಮೇಶರು ಅಭಿಪ್ರಾಯಪಡುತ್ತಾರೆ.

ಪಿ. ಗುರುರಾಜ ಭಟ್‌ರವರು ಹೇಳುವಂತೆ ತುಳುವರೆಂದರೆ ತುರುಕಾರರು (ತುರುವರು) ಒಂದು ವರ್ಗದ ದನಗಾರರು. (Herdsmen) ಆದಿಯ ಈ ತುಳುವರು ಈಗ ನಶಿಸಿ ಹೋಗಿದ್ದಾರೆ. ಬಿಲ್ಲವರು, ಮೊಗೇರರು, ಕುಡಿಗಳು (ಕುಡುವರು) ತುಳುವರು, ನಾಡವರು (ಬಂಟರು) ಆಳುವರು ಮತ್ತು ಬ್ರಾಹ್ಮಣರು ತುಳುನಾಡಿನ ಸಮಾಜದ ನಿರ್ಮಾಪಕರು[12] ಎಂದು ಅಭಿಪ್ರಾಯಪಟ್ಟಿದ್ದಾರೆ. ಮೇಲೆ ಲೇಖಕರು ಹೇಳಿರುವ ಮೊಯಿಲರ ಬಗ್ಗೆ ಕಡವ ಶಂಭು ಶರ್ಮರು ಹೇಳುವಂತೆ ಇವರು ದುಷ್ಟತನದಿಂದ ರಾಜ್ಯವಾಳುತ್ತಿದ್ದುದರಿಂದ ಇವರನ್ನು ಮಯೂರವರ್ಮರಾಜನು ನಿಗ್ರಹಿಸಿದ[13] ಎಂಬ ವಿವರಣೆ ನೀಡಿದ್ದಾರೆ. ಇದರೊಂದಿಗೆ ಮೊಯಿಲರು ಕೆನರಾವನ್ನು ಒಂದು ಕಾಲದಲ್ಲಿ ಆಳ್ವಿಕೆ ಮಾಡಿರಬಹುದು ಎಂಬ ಅಭಿಪ್ರಾಯ ನೀಡಿದ್ದಾರೆ. ಬಂಟರು ಕೂಡ ಈ ಪ್ರದೇಶದ ಪುರಾತನ ಜನಾಂಗವೆಂಬುದು ಈ ಮೇಲಿನ ಲೇಖಕರ ಅಭಿಪ್ರಾಯವಾಗಿದೆ.

ಸಲ್ದಾನರು ಪರಶುರಾಮನ ನಂತರ ಕೆನರಾವನ್ನು 6ನೇ ಶತಮಾನದವರೆಗೆ ಆಳ್ವಿಕೆ ಮಾಡಿರುವ ಕೆಲವು ರಾಜವಂಶಗಳ ಮತ್ತು ರಾಜರುಗಳ ಬಗ್ಗೆ ಒಂದು ಪಟ್ಟಿಯನ್ನು ನೀಡಿದ್ದಾರೆ.

ರಾಜರು ಅಥವಾ ರಾಜ ವಂಶಗಳು	ಆಳ್ವಿಕೆ ಮಾಡಿರುವ ವರ್ಷಗಳು
ರಾಮ ದೇವ್ರೋ (Rama Deva)	11,000 (ತ್ರೇತಾಯುಗದಲ್ಲಿ, ಆಗ ಜಗತ್ತು 6,34,000 ವರ್ಷ ಹಳೆಯದು)
ಏನಾಥ್ (Yeanath) ಮತ್ತು 5 ಇತರ ಅರಸರು	8,84,000 ವರ್ಷಗಳು
ದುರನ್ ರಾವ್ (Duran Row) ಅಥವಾ ಯುದೀರ್‌ಸ್ಟಿರ್ (Youdeshter)	3,404 (ಕಲಿಯುಗದ ಆರಂಭದಿಂದ)
ಪಾರೇಕ್ಷತ್ (Pareksheth) ಮತ್ತು ಇತರ ಅರಸರು	1,115
ಮುಂಡ ರಾವ್ (Munda Row)	200
ನಯನ ರಾವ್ (Nyanah Row)	112
ಮರವ್ವ್ಯ ರಾವ್ (Maravy Row)	137
ಜಿಯುಂಟ್ ಕಡಮಿಟ್ (Jeunt cadamit)	45
ಮಯೂರ ವರ್ಮ (Mayura varma)	50

ಲೇಖಕರು ಈ ಮೇಲಿನ ಪಟ್ಟಿಯಲ್ಲಿ ಕದಂಬ ಅರಸನಾದ ಮಯೂರವರ್ಮನು 6ನೇ ಶತಮಾನದಲ್ಲಿ ಆಳಿದ್ದ. ಬನವಾಸಿಯು ಆತನ ರಾಜಧಾನಿಯಾಗಿದ್ದು, ಪುರಾತನ ಭಾರತದ ಪ್ರಮುಖ ನಗರವಾಗಿದ್ದು, ಪ್ರಸ್ತುತ ಉತ್ತರ ಕನ್ನಡದ ಅಂಕೋಲದಲ್ಲಿದ್ದು ತನ್ನ ಪ್ರಾಮುಖ್ಯತೆಯನ್ನು ಕಳಕೊಂಡಿದೆ[14] ಎಂದು ತಿಳಿಸಿದ್ದಾರೆ. ಲೇಖಕರ ಮೇಲಿನ ಪಟ್ಟಿಯನ್ನು ಸಮರ್ಥಿಸಲು ಯಾವುದೇ ಆದಾರಗಳಿಲ್ಲ ಹಾಗೂ ಅದು ಕಾಲ್ಪನಿಕವಾಗಿದೆ.

ಲೇಖಕರು ಬನವಾಸಿ ಸಾಮ್ರಾಜ್ಯದ ಬಗ್ಗೆ ವಿವರಿಸುತ್ತಾ, ನಿಖರವಾದ ದಾಖಲೆಗಳ ಪ್ರಕಾರ ಕೆನರಾದ ಪ್ರಾಚೀನ ಸಾಮ್ರಾಜ್ಯ ಬನವಾಸಿಯಾಗಿದ್ದು, ಇದು ಪ್ರಸ್ತುತ ಉತ್ತರ ಕೆನರಾದ ಅಂಕೋಲಾ ತಾಲೂಕಿನ ಸಣ್ಣ ಕುಗ್ರಾಮವಾಗಿದೆ ಎಂದಿದ್ದಾರೆ. ಬನವಾಸಿಯನ್ನು ಸಂಸ್ಕೃತ ಪದವಾದ ಬನ ಅಥವಾ ವನ

ಎಂದರೆ ಕಾಡು, ಕೆನರೀಸ್‌ನಲ್ಲಿ ಬಸಿ (Basi) ಎಂದರೆ ನೀರಿನ ಮೂಲ (a spring) ಅಥವಾ ಸಂಸ್ಕೃತದಲ್ಲಿ ವಾಸ (vasa) ಎಂದರೆ ಒಂದು ವಾಸಸ್ಥಾನ ಎಂದಾಗಿದೆ. ಇದನ್ನು ವೈಜಯಂತಿ (ಜಯಂತಿ) ಎಂದು ಕರೆಯುತ್ತಿದ್ದು ಪ್ರಾಚೀನ ಹಲವು ಸಂಸ್ಕೃತ ಬರಹಗಾರರು ಇದನ್ನು ಪಶ್ಚಿಮ ಭಾರತದ ಬೃಹತ್ ನಗರವೆಂದು ಗುರುತಿಸಿದ್ದಾರೆ. ಒಂದು ಐತಿಹಾಸಿಕ ಸ್ಥಳವಾಗಿರುವ ಬನವಾಸಿಯಲ್ಲಿ ಪಾಂಡವರು ತಮ್ಮ ವನವಾಸದ ಸಂದರ್ಭದಲ್ಲಿ ಆಸರೆ ಪಡೆದಿದ್ದರು. ಅದೇ ರೀತಿ ಪಾಟಲೀಪುತ್ರದಲ್ಲಿ ಭೌದ್ದ ಮಹಾಸಭೆಯ ನಂತರ ಕ್ರಿ.ಪೂ 3ನೇ ಶತಮಾನದಲ್ಲಿ ರಕ್ಷಿತಾ (Rakshita) ಎಂಬ ಭೌದ್ದ ಗುರು ಬಂದಿರುವುದನ್ನು ಲೇಖಕರು ಉಲ್ಲೇಖಿಸಿದ್ದಾರೆ. ಅದೇ ರೀತಿ ಕ್ರಿ.ಶ 2 ರಲ್ಲಿ ಟಾಲೇಮಿಯು ಬನವಾಸಿ ಎಂಬ ಸ್ಥಳವನ್ನು ಹೆಸರಿಸಿದ್ದಾನೆ. ಬನವಾಸಿಯ ದೇವಾಲಯವೊಂದರಲ್ಲಿ ದೊರೆತ ಶಾಸನದಲ್ಲಿ ಹಾಗೂ ಮಳವಳ್ಳಿಯ[15] ಕಂಬ ಶಾಸನದ ಪ್ರಕಾರ ಬನವಾಸಿಯಲ್ಲಿ ಮಾನ್ವ್ಯ ಗೋತ್ರದ ವಿನುಕದಟ್ಟತು(Vinhukadatatu) ಅಥವಾ ವಿನುಪಡುಚೌಟು (Vinhupaduchautu) ಕುಟುಂಬದ ಹರೀತೀಪುತ್ರ ಶಾತಕರ್ಣಿ (Haritiputra Satakarni) ಎಂಬ ರಾಜನು ಬನವಾಸಿಯನ್ನು ಕ್ರಿ.ಶ. 2 ರಲ್ಲಿ ಆಳಿದ್ದ ಎಂಬ ಮಾಹಿತಿ ಇದೆ. ಈ ಕುಟುಂಬವು ಆಂಧ್ರಭೃತ್ಯ ಅಥವಾ ಶಾತವಾಹನ ಅಥವಾ ಶಾಲಿವಾಹನ ರಾಜವಂಶದ ಕುಟುಂಬದವರಾಗಿರಬೇಕೆಂದು, ಅವರು ಕ್ರಿ.ಪೂ 73ರಿಂದ ಕ್ರಿ.ಶ 133ರವರೆಗೆ ದಖ್ಖನವನ್ನು ಆಳಿರಬೇಕೆಂದು ಲೇಖಕರ ಅಭಿಪ್ರಾಯವಾಗಿದೆ. ಇದರ ನಂತರ ನಿರಂತರವಾಗಿ ಕೆನರವು ವಿವಿಧ ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿದೆ. ಕದಂಬರಿಂದ ಹಿಡಿದು 1799 ರವರೆಗೆ ಆಳ್ವಿಕೆ ಮಾಡಿರುವ ರಾಜವಂಶಗಳ ಮತ್ತು ಅವರ ಸಾಮಂತರ ಪಟ್ಟಿಯನ್ನು ಲೇಖಕರು ನೀಡಿದ್ದಾರೆ.

	ರಾಜವಂಶಗಳು	ಕಾಲ (ವರ್ಷ)	ಸಾಮಾಂತರು
1	ಸಾತವಾಹನರು (*satavahanas*) ಅಥವಾ ಸಾಲಿವಾಹನರು (Salivahanas) ಆಂಧ್ರ ಭೃತ್ಯರು (Andahrabrhityas)	ಕ್ರಿ.ಪೂ 73ರಿಂದ ಕ್ರಿ.ಶ 133 ರವರೆಗೆ	
2	ಪ್ರಾರಂಭದ ಕದಂಬರು	4ನೇ ಶತಮಾನದಿಂದ 6ನೇ ಶತಮಾನದ ವರೆಗೆ	
3	ಬಾದಾಮಿಯ ಪಶ್ಚಿಮ ಚಾಲುಕ್ಯರು	ಕ್ರಿ.ಶ 578 ರಿಂದ 767 ರವರೆಗೆ	ಕದಂಬ ಅರಸರು

4	ಮಾನ್ಯಖೇಟದ ರಾಷ್ಟ್ರಕೂಟರು	ಕ್ರಿ.ಶ 754 ರಿಂದ 973 ರವರೆಗೆ	ಹುಮ್ಚ್ಅರಸರು, ಕಾರ್ಕಳದ ಭೈರರಸು ಒಡೆಯರ್
5	ಕಲ್ಯಾಣಿಯ ಪಶ್ಚಿಮ ಚಾಲುಕ್ಯರು	ಕ್ರಿ.ಶ 973 ರಿಂದ 1189 ರವರೆಗೆ	
6	ದ್ವಾರ ಸಮುದ್ರದ ಹೊಯ್ಸಳರು	ಕ್ರಿ.ಶ 1103 ರಿಂದ 1310 ರವರೆಗೆ	ಬೂತಲ್ ಪಾಂಡ್ಯ
7	ದೇವಗಿರಿಯ ಯಾದವರು	ಕ್ರಿ.ಶ 1310 ರಿಂದ 1312 ರವರೆಗೆ	
8	ವಿಜಯ ನಗರ ಅರಸರು	ಕ್ರಿ.ಶ 1565 ರವರೆಗೆ	ಸೊಂಡಾದ,(Sonda) ಹೊನ್ನಾವರ,ಭಟ್ಕಳ, ಗೆರ್‌ಸಪ್ಪ,ಬಾರ್‌ಸಿಲೋರ್‌ನ ನಾಯಕರು, ಕಾರ್ಕಳದ ಬೈರರಸು ಒಡೆಯರು, ಬಂಗೇರಾ ನಾಯಕ ಹಾಗೂ ಇತರರು
9	ಬಿದನೂರಿನ ಇಕ್ಕೇರಿ ರಾಜರು	ಕ್ರಿ.ಶ 1565 ರಿಂದ 1760 ರವರೆಗೆ	
10	ಹೈದರಾಲಿ ಮತ್ತು ಟಿಪ್ಪುಸುಲ್ತಾನ್	1760 ರಿಂದ 1799 ರವರೆಗೆ[16]	

ಲೇಖಕರು ಕೆನರಾದ ಧರ್ಮದ ಕುರಿತು ವಿವರಿಸುತ್ತಾ ಧರ್ಮವು ರಾಜಕೀಯದಲ್ಲಿ ಬಹುಮುಖ್ಯ ಅಂಶವೆಂಬಂತೆ ವಿವರಿಸಿದ್ದಾರೆ. ಧರ್ಮದ ಉಲ್ಲೇಖವಿಲ್ಲದೇ ಕೆನರಾದ ರಾಜವಂಶಗಳ ಇತಿಹಾಸ ಸಂಪೂರ್ಣವಾಗುವುದಿಲ್ಲ. ಧರ್ಮವಿಲ್ಲದೇ ಹಿಂದೂವಿಲ್ಲ. ಆತನ ಧರ್ಮ ಆತನ ಹೃದಯದಲ್ಲಿ ತತ್ವಶಾಸ್ತ್ರದ ಆಧಾರದ ಮೇಲೆ ಆಳವಾಗಿ ಬೇರೂರಿದೆ. ಈ ರೀತಿ ಧರ್ಮ ಎಂಬುದು ರಾಜವಂಶದ ಉಗಮ, ಪಥನ ಮತ್ತು ಅದರ ಶಕ್ತಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕೆನರಾದಲ್ಲಿ ಕಂಡು ಬರುವ ಪ್ರಮುಖ ಪ್ರಾಚೀನ ಧರ್ಮವೆಂದರೆ ದ್ರಾವಿಡಿಯನ್ ಧರ್ಮವಾಗಿದೆ. ಪ್ರಾಚೀನ ದ್ರಾವಿಡಿಯನ್ ಧರ್ಮವು ಪ್ರಾರಂಭದಿಂದಲೆ ಅದರ ಭೂತರಾಧನೆಯ ಲಕ್ಷಣದಿಂದ ಪ್ರಬಲವಾಗಿದ್ದು, ಅದನ್ನು ಪ್ರೋತ್ಸಾಹಿಸುವಲ್ಲಿ ಭೌಗೋಳಿಕತೆಯು ಪ್ರಮುಖ ಪಾತ್ರವಹಿಸಿದೆ. "ಪರ್ವತ ದೇಶವಾಗಿರುವ ಈ ನಾಡು ಒಂದು ದಿಕ್ಕಿನಲ್ಲಿ ಎತ್ತರವಾಗಿರುವ ಘಟ್ಟಗಳಿಂದ ಹಾಗೂ ಇನ್ನೊಂದು ದಿಕ್ಕಿನಲ್ಲಿ ಸಮುದ್ರದಿಂದ ಆವೃತವಾಗಿರುವ

ಪ್ರದೇಶವಾಗಿದ್ದು, ಕೆನರಾವು ಪರ್ವತ, ಕಣಿವೆ, ನದಿ ಮತ್ತು ಅರಣ್ಯಗಳಿಂದ ಕೂಡಿದ್ದು ಯಾವುದೇ ಜನರಿಗೆ ಹಾಗೂ ಅದರ ಪ್ರಾರಂಭದ ವಾಸಿಗಳಾದ ದ್ರಾವಿಡಿಯನರಿಗೆ ಸಮೃದ್ಧವಾದ ಭೂತಾರಾಧನೆಯನ್ನು ಆರಂಭಿಸಲು ಅವಶ್ಯಕ ಅಂಶಗಳಾದವು." ಈ ರೀತಿ ಭೂತಗಳ ನಂಬಿಕೆಯು ಕೆನರಾದ ಕೆಳವರ್ಗದ ಜನರಲ್ಲಿ ದಕ್ಷಿಣ ಭಾರತದ ಇತರ ಸಮುದಾಯಗಳಿಗಿಂತ ಬಲಿಷ್ಟವಾಗಿ ಬೇರೂರಿದೆ. ಆರ್ಯನರು ಕೆನರಾದ ಮೇಲೆ ದಾಳಿ ಮಾಡುವುದರೊಂದಿಗೆ ಅದು ಬ್ರಾಹ್ಮಣತ್ವದ ಅಧೀನವಾಯಿತು. ಬ್ರಾಹ್ಮಣತ್ವದ ಕೆಲವು ಲಕ್ಷಣಗಳೆಂದರೆ 1. ಜಾತಿ ಪದ್ಧತಿ 2. ಸಂಕೀರ್ಣ ಆಚರಣೆಗಳು 3. ಸೃಷ್ಟಿಕರ್ತ ಬ್ರಹ್ಮನ ಬಗ್ಗೆ ಆಧ್ಯಾತ್ಮಿಕ ಬೋಧನೆ,[17] ಇವುಗಳನ್ನು ವಿವರಿಸಿರುವ ಲೇಖಕರು ಕ್ರೈಸ್ತರ ಪ್ರಕಾರ ಬ್ರಹ್ಮ ಸೃಷ್ಟಿಕರ್ತನಲ್ಲ ಎಂಬುದನ್ನು ಹೇಳಿದ್ದಾರೆ. ಅದೇ ರೀತಿ ಆರ್ಯನರ ದಾಳಿಯೊಂದಿಗೆ ದ್ರಾವಿಡಿಯನ್ ಧರ್ಮವೆಂಬುದು ಬದಿಗೊತ್ತಲ್ಪಟ್ಟಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕೆನರಾದಲ್ಲಿ ಬ್ರಾಹ್ಮಣತ್ವ ದೀರ್ಘಕಾಲ ಬಾಳಲಿಲ್ಲ ಎಂದು ಹೇಳುತ್ತಾ, ಲೇಖಕರಾದ ಸಲ್ದಾನರು ಕ್ರಿ.ಶಕಾರಂಭರಿಂದ ಜೈನ ಧರ್ಮದ ಅಲೆಗಳು ಘಟ್ಟದ ಮೇಲಿನಿಂದ ಇಲ್ಲಿಗೆ ಬೀಸಿದ್ದು ಪ್ರಾಚೀನ ಆರ್ಯನರ ಧರ್ಮವು ನಿರ್ನಾಮವಾಯಿತು ಎಂದಿದ್ದಾರೆ. ಜೈನ ಧರ್ಮವು ಭೌದ್ಧ ಧರ್ಮದಂತೆ ಸಾಮಾನ್ಯವಾಗಿದ್ದು, ಇದರಂತೆ ಸ್ವಚ್ಛತೆ, ನಿರ್ಲಿಪ್ತತೆ, ಸ್ವನಿರ್ಣಯ ಮತ್ತು ಸಾರ್ವತ್ರಿಕ ಪ್ರೀತಿಯ ಮೂಲಕ ನಿರ್ವಾಣ ಪಡೆಯಬಹುದು. ಜೈನಧರ್ಮ ಒಂದು ಪರಮ ದೇವರ ಅಸ್ಥಿತ್ವವನ್ನು ಒಪ್ಪುವುದಿಲ್ಲ. ಆದರೆ ಅರ್ಹತ್ (Arhat) ಎಂದರೆ ಸಂಪೂರ್ಣನಾದ ಮಾನವನ ಆತ್ಮದಲ್ಲಿ (Spirit of perfect man) ನಂಬಿಕೆ ಇರಿಸಿದೆ. ಇದು ವೇದಗಳ ದೈವಿಕ ಉಗಮವನ್ನು ಒಪ್ಪುವುದಿಲ್ಲ. ಕೆನರಾದ ಜನರ ಆರಾಧನೆಯಲ್ಲಿ ಭೂತ ಪ್ರೇತಗಳ ನಂಬಿಕೆ ಆಳವಾಗಿ ಬೇರೂರಿದೆ[18] ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಹಾಗಾಗಿಯೇ ಜೈನಧರ್ಮವು ತನ್ನ ಅರ್ಹತ್ ಆರಾಧನೆಯೊಂದಿಗೆ ಇಲ್ಲಿ ದೀರ್ಘವಾಗಿ ಬೆಳೆಯಿತು. (Found a Natural soil & flourished long) ಆದರೆ ಬ್ರಾಹ್ಮಣಿಸಮ್ ಎಂಬುದು ಯಾವತ್ತು ನಂದಿ ಹೋಗಲಿಲ್ಲ ಎಂದು ವಿವರಿಸಿರುವ ಲೇಖಕರು, ಅದು ಜೈನ ಧರ್ಮದ ದುರಾದೃಷ್ಟವನ್ನು ಲಾಭವಾಗಿ ಪಡೆದು ಹೊಸ ಧರ್ಮವಾಗಿ ಸುಧಾರಣೆ ಹೊಂದಿ, ಕ್ರಿ.ಶ 6 ರಿಂದ ಕ್ರಿ.ಶ 12 ರವರೆಗೆ ಮತ್ತೊಮ್ಮೆ ಪ್ರಭಾವಶಾಲಿ ಧರ್ಮವಾಗಿ ಬೆಳೆಯಿತು. ಶಂಕರಾಚಾರ್ಯರು ಮತ್ತು ಮಧ್ವಾಚಾರ್ಯರು ಹಿಂದೂ ಧರ್ಮದ ಲಕ್ಷಣಗಳಿಗೆ ರೂಪ ಕೊಡುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಶೈವಗುರುಗಳಾದ ಶಂಕರಾರ್ಚಾರ್ಯರು ಶೃಂಗೇರಿ ಮಠದ ಸ್ಥಾಪಕರು. ವೈಷ್ಣವ ಗುರುಗಳಾದ ಮಧ್ವಾಚಾರ್ಯರು ಕ್ರಿ.ಶ.12ನೇ ಶತಮಾನದಲ್ಲಿ ಉಡುಪಿಯ ಕಲ್ಯಾಣಪುರದಲ್ಲಿ (ನಿಜವಾಗಿ ಬೆಳ್ಳೆಯ ಪಾಜಕ ಕ್ಷೇತ್ರದಲ್ಲಿ)ಹುಟ್ಟಿದರು. ಶಂಕರಾಚಾರ್ಯರು ಅದ್ವೈತ್ವ ತತ್ವವನ್ನು ಪ್ರತಿಪಾದಿಸಿದರೆ, ಮಧ್ವಾಚಾರ್ಯರು ದ್ವೈತ್ವ ತತ್ವವನ್ನು ಪ್ರತಿಪಾದಿಸಿದರು.[19] ಲೇಖಕರಾದ ಸಲ್ದಾನರು ಪ್ರತಿಪಾದಿಸುವಂತೆ ಮದ್ವರು ಹೊಸ

ತತ್ವಗಳನ್ನು ಶೋಧಿಸಲಿಲ್ಲ. ಬದಲು ಆಗಾಗಲೇ ಲಭ್ಯವಿದ್ದ ಕ್ರಿಶ್ಚಿಯಾನ್ ಧರ್ಮದ ತತ್ವಗಳನ್ನು ಅನುಸರಿಸಿದರು ಹಾಗೂ ಮುಳುಗುತ್ತಿದ್ದ ಅವರ ಧರ್ಮವನ್ನು ರಕ್ಷಿಸಿದರು. ಇಸ್ಲಾಂ ಧರ್ಮವು ತನ್ನ "ಏಕ ದೇವರು ಹಾಗೂ ಮಹಮ್ಮದ್ ಅದರ ಪ್ರವಾದಿ" ಎನ್ನುವ ತತ್ವಗಳೊಂದಿಗೆ ಕ್ರಿ.ಶ.8ನೇ ಶತಮಾನದ ಪ್ರಾರಂಭದಲ್ಲಿ, ಕರಾವಳಿ ಪ್ರದೇಶದಲ್ಲಿ ಆರಬ್ ವ್ಯಾಪಾರಿ ನೆಲೆಗಳು ಇಲ್ಲಿ ಆರಂಭವಾದುದರಿಂದ ತನ್ನ ಅಸ್ತಿತ್ವವನ್ನು ಸ್ಥಾಪಿಸಿತು. ಒಂದು ನಂಬಿಕೆಯ ಪ್ರಕಾರ ಕ್ರಿಶ್ಚಿಯನ್ ಧರ್ಮವು ಕ್ರಿ.ಶ.7ನೇ ಶತಮಾನದಲ್ಲಿ ಕೆನರಾಕ್ಕೆ ಪ್ರವೇಶಿಸಿದ್ದು ಅದು ಉಡುಪಿಯ ಕಲ್ಯಾಣಪುರದಲ್ಲಿ ತನ್ನ ನೆಲೆಯನ್ನು ಹೊಂದಿತ್ತು. ಬಹುಶ: ಕಲ್ಯಾಣ ಎಂಬ ಸ್ಥಳವು ಥಾನಾ ಜಿಲ್ಲೆಯಲ್ಲಿರುವ ಸ್ಥಳವಾಗಿದ್ದು, ಕೋಸ್‌ಮೋಸ್ [cosmos] ಇದನ್ನು ತಪ್ಪಾಗಿ ಕಲ್ಯಾಣಪುರವೆಂದು ಬಳಸಿರಬೇಕು.[20] ಲೇಖಕರು ಅಭಿಪ್ರಾಯಪಡುವಂತೆ ಕ್ರಿಶ್ಚಿಯನ್ ಧರ್ಮವು ಮಧ್ವರ ಕಾಲದಲ್ಲಿಯೇ ಉಡುಪಿ ಪ್ರದೇಶವನ್ನು ಪ್ರವೇಶಿಸಿದ್ದು, ಅದು ಅವರ ದ್ವೈತ್ವ ತತ್ವದ ಮೇಲೆ ಪ್ರಭಾವ ಬೀರಿತು ಎಂದಿದ್ದಾರೆ.

ಲೇಖಕರು ಕದಂಬ ರಾಜವಂಶದ ಬಗ್ಗೆ ವಿವರಿಸುತ್ತಾ ಇದರ ಸ್ಥಾಪಕ ಮಯೂರಶರ್ಮನ ಅಥವಾ ಮಯೂರವರ್ಮನ ಆಗಿದ್ದು, ಶಿವನ ಬೆವರು ಕದಂಬ ವೃಕ್ಷದ ಮೇಲೆ ಬಿದ್ದು ಆತ ಹುಟ್ಟಿದನೆಂದು, ಇನ್ನೊಂದು ಸಂಪ್ರದಾಯದ ಪ್ರಕಾರ ಅವನ ಪೂರ್ವಜರು ಮೂಲ ಬ್ರಾಹ್ಮಣ ಕುಟುಂಬಸ್ಥರಾಗಿದ್ದು, ಅವರು ಮಾನ್ವ್ಯಗೋತ್ರದ ಹರಿಪುತ್ರರಾಗಿದ್ದರು. ಅವರು ಯಾವಾತ್ತು ತಮ್ಮ ಮನೆಯ ಪಕ್ಕದಲ್ಲಿ ಕದಂಬವೃಕ್ಷವನ್ನು ನೆಡುತ್ತಿದ್ದರು. ಆದುದರಿಂದ ಈ ವಂಶವನ್ನು ಕದಂಬ ವಂಶವೆಂದು ಕರೆಯಲಾಗಿದೆ.[21] ಕ್ರಿ.ಶ.4ನೇ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕದ ಪ್ರಥಮ ಸಾಮ್ರಾಜ್ಯವು ಕದಂಬವಂಶದ ಮಯೂರವರ್ಮನೆಂಬ ಬ್ರಾಹ್ಮಣನಿಂದ ಸ್ಥಾಪಿತಗೊಂಡಿತು. ತುಳುನಾಡಿನ ಬ್ರಾಹ್ಮಣರ ಹಾಗೂ ಜೈನರ ಪರಂಪರಾಗತ ಸಾಹಿತ್ಯದಲ್ಲಿ ಮಯೂರವರ್ಮನು ಈ ನಾಡಿನ ಪ್ರಾಚೀನ ಅರಸುಗಳಲ್ಲೊಬ್ಬನೆಂದು ಉಲ್ಲೇಖಿಸಲ್ಪಡುತ್ತಾನೆ.[22] ಮಯೂರವರ್ಮನು ಒಬ್ಬ ಬ್ರಾಹ್ಮಣನಾಗಿದ್ದು ನಂತರ ಪಲ್ಲವರ ವಿರುದ್ಧ ದಂಗೆ ಎದ್ದನು. ಈತನ ದಾಳಿಯಿಂದ ತತ್ತರಿಸಿದ ಪಲ್ಲವರಾಜ ಪಶ್ಚಿಮ ಕರಾವಳಿಯ ಪ್ರದೇಶಗಳನ್ನು ಈತನಿಗೆ ಬಿಟ್ಟುಕೊಟ್ಟನು. ನಂತರ ಮಯೂರವರ್ಮ ತನ್ನ ಬ್ರಾಹ್ಮಣ ಗುಂಪಿನೊಂದಿಗೆ (ಸೈನ್ಯ) ಪಶ್ಚಿಮಕರಾವಳಿಯ ಕಡೆಸಾಗಿ ಬನವಾಸಿಯಲ್ಲಿ ರಾಜಧಾನಿಯನ್ನು ಸ್ಥಾಪಿಸಿದನು.[23] ಕದಂಬವಂಶದ ಮೊದಲನೆಯ ಅರಸನು ಮುಕ್ಕಣ್ಣ ಅಥವಾ ತ್ರಿಲೋಚನ ಕದಂಬನಾಗಿದ್ದರೂ, ಕದಂಬರ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದ ಕೀರ್ತಿಯು ಅವರಲ್ಲಿ 5ನೇ ಅರಸನಾದ ಮಯೂರವರ್ಮನಿಗೆ ಸಲ್ಲುತ್ತದೆ.[24] ಲೇಖಕರು ಶಾಸನ ಮತ್ತು ತಾಮ್ರಪಟ್ಟಿಗಳ ಆಧಾರದ ಮೇಲೆ ಈ ವಂಶದ ರಾಜರುಗಳ ಪಟ್ಟಿಯನ್ನು ನೀಡಿದ್ದಾರೆ. ಅದರಂತೆ

ಮಯೂರವರ್ಮ
↓
ಕಂಗುವರ್ಮನ್
↓
ಬಗೀರಥ
↓
ರಘು | ಕಾಕುತ್ಸವರ್ಮನ್
↓ (ಕಾಕುತ್ಸವರ್ಮನ್)
ಶಾಂತಿವರ್ಮನ್
↓
ಮೃಗೇಶವರ್ಮನ್
↓
ರವಿವರ್ಮನ್ | ಭಾನುವರ್ಮನ್ | ಶಿವರಥ
↓ (ಶಿವರಥ)
ರವಿವರ್ಮನ್
↓
ಹರಿವರ್ಮನ್
↓
ವಿಷ್ಣುವರ್ಮನ್
↓
ಕೃಷ್ಣವರ್ಮನ I
↓
ಸಿಂಹವರ್ಮನ್
↓
ಕೃಷ್ಣವರ್ಮನ II
↓
ದೇವ ವರ್ಮನ್
↓
ಮಾದರ್ತಿವರ್ಮನ್

ಲೇಖಕರು ಕದಂಬ ಸಾಮ್ರಾಜ್ಯವು ಕೆನರೀಸ್ ಜಿಲ್ಲೆ ಬೆಳಗಾಂ, ದಾರವಾಡ, ಶಿವಮೊಗ್ಗ, ಕಡೂರು ಮತ್ತು ಕೆನರಾ ಜಿಲ್ಲೆಗಳನ್ನು ಒಳಗೊಂಡಿತ್ತು[25] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಲೇಖಕರಾದ ಜೆ.ಎ.ಸಲ್ದಾನರು ದಾನ ಶಾಸನಗಳಾಗಿರುವ ತಾಮ್ರ ಪಟ್ಟಿಗಳ ಸಹಾಯದಿಂದ ಕದಂಬ ರಾಜರ ಧರ್ಮ ಯಾವುದೆಂದು ತಿಳಿಯುವ ಪ್ರಯತ್ನವನ್ನು ಮಾಡಿದ್ದಾರೆ. ಅವರು 10ಧಾನ ಶಾಸನಗಳನ್ನು ಗಮನಿಸಿ ಅದರಲ್ಲಿನ ಪ್ರಾರಂಭದ 8 ಶಾಸನಗಳು ತಿಳಿಸುದೇನೆಂದರೆ ಮೃಗೇಶ ವರ್ಮನಿಂದ ಸಿಂಹವರ್ಮನ ವರೆಗಿನ ರಾಜರು ಹೆಚ್ಚಾಗಿ ಜೈನ ಧರ್ಮವನ್ನು ಪ್ರೋತ್ಸಹಿಸಿದ್ದಾರೆ. ಆದರೆ ನಮಗೆ ಮೊದಲಿನ 5 ರಾಜರ


ಧಾರ್ಮಿಕ ಪ್ರವೃತ್ತಿಯನ್ನು ತಿಳಿಯಲು ಆಧಾರಗಳಿಲ್ಲ. ಆದರೆ ಮಯೂರ ವರ್ಮನು ಬ್ರಾಹ್ಮಣರ ಅಂಶದೊಂದಿಗೆ ದಂಗೆ ಎದ್ದುದನ್ನು ಗಮನಿಸಿದಾಗ ಆತ ಮತ್ತು ಆತನ ಉತ್ತಾರಾಧಿಕಾರಿಗಳು ಬ್ರಾಹ್ಮಣರಾಗಿರಬೇಕು ಹಾಗೂ ಕದಂಬರು ಜೈನ ಧರ್ಮ ಮತ್ತು ಬ್ರಾಹ್ಮಣಿಸಮ್‌ನ್ನು ಉದಾರವಾಗಿ ಬೆಂಬಲಿಸಿದ್ದರು. ಲೇಖಕರು ಬ್ರಾಹ್ಮಣರಿಗೆ ಭೂದಾನ ಮಾಡಿರುವ ಅರಸರನ್ನು ಗಮನಿಸಿ, ಅದು ಬ್ರಾಹ್ಮಣತ್ವದ ಸುಧಾರಣೆಯ ಕಾಲವಾಗಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.[26] ಲೇಖಕರು ಡಾ। ಫ್ಲೀಟ್‌ರ ಅಧ್ಯಾಯನದ ಆಧಾರದ ಮೇಲೆ ಕದಂಬರು ಕ್ರಿ.ಶ 6ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದರೆಂದು ಅಭಿಪ್ರಾಯ ಪಟ್ಟಿದ್ದಾರೆ. ಬ್ರಾಹ್ಮಣತ್ವ ಕೆನರಾಕ್ಕೆ ಬಂದುದರ ಬಗ್ಗೆ ಚರ್ಚಿಸುತ್ತಾ, ಪ್ರಸ್ತುತ ಕೆನರೀಸ್ ಮತ್ತು ಕೆನರಾದ ತುಳುವ ಬ್ರಾಹ್ಮಣರಲ್ಲಿರುವ ಸಂಪ್ರದಾಯವನ್ನು ಅವರ ಪೂರ್ವಜರು ಇಲ್ಲಿಗೆ ತಂದರು. ಅದನ್ನು ಮಯೂರವರ್ಮನ್ ಗೋದಾವರಿಯ ಆಚೆಗಿರುವ ಅಹೀ ಕ್ಷೇತ್ರದಿಂದ ತಂದು; ಆತನ ಮಗನು ಇವರನ್ನು (ಲೋಕಾದಿತ್ಯ) ಈ ಪ್ರದೇಶದ ಮೇಲೆ ಹರಡಿದ. [27] ಲೇಖಕರು ಮಯೂರ ವರ್ಮ ಬ್ರಾಹ್ಮಣರನ್ನು ತಂದುದರ ಬಗ್ಗೆ ವಿವರಿಸುತ್ತಾ, ಆತ ಹುಟ್ಟಿದ್ದು ಕಲಿಯುಗದ 1609ನೇ ವರ್ಷದಲ್ಲಿ, ಎಂದರೆ ಕ್ರಿ.ಪೂ 500 ವರ್ಷಗಳಷ್ಟು ಮೊದಲು. 20 ವರ್ಷ ಆಳ್ವಿಕೆ ನಡೆಸಿದ ಈತ, ರಿಶಲ್ [Rishal] ಮುನಿ ಅವನಿಗೆ ದೇಶದಲ್ಲಿ ಬ್ರಾಹ್ಮಣರಿಲ್ಲದೆ ರಾಜ್ಯ ಕಲುಷಿತವಾಗಿದೆ ಎಂದು ಹೇಳಿದಾಗ ಬೇಸರವಾಗಿ ಗೋದಾವರಿಯ ಆಚೆಗಿರುವ ಅಹೀ ಕ್ಷೇತ್ರದಿಂದ ಬ್ರಾಹ್ಮಣರನ್ನು ಅವರ ಸೇವಕರಾದ ನಾಯರ್ [Nair] ಗಳನ್ನು ಕರೆತಂದು ಅವರಿಗೆ ಭೂಧಾನಮಾಡಿದನು. 12 ವರ್ಷಗಳ ನಂತರ ಆತನ ಸಿಂಹಾಸನ ತ್ಯಜಿಸಿ ರಾಜ್ಯವನ್ನು ಮಂತ್ರಿಗಳ ಮೇಲ್ವಿಚಾರಣೆ ಮೇಲೆ ಬಿಡುತ್ತಾನೆ. ಇದರಿಂದ ಕೋಪಗೊಂಡ ಬ್ರಾಹ್ಮಣರು ಅವರ ದೇಶಕ್ಕೆ ಮರಳಿದರು. ನಂತರ ಆತನ ಮಗನಾದ ಚಂದ್ರಗೌಡ [Chandra gauda] ಬ್ರಾಹ್ಮಣರನ್ನು ಮರಳಿ ಬರಲು ಪ್ರೇರೆಪಿಸಿದ . ಪಾಂಡ್ಯ ರಾಜ್ಯದ ಮೇಲೆ ದಾಳಿಮಾಡಿ ಕೆಳಪಂಗಡದ ಜನರನ್ನು ರಾಜ್ಯಕ್ಕೆ ತಂದನು. ಎರಡನೇ ದಾಳಿಯ ಸಂದರ್ಭದಲ್ಲಿ ಆತ ಕೆಲವು ಬಂಟರನ್ನು ಸೇರಿದಂತೆ ಇತರರನ್ನು ಬಂಧಿಸಿ ಅವರನ್ನು ಉದ್ಯಾವರಕ್ಕೆ ತಂದು ಅವರನ್ನು ಬ್ರಾಹ್ಮಣರ ಸೇವಕರಾಗಿ ಹಾಗೂ ಉಳುಮೆಗಾರರಾಗಿ ಮಾಡಿದನು.[28] ಬಹುಶ: ಬ್ರಾಹ್ಮಣರ ಸಾರ್ವಭೌಮತೆಯನ್ನು ಬಂಟರ ಮೇಲೆ ತೋರಿಸಲು ಅವರಿಬ್ಬರ ಮಧ್ಯೆ ಸಂಬಂಧ ಕಲ್ಪಿಸಿ ಬ್ರಾಹ್ಮಣರನ್ನು ಭೂ ಮಾಲೀಕರಾಗಿ ಬಿಂಬಿಸುವ ಉದ್ದೇಶವಾಗಿರಬಹುದು. ಬಂಟರು, ಆರ್ಯನರು ಘಟ್ಟಪ್ರದೇಶದ ಕೆಳಭಾಗದಲ್ಲಿ ನೆಲೆಸುವುದಕ್ಕಿಂತ ಮೊದಲೇ ಬಂದು ಕೆನರಾದಲ್ಲಿ ನೆಲೆಸಿರಬೇಕು ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ.

ಲೇಖಕರು ತಿಳಿಸಿರುವ ಇನ್ನೊಂದು ಮೂಲದಂತೆ ಮಯೂರ ವರ್ಮನ ಮಗ ಅಥವಾ ಸಂಬಂಧಿಯಾದ ಲೋಕಾದಿತ್ಯನು ಸ್ಥಳೀಯ ನಾಯಕರುಗಳಾದ ಕೊರಗ ನಾಯಕರು, ಮೊಗೇರ್ ಮತ್ತು ಹೊಲೆಯ [Holeya] ನಾಯಕರುಗಳ ಜೊತೆ ಯುದ್ಧ ಮಾಡಿ ಅವರನ್ನು ಸೋಲಿಸಿದ. [29] ಈ

ಹೇಳಿಕೆಗಳಿಗೆ ನಂಬಲರ್ಹವಾದ ಐತಿಹಾಸಿಕ ಸಮರ್ಥನೆಗಳಾವುವು ದೊರೆತಿಲ್ಲ.[30] ಡಾ। ಕೆ.ವಿ ರಮೇಶರ ಪ್ರಕಾರ ಆತ ಬಹು:ಶ ಆರ್ಯನರನ್ನು ಕೆನರಾದಲ್ಲಿ ಪ್ರಥಮ ಬಾರಿಗೆ ಮುನ್ನಡೆಸಿದ ನಾಯಕನಾಗಿರಬೇಕು. ಲೋಕಾದಿತ್ಯನ ಬಗ್ಗೆ ವಿವರಿಸುತ್ತಾ, ಈತ ಮತ್ತು ಸ್ಥಳೀಯ ನಾಯಕರ ನಡುವಿನ ಯುದ್ಧಗಳು ಕೇವಲ ಆರ್ಯನರ ಮತ್ತು ದ್ರಾವಿಡಿಯನರ ನಡುವಿನ ಸಾರ್ವಭೌಮತೆಗಾಗಿ ನಡೆದ ಯುದ್ಧಗಳಾಗಿವೆ[31] ಎಂದು ಹೇಳಿದ್ದಾರೆ. ಮಯೂರ ವರ್ಮನು ಕದಂಬ ವಂಶದ ಸ್ಥಾಪಕನಾಗಿ, ಆತ ಬ್ರಾಹ್ಮಣರನ್ನು ಕೆನರಾಕ್ಕೆ ಕರೆತಂದಿರುವುದು ಅನುಮಾನ. ಯಾಕೆಂದರೆ ಇಲ್ಲಿ ಈಗಾಗಲೇ ಜೈನಧರ್ಮದ ಪ್ರಭುತ್ವವಿದ್ದು, ಅಲ್ಲಿ ಬ್ರಾಹ್ಮಣತ್ವ ತನ್ನ ಸುಧಾರಣೆಯನ್ನು ಕಂಡಿರಬೇಕು ಹಾಗೂ ಆತನ ಉತ್ತರಾಧಿಕಾರಿಗಳು ಬಹುಶ: ಜೈನರು ಹಾಗೂ ಜೈನಧರ್ಮದ ಪೋಷಕರಾಗಿರಬೇಕು ಎಂದಿದ್ದಾರೆ. ಕದಂಬ ರಾಜರ ಶಾಖೆಗಳು ಕೆನರಾವನ್ನು ಕ್ರಿ.ಶ.750ರಲ್ಲಿ ಆಳ್ವಿಕೆ ನಡೆಸಿದ್ದು, ಅವರು ಚಾಲುಕ್ಯರ ಮತ್ತು ಮಲಖೇಡದ ರಾಷ್ಟ್ರಕೂಟರ ಸಾಮಾಂತರಾಗಿದ್ದರು. ಅದ್ದರಿಂದ ಕೆನರಾದಲ್ಲಿ ಬ್ರಾಹ್ಮಣತ್ವದ ಪರಿಚಯವೆಂಬುದು ಕೇವಲ ಅದರ ಸುಧಾರಣೆಯಾಗಿದ್ದು, ಅದು ಆ ಕಾಲದಲ್ಲಿ ಕೇಂದ್ರ ಮತ್ತು ಉತ್ತರಭಾರತದಲ್ಲಿ ಬೌದ್ಧ ಧರ್ಮವನ್ನು ಅಟ್ಟಿಸಿ ತನ್ನ ಸಾರ್ವಭೌಮತೆಯನ್ನು ಮರಳಿ ಪಡೆಯುತ್ತಿತ್ತು. ಕೊನೆಗೆ ಕದಂಬರನ್ನು ಪಶ್ಚಿಮ ಚಾಲುಕ್ಯರು ಸೋಲಿಸುವುದರೊಂದಿಗೆ ಅವರನ್ನು ಮೂಲೆಗುಂಪಾಗಿಸಿದರು. [32] ಈ ರೀತಿ ಲೇಖಕರು ಮಯೂರ ವರ್ಮನು ಬ್ರಾಹ್ಮಣರನ್ನು ಕೆನರಾಕ್ಕೆ ಕರೆ ತಂದಿರ ಬಹುದಾದ ಕಥೆಗಳನ್ನು ಚರ್ಚಿಸಿ ಅದನ್ನು ತಳ್ಳಿ ಹಾಕಿದ್ದಾರೆ. ಅವರ ಪ್ರಕಾರ ಈ ಕಾಲದಲ್ಲಿ ಜೈನ ಧರ್ಮವು ಪ್ರಭುತ್ವ ಪಡೆದಿದ್ದು, ಬ್ರಾಹ್ಮಣತ್ವ ತನ್ನೊಳಗೆ ಸುಧಾರಣೆಯನ್ನು ಕಾಣುತ್ತಿತ್ತು. ಅದು ಈ ಕಾಲದಲ್ಲಿ ಉತ್ತರ ಭಾರತದಲ್ಲಿಯೂ ಮರು ಸುಧಾರಣೆ ಹೊಂದುತ್ತಿತ್ತು ಹಾಗೂ ಲೋಕಾಧಿತ್ಯನಿಂದ ಸೋಲಿಸಲ್ಪಟ್ಟ ನಾಯಕರು ಸ್ಥಳೀಯರೆ ಆಗಿದ್ದರು ಎಂದು ತಿಳಿಸಿದ್ದಾರೆ.

ಬನವಾಸಿಯ ಕದಂಬರ ಪಥನದೊಂದಿಗೆ ಕೆನರಾದ ಸ್ಥಳೀಯ ಸಾಮ್ರಾಜ್ಯವೊಂದು ಕೊನೆಗೊಂಡಿತು. ನಂತರ ಕೆನರಾದ ನಾಯಕರುಗಳು ಘಟ್ಟದ ಮೇಲಿನಿಂದ ಆಳ್ವಿಕೆ ಮಾಡಿರುವ ರಾಜರ ಸಾಮಾಂತರಾಗಿ ಆಳಿದರು. ಪುರಾತನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ವೈಭವಪೂರಿತ ನಗರವಾಗಿ ಮೆರೆದ ಬನವಾಸಿಯು ತನ್ನ ಭವ್ಯತೆಯನ್ನು ಕಳಕೊಂಡು, ಮಹತ್ವದ ಹಾಗೂ ವಿಸ್ತಾರವಾಗಿತ್ತೆಂದು ಹೇಳಲು ಏನೂ ಉಳಿದಿಲ್ಲದಂತಹ ಪ್ರದೇಶವಾಗಿಬಿಟ್ಟಿದೆ ಎಂದು ಲೇಖಕರು ತಿಳಿಸಿದ್ದಾರೆ. ಕದಂಬರನ್ನು ಪ್ರಾರಂಭದ ಅಥವಾ ಪಶ್ಚಿಮದ ಚಾಲುಕ್ಯರು ಪರಾಭವಗೊಳಿಸಿದರು. ಅವರು ಬಿಜಾಪುರ ಜಿಲ್ಲೆಯ [ಬಾಗಲಕೋಟೆ] ಯ ಬಾದಾಮಿಯಿಂದ ಆಳ್ವಿಕೆ ನಡೆಸುತ್ತಿದ್ದರು. ಇತರ ಎಲ್ಲಾ ಹಿಂದೂ ರಾಜವಂಶಗಳಂತೆ ಪ್ರಾರಂಭದ ಚಾಲುಕ್ಯರ ಉಗಮವು ಒಂದು ದಂತ ಕಥೆಯಾಗಿದೆ. ಇದರಂತೆ ಬ್ರಹ್ಮದೇವನು ಬೆಳಗಿನ ಪ್ರಾರ್ಥನೆ ಮಾಡುತ್ತಿರುವ ಸಂದರ್ಭದಲ್ಲಿ ಇಂದ್ರನು ಪ್ರತ್ಯಕ್ಷನಾಗಿ ಜಗತ್ತು ಪಾಪ ಪೂರಿತವಾಗಿದೆಯೆಂದು ಹೇಳಿದ.

ಇದರಿಂದಾಗಿ ಬ್ರಹ್ಮದೇವನು ತನ್ನ ಚಾಲುಕ್ಯದಿಂದ ಒಬ್ಬ ಬಲಿಷ್ಠ ವೀರನನ್ನು ಸೃಷ್ಟಿಸಿದ್ದು, ಅವನ ವಂಶದವರನ್ನು ಚಾಲುಕ್ಯರೆಂದು ಕರೆಯುತ್ತಾರೆ. ಈ ವಂಶದ ಪ್ರಥಮರಾಜ ಪುಲಿಕೇಶಿಯಾಗಿದ್ದು, ಆತ ಬಾದಾಮಿಯಲ್ಲಿ ಸಾಮ್ರಾಜ್ಯ ಸ್ಥಾಪಿಸಿ ಆಕ್ರಮಣದ ಮೂಲಕ ಸಾಮ್ರಾಜ್ಯ ವಿಸ್ತರಿಸಿದನು. ಲೇಖಕರು ಈ ವಂಶದ ರಾಜರು ಮತ್ತು ಅವರ ಆಳ್ವಿಕೆ ನಡೆಸಿದ ಕಾಲಗಳ ಬಗ್ಗೆ ಪಟ್ಟಿ ನೀಡಿದ್ದಾರೆ.



ನಂತರ ಲೇಖಕರು ಈ ಮೇಲಿನ ರಾಜರುಗಳು ಕೆನರಾ ಇತಿಹಾಸದಲ್ಲಿ ಅಷ್ಟೊಂದು ಪ್ರಮುಖ ಸ್ಥಾನ ಪಡೆದಿಲ್ಲ ಎಂದಿದ್ದಾರೆ.[33]

ಭಾರತದಲ್ಲಿ ಚಾಲುಕ್ಯರ ಹಾಗೆ ನಿರಂತರವಾಗಿ ಬಲಿಷ್ಠ ಅರಸರ ಆಳ್ವಿಕೆಯನ್ನು ಬೇರೆಲ್ಲಿಯೂ ಕಾಣಲು ಸಾದ್ಯವಿಲ್ಲ ಎಂದಿರುವ ಲೇಖಕರು, ಕಾವೇರಿಯಿಂದ ಗೋದಾವರಿಯವರೆಗಿನ ಹಾಗೂ ಎರಡೂ ಸಮುದ್ರಗಳ ಮಧ್ಯೆ ಇರುವ ಪ್ರದೇಶವನ್ನು 2 ಶತಮಾನಗಳ ಕಾಲ ಇವರು ಆಳ್ವಿಕೆ ನಡೆಸಿದ್ದಾರೆಂದು ತಿಳಿಸಿದ್ದಾರೆ. ಎರಡನೇ ಪುಲಕೇಶಿಯು ಪ್ರಬಲ ಅರಸನಾಗಿದ್ದು ಸಾಮ್ರಾಜ್ಯವನ್ನು ವಿಸ್ತರಿಸಿ ಭದ್ರಪಡಿಸಿದನು. ಈತನ ಕಾಲದಲ್ಲಿ ಚೀನೀ ವಿದೇಶಿಯಾತ್ರಿಕ ಹ್ಯೂಯನ್ ತ್ಸಾಂಗ್ ಸಾಮ್ರಾಜ್ಯಕ್ಕೆ ಭೇಟಿ ನೀಡಿ ಆ ಕಾಲದ ಬಗ್ಗೆ ದಾಖಲಿಕೊಂಡಿದ್ದಾನೆ. ಆಕ್ರಮಿತ ಪ್ರದೇಶದ ಆಳ್ವಿಕೆ ನಡೆಸಲು ಪ್ರಾರಂಭದ ಚಾಲುಕ್ಯರು ಚಾತುರ್ಯದ ಅಂಶಗಳನ್ನು ಅಳವಡಿಸಿದ್ದರು. ಅದೆಂದರೆ ಸಾಮಾನ್ಯ ಅಧಿಕಾರಿಗಳ ಮೂಲಕ ಮಾತ್ರವಲ್ಲದೇ ಹಳೇ

ರಾಜವಂಶಗಳ ರಾಜರನ್ನು ವಂಶ ಪಾರಂಪರ್ಯ ಗವರ್ನರ್‌ಗಳಾಗಿ ನೇಮಿಸಿ, ಅವರಿಗೆ ಅಂತರಿಕ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿ, ಅವರಿಂದ ಕೇವಲ ಕಪ್ಪಕಾಣಿಕೆ ಹಾಗೂ ಯುದ್ಧದ ಸಂದರ್ಭದಲ್ಲಿ ಅವರಿಂದ ಸೈನಿಕ ಸಹಾಯ ಪಡೆಯಲಾಗುತ್ತಿತ್ತು. ಇದೇ ನೀತಿಯನ್ನು ಕೆನರಾದ ನಾಯಕರಿಗೆ ಸಂಬಂಧಿಸಿದಂತೆ ಅನುಸರಿಸಿದ್ದರು[34].

ಬಾದಾಮಿ ಚಾಲುಕ್ಯರ ನಂತರ ಮಲಖೇಡದ ರಾಷ್ಟ್ರಕೂಟರು ಕ್ರಿ.ಶ 754 ರಿಂದ 973ರ ವರೆಗೆ ಹಾಗೂ ಕಲ್ಯಾಣಿಯ ಚಾಲುಕ್ಯರು ಕ್ರಿ.ಶ 973ರಿಂದ 1189ರ ವರೆಗೆ ಆಳ್ವಿಕೆ ನಡೆಸಿದರು. ಲೇಖಕರು ಅಭಿಪ್ರಾಯ ಪಡುವಂತೆ ಅವರ ಶಕ್ತಿ ಕೆನರಾದಲ್ಲಿ ಕೇವಲ ನಾಮಾಂಕಿತ ಮನ್ನಣೆಯನ್ನು ಪಡೆದಿರಬೇಕು. ಇಲ್ಲಿ ಲೇಖಕರು ಮೂರನೇ ಗೋವಿಂದನನ್ನು ಈ ವಂಶದ ಪ್ರಮುಖ ಶಕ್ತಿಶಾಲಿ ರಾಜನೆಂದು ಬಣ್ಣಿಸಿದ್ದಾರೆ. ಇವರ ನಂತರ ಆಳ್ವಿಕೆಗೆ ಬಂದ ಕಲ್ಯಾಣಿ ಚಾಲುಕ್ಯರಲ್ಲಿ 6ನೇ ವಿಕ್ರಮಾದಿತ್ಯ ಪ್ರಬಲ ಅರಸನಾಗಿದ್ದಾನೆ. ಆದರೆ ಲೇಖಕರಾದ ಸಲ್ದಾನರು ಇವನನ್ನು 2ನೇ ವಿಕ್ರಮಾದಿತ್ಯನೆಂದು ಗುರುತಿಸಿ ಆತನನ್ನು ಪ್ರಾರಂಭದ ಚಾಲುಕ್ಯರೊಂದಿಗೆ ಸಂಪರ್ಕ ಕಲ್ಪಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈತನ ತಮ್ಮನಾದ ಜಯಸಿಂಹನು ಬನವಾಸಿಯ ಗವರ್ನರ್ ಆಗಿದ್ದು, ಆತನು ವಿಕ್ರಮಾದಿತ್ಯನ ವಿರುದ್ಧ ದಂಗೆ ಎದ್ದು ನಂತರದ ಯುದ್ಧದಲ್ಲಿ ಸೋಲಿಸಲ್ಪಟ್ಟನು. ಈ ಕಾಲದ ಸಾಹಿತಿಯಾದ ವಿಜ್ಞಾನೇಶ್ವರನಿಂದ ರಚಿತವಾದ ಮಿತಾಕ್ಷರ ಸಂಹಿತೆಯ ಕುರಿತು ಲೇಖಕರು ತಿಳಿಸುತ್ತಾ, ವಿಕ್ರಮಾದಿತ್ಯ ಕೆನರಾದ ಮೇಲೆ ಸೌರ್ವಬೌಮತ್ವವನ್ನು ಹೊಂದಿದ್ದು, ಆತನ ಹೆಸರು ಹಲವು ಸಂಪ್ರಾದಾಯಿಕ ಗ್ರಂಥಗಳಲ್ಲಿ ನಮೂದಿತವಾಗಿದೆ [35] ಎಂದು ತಿಳಿಸಿದ್ದಾರೆ.

ವಿಕ್ರಮಾದಿತ್ಯನ ಉತ್ತರಾಧಿಕಾರಿ ಮೂರನೇ ತೈಲಪನ ಕಾಲದಲ್ಲಿ ಚಾಲುಕ್ಯ ಸಿಂಹಾಸನವು ಅದರ ಅಧೀನನಾಗಿದ್ದ ಕಳಚೂರಿ ಜನಾಂಗದ ವಿಜ್ಜಲ ಅಥವಾ ವಿಜ್ಜನನಿಂದ ಆಕ್ರಮಿಸಲ್ಪಟ್ಟು, ತೈಲಪ ನಂತರ ಬನವಾಸಿಯಲ್ಲಿ ನೆಲೆಕಂಡನು. ಇವರು ಶೈವ ಪಂಥ ಅಥವಾ ಲಿಂಗಾಯತರಾಗಿದ್ದು, ಈ ಚಳುವಳಿಯನ್ನು ವಿಜ್ಜಳನ ಮಂತ್ರಿಯಾಗಿದ್ದ ಬಸವ ಮತ್ತು ಚೆನ್ನಬಸವರು ನಡೆಸಿದರು. ನಂತರ ಬಸವ ಮತ್ತು ವಿಜ್ಜಳನ ನಡುವೆ ವೈರತ್ವ ಬೆಳೆದು, ಅದು ಬಸವರ ಸಾವಿಗೆ ಕಾರಣವಾಗಿ, ನಂತರ ಕಲಚೂರಿಗಳ ಶಕ್ತಿ ಕುಂದಿ ಹೋಯಿತು. ನಂತರ ಬಹುಬೇಗ ಚಾಲುಕ್ಯ 4ನೇ ಸೋಮೇಶ್ವರನು ಆತನ ಸೇನಾನಿ ಬೋಮ್ಮ [Bomma]ನ ಸಹಾಯದಿಂದ ಚಾಲುಕ್ಯ ಪ್ರಭುತ್ವವನ್ನು ಸ್ಥಾಪಿಸಿದನು. ಮುಂದೆ ಕ್ರಿ.ಶ 1189ರಲ್ಲಿ ಹೊಯ್ಸಳ ರಾಜ ವೀರ ಬಲ್ಲಾಲನು ಚಾಲುಕ್ಯರನ್ನು ಸೋಲಿಸಿ ಹೊಯ್ಸಳ ಪ್ರಭುತ್ವವನ್ನು ಸ್ಥಾಪಿಸಿದನು.[36] ಇಲ್ಲಿ ಲೇಖಕರು ಕೆನರಾದ ಇತಿಹಾಸ ಬರೆಯುದಕ್ಕಿಂತ, ಕರ್ನಾಟಕವನ್ನು ಆಳ್ವಿಕೆ ಮಾಡಿರುವ ರಾಜವಂಶಗಳ ಹಾಗೂ ರಾಜರುಗಳ ಬಗ್ಗೆ ಚರ್ಚಿಸಿದ್ದಾರೆ. ಲೇಖಕರು ಚರ್ಚಿಸಿದ ಮೇಲಿನ 3 ರಾಜವಂಶಗಳು ಕೆನರಾದ ಇತಿಹಾಸದ ಮೇಲೆ ಯಾವುದೇ ಪ್ರಭಾವ ಬೀರಿರುವ ಅಂಶವನ್ನು ಲೇಖಕರು ತಿಳಿಸಿಲ್ಲ.

ಕ್ರಿ.ಶ 7ನೇ ಶತಮಾನದಿಂದ 12ನೇ ಶತಮಾನದವರೆಗೆ ಆಳ್ವಿಕೆ ನಡೆಸಿರುವ ಕೆನರಾದ ಸ್ಥಳೀಯ ರಾಜ ಮನೆತನಗಳ ಬಗ್ಗೆ ಚರ್ಚಿಸುತ್ತಾ, ಕದಂಬ ರಾಜರು ಸಂಪೂರ್ಣವಾಗಿ ನಾಶವಾಗಲಿಲ್ಲ. ಶಾಸನಗಳ ಪ್ರಕಾರ ಈ ಕುಟುಂಬದ 2 ಶಾಖೆಗಳು ಪಶ್ಚಿಮ ಭಾರತದಲ್ಲಿ 12ನೇ ಶತಮಾನದವರೆಗೆ ಆಳ್ವಿಕೆ ಮಾಡಿದ್ದಾರೆ. ಅವರಲ್ಲಿ ಗೋವಾದ ಕದಂಬರು, ಗೋವಾದ ಸುತ್ತಲಿನ ಪ್ರದೇಶವನ್ನು ಹಾಗೂ ಹನಗಲ್‌ನ ಕದಂಬರು ಹೆಚ್ಚು ಕಡಿಮೆ ಉತ್ತರ ಕೆನರಾದ ಉತ್ತರ ಭಾಗ ಹಾಗೂ ಧಾರವಾಡಗಳನ್ನು ಆಳ್ವಿಕೆ ನಡೆಸಿದ್ದಾರೆ. ಹನಗಲ್‌ನ ಪ್ರಥಮರಾಜ ಮಯೂರ ವರ್ಮನಾಗಿದ್ದು, ಕಾಮದೇವನು ಕೊನೆಯ ಅರಸನಾಗಿದ್ದಾನೆ.

ಕ್ರಿ.ಶ. 1189ರ ಹನಗಲ್‌ನ ಶಾಸನವು ತಿಳಿಸುವಂತೆ "ಬನವಾಸಿ 12,000; ಪನುಣ್‌ಗಲ್ 500 ಮತ್ತು ಪುಲಿಗೇರೆ [ಲಕ್ಷ್ಮೇಶ್ವರ] 300" ಇದು ತುಳುವ, ಕೊಂಕಣಿ ಮತ್ತು ಪಶ್ಚಿಮ ಘಟ್ಟ ಪ್ರದೇಶಗಳ್ನು ಆಕ್ರಮಿಸಿದ ನಂತರವಾಗಿದೆ ಎಂದು ಲೇಖಕರು ವಿವರಿಸಿದ್ದಾರೆ.[37] ಕ್ರಿ.ಶ 8ನೇ ಮತ್ತು 9ನೇ ಶತಮಾನದಲ್ಲಿ ಸೊಂಡಾದಿಂದ ಹಲವು ಜೈನ ಅರಸರು ಆಳ್ವಿಕೆ ನಡೆಸಿದ್ದು, ಅವರನ್ನು ಉಳಿದ ರಾಜವಂಶಗಳ ಜೊತೆ ಗುರುತಿಸಲು ಅಸಾದ್ಯವಾಗಿದ್ದು, ಅವರ ಸಂಪ್ರದಾಯಗಳಂತೆ ಅವರು ಹಳೆಯ ಕದಂಬ ರಾಜರೊಂದಿಗೆ ಸಂಬಂಧ ಪಟ್ಟವರಾಗಿರಬೇಕು. ಬಹುಶ: ಅವರು ಕದಂಬರ ಸಾಮಂತರು ಅಥವಾ ಗವರ್ನರ್‌ಗಳಾಗಿದ್ದು, ಬಳ್ಳಾಳ್ ಎಂಬ ನಾಮಧೇಯವನ್ನು ಬಳಸಿಕೊಂಡಿದ್ದರು ಎಂದು ಲೇಖಕರು ವಿವರಿಸಿದ್ದಾರೆ. ಲೇಖಕರಾದ ಸಲ್ದಾನರು ವಿವರಿಸುವಂತೆ ತುಳುನಾಡಿನ ನಾಯಕರಾಗಿದ್ದ ಬೈರರಸು ಒಡೆಯರವರೆಗೆ, ತುಳುವ ರಾಷ್ಟ್ರವನ್ನು ಹಲವು ಬಂಟ [Banta] ಕೊರಗ, ಮೊಗರ್ [Mogar] ಹಾಗೂ ಬ್ರಾಹ್ಮಣಾರಾದ ಬಲ್ಲಾಳ ಅಥವಾ ಹೆಗ್ಗಡೆ ನಾಯಕರು ಆಳ್ವಿಕೆ ನಡೆಸಿದ್ದಾರೆ. ಕ್ರಿ.ಶ 9ಮತ್ತು 10ನೇ ಶತಮಾನದಲ್ಲಿ ಜೈನ ಕುಟುಂಬವಾದ ಕಾರ್ಕಳದ ಬೈರಸು ಒಡೆಯರು ಆಳ್ವಿಕೆಗೆ ಬಂದು ಸಂಪೂರ್ಣವಾಗಿ ತುಳುನಾಡಿನ ಮೇಲೆ ಸಾರ್ವಭೌಮತೆ ಸ್ಥಾಪಿಸಿದರು. ಬೈರರಸು ಒಡೆಯರ ಪೂರ್ವಜ ಜಿನದತ್ತ [Jenadutta] ಈತ ಸೂರ್ಯವಂಶದವನಾಗಿದ್ದು, ಉತ್ತರ ಭಾರತದಲ್ಲಿ ಜಮುನಾ ನದಿಯ ಹತ್ತಿರ ಜನಿಸಿದ್ದು, ಆತನ ತಂದೆ ಸ್ಥಳೀಯ ರಾಜನಿಂದ ಅವಮಾನಿತನಾಗಿ ದಕ್ಷಿಣಕ್ಕೆ ಬಂದನು. ಪ್ರಸ್ತುತ ಮೈಸೂರಿನ ಹುಮ್ಚ್ಾ [Humcha] ನಗರವನ್ನು ಜಿನದತ್ತನು ಹುಟ್ಟು ಹಾಕಿದನು. ಕ್ರಮೇಣ ಜಿನದತ್ತನ ಉತ್ತರಾಧಿಕಾರಿಯೊಬ್ಬ ಪುತ್ತೂರು ತಾಲೂಕಿನ ಸುಬ್ರಹ್ಮಣ್ಯದ ಹತ್ತಿರ ಶಿಶಿಲ [Sisila] ದಲ್ಲಿ ನೆಲೆನಿಂತು ನಂತರ ಕಾರ್ಕಳದಲ್ಲಿ ಬೈರಸು ಒಡೆಯರ್ ಎಂಬ ಮನೆತನವನ್ನು ಹುಟ್ಟುಹಾಕಿದನು. ನಂತರ ಅವರು ದಕ್ಷಿಣ ಕೆನರಾದ ಮೇಲೆ ಅವರ ಪ್ರಭಾವವನ್ನು ವಿಸ್ತರಿಸಿದರು.[38]

ಕ್ರಿ.ಶ 8ನೇ ಶತಮಾನದಿಂದ 12ನೇ ಶತಮಾನದವರೆಗಿನ ಧಾರ್ಮಿಕ ಅಂಶದ ಬಗ್ಗೆ ಚರ್ಚಿಸುತ್ತಾ, ಪ್ರಾರಂಭದ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಲುಕ್ಯರು ಜೈನ ಧರ್ಮದ

ಪ್ರೋತ್ಸಾಹಕರಾಗಿದ್ದು 12ನೇ ಶತಮಾನದಲ್ಲಿ ಜೈನ ಧರ್ಮ ತನ್ನ ಉತ್ತುಂಗ ಶಿಖರವನ್ನು ತಲುಪಿತು. ಲೇಖಕರು ಇನ್ನೊಂದೆಡೆ ಭೌದ್ಧ ಧರ್ಮ ಕ್ರಿ.ಶ 8ರಿಂದ 11ನೇ ಶತಮಾನದ ಕಾಲದಲ್ಲಿ ಶೀಘ್ರ ಪಥನದ ಹಾದಿಯನ್ನು ಕಂಡಿತು. ಈ ಕಾಲದ ಹೊಸ ಪಂಥಗಳು ಕೆನರಾವನ್ನು ತಲುಪದೆ ಜೈನಧರ್ಮವು ರಾಜ್ಯಧರ್ಮವಾಗಿ ಉಳಿದು ಪ್ರಮುಖವಾಗಿ ಬೆಳೆಯಿತು. ಇದೇ ಕಾಲದಲ್ಲಿ ಹೊಸ ಹಿಂದೂಧರ್ಮ [Neo-Hinduism] ತನ್ನ ಶಿವ ಆರಾಧನೆಯೊಂದಿಗೆ ಬ್ರಾಹ್ಮಣೇತರ ಕೆನರಾದ ಹಿಂದುಗಳನ್ನು ಆಕರ್ಷಿಸಿತು ಹಾಗೂ ಕ್ರಿ.ಶ.1199ರಲ್ಲಿ ಕಲ್ಯಾಣಪುರದಲ್ಲಿ ಹುಟ್ಟಿದ ಮದ್ವಾರ ವೈಷ್ಣವ ಧರ್ಮ ತುಳುವ ಬ್ರಾಹ್ಮಣರಿಂದ ಸ್ವೀಕರಿಸಲ್ಪಟ್ಟಿತು.

ಹೊಯ್ಸಳರ ಬಗ್ಗೆ ವಿವರಿಸುತ್ತಾ ಸಲ್ದಾನರು, ಇವರು ಕಲ್ಯಾಣಿ ಚಾಲುಕ್ಯರ ಗವರ್ನರ್‌ಗಳಾಗಿದ್ದು, ಮಹಾಮಂಡಳೇಶ್ವರರು [Mahamadaleshwaras] ಎಂದು ಕರೆಸಿಕೊಂಡಿದ್ದಾರೆ. ವಿಷ್ಣುವರ್ಧನನ ಕಾಲದಲ್ಲಿ ಚಾಲುಕ್ಯರ ವಿರುದ್ಧ ದಂಗೆ ಎದ್ದು ವಿಕ್ರಮಾದಿತ್ಯನಿಂದ ಸೋಲು ಅನುಭವಿಸಿದರೂ, ಆತ ಸಂಪೂರ್ಣವಾಗಿ ಸೋಲದೇ, ತುಳುವ ನಾಯಕರ ಸಹಿತ ಸುತ್ತಮುತ್ತಲಿನ ಅರಸರನ್ನು ಸೋಲಿಸಿದನು. ಈ ವಂಶದ ಅರಸನಾದ ಒಂದನೇ ನರಸಿಂಹನು ಜಮಾಲಬಾದ್‌ನ ಹತ್ತಿರದ ನರಸಿಂಗಡಿ [Narsinghadi] ಎಂಬ ನಗರವನ್ನು ನಿರ್ಮಿಸಿರಬೇಕೆಂದು ಊಹಿಸಿದ್ದಾರೆ. ಎರಡನೇ ವೀರಬಲ್ಲಾಳನು ಈ ವಂಶದ ಪ್ರಮುಖ ಶ್ರೇಷ್ಠ ಅರಸನಾಗಿದ್ದು, 1196ರ ಹಾನಗಲ್ ಶಾಸನದಲ್ಲಿ ಉಲ್ಲೇಖಿಸಿರುವಂತೆ ಕದಂಬ ರಾಜನಾದ ಕಾಮದೇವನು, ಎರಡನೇ ವೀರ ಬಲ್ಲಾಳನ ಸೈನ್ಯವನ್ನು ಸೋಲಿಸಿದ. ಆದರೆ ಬಹುಬೇಗನೇ ಆತ ವೀರ ಬಲ್ಲಾಳನಿಂದ ಸೋಲಿಸಲ್ಪಟ್ಟು, ಆತನ ರಾಜ್ಯವನ್ನು ಬಲ್ಲಾಳನು ವಶಪಡಿಸಿಕೊಂಡಿರಬೇಕು [39] ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

ಹೊಯ್ಸಳರನ್ನು ಯುದ್ಧ ಪ್ರಿಯರೆಂದು ಅಪಾದಿಸಿರುವ ಲೇಖಕರು ಅವರು ಯುದ್ಧದಲ್ಲಿ ಸದಾ ಕಾಲ ಕಳೆಯುತ್ತಿದ್ದರೆಂದು ಹೇಳಿದ್ದಾರೆ. ಅಂದರೆ ಜನಸಾಮಾನ್ಯರ ಅಭಿವೃದ್ಧಿ ಹಾಗೂ ಊರಿನ ಅಭಿವೃದ್ಧಿಗೆ ಏನೂ ಮಾಡಲಿಲ್ಲ ಎಂಬ ವಸಾಹತುಶಾಹಿ ವಾದವನ್ನು ಎತ್ತಿಹಿಡಿದಿದ್ದಾರೆ. ಈ ವಂಶವು ಮಲ್ಲಿಕಾಫರ್‌ನ ಧಾಳಿಯೊಂದಿಗೆ ನಿರ್ನಾಮವಾಗಿ ರಾಜಧಾನಿಯಾದ ದ್ವಾರ ಸಮುದ್ರವು ಮುಸ್ಲಿಂರಿಂದ ಧರೆಗೆ ಉರುಳಿಸಲ್ಪಟ್ಟಿತು. ಹೊಯ್ಸಳರ ಧರ್ಮದ ಬಗ್ಗೆ ಚರ್ಚಿಸುತ್ತಾ ಇವರು ಅಧಿಕಾರಕ್ಕೆ ಬರಲು ಒಬ್ಬ ಜೈನ ಮುನಿಯು ಕಾರಣಕರ್ತನಾಗಿದ್ದು, ಆದರಿಂದ ಇವರು ಜೈನ ದೇವಾಲಯಗಳಿಗೆ ಅಪಾರವಾದ ಕಾಣಿಕೆ, ಧಾನಗಳನ್ನು ನೀಡಿದ್ದಾರೆ ಎಂದಿರುವ ಲೇಖಕರು, ಪ್ರಾರಂಭದ ಇಬ್ಬರು ಅರಸರು ಜೈನ ಧರ್ಮದವರಾಗಿದ್ದರು ಎಂದಿದ್ದಾರೆ. ಚೋಳರ ಉಪಟಳದಿಂದ ಇಲ್ಲಿಗೆ ಬಂದು, ಹೊಯ್ಸಳರ ಆಶ್ರಯ ಪಡೆದ ವೈಷ್ಣವ ಗುರುಗಳಾದ ರಾಮಾನುಜಚಾರ್ಯರು ನಂತರ ವಿಷ್ಣುವರ್ಧನನು ವೈಷ್ಣವನಾಗಲು ಕಾರಣರಾದರು. ಆದರೂ ಕೂಡಾ ಜೈನಧರ್ಮವು ರಾಜರಿಂದ ಪ್ರೋತ್ಸಾಹಿಸಲ್ಪಟ್ಟಿತು ಎಂದಿದ್ದಾರೆ. ನಂತರ

ಬಲ್ಲಾಳರು ತುಳುವ ರಾಜ್ಯದ ಮೇಲೆ ಹಿಡಿತ ಕಡಿಮೆಗೊಳಿಸಿದಾಗ ಮುಂದೆ ಅದು ಸ್ವತಂತ್ರ್ಯವಾಯಿತು ಎಂಬ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಬಲ್ಲಾಳರ ಕಾಲದಲ್ಲಿ ಸ್ಥಳೀಯವಾಗಿ ಕೆನರಾದಲ್ಲಿ 'ಭೂತಳ ಪಾಂಡ್ಯ' ಪ್ರಮುಖ ಅರಸರಾಗಿದ್ದ ಎಂದಿರುವ ಲೇಖಕರು ಅವರ ಉಗಮದ ಬಗ್ಗೆ ಇರುವ ದಂತ ಕಥೆಗಳನ್ನು ಚರ್ಚಿಸಿ ಈ ರೀತಿಯ ತೀರ್ಮಾನಕ್ಕೆ ಬಂದಿದ್ದಾರೆ. ಕೆನರಾದಲ್ಲಿ ಭೂತಳ ಪಾಂಡ್ಯ ಎಂಬ ವ್ಯಕ್ತಿ ಇದ್ದ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ ಎಂದಿರುವ ಲೇಖಕರು, ಆತ ಇಲ್ಲಿ ಹೊಸತಾದ 'ಅಳಿಯ ಸಂತಾನ' ಕಟ್ಟುಪಾಡನ್ನು ಪರಿಚಯಿಸಿದ ಮಾತ್ರವಲ್ಲದೆ, ಈ ನಾಡಿನ ಸಾಮಾಜಿಕ ಮತ್ತು ರಾಜಕೀಯ ಸಂಪ್ರದಾಯಗಳಲ್ಲಿ ಹಲವು ಬದಲಾವಣೆ ತಂದು ತನ್ನ ಮುದ್ರೆಯನ್ನು ಬಲಪಡಿಸಿದ್ದಾನೆ. ಆತ ಕೆನರಾದಲ್ಲಿ ಕಂಡು ಬರುವುದು ಕಲ್ಯಾಣಿ ಚಾಲುಕ್ಯರ ಪಥನದ ನಂತರ ಎಂದು ಖಚಿತ ಪಡಿಸಿಕೊಂಡಿರುವ ಲೇಖಕರು ಆತ ಸುಮಾರು ಕ್ರಿ.ಶ.1250ರ ಕಾಲಕ್ಕೆ ಸಂಬಂಧಿಸಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಆತ ಪಾಂಡ್ಯ ದೇಶದವನೋ ಅಥವಾ ಸ್ಥಳೀಯನೋ ಎಂಬುದನ್ನು ತಿಳಿಸಲು ವಿಫಲರಾಗಿರುವ ಜೆ.ಎ.ಸಲ್ಡಾನರು ಇದನ್ನು ಇತಿಹಾಸದ ವಿದ್ಯಾರ್ಥಿಗಳ ನಿರ್ಣಯಕ್ಕೆ ಒಪ್ಪಿಸಿದ್ದಾರೆ.[40]

ಕ್ರಿ.ಶ.1310ರಲ್ಲಿ ಹೊಯ್ಸಳರ ಪಥನದ ಕಾಲದಲ್ಲಿ ಕೆನರಾದಲ್ಲಿದ್ದ ಸ್ಥಳೀಯ ರಾಜರುಗಳ ಬಗ್ಗೆ ವಿವರಿಸಿದ್ದಾರೆ. ಕಾರ್ಕಳದ ಬೈರರಸು ಒಡೆಯರು, ಮಂಗಳೂರಿನ ಹತ್ತಿರದ ಬಂಗರಸರು, ಅಲದಂಗಡಿಯ ಚೌಟರು, ಬೈಲಂಗಡಿಯ ಮುಲರು, ಸೋಂಡಾದ ಪಾಳೇಗಾರರು, ಹೊನ್ನಾವರದ ನಾಯಕರು, ಭಟ್ಕಳ್ ಮತ್ತು ಗೇರುಸೊಪ್ಪದ ನಾಯಕರು, ವಿಠಲದ ಹೆಗ್ಗಡೆಯವರು, ಉಡುಪಿಯ ಹತ್ತಿರದ ಚಿಟ್ಪಾಡಿ ಬಲ್ಲಾಳರು, ಕುಂಬಳೆ ಮತ್ತು ನೀಲೇಶ್ವರದ ರಾಜರು ಮತ್ತು ಬಸರೂರಿನ ರಾಣಿ[41]. ಇವರು ಯಾವ ಕಾಲಘಟ್ಟದಲ್ಲಿ ಆಳ್ವಿಕೆ ಮಾಡಿದ್ದಾರೆ ಎಂದು ವಿವರಿಸದ ಲೇಖಕರು ಅದರ ಪಟ್ಟಿಯನ್ನು ನೀಡಿದ್ದಾರೆ. ಫೆರಿಸ್ತಾನ ಇತಿಹಾಸವನ್ನು ಆಧಾರಿಸಿ ಲೇಖಕರು ದೇವಗಿರಿಯ ಯಾದವರು ಕೆನರಾದ ಮೇಲೆ ಕ್ರಿ.ಶ.1310 ರಿಂದ 1312 ರವರೆಗೆ ಬಸರೂರಿನ ರಾಣಿಯ ಮೂಲಕ ಆಳ್ವಿಕೆ ನಡೆಸಿದ್ದರು ಎಂದಿದ್ದಾರೆ. ಆದರೆ ನಂತರ ಮಲ್ಲಿಕಾಫರ್ ಹೊಯ್ಸಳ, ವಾರಂಗಲ್ ಮತ್ತು ದೇವಗಿರಿಯ ಅರಸರನ್ನು ಸೋಲಿಸಿದ ಮೇಲೆ ಅವುಗಳ ಪಳೆಯುಳಿಕೆಗಳ ಮೇಲೆ ವಿಜಯನಗರ ಸಾಮ್ರಾಜ್ಯ ಉದಯವಾಯಿತು. ಇದು ದಕ್ಷಿಣ ಭಾರತದ ಸಾಮ್ರಾಜ್ಯಗಳಲ್ಲಿ ಅತೀ ಪ್ರಮುಖ ಸಾಮ್ರಾಜ್ಯ ಎಂದಿರುವ ಲೇಖಕರು, ಕ್ರಿ.ಶ.1342ರಲ್ಲಿ ಕೆನರಾಕ್ಕೆ ಭೇಟಿ ನೀಡಿದ್ದ ಅಬ್ದುಲ್ ರಜಾಕ್, ಹಾಗೂ ಕೆಲವು ಪೋರ್ಚುಗೀಸರ ದಾಖಲೆಗಳಿದ್ದು, ಅವು ಸಾಮ್ರಾಜ್ಯದ ವಿಸ್ತಾರ ಸಂಪತ್ತು ಮತ್ತು ರಾಜರ ವೈಭವದ ಬಗ್ಗೆ ಮಾಹಿತಿ ಒದಗಿಸುತ್ತದೆ ಎಂದಿದ್ದಾರೆ.ಈ ಸಾಮ್ರಾಜ್ಯದ ಸ್ಥಾಪಕರಾದ ಹುಕ್ಕ ಬುಕ್ಕರು ಶೃಂಗೇರಿ ಮಠದ ಮಹಾದೇವರ ಬೆಂಬಲದೊಂದಿಗೆ ಸಾಮ್ರಾಜ್ಯ ಸ್ಥಾಪಿಸಿದರು ಎಂದಿದ್ದಾರೆ. ವಿಜಯನಗರದೊಂದಿಗೆ ಪೋರ್ಚುಗೀಸರು ಒಪ್ಪಂದ ಮಾಡಿಕೊಂಡು ಭಟ್ಕಳದಲ್ಲಿ ಕೋಟೆ ಕಟ್ಟಲು ಅನುಮತಿ ಪಡೆದರು ಹಾಗೂ ಇದಕ್ಕೆ ಪೂರಕವಾಗಿ ಪೋರ್ಚುಗೀಸರು ಬಿಜಾಪುರದ ಸುಲ್ತಾನರ

ವಿರುದ್ಧ ವಿಜಯನಗರಕ್ಕೆ ಸಹಾಯಿಸಿದರು. ಅಳಿಯರಾಮರಾಯನನ್ನು ರಾಮರಾಜನೆಂದು ಕರೆದಿರುವ ಲೇಖಕರು, ಅವನ ರಾಜಕೀಯ ನೀತಿಯಿಂದ ಭಯಭೀತರಾದ ನೆರೆಯ ರಾಜ್ಯಗಳಾದ ಬಿಜಾಪುರ, ಗೊಲ್ಕೊಂಡ, ದೌಲಾತಾಬಾದ್ ಮತ್ತು ಬೀರಾರ್‌ನ ಸುಲ್ತಾನರು ಅವನ ವಿರುದ್ಧ ಒಟ್ಟಾಗಿ ಯುದ್ಧ ಸಾರಿ ವಿಜಯನಗರವನ್ನು ಸೋಲಿಸಿದರು ಹಾಗೂ ಇದು ಭಾರತದಲ್ಲಿ ನಡೆದ ಒಂದು ನಿರ್ಣಾಯಕವಾದ ಯುದ್ಧವಾಗಿದೆ ಎಂದು ಬಣ್ಣಿಸಿದ್ದಾರೆ. ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಕೆನರಾದ ನಾಯಕರು ಸ್ಥಳೀಯವಾಗಿ ಎಲ್ಲಾ ಅಧಿಕಾರವನ್ನು ಹೊಂದಿದ್ದು, ಕಂದಾಯ ವಸೂಲಿ ಮಾಡುತ್ತಿದ್ದರು. ಸಾಮಾಂತರು ತಾವು ಹೊಂದಿದ್ದ ಭೂಮಿಗೆ ತೆರಿಗೆ ವಿನಾಯಿತಿಯನ್ನು ಹೊಂದಿದ್ದು ಕಂದಾಯವನ್ನು ಸ್ಥಳೀಯವಾಗಿದ್ದ ಇಬ್ಬರು ಗವರ್ನರ್‌ಗಳಿಗೆ ನೀಡುತ್ತಿದ್ದರು. ಇಬ್ಬರು ಗವರ್ನರುಗಳಲ್ಲಿ ಒಬ್ಬ ಬಾರಕೂರಿನಲ್ಲಿದ್ದ ರಾಯರು ಹಾಗೂ ಮತ್ತೊಬ್ಬ ಮಂಗಳೂರಿನಲ್ಲಿದ್ದ ಒಡೆಯರ್ ಆಗಿದ್ದರೆಂದು ಲೇಖಕರು ತಿಳಿಸಿದ್ದಾರೆ.[42]

ಲೇಖಕರು ವಿಜಯನಗರ ಕಾಲದ ಸ್ಥಳೀಯ ನಾಯಕರ ಬಗ್ಗೆ ಚರ್ಚಿಸುತ್ತಾ ಬೈರರಸು ಒಡೆಯರು ಸ್ಥಳೀಯ ಅರಸರಲ್ಲಿ ಪ್ರಮುಖರಾಗಿದ್ದು ಅವರ ಹಲವು ಕಲಾತ್ಮಕ ಸ್ಮಾರಕಗಳು ಇವತ್ತಿಗೂ ಅವರ ಇರುವಿಕೆಗೆ ಸಾಕ್ಷಿಯಾಗಿದ್ದು, ಕ್ರಿ.ಶ.15ನೇ ಶತಮಾನದಲ್ಲಿ ಕಾರ್ಕಳ ಮತ್ತು ವೇಣೂರುನಲ್ಲಿ ಸ್ಥಾಪನೆಯಾದ ಎರಡು ಏಕಶಿಲಾ ಮೂರ್ತಿಗಳಿವೆ. ಲೇಖಕರು ಹೇಳುವ ಕಾರ್ಕಳ ಶಾಸನದಂತೆ ಇದನ್ನು ಬೈರೇಂದ್ರನ ಮಗನಾಗಿದ್ದ ವೀರ ಪಾಂಡ್ಯನು ಕ್ರಿ.ಶ.1431ರಲ್ಲಿ ರಚಿಸಿರಬೇಕೆಂದು, ಜಕ್ಕಣ್ಣ ಆಚಾರ್ಯರು ಇದರ ಶಿಲ್ಪಿಯಾಗಿದ್ದು, ನಂತರ ಅವರ ಬಲಗೈಯನ್ನು ತುಂಡರಿಸಲಾಯಿತು ಎಂದಿದ್ದಾರೆ. ಕ್ರಿ.ಶ.15ನೇ ಶತಮಾನದಲ್ಲಿ ರಾಜರ ಆಳ್ವಿಕೆ ಮುಗಿದು ಕೊನೆಯ ಬೈರರಸು (ರಾಜ) ಸಾಮ್ರಾಜ್ಯವನ್ನು ತನ್ನ 7 ಮಂದಿ ಹೆಣ್ಣು ಮಕ್ಕಳಿಗೆ ಹಂಚಿದನು. ಅವುಗಳಲ್ಲಿ ಗೆರುಸೊಪ್ಪನಾಯಕರು ಪ್ರಮುಖರಾಗಿದ್ದರು. ಕೊನೆಗೆ ಇಕ್ಕೇರಿಯ ನಾಯಕರು ಇವರನ್ನು ಪಥನಗೊಳಿಸಿದರು. ಸೂಂಡಾದ ನಾಯಕರು ಕ್ರಿ.ಶ.16ನೇ ಶತಮಾನದಲ್ಲಿ ಉತ್ತರ ಕೆನರಾದಲ್ಲಿ ಆಳ್ವಿಕೆಗೆ ಬಂದಿದ್ದು ಅವರು ವಿಜಯನಗರದ ರಾಜನಾದ ಕೃಷ್ಣರಾಯನ ಸೋದರಳಿಯನಾದ ವೆಂಕಟಪ್ಪನಾಯಕನಿಂದ ಸ್ಥಾಪಿಸಲ್ಪಟ್ಟರು. ಇವರ ಕೊನೆಯ ಅರಸನಾದ ಸದಾಶಿವರಾಯನನ್ನು [1745-1782] ಹೈದಾರಾಲಿಯು ಗಡಿಪಾರು ಮಾಡಿದನು. ಲೇಖಕರು ಗುರುತಿಸಿರುವಂತೆ ಈ ನಾಯಕರಲ್ಲಿ ಕೆಲವರು ಪೋರ್ಚುಗೀಸರ ಭಾರತದ ಆಕ್ರಮಣದಲ್ಲಿ ಭಾಗಿಯಾಗಿರುವುದು ಒಂದು ಗಮನಾರ್ಹ ಸಂಗತಿಯಾಗಿದೆ.[43]

ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಇಕ್ಕೇರಿ ಅರಸರ ಆಳ್ವಿಕೆಯು ಸಂಭ್ರಮಿಸಿಕೊಂಡಿದೆ. ಯಾಕೆಂದರೆ ಅವರು ವಲಸೆ ಬಂದ ಕ್ರೈಸ್ತರಿಗೆ ಆಶ್ರಯನೀಡಿ, ಕ್ರೈಸ್ತರು ಕೆನರಾದಲ್ಲಿ ಬೆಳೆಯಲು ಕಾರಣರಾದರು. ಕ್ರಿ.ಶ.1565ರಿಂದ 1760ರವರೆಗೆ ಆಳ್ವಿಕೆನಡೆಸಿರುವ ಇವರು ಶಿವಭಕ್ತರಾಗಿದ್ದು, ಅವರ ಆಳ್ವಿಕೆಯ ಕಾಲದಲ್ಲಿನ ಆಸಕ್ತಿಯ ವಿಷಯವೆಂದರೆ ಒಂದು ದಿಕ್ಕಿನಲ್ಲಿ ಜೈನಧರ್ಮ ಪಥನವಾಗುತ್ತಿದ್ದರೆ,

ಇನ್ನೊಂದೆಡೆ ಕೆನರಾದಲ್ಲಿ ಕ್ರೈಸ್ತ ಧರ್ಮ ತೀವ್ರ ಹರಡುವಿಕೆ ಮತ್ತು ಬೆಳವಣಿಗೆಯನ್ನು ಕಂಡಿತು. ಇವರ ಪೂರ್ವಜರು ಕೆಳದಿ ಗ್ರಾಮದ ಪಟೇಲರಾಗಿದ್ದು ವಿಜಯನಗರದ ಕೈ ಕೆಳಗೆ ಕಾರ್ಯ ನಿರ್ವಹಿಸುತ್ತಿದ್ದು, 1560ರಲ್ಲಿ ಈ ವಂಶದ ಸದಾಶಿವ ಗೋವಿಂದನು, ಸದಾಶಿವರಾಯನಿಂದ ಗುತ್ತಿ, ಬಾರಕೂರು ಮತ್ತು ಮಂಗಳೂರನ್ನು ಪಡೆದು ಸದಾಶಿವ ನಾಯಕ ಎಂಬ ಬಿರುದಿನೊಂದಿಗೆ ಅಧಿಕಾರಕ್ಕೆ ಬಂದನು. ಲೇಖಕರು ಈ ವಂಶದ ರಾಜರ ಪಟ್ಟಿ ವಂಶಾವಳಿಯನ್ನು ನೀಡಿದ್ದಾರೆ.

- ಬಸಪ್ಪ ಗೋವಿಂದ
  - ಸದಾಶಿವ.1560
    - ದೊಡ್ಡಶಂಕರ 1585
      - ವೆಂಕಟಪ್ಪ 1604
        - ಬದ್ರಪ್ಪ –I 1626
          - ಬದ್ರಪ್ಪ –II 1637
    - ಚಿಕ್ಕಶಂಕರ 1596
      - ಸಿದ್ದಪ್ಪ 1603 (Sidappa)
        - ಶಿವಪ್ಪ1649
          - ಬದ್ರಪ್ಪ III 1671
            - ಸೋಮಶೇಖರ I 1681 = ದೊಡ್ಡ ಚೆನ್ನಮ್ಮಾಜಿ [ಚಿನ್ಮಾಜಿ] 1686
              - ಬಸಪ್ಪ I, ಚೆನ್ನಾಜಿ ದತ್ತು ಪಡೆದದ್ದು 1698
                - ಸೋಮಶೇಕರ II 1714
                - ವೀರಮ್ಮಾಜಿ
                  - ಬೂದಿ ಬಸಪ್ಪ II 1740=ವೀರಮ್ಮಾಜಿ
                    - ದತ್ತುಸ್ವೀಕಾರ
  - ಬದ್ರಪ್ಪ.1576

1) ಚೆನ್ನ ಬಸಪ್ಪ III– 1753 2)ಸೋಮಶೇಖರ III 1755

ಬಿದನೂರು ವಂಶದಲ್ಲಿ ವೆಂಕಟಪ್ಪನಾಯಕ ಮತ್ತು ಶಿವಪ್ಪನಾಯಕರು ಪ್ರಮುಖರೆಂದು ಹೇಳಿರುವ ಲೇಖಕರು, ವೆಂಕಟಪ್ಪನಾಯಕನು ಭಟ್ಕಳದ ಜೈನರಾಣಿಯಾದ ಬೈರದೇವಿಯನ್ನು ಸೋಲಿಸಿ, ವಿಜಯನಗರದ ಪಥನದ ನಂತರ ಸ್ವತಂತ್ರರಾಗಿ ಮೆರೆಯುತ್ತಿದ್ದ ಕೆನರಾದ ಜೈನ ನಾಯಕರುಗಳನ್ನು ಸೋಲಿಸಿ, ಅವರ ನಗರಗಳಾದ ಕಾರ್ಕಳ, ಬಾರ್ಕೂರು ಮತ್ತು ಮೂಡಬಿದ್ರೆಗಳನ್ನು ನಾಶಪಡಿಸಿದನು. ಶಿವಪ್ಪ ನಾಯಕನು ಸ್ಥಳೀಯ ಅರಸರನ್ನು ಸದೆ ಬಡಿಯುವ ಕೆಲಸವನ್ನು ಮುಂದುವರಿಸಿ, ಹಲವು ಕೋಟೆಗಳನ್ನು ಕಟ್ಟಿ ಸೈನಿಕ ಶಕ್ತಿಯನ್ನು ಹೆಚ್ಚಿಸಿದನು. ಈತ ಪ್ರಮುಖವಾಗಿ ಕಾಸರಗೋಡು ತಾಲೂಕಿನ ಕರಾವಳಿಯಲ್ಲಿ ಕೋಟೆಗಳನ್ನು ಕಟ್ಟಿಸಿದನು. ಈ ಇಬ್ಬರೂ ಅರಸರ ಕಾಲದಲ್ಲಿ ಪೋರ್ಚುಗೀಸರರೊಂದಿಗೆ ಒಪ್ಪಂದಗಳಾಗಿ, ಅವರಿಗೆ ಕೆನರಾದಲ್ಲಿ ಹಲವು ವ್ಯಾಪಾರ ಸವಲತ್ತುಗಳನ್ನು ಒದಗಿಸಲಾಯಿತು. ಗೋವಾದ ಪಾದ್ರಿಗಳಿಗೆ ಇಲ್ಲಿ ಚರ್ಚುಗಳನ್ನು ಕಟ್ಟಲು ಅನುಮತಿ ನೀಡಲಾಯಿತು. ಇದು ಮುಂದೆ ಕ್ರೈಸ್ತ ಸಮುದಾಯ ಈ ಪ್ರದೇಶದಲ್ಲಿ ಬೆಳೆಯಲು ಕಾರಣವಾಯಿತು.[44]

ಗೋವಾದಿಂದ ವಲಸೆ ಬಂದ ಕ್ರೈಸ್ತರು ಅವರ ಬುದ್ಧಿವಂತಿಕೆ ಮತ್ತು ನೈಪುಣ್ಯತೆಯಿಂದಾಗಿ, ಬಹುಬೇಗ ಜೀವನದ ಎಲ್ಲಾ ದಾರಿಯಲ್ಲೂ ಮುನ್ನಡೆಯನ್ನು ಸಾಧಿಸಿದರು. ಲೇಖಕರು ವಿವರಿಸಿರುವಂತೆ ವೆಂಕಟಪ್ಪನಾಯಕ ಆರಂಭಿಸಿದ ಸಂಪ್ರದಾಯದಂತೆ ಆತ ಕ್ರಿಶ್ಚಿಯನ್ ಅಂಗ ರಕ್ಷಕರ ರೆಜಿಮೆಂಟ್ (Regiment) ನ್ನು ರಚಿಸಿದ್ದು, ಅವರನ್ನು ಹೆಚ್ಚು ಧೈರ್ಯಶಾಲಿ ಹಾಗೂ ನಂಬಿಗಸ್ತ ಜನರೆಂದು ಕರೆದಿದ್ದಾನೆ. ಕ್ರಿ.ಶ.1623ರಲ್ಲಿ ಕೆನರಾಕ್ಕೆ ಭೇಟಿನೀಡಿದ್ದ ಇಟಲಿಯ ಯಾತ್ರಿಕ ಡೆಲ್ಲಾ ವೆಲ್ಲಿ ಹಾಗೂ ಕ್ರಿ.ಶ.1670ರಲ್ಲಿ ಕೆನರಾಕ್ಕೆ ಬಂದಿದ್ದ ಇಂಗ್ಲೀಷ್ ಯಾತ್ರಿಕ ಫ್ರಯರ್‌ರವರ ದಾಖಲೆಗಳಿಂದ ತಿಳಿಯುವುದೆನೆಂದರೆ, ಕೆಳದಿಯ ಕಾಲದಲ್ಲಿ ದೇಶವು ಸಂಪತ್ಭರಿತವಾಗಿತ್ತು ಮತ್ತು ಅವರು ಜನರ ಜೀವನ ಮತ್ತು ಸಂಪತ್ತಿಗೆ ಭದ್ರತೆಯನ್ನು ಒದಗಿಸಿದರು ಎಂದಿದ್ದಾರೆ. ಶಿವಪ್ಪನಾಯಕನ ಮರಣದ ನಂತರ ಬಿದನೂರು ರಾಜವಂಶವು ಪಥನದ ದಾರಿಯನ್ನು ಹಿಡಿಯಿತು ಹಾಗೂ ಕ್ರಿ.ಶ.1760ರಲ್ಲಿ ಹೈದರಾಲಿಯು ಅದನ್ನು ವಶಪಡಿಸಿಕೊಂಡನೆಂದು ಲೇಖಕರು ತಿಳಿಸಿದ್ದಾರೆ.[45] ಲೇಖಕರು ವಿವರಿಸಿದಂತೆ ಹೈದರಾಲಿಯು ಬಿದನೂರನ್ನು ಆಕ್ರಮಿಸಿದ್ದು 1760ರಲ್ಲಿ. ಆದರೆ ನೈಜವಾಗಿ ಅದು 1763ರಲ್ಲಾಗಿದೆ[46]. ಈ ರೀತಿ ಲೇಖಕರು ಇಕ್ಕೇರಿಯ ನಾಯಕರನ್ನು ಕ್ರೈಸ್ತ ಧರ್ಮದ ಪೋಷಕರನ್ನಾಗಿ ಬಿಂಬಿಸಿದ್ದಾರೆ. ಅದೇ ರೀತಿ ಇಲ್ಲಿ ವಿವರಿಸಲೇ ಬೇಕಾದ ಅಂಶವಾದ, ಯಾಕೆ ಕ್ರೈಸ್ತರು ಪೋರ್ಚುಗೀಸ್ ಪ್ರದೇಶವಾದ ಗೋವಾದಿಂದ ನಿರಾಶ್ರಿತರಾಗಿ ಕೆನರಾಕ್ಕೆ ವಲಸೆ ಬಂದರು ಎಂಬ ಪ್ರಮುಖ ಪ್ರಶ್ನೆಯ ಬಗ್ಗೆ ಲೇಖಕರಾದ ಜೆ.ಎ. ಸಲ್ದಾನರು ಮೌನ ವಹಿಸಿದ್ದಾರೆ ಎಂದು ಡೆನ್ನಿಸ್ ಫೆರ್ನಾಂಡೀಸ್ ಪ್ರಶ್ನಿಸಿದ್ದಾರೆ.[47] ಕ್ರೈಸ್ತರು ಪೋರ್ಚುಗೀಸರ ಮತೀಯ ವಿಚಾರಣೆ ಹಾಗೂ ದಬ್ಬಾಳಿಕೆ, ಸಾಮಾಜಿಕ ನೀತಿ, ಆರ್ಥಿಕ ಬಿಕ್ಕಟ್ಟು, ನಿರಂತರವಾದ ಯುದ್ಧಗಳು,

ಜನಸಂಖ್ಯೆ ಸಮಸ್ಯೆ ಹಾಗೂ ಇತರ ಕಾರಣಗಳಿಂದಾಗಿ ಅವರು ಉತ್ತಮ ಪ್ರದೇಶವನ್ನು ಅರಸಿಕೊಂಡು ವಲಸೆ ಹೋದರು. ಈ ರೀತಿ "ಕ್ರೈಸ್ತರು ನಿರ್ದಿಷ್ಟವಾಗಿ ಗೋವಾದಿಂದ ಬಂದದ್ದು ಸಂಪೂರ್ಣವಾಗಿ ಸ್ವಯಂ ಪ್ರೇರಿತವಾಗಿ ಅಲ್ಲ ಅಥವಾ ಸಂಪೂರ್ಣವಾಗಿ ಶಾಂತಿಯುತವಾಗಿಯೂ ಅಲ್ಲ".[48]

ಹೈದರ್, ಬಿದನೂರನ್ನು, ನಂತರ ಸೊಂಡಾವನ್ನು ಆಕ್ರಮಿಸಿ ವೇಗವಾಗಿ ಕೆನರಾದ ಮೇಲೆ ಹತೋಟಿ ಸಾಧಿಸಿದನು. ನಂತರ ಆತ ಮಂಗಳೂರು ಮತ್ತು ಭಟ್ಕಳ ಬಂದರುಗಳಲ್ಲಿ ತನ್ನ ನೌಕೆಗಳನ್ನು ಕಟ್ಟಲು ಆರಂಭಿಸಿ, ಅದಕ್ಕೆ ಬೇಕಾದ ಮರಗಳನ್ನು ಉತ್ತರ ಕೆನರಾದಿಂದ ತರಿಸಿದ ಎಂಬುದಾಗಿ ವಿವರಿಸಿರುವ ಲೇಖಕರು, ಟಿಪ್ಪುವಿನ ಬಗ್ಗೆ ತನ್ನ ಕ್ರೋಧವನ್ನು ಪ್ರಾರಂಭದಿಂದಲೇ ಹೊರಗೆಡವಿದ್ದಾರೆ. ಟಿಪ್ಪು ಮ್ಯಾಂಗಲೋರ್ ಮ್ಯಾಗಜೀನ್‌ನ ಸಂಪುಟಗಳುದ್ದಕ್ಕೂ ವಿವಿಧ ಲೇಖಕರಿಂದ ಖಂಡನೆಗೆ ಒಳಗಾಗಿದ್ದಾನೆ. ಇವುಗಳೆಲ್ಲದರ ಹಿನ್ನಲೆ ಆತ ಕ್ರೈಸ್ತರ ಮೇಲೆ ನಡೆಸಿದ ಎನ್ನಲಾದ ದೌರ್ಜನ್ಯವಾಗಿದ್ದು, ಲೇಖಕರಿಂದ ತಕ್ಕ ಶಾಸ್ತಿ ಮಾಡಿಸಿ ಕೊಂಡಂತ್ತಾಗಿದೆ. ಹೈದರ್ ಮತ್ತು ಟಿಪ್ಪು, ಬ್ರಿಟಿಷರು ಮತ್ತು ನೆರೆಯ ರಾಜ್ಯಗಳೊಂದಿಗಿನ ಯುದ್ಧಗಳಿಂದಾಗಿ ಅಪಾರವಾದ ಸೈನ್ಯವನ್ನು ಇಟ್ಟುಕೊಂಡಿದ್ದರು. ಅವರ ಯುದ್ಧಗಳಿಗಾಗುವ ಅಪಾರ ವೆಚ್ಚವನ್ನು ಬರಿಸಲು ಅವರು ಜನರ ಮೇಲೆ ಅತೀ ಹೆಚ್ಚು ಮೊತ್ತದ ತೆರಿಗೆಗಳನ್ನು ವಿಧಿಸಿದ್ದರು. ಇದರೊಂದಿಗೆ ವಿಜಯನಗರ ಮತ್ತು ಬಿದನೂರು ಅರಸರ ಕಾಲದಲ್ಲಿ ಕ್ರಿಶ್ಚಿಯನರು, ಜೈನರು ಮತ್ತು ಬ್ರಾಹ್ಮಣರು ಪಡೆದು ಅನುಭವಿಸಿದ ಸಂಪತ್ತನ್ನು ದೋಚಿದರು. "ಇವರ ಅತಿಯಾದ ವಿದೇಶಾಂಗ ನೀತಿಯಿಂದ ಭಾರತದ ಒಂದು ಸಂಪತ್ಭರಿತ ಹಾಗೂ ಸಂತೋಷದ ಜಿಲ್ಲೆಯಾದ ಕೆನರಾವು ಬಹುಬೇಗನೇ ಒಂದು ಹಿಂದುಳಿದ ಹಾಗೂ ಅತೃಪ್ತಿಯ ಜಿಲ್ಲೆಯಾಯಿತು. ಟಿಪ್ಪು ತನ್ನ ತಂದೆಯ ಅತೀ ದುರಾಶೆಯ ಲಕ್ಷಣಗಳಿಗೆ ಕ್ರೂರತ್ವ, ಸ್ವಮತಾಭಿಮಾನ ಮತ್ತು ಅಸಹಿಷ್ಣುತೆಯನ್ನು ಸೇರಿಸಿಕೊಂಡನು. ವೈರ ಸಾಧಕ, ಧರ್ಮಾಂಧನಾಗಿದ್ದ ಟಿಪ್ಪು ತನ್ನ ಪ್ರತೀಕಾರ ಮತ್ತು ಬ್ರಿಟಿಷ್ ವಿರೋಧಿ ಅಂಶಕ್ಕೆ ಆತ ಕೆನರಾದ ಕ್ರೈಸ್ತರನ್ನು ಆರಿಸಿಕೊಂಡನು." [49] ಎಂದು ಹೇಳುತ್ತಾ ಟಿಪ್ಪುವನ್ನು ಕಟುವಾಗಿ ಲೇಖಕರು ಖಂಡಿಸಿದ್ದಾರೆ.

ಟಿಪ್ಪು ಅನುಮಾನಿಸಿದಂತೆ, ಕ್ರೈಸ್ತರ ಸಹಾಯದಿಂದ ಬ್ರಿಟಿಷರು ಕೆನರಾದ ಮೇಲೆ ಸುಲಭವಾಗಿ ಕಾಲೂರಿದರು. ಇದಕ್ಕಾಗಿ ಆತ ಅವರನ್ನು ಕ್ರೂರ ಮತ್ತು ಕಠೋರ ರೀತಿಯಲ್ಲಿ ಶಿಕ್ಷಿಸಲು ನಿರ್ಧರಿಸಿದನು. ಲೇಖಕರು ಚರ್ಚಿಸಿದಂತೆ 1784ರಲ್ಲಿ ಬ್ರಿಟಿಷರು ಕೆನರಾದಿಂದ ಹೊರನಡೆದ ಮೇಲೆ ಆತ ಕ್ರೈಸ್ತರ ಒಂದು ಗುಪ್ತವಾದ ಲೆಕ್ಕಾಚಾರ ಮಾಡಿಸಿದನು. ನಂತರ ಮುದ್ರಿತ ಆಜ್ಞೆಗಳನ್ನು ಜಿಲ್ಲೆಯ ವಿವಿಧ ಭಾಗಗಳ ಸೈನಿಕರಿಗೆ ಕಳುಹಿಸಿ, ಅವನ್ನು ಯಾವಾಗ ತೆರೆಯಬೇಕೆಂದು ಹೇಳಿ ಕಳುಹಿಸಿ, 60,000 (?) ರಷ್ಟು ಕ್ರೈಸ್ತರನ್ನು ಬಂಧಿಸಿ ಶ್ರೀರಂಗ ಪಟ್ಟಣಕ್ಕೆ ಕಳುಹಿಸಿದನು. ಈ ರೀತಿ ಶ್ರೀರಂಗಪಟ್ಟಣ ತಲುಪಿದವರನ್ನು 500ರ ಪಂಗಡಗಳಾಗಿ ಮಾಡಿ, ಮುಸ್ಲಿಂ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಪ್ರತಿಯೊಂದು ತಂಡವನ್ನು ಹಂಚಿದನು. ಕೆಲವರನ್ನು ಆಡಳಿತಾತ್ಮಕ ಸೇವೆಗಾಗಿ ನೇಮಿಸಲಾಯಿತು. ಆದರೆ ಪ್ರತೀಕಾರದ ದಿನ ಬಹುಬೇಗ

ಬಂದೋದಗಿ ಮೇ 4, 1799 ರಂದು ವಿದ್ರೋಹಕ ಹಾಗೂ ಕ್ರೂರ ರಾಜ ತಕ್ಕುದಾದ ಮರಣವನ್ನು ಕಂಡನು ಎಂದು ಲೇಖಕರು ವಿವರಿಸಿದ್ದಾರೆ.

ಟಿಪ್ಪುವಿನ ಮರಣವು ಈ ಪ್ರದೇಶದ ಅಭಿವೃದ್ಧಿಗೆ ಕಾರಣವಾಯಿತು ಹಾಗೂ ಹೊಸ ಆಧುನಿಕ ಯುಗಕ್ಕೆ ನಾಂದಿಯಯಿತು ಎಂಬುದನ್ನು ಲೇಖಕರು ಬಹಳ ಸವಿಸ್ತಾರವಾಗಿ ವಿವರಿಸಿದ್ದಾರೆ. ಶ್ರೀರಂಗ ಪಟ್ಟಣದ ಪಥನದ ನಂತರ ಕರ್ನಲ್ ವೆಲ್ಲೆಸ್ಲಿಯನ್ನು ಮುಖ್ಯಸ್ಥನನ್ನಾಗಿ ನೇಮಿಸಲಾಯಿತು ಹಾಗೂ ಇಲ್ಲಿ ಶಾಂತಿ ಸುವ್ಯವಸ್ಥೆ ಸ್ಥಾಪಿಸುವ ಜವಾಬ್ದಾರಿ ನೀಡಲಾಯಿತು. ಆತ ಅದನ್ನು ಸರಿಯಾಗಿ ನಿರ್ವಹಿಸಿ, ಟಿಪ್ಪುವಿನ ಕ್ರೂರತನಕ್ಕೆ ಬಲಿಯಾದವರಿಗೆ ಸರಿಯಾದ ನ್ಯಾಯ ಒದಗಿಸುವಂತೆ ಮಾಡಿದನು. 60,000(?) ಬಂಧಿತ ಕ್ರೈಸ್ತರಲ್ಲಿ ಈ "ಕರುಣೆಯುಳ್ಳ ಆಳ್ವಿಕೆ"ಯ ಲಾಭ ಪಡೆಯಲು ಕೆಲವರೇ ಉಳಿದಿದ್ದರು. ಹಲವರು ಕಠಿಣ ಪಯಣದ ಸಂದರ್ಭದಲ್ಲಿ, ಕೆಲವರು ಬಂಧನದ ಸಂದರ್ಭದಲ್ಲಿ ಬಲಿಯಾದರೆ, ಇನ್ನೂ ಕೆಲವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಬಿಡುಗಡೆ ಹೊಂದಿದ ಕೆಲವರು ಅವರ ನಾಡಿನವರನ್ನು ಸೇರಲು ನಾಚಿಗೆ ಪಟ್ಟರೆ, ಉಳಿದವರು ಅವರ ನಾಶವಾಗಿರುವ ಚರ್ಚುಗಳ ಮರು ನಿರ್ಮಾಣ ಮಾಡಲು ಕೆನರಾಕ್ಕೆ ಮರಳಿದರು[50] ಎಂದು ಕ್ರೈಸ್ತರ ಬಿಡುಗಡೆಯ ದಿನಗಳ ಬಗ್ಗೆ ಲೇಖಕರು ಮನಮುಟ್ಟುವಂತೆ ವಿವರಿಸಿದ್ದಾರೆ.

ಪದೇ ಪದೇ ಅರಸರುಗಳ ಬದಲಾವಣೆ ಹಾಗೂ ಪ್ರತೀ ಅರಸರುಗಳ ಮನಬಂದಂತಹ ಆಡಳಿತವು ಜನರನ್ನು ಸಂಕಷ್ಟಕ್ಕೀಡುಮಾಡಿತ್ತು. ನಿರ್ಧಿಷ್ಟ ನಿಯಮಗಳಿರದೆ ಸ್ವೆಚ್ಛೆಯಿಂದ ಕೂಡಿದ ಒಬ್ಬೊಬ್ಬರ ಆಳ್ವಿಕೆಯು ಜನರನ್ನು ವರ್ಣಿಸಲು ಅಸಾಧ್ಯವಾದ ತೊಂದರೆಗೆ ಒಳಪಡಿಸಿದೆ ಎಂಬ ವಸಾಹತುಶಾಹಿ ದೋರಣೆಯನ್ನು ಲೇಖಕರು ಇಲ್ಲಿಯೂ ಪ್ರತೀಪಾದಿಸಿದ್ದಾರೆ. ಇಲ್ಲಿ ಒಬ್ಬ ಸಮರ್ಥ ದೊರೆಯನಂತರ ಮತ್ತೊಬ್ಬ ದುರಾಶೆಯ, ವಿಷಯಲಂಪಟ ಹಾಗೂ ಆಲಸಿ ದೊರೆಯು ಆಳ್ವಿಕೆಗೆ ಬರುತ್ತಾನೆ. "ಭಾರತಕ್ಕೆ ಈಗ ಅಗತ್ಯವಾಗಿರುವುದೇನೆಂದರೆ ಅದರ ಅಸಂಖ್ಯಾತ ಪಂಗಡ, ಸಮುದಾಯ, ಜಾತಿ, ಪಂಥ ಮತ್ತು ಧರ್ಮಗಳಿಗೆ ವಿದೇಶಿ ಆಕ್ರಮಣದಿಂದ ರಕ್ಷಣೆ ನೀಡುವಂತಹ, ಅದು ಎಲ್ಲರಿಗೂ ಸಮಾನವಾದ ನ್ಯಾಯದಾನ ಹಾಗೂ ಜೀವನಕ್ಕೆ, ಸಂಪತ್ತಿಗೆ ಮತ್ತು ಮುಕ್ತವಾಗಿ ಅವರ ಧರ್ಮ ಪಾಲನೆಗೆ ಅವಕಾಶ ಕಲ್ಪಿಸುವ ಕೇಂದ್ರಿಕೃತ ಆಡಳಿತ" ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಮುಂದುವರಿದು "ಈ ರೀತಿ ಸರಕಾರವನ್ನು ಒದಗಿಸಲು ಭಾರತಕ್ಕೆ ಸಾಧ್ಯವಿದೆಯೇ" ಎನ್ನುತ್ತಾ ಇಲ್ಲಿ ಶ್ರೇಷ್ಠ ಹಾಗೂ ಚತುರ ಅರಸರು ಹುಟ್ಟಿದ್ದು, ಅಕ್ಬರ್ ನಂತರ ಔರಂಗಜೇಬ್ ಆಳಿದ್ದು, ಶ್ರೇಷ್ಠವೀರ ಶಿವಾಜಿಯ ನಂತರ ವಿಷಯಲಂಪಟ ಆಲಸೀ ಮತ್ತು ಕ್ರೂರ ಸಂಭಾಜಿ ಆಳ್ವಿಕೆ ನಡೆಸಿದನು.[51] ಭಾರತೀಯ ಅರಸರು ಸುಭದ್ರ ಆಳ್ವಿಕೆ ನೀಡುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಭಾರತಕ್ಕೆ ವಿದೇಶಿ ಆಳ್ವಿಕೆಯ ಅಗತ್ಯವಿದೆ. ಆದರೆ ಎಲ್ಲಾ ಯುರೋಪಿನ ರಾಷ್ಟ್ರಗಳು ಸುಭದ್ರ ಆಳ್ವಿಕೆ ನೀಡಲು ಶಕ್ತರಾಗಿಲ್ಲ. ರಷ್ಯದ ಆಳ್ವಿಕೆಯು ಔರಂಗಜೇಬ್ ಮತ್ತು ಟಿಪ್ಪುವಿನ ಆಳ್ವಿಕೆಗೆ ಸಮವಾಗಿದ್ದು, ಫ್ರಾನ್ಸ್ ಉತ್ತಮ ಆಳ್ವಿಕೆ ಒದಗಿಸಲು ಶಕ್ತವಾಗಿದ್ದರೂ, ಅದು

ಭಾರತವನ್ನು ಆಕ್ರಮಿಸುವ ಅವಕಾಶ ಕಳಕೊಂಡಿತೆಂದು ಲೇಖಕರು ಬಣ್ಣಿಸಿದ್ದಾರೆ. ಕೆಥೊಲಿಕ್ ಪಂಥಕ್ಕೆ ಸೇರಿದ ಫ್ರಾನ್ಸ್‌ನ ಆಡಳಿತ, ಆ್ಯಂಗ್ಲಿಕನ್ ಚರ್ಚ್‌ಗೆ ಸೇರಿದ ಬ್ರಿಟಿಷ್‌ರ ಆಳ್ವಿಕೆಗಿಂತ ಹೆಚ್ಚು ಸೂಕ್ತವೆಂಬುದೇ ಲೇಖಕರ ಅಭಿಪ್ರಾಯ. ಆದರೆ ಭಾರತದಲ್ಲಿ ಹಾಗಾಗಲಿಲ್ಲ. ಸೂರ್ಯ ಮುಳುಗದಿರುವ ನಾಡಗಿರುವ ಇಂಗ್ಲೇಂಡ್ ಸ್ವಾತಂತ್ರ್ಯ ಮತ್ತು ಸಂವಿಧಾನಿಕ ಸರಕಾರವನ್ನು ಶತಮಾನದಿಂದ ಅನುಭವಿಸುತ್ತಿದ್ದು, ಅದು ಹೋದ ಕಡೆ ತನ್ನ ಧ್ವಜದ ಜೊತೆಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಯಶಸ್ವಿನ ಹುಮ್ಮಸನ್ನು ಭಿತ್ತಿ, ಇಲ್ಲಿ ಭಾರತದ ನೆಮ್ಮದಿಗಾಗಿ ದುಡಿಯುತ್ತದೆ. ಹೀಗೆ ಮೇ4, 1799 ರಂದು ಕೆನರಾ ಇಂಗ್ಲೇಂಡ್‌ನ ವಶವಾಗಿ, ಅವರ ಚತುರ ಆಳ್ವಿಕೆಯನ್ನು ಅನುಭವಿಸುತ್ತಾ, ದಶಕಗಳ ಕಾಲ ಶಾಂತಿ, ಸ್ಥಿರ ಅಭಿವೃದ್ಧಿ ಹಾಗೂ ಸಮೃದ್ಧಿಯನ್ನು ಕಂಡಿತು ಎನ್ನುತ್ತಾ "ನಾವು ಈ ದಶಕದ (1899) ಸಂಭ್ರಮವನ್ನು ಹಾಡಿ ಸಂಭ್ರಮಿಸಬೇಕೆಂದು" ಹೇಳಿರುವ[52] ಲೇಖಕರು ವಸಾಹತುಕಾಲವನ್ನು ಅಪಾರವಾಗಿ ಮೆಚ್ಚಿ ಅದನ್ನು ವೈಭವಪೂರಿತ ಯುಗವೆಂಬಂತೆ ಹೊಗಳಿದ್ದಾರೆ.

ಮೇ 4, 1799 ಶ್ರೀರಂಗಪಟ್ಟಣದ ಪತನದ ನಂತರ ಪ್ರಾರಂಭದ ಕೆಲವು ತಿಂಗಳು ಮೇಜರ್ (ಸರ್) ಥೋಮಸ್ ಮುನ್ರೋ ಕೆನರಾ ಜಿಲ್ಲೆಯಲ್ಲಿ ಶಾಂತಿ ಕಾಪಾಡಲು ಶ್ರಮಿಸಿದನು. ಕೆಲವೊಂದು ಶಾಂತಿ ಕದಡುವಂತಹ ಘಟನೆಗಳು ನಡೆದಿದ್ದು ಅವುಗಳನ್ನು ಪ್ರಾರಂಭದಲ್ಲಿ ಆಳ್ವಿಕೆ ಮಾಡಿರುವ ಸರಕಾರಗಳ ಜೊತೆ ಸಂಪರ್ಕ ಕಲ್ಪಿಸಲಾಗಿದೆ. ನಾಲ್ಕನೇಯ ಆಂಗ್ಲೋ-ಮೈಸೂರು ಯುದ್ಧದ ಸಂದರ್ಭದಲ್ಲಿ ಕೆನರಾದ ಸ್ಥಳೀಯ ನಾಯಕರಾದ ವಿಠ್ಠಲದ ಹೆಗ್ಗಡೆ, ಕುಂಬಳೆ ಮತ್ತು ನೀಲೇಶ್ವರದ ಅರಸರು ಮತ್ತು ಬಂಗಾರ್ (Bangar) ರಾಜರು ಅರಾಜಕತೆಯ ಲಾಭಪಡೆದು, ಸಶಸ್ತ್ರದಂಗೆ ಎದ್ದು, ಬಿದನೂರು ಮತ್ತು ಮೈಸೂರು ಸರಕಾರದ ಕಾಲದಲ್ಲಿ ಅವರು ಕಳೆದುಕೊಂಡ ಸ್ಥಾನಮಾನವನ್ನು ಮರುಪಡೆಯಲು ಪ್ರಯತ್ನಿಸಿದರು ಹಾಗೂ ದೇಶವನ್ನು ಸೊರೆಗೈದರು. ಕೊಡಗು ಕೂಡಾ ಇದರ ಲಾಭ ಪಡೆದು ಘಟ್ಟದ ಕೆಳಭಾಗಗಳ ಮೇಲೆ ದಾಳಿಮಾಡಿತು. ಬಂಗೇರ್ (Bangar) ರಾಜನನ್ನು ಬಹುಬೇಗ ಬಂಧಿಸಿ ನೇಣಿಗೆ ಹಾಕಲಾಯಿತು. ಆದರೆ ವಿಠ್ಠಲದ ಹೆಗ್ಗಡೆ, ತಿಮ್ಮನಾಯಕ ಮತ್ತು ಸುಬ್ಬರಾವ್ ಜೊತೆಗೂಡಿ ಜಮಾಲಾಬಾದ್, ಬಂಟ್ವಾಳ ಮತ್ತು ಉಪ್ಪಿನಂಗಡಿಯನ್ನು ಆಕ್ರಮಿಸಿದರು. ಈ ಎಲ್ಲಾ ಪ್ರತಿರೋದಗಳನ್ನು ಕೆಲವೇ ತಿಂಗಳುಗಳಲ್ಲಿ ಹತ್ತಿಕ್ಕಿ ಕ್ರಿ.ಶ.1800ರಲ್ಲಿ ದೇಶದಲ್ಲಿ (ಕೆನರಾ) ಶಾಂತಿ ಮತ್ತು ಸ್ಥಿರ ಬೆಳವಣಿಗೆಯ ಶಕ ಆರಂಭವಾಯಿತು ಎಂದು ಲೇಖಕರು ಬ್ರಿಟಿಷ್ ಆಳ್ವಿಕೆಯ ಬಗ್ಗೆ ಹೊಗಳಿ ಬರೆದಿದ್ದಾರೆ. ಕ್ರಿ.ಶ.1800ರಲ್ಲಿ ಮೇಜರ್ ಮುನ್ರೋ ಕೆನರಾ ತೊರೆದಾಗ ಜಿಲ್ಲೆಯನ್ನು ಆಡಳಿತಾತ್ಮಕ ಉದ್ದೇಶಗಳಿಗೋಸ್ಕರ ಎರಡು ಕಂದಾಯ ಜಿಲ್ಲೆಗಳಾಗಿ [Revenue districts] ವಿಭಜಿಸಲಾಯಿತು. ಕ್ರಿ.ಶ.1817ರಲ್ಲಿ ಅವುಗಳನ್ನು ಮತ್ತೆ ಒಗ್ಗೂಡಿಸಿ ಮದ್ರಾಸ್ ಪ್ರಾಂತ್ಯದಲ್ಲಿ ಮುಂದುವರಿಸಲಾಯಿತು. ಆದರೆ 1862ರಲ್ಲಿ ಉತ್ತರ ಕೆನರಾವನ್ನು ಬಾಂಬೆ ಪ್ರಾಂತ್ಯಕ್ಕೆ ವರ್ಗಾಯಿಸಲಾಯಿತು.[53]

ಲೇಖಕರು ಡಾ। ಬುಕನಾನ್‌ರ ಆಸಕ್ತಿಯ ವರದಿಯನ್ನು ಚರ್ಚಿಸುತ್ತಾ, ಇದರಿಂದ ಕೆನರಾದ 19ನೇ ಶತಮಾನದ ಪ್ರಾರಂಭದ ನೈಜ ಚಿತ್ರಣ ದೊರೆಯುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅದರಂತೆ ಟಿಪ್ಪುವಿನ ಕಾಲದಲ್ಲಿ ಜನರಿಗೆ ಅತೀ ಹೆಚ್ಚು ಹೊರೆಯಾಗುವ ತೆರಿಗೆಗಳು, ಕೊಡಗು ಹಾಗೂ ಸ್ಥಳೀಯ ಅರಸರಾದ ಕಾಸರಗೋಡು, ಕಡಬ ತಾಲೂಕಿನ ಮತ್ತು ಮರಾಠರು, ಉತ್ತರ ಕೆನರಾದ ದರೋಡೆಕೋರರಾದ ಕೋಮರೈಪೈಕ್ ಮತ್ತು ಹಳೇಪೈಕರ ದೋಚಿಕೊಳ್ಳುವ ಧಾಳಿಗಳಿಂದ ದೇಶದಲ್ಲಿ ಎಲ್ಲೆಲ್ಲೂ ವಿನಾಶದ ಅಂಶಗಳಿದ್ದು, ಕೃಷಿ ಕಡೆಗಣಿಸಲ್ಪಟ್ಟಿತು ಎಂದಿದ್ದಾರೆ. ಟಿಪ್ಪು ಕರಿಮೆಣಸನ್ನು ನಾಶಮಾಡಿದ್ದು, ಆ ಕಾಲದಲ್ಲಿ ಕೆನರಾವು ಬಾರೀ ಸಂಖ್ಯೆಯ ಜೀತಾದಾಳುಗಳನ್ನು ಹೊಂದಿತ್ತು. ಅಲ್ಲಿ ಸಮುದ್ರ ವ್ಯಾಪಾರ ಇಲ್ಲವಾಗಿದ್ದು, ಟಿಪ್ಪು ವಿದೇಶಿಯರ ಹಸ್ತಕ್ಷೇಪವನ್ನು ಸಂಪೂರ್ಣವಾಗಿ ನಿರ್ಬಂಧಿಸಿರುವುದರಿಂದ ಅಲ್ಲಿ ಸಾಗರೋತ್ತರ ವ್ಯಾಪಾರ ಇಲ್ಲವಾಯಿತು. ಆದ್ದರಿಂದ ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾದದ್ದು ಹಾಗೂ ಸರಕಾರಕ್ಕೆ ತೆರಿಗೆ ಪಾವತಿಸಬೇಕಾದದ್ದು ಅವರ ಕಷ್ಟವನ್ನು ಇನ್ನೂ ಹೆಚ್ಚಿಸಿತು ಎನ್ನುತ್ತಾರೆ. 1831ರಲ್ಲಿ ಕೆನರಾದಲ್ಲಿ ನಡೆದಂತಹ 'ಕೂಟ' (Koot) ದಂಗೆಯ ಮೂಲವನ್ನು ಲೇಖಕರು ಟಿಪ್ಪುವಿನ ಆಳ್ವಿಕೆಯೊಂದಿಗೆ ಸಂಪರ್ಕಿಸಿದ್ದಾರೆ. ಈ ಘಟನೆಗಳ ಹಿಂದೆ ಬ್ರಾಹ್ಮಣರು ಬಹುಮುಖ್ಯ ಪಾತ್ರವಹಿಸಿದ್ದು, ಅವರು ವಸಾಹತು ಸರಕಾರಕ್ಕೆ ಕಳಂಕ ತರಲು ಬಯಸಿದ್ದರು ಎಂದಿದ್ದಾರೆ. ಕ್ರೈಸ್ತರು ಕಂದಾಯ ಇಲಾಖೆಗಳಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದರಿಂದ ಬ್ರಾಹ್ಮಣರು ಕ್ರೈಸ್ತ ವಿರೋಧಿ ಮನೋಭಾವವನ್ನು ಹುಟ್ಟುಹಾಕಿದರು ಎಂದು ಲೇಖಕರು ಅಪಾದಿಸಿದ್ದಾರೆ. ಬ್ರಾಹ್ಮಣರು ಕ್ರೈಸ್ತರನ್ನು ಉನ್ನತ ಹುದ್ದೆಗಳಿಗೆ ಇರುವ ಸ್ಪರ್ಧಿಗಳಾಗಿ ಗುರುತಿಸಿ, ಅವರನ್ನು ಸರಕಾರಿ ಹುದ್ದೆಯಿಂದ ಕಿತ್ತುಹಾಕಲು ಕೂಟಗಳನ್ನು ಬಳಸಿದ್ದಾರೆ. [54] ಈ ದಂಗೆಯ ಬಗ್ಗೆ ಜಾನ್‌ಸ್ಟೋಕ್ಸ್ ಎಂಬ ಬ್ರಿಟಿಷ್ ಅಧಿಕಾರಿಯು ಕೊಟ್ಟ ವರದಿ ಹಾಗೂ ಅಪಾದನೆಗಳನ್ನೇ ಲೇಖಕರು ಬಳಸಿಕೊಂಡು ಈ ಘಟನೆಯನ್ನು ವಿವರಿಸಿದ್ದಾರೆ. ಜಾನ್‌ಸ್ಟೋಕ್ಸ್ ಈ ದಂಗೆಯನ್ನು ರೈತರ ದಂಗೆ ಎಂದು ಒಪ್ಪಲು ಸಿದ್ಧನಿರಲಿಲ್ಲ. ಬದಲಿಗೆ ಆತನಿಗೆ ಇದು ಬ್ರಾಹ್ಮಣರ ಪಿತೂರಿಯೆಂದೇ ಕಂಡಿದೆ.[55] ನಂತರ ಅಲ್ಲಿ ವಸಾಹತುಶಾಹಿ ಸರಕಾರ ಬಹುಬೇಗ ಶಾಂತಿ ಸ್ಥಾಪಿಸಿ ಎಲ್ಲಾ ರೀತಿಯ ಬೆಳವಣಿಗೆಗೆ ಕಾರಣವಾಗಿ ರಾಜ್ಯ ಸಾಮಾನ್ಯ ಸ್ಥಿತಿಗೆ ಮರಳಿತು ಎಂದಿದ್ದಾರೆ.

ಕ್ರಿ.ಶ.1834ರಲ್ಲಿ ಬ್ರಿಟಿಷರು ಕೊಡಗನ್ನು ಆಕ್ರಮಿಸಿದರು. ಆದರೆ ಕ್ರಿ.ಶ.1837ರಲ್ಲಿ ದಂಗೆ ನಡೆದು ಕೊಡಗಿನ ಕೆಲವು ಗುಂಪುಗಳು ಘಟ್ಟದ ಕೆಳಗಿನ ಪ್ರದೇಶಗಳ ಮೇಲೆ ಆಕ್ರಮಿಸಿ ಲೂಟಿಗೈದು ಜನರಲ್ಲಿ ಭಯವನ್ನು ಸೃಷ್ಟಿಸಿದರು. ದಂಗೆಕೋರರು ಮಂಗಳೂರಿಗೂ ದಾಳಿ ಮಾಡಿ ಜೈಲನ್ನು ಹೊಡೆದು, ಕಛೇರಿಗೆ ಬೆಂಕಿ ಹಚ್ಚಿದರು. ಆದರೆ ಅವರನ್ನು ಬಹುಬೇಗ ಸದೆ ಬಡಿದು ಶಾಂತಿ ಸ್ಥಾಪಿಸಲಾಯಿತು. ಲೇಖಕರು 1862ರಲ್ಲಿ ಉತ್ತರಾ ಕೆನರಾವನ್ನು ಮುಂಬಾಯಿ ಪ್ರಾಂತ್ಯಕ್ಕೆ ಹಸ್ತಾಂತರಿಸಿದ ಬಗ್ಗೆ ವಿವರಿಸುತ್ತಾ, ಅದು ವಾಣಿಜ್ಯ ಸಂಪರ್ಕವನ್ನು ಮುಖ್ಯವಾಗಿ ಮುಂಬಾಯಿ ಜೊತೆ ಹೊಂದಿದೆ. ಅದೇ ರೀತಿ ಭಾಷೆ,

ಜನಾಂಗೀಯವಾಗಿ ಹಾಗೂ ಐತಿಹಾಸಿಕ ಅಂಶಗಳ ನೆಲೆಯಲ್ಲೂ ಆದು ಮದ್ರಾಸ್‌ಗಿಂತ ಮುಂಬಾಯಿ ಜೊತೆ ಹೆಚ್ಚು ಸಂಬಂಧ ಹೊಂದಿದೆ ಎಂದು ಸಮರ್ಥಿಸಿದ್ದಾರೆ. ಮುಂದುವರಿದು ದಕ್ಷಿಣ ಕೆನರಾವು 1862ರಲ್ಲಿ ಮುಂಬಾಯಿ ಜೊತೆ ಸ್ವಲ್ಪ ಮಟ್ಟದ ವಾಣಿಜ್ಯ ಸಂಬಂಧವನ್ನು ಹೊಂದಿದ್ದು, ನಂತರ ಅದರ ವ್ಯಾಪಾರದಲ್ಲಿ ಸುಧಾರಣೆಯಾಗಿ ಇಟ್ಟಿಗೆ ಮತ್ತು ಇತರ ಕಾರ್ಖಾನೆಗಳು ಬೆಳೆದುದರಿಂದ ಅದು ಮದ್ರಾಸ್‌ಗಿಂತ ಹೆಚ್ಚು ಮುಂಬಾಯಿ ಜೊತೆ ಹೆಚ್ಚಿನ ವಾಣಿಜ್ಯ ಸಂಪರ್ಕವನ್ನು ಹೊಂದಿದೆ. ಅದರ ಮುಂದುವರಿದ ಸಮುದಾಯಗಳಾದ ಕ್ರೈಸ್ತರು, ಕೊಂಕಣಿಗಳು, ಸರಸ್ವತ ಬ್ರಾಹ್ಮಣರು ಹಾಗೂ ತುಳು ಜನರು ಕೂಡಾ ಭಾಷಾನೆಲೆ, ಜನಾಂಗೀಯ ಅಂಶ ಹಾಗೂ ಐತಿಹಾಸಿಕವಾಗಿ ಮದ್ರಾಸ್ ಪ್ರಾಂತ್ಯಕ್ಕಿಂತ, ಮುಂಬಾಯಿ ಪ್ರಾಂತ್ಯದ ಜೊತೆ ಹೆಚ್ಚು ಸಂಪರ್ಕ ಹೊಂದಿದ್ದಾರೆ. ಕಾಸರಗೋಡಿನ ದಕ್ಷಿಣ ಭಾಗಮಾತ್ರ ಮದ್ರಾಸ್ ಜೊತೆ ನಿಕಟವಾಗಿದೆ. ಈ ರೀತಿ ಎಲ್ಲಾ ರೀತಿಯಲ್ಲೂ ಮುಂಬಾಯಿ ಜೊತೆ ಸಂಬಂಧವಿರುವ ದಕ್ಷಿಣ ಕೆನರಾವನ್ನು, ಕಾಸರಗೋಡು ತಾಲೂಕಿನ ದಕ್ಷಿಣ ಭಾಗ ಬಿಟ್ಟು ಉಳಿದ ಭಾಗವನ್ನು ಮುಂಬಾಯಿ ಪ್ರಾಂತ್ಯಕ್ಕೆ ಸೇರಿಸಬೇಕು[56] ಎನ್ನುವ ಆಶಾಭಾವನೆಯೊಂದಿಗೆ ಲೇಖಕರು ಪರೋಕ್ಷವಾಗಿ ಬೇಡಿಕೆ ಮಂಡಿಸಿದ್ದಾರೆ.

ಕೆನರಾದಲ್ಲೂ ನಡೆದ ಶೈಕ್ಷಣಿಕ ಹಾಗೂ ಆರ್ಥಿಕ ಸುಧಾರಣೆಗಳ ಬಗ್ಗೆ ಕೂಡಾ ಲೇಖಕರು ಗಮನ ಹರಿಸಿದ್ದಾರೆ. ಈ ಪ್ರದೇಶಕ್ಕೆ ಕಾಲಿರಿಸಿದ ಬಾಸೆಲ್ ಮಿಶನ್ ಸಂಸ್ಥೆ (1834) ಹಾಗೂ ವೆನಿಸ್‌ನ ಯೇಸುಸಭೆ (1879) ಈ ಎರಡು ಸಂಸ್ಥೆಗಳು ಈ ನಾಡಿನ ಅಭಿವೃದ್ಧಿಯಲ್ಲಿ ಪ್ರಮುಖಪಾತ್ರ ವಹಿಸಿವೆ. ಎಂಬುದೇ ಲೇಖಕರ ವಾದ. ಬಾಸೆಲ್ ಮಿಶನ್ ತನ್ನ ಮಿಶಿನರಿ ಕೆಲಸವನ್ನು ಅಲ್ಲದೇ, ಹಲವು ಕೈಗಾರಿಕೆಗಳನ್ನು ಆರಂಭಿಸಿ ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹಿಸಿತು ಎಂದಿರುವ ಲೇಖಕರು, ಜೆಸ್ಯೂಟರು ಕೆನರಾಕ್ಕೆ ಬರುವುದರೊಂದಿಗೆ ಜಿಲ್ಲೆಯಲ್ಲಿ ಪುನರುಜ್ಜೀವನದ ಯುಗ ಆರಂಭವಾಯಿತು ಎಂದಿದ್ದಾರೆ. ಅವರು ಮಂಗಳೂರಿನಲ್ಲಿ ಶಿಕ್ಷಣ,ಕಲೆ ಮತ್ತು ಗಣನೀಯ ಸೇವೆಯ ಮೂಲಕ ಛಾಪು ಗಳಿಸಿಕೊಂಡಿದ್ದಾರೆ.[57]

ಕೆನರಾದ ವಾಣಿಜ್ಯ ಇತಿಹಾಸದ ಕುರಿತು ಲೇಖಕರು ಚರ್ಚಿಸುತ್ತಾ,ಈ ಪ್ರದೇಶದಲ್ಲಿ ವಿದೇಶಿಯರು ವ್ಯಾಪಾರ, ವಸಾಹತುಶಾಹಿ ಹಾಗೂ ಮಿಶಿನರಿ ಉದ್ದೇಶಗಳಿಗಾಗಿ ಹಲವು ನೆಲೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಕೆನರಾವು 200 ಮೈಲುಗಳಷ್ಟು ಕರಾವಳಿ ತೀರ ಪ್ರದೇಶವನ್ನು ಹೊಂದಿದ್ದು, ಆದು ಪೂರ್ವದಲ್ಲಿನ ಎತ್ತರ ಘಟ್ಟಗಳಿಂದಾಗಿ ಭಾರತದ ಇತರ ಭಾಗಗಳೊಂದಿಗೆ ಉಚಿತ (ಭೂ) ಸಂಪರ್ಕದಿಂದ ವಂಚಿತವಾಗಿದ್ದು, ಅದರ ವಾಣಿಜ್ಯವು ಸ್ವಾಭಾವಿಕವಾಗಿಯೇ ಭೂ ಪ್ರದೇಶಕ್ಕಿಂತ ಹೆಚ್ಚು ಸಮುದ್ರದ ಮೂಲಕವಿದ್ದು, ವಾಣಿಜ್ಯದಿಂದಾಗಿ ಇದು ಭಾರತದ ಒಂದು ಸಂಪತ್ಭರಿತ ಭಾಗವಾಗಿದೆ. ಪ್ರಾಚೀನ ಕಾಲದಲ್ಲಿ ಕೆನರಾದ ಬಂದರುಗಳ ಉಲ್ಲೇಖಗಳ ಕಡೆಗೆ ಗಮನಹರಿಸಿರುವ ಲೇಖಕರು ಪ್ರಾಚೀನಕಾಲದಲ್ಲಿ ಕೆನರಾದ ವಿದೇಶಿ ವ್ಯಾಪಾರವು ಅರಬ್ ಮತ್ತು ಇಥಿಯೋಫಿಯನರ ಕೈಯಲ್ಲಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. ಹಡಗುಗಳು ಮೊದಲು ಅರೇಬಿಯಾದ ಸಾಯಾಗ್ರಸ್ [Syagrus, (Ras Fartak)] ನಿಂದ ಪಠಾಲ್ [Patale] ಗೆ

[The Indus Delta] ಬಂದು ನಂತರ ಮಲಬಾರ್ ಕರಾವಳಿಯ ಬಂದರುಗಳಿಗೆ ಬರುತ್ತಿದ್ದವು. ನಂತರದ ಕಾಲದಲ್ಲಿ ಹಡಗುಗಳು ಸಾಯಾಗ್ರಸ್‌ನಿಂದ ನೇರವಾಗಿ ಸೈಜರಸ್ [Sigerus] (ಇದನ್ನು ಆಧುನಿಕ ಜಂಜೀರ, [Janjira] ಎಂದು ಗುರುತಿಸಲಾಗಿದೆ)ಗೆ ಅಥವಾ ಮೈಲಿಜೆಗೈರೀಸ್ [Milizegyris – ಬಹುಶ: .ಆಧುನಿಕ ಮಿರ್‌ಜೀ (Mirje)]ಗೆ ಸಂಚರಿಸುತ್ತಿದ್ದವು. ಅದೇ ರೀತಿ ಈಜಿಫ್ಟ್‌ನ ನಾವಿಕನಾದ ಹೈಪಾಲೋಸ್ (Hypalos) ನನ್ನು ಉಲ್ಲೇಖಿಸಿ, ಸುಮಾರು ಕ್ರಿ.ಶ.50ರಲ್ಲಿಯೇ ನೇರವಾದ ಮಾರ್ಗವನ್ನು ಕೆಂಪು ಸಮುದ್ರದಿಂದ ಕೆನರಾ ಕರಾವಳಿಗೆ ಕಂಡು ಹಿಡಿಯಲಾಗಿತ್ತು. ಅದೇ ರೀತಿ ಅಲೆಗ್ಸಾಂಡ್ರಿಯಾ ಕ್ಲಾವ್ಡಿಯೋಸ್ ಟಾಲೇಮಿ (Klaudios Ptolemaist) ತಿಳಿಸಿರುವ ನೀತ್ರಾ, [Nitra (ಬಹುಶ: ಮಂಗಳೂರು)]ವು ಸಮುದ್ರಗಳ್ಳರ ಕರಾವಳಿಯ ಉತ್ತರದ ತುದಿಯಲ್ಲಿದೆ ಎಂದು ಬನವಾಸಿಯನ್ನು ಹೆಸರಿಸಿ, ಮೀರಾಜೆ (Mirje) ಆ ರಾಜ್ಯದ ಪ್ರಮುಖ ಬಂದರಾಗಿದೆ ಎಂಬುದನ್ನು ತಿಳಿಸಿದ್ದಾರೆ. ಪೆರಿಪ್ಲಸ್‌ನ ಎರಿಥ್ರಿಯನ್ ಸೀಯಲ್ಲಿನ ಉಲ್ಲೇಖದಂತೆ ಮಂಗಳೂರನ್ನು ಲಿಯೋಕಿ [Leuke] ಎಂದು ಅಭಿಪ್ರಾಯ ಪಟ್ಟಿರುವ ಲೇಖಕರು, ಕೋಸ್‌ಮೋಸ್ [Kosmos]ನ ಟೋಪೋಗ್ರಾಫಿಕ ಕ್ರಿಸ್ಟಿಯಾನ [Topographica Christiana] ದಲ್ಲಿ ಉಲ್ಲೇಖಿಸಿರುವ ಮಂಗರೂತ್ ಬಹುಶ: ಮಂಗಳೂರಾಗಿತ್ತು ಎಂದು ಹೇಳಿ, ಅದು ಪೆಪ್ಪರ್, ಕಾಳು ಮೆಣಸು ರಫ್ತು ಮಾಡುವ ದೇಶ ಮಲೆಯದ [ಮಲಬಾರ್] ಪ್ರಮುಖ ಐದು ಬಂದರುಗಳಲ್ಲಿ ಒಂದಾಗಿದೆ ಎಂದಿದ್ದಾರೆ. ಆತ ಕಲ್ಯಾಣದಲ್ಲಿ ಹಲವು ಕ್ರಿಶ್ಚಿಯನರನ್ನು ಗುರುತಿಸಿದ್ದು, ಲೇಖಕರು ಅದು ಉಡುಪಿಯ ಕಲ್ಯಾಣಪುರವೆಂದು ಅಭಿಪ್ರಾಯಪಟ್ಟು, ಅಲ್ಲಿ ಕ್ರಿಶ್ಚಿಯನ್ ಸಮುದಾಯ ಒಬ್ಬ ಪರ್ಶಿಯನ್ ಬಿಷಪನ ಕೈಕೆಳಗೆ ಇದ್ದಿರಬಹುದೆಂದಿದ್ದಾರೆ. ಪ್ರಾಚೀನ ಹಲವು ಪರ್ಶಿಯನ್ ಅರೇಬಿಕ್ ಬರಹಗಾರರು ಪಶ್ಚಿಮ ಭಾರತದ ಬಂದರುಗಳನ್ನು ಉಲ್ಲೇಖಿಸಿದ್ದು, ಹಲವು ವಿಭಿನ್ನ ಹೆಸರುಗಳನ್ನು ಬಳಸಿದ್ದು, ಅವುಗಳನ್ನು ಕೆನರಾದಲ್ಲಿ ಗುರುತಿಸುವುದು ಕಷ್ಟಕರವಾಗಬಹುದು[58] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕೆನರಾ ಮತ್ತು ಮುಸ್ಲಿಂ ರಾಷ್ಟ್ರಗಳ ನಡುವಿನ ವ್ಯಾಪಾರದ ಬಗ್ಗೆ ಉಲ್ಲೇಖಿಸಿರುವ ಲೇಖಕರಾದ ಸಲ್ದಾನರು, ಪೂರ್ವದಲ್ಲಿ ಪೋರ್ಚುಗೀಸರು ಸಾಗರ ವ್ಯಾಪಾರದಲ್ಲಿ ಒಂದು ಶಕ್ತಿಯಾಗಿ ಬೆಳೆಯುವಾಗ ವ್ಯಾಪಾರದ ಸಾರ್ವಭೌಮತೆ ಎಂಬುದು ಮುಸ್ಲಿಮರ [59] [Moors] ಹಿಡಿತದಲ್ಲಿತ್ತು ಎಂದಿದ್ದಾರೆ. ಆ ಕಾಲದಲ್ಲಿ ಕೆನರಾವು ಮಹಮ್ಮದನರ ಎರಡು ಸಮುದಾಯಗಳ ನೆಲೆಯಾಗಿದ್ದು, ಅವರೆಂದರೆ ನವಾಯತರು [Navayats] ಮತ್ತು ಮೋಪ್ಲರು [Moplas]. ಇವರು ಮಲಬಾರ್ ಮತ್ತು ಕೆನರಾ ಕರಾವಳಿಯಲ್ಲಿದ್ದರು. ನವಾಯತ ಸಮುದಾಯದ ವಲಸೆ ಎಂಬುದು ವಾಣಿಜ್ಯದ ಹಿನ್ನೆಲೆಯಲ್ಲಿರದೇ, ಅದು ಅವರ ದೇಶದಲ್ಲಿನ ಹಿಂಸೆಯಿಂದಾಗಿದೆ. ಅವರು ಕ್ರಿ.ಶ.8ನೇ ಶತಮಾನದಲ್ಲಿ ಇರಾನ್ ಪ್ರಾಂತ್ಯದಿಂದ

ಗವರ್ನರ್‌ನಾದ ಹಜಾಜ್ ಬಿನ್ ಯೂಸುಪ್ [Hujaj Bin Yusaf]ನ ಕ್ರೂರತ್ವದಿಂದ ತಪ್ಪಿಸಿ ಇಲ್ಲಿಗೆ ಬಂದರೆಂದು ಲೇಖಕರು ತಿಳಿಸಿದ್ದಾರೆ. ಅದೇ ರೀತಿ ಕೆನರಾಕ್ಕೆ ಬಂದ ನಂತರ ಸ್ಥಳೀಯರೊಂದಿಗೆ ವಿವಾಹ ಸಂಬಂಧ ಬೆಳೆಸಿದ್ದು, ಅವರ ಮೂಲಭಾಷೆಯನ್ನು ಬಿಟ್ಟು ಕೊಂಕಣಿಯನ್ನು ಮಾತನಾಡುತ್ತಿದ್ದಾರೆ. ಆದರೆ ನಂತರ ಅವರು ಇತರ ಸಮುದಾಯಗಳೊಂದಿಗಿನ ವಿವಾಹ ಸಂಬಂಧಗಳನ್ನು ನಿಲ್ಲಿಸಿ, ಬಹುಪಾಲು ಅವರ ಪೂರ್ವಜರ ಸಂಪ್ರದಾಯ ಮೂಲವನ್ನು ಕಾಪಾಡಿಕೊಂಡಿದ್ದಾರೆ ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. ಮೋಪ್ಲರು ಬಹುಶ: ಏಮನ್ (Yeman)ನ ಅರಬರ ವಂಶಸ್ಥರಾಗಿದ್ದು, ಅವರು ದಕ್ಷಿಣ ಕೆನರಾದ ಕಾಸರಗೋಡು ತಾಲೂಕಿನಲ್ಲಿ ನೆಲೆನಿಂತಿದ್ದು ಸ್ವದೇಶಿಯರನ್ನು ವಿವಾಹವಾಗಿ ಮಲಯಾಳಂ ಭಾಷೆಯನ್ನು ಮಾತನಾಡುತ್ತಾರೆ. 15ನೇ ಶತಮಾನದ ಮಧ್ಯಭಾಗದಲ್ಲಿ ಅಟೋಮನ್ ಟರ್ಕ್‌ರು ಕಾನ್‌ಸ್ಟೆಂಟಿನೋಪಲನ್ನು ಆಕ್ರಮಿಸುವುದರೊಂದಿಗೆ ಸಾಗರ ವ್ಯಾಪಾರದ ಮೇಲೆ ಹತೋಟಿ ಹೊಂದಿದ್ದರು. ಆದರೆ ಪೋರ್ಚುಗಲ್‌ನ ಅಭ್ಯುದಯದೊಂದಿಗೆ ಅರಬರ ಹತೋಟಿ ಕಡಿಮೆಯಾಗಿ ಸಾಗರ ವ್ಯಾಪಾರದಲ್ಲಿ ಪೋರ್ಚುಗೀಸರು ಹತೋಟಿ ಸಾಧಿಸುತ್ತಾರೆ. ಅವರು ಮುಖ್ಯವಾಗಿ ವ್ಯಾಪಾರದ ನಿಯಂತ್ರಣ ಹಾಗೂ ಏಷ್ಯದ ಮತ್ತು ಆಫ್ರಿಕಾದ ಪ್ರಮುಖ ಬಂದರುಗಳಲ್ಲಿ ಸ್ಥಳೀಯ ರಾಜರುಗಳೊಂದಿಗೆ ಒಪ್ಪಂದ ಮಾಡಿ ಕಾರ್ಖಾನೆಗಳನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು.[60]

ಕೆನರಾದ ಮತ್ತು ಪೋರ್ಚುಗಲ್‌ನ ಸಂಬಂಧವು ವಿಶಿಷ್ಟತೆಯನ್ನು ಹೊಂದಿದ್ದು, ಅದು ಜಿಲ್ಲೆಯ ಕ್ಯಾಥೋಲಿಕರಿಂದಾಗಿದ್ದಾಗಿದೆ. ಕೆನರಾ ಕ್ರೈಸ್ತರನ್ನು ಗೋವಾದಿಂದ ಪಡೆದಿದೆ. ಇಲ್ಲಿ ಲೇಖಕರು ಕ್ರೈಸ್ತ ಮಿಶಿನರಿಗಳು ಶ್ರಮಪಟ್ಟು ಮಿಶಿನರಿ ಕೆಲಸಗಳನ್ನು ಮಾಡಿರುವುದರ ಬಗ್ಗೆ ವಿವರಿಸಿ, ಅವರು ಶ್ರಮವಹಿಸಿ ಬಹಳಷ್ಟು ಜನರನ್ನು ಮಾತಾಂತರಿಸಿದರು. ಈ ಕೆಲಸಕ್ಕೆ ಪೋರ್ಚುಗಲ್ ಸರಕಾರ ಬೆಂಗಾವಲಾಗಿತ್ತು ಹಾಗೂ ಅವರನ್ನು ಬೆಂಬಲಿಸಿತು.[61] ಈ ರೀತಿ 19ನೇ ಶತಮಾನದ ಮಧ್ಯಭಾಗಕ್ಕೆ ಕೆನರಾದಲ್ಲಿ ಒಂದು ಲಕ್ಷ ಕ್ರೈಸ್ತರಿದ್ದರು. ಕೆನರಾ ಕ್ರೈಸ್ತರು ಗೌರವಾನ್ವಿತ ವರ್ಗವಾಗಿದ್ದು, ಅಪಾರ ಸಂಪತ್ತನ್ನು ಹೊಂದಿದ್ದರು. ಅವರು ಬ್ರಾಹ್ಮಣರಿಗೆ ಸಮನಾಗಿದ್ದು, ನೈತಿಕ ಮತ್ತು ಜ್ಞಾನದ ವಿಷಯಗಳಲ್ಲಿ ಅವರಿಗಿಂತ ಉನ್ನತರಾಗಿದ್ದಾರೆಂದು ಲೇಖಕರು ಜಾನ್ ಸ್ಟಾರ್ಕ್ಸ್‌ನನ್ನು ಉಲ್ಲೇಖಿಸುತ್ತಾ[62] ಬಣ್ಣಿಸಿದ್ದಾರೆ. ಪೋರ್ಚುಗೀಸರು ಕೆನರಾಕ್ಕೆ ಅವರ ಹಡಗುಗಳಿಗೆ ನೀರು ತುಂಬಿಸುವ ಅಥವಾ ಕಡಲುಗಳ್ಳರನ್ನು ಬೆನ್ನಟ್ಟುವ ಉದ್ದೇಶದಿಂದ ಪ್ರಾರಂಭದಲ್ಲಿ ಆಗಾಗ ಭೇಟಿನೀಡಿದ್ದರು. ಕ್ರಿ.ಶ.1498ರಲ್ಲಿ ವಾಸ್ಕೋಡಾಗಾಮ ಮಲಬಾರ್‌ನಿಂದ ಮರಳಿ ಯುರೋಪಿಗೆ ಹೊರಟಂತಹ ಸಂದರ್ಭದಲ್ಲಿ ಮಾರುತಗಳು ನಿಂತು ಹೋದುದರಿಂದ ಕೆನರಾಕ್ಕೆ ಪ್ರಥಮ ಭೇಟಿ ನೀಡುವ ಅವಕಾಶ ಆತನಿಗೆ ಲಭಿಸಿತು. ಆತ ಉಡುಪಿಯ ಹತ್ತಿರದ ದ್ವೀಪದಲ್ಲಿಳಿದು ಅಲ್ಲಿ ಒಂದು ಶಿಲುಬೆ ಹಾಗೂ ಧ್ವಜವನ್ನು ನೆಟ್ಟು ಅದನ್ನು 'ಎಲ್ ಪಾಡ್ರೋನ್ ದೆ ಸಾಂತಮರಿಯ' [El padron de Santa Maria] ಎಂದು ಕರೆದನು. ಅದೇ ಮುಂದೇ ಸೈಂಟ್ ಮೇರಿಸ್ ದ್ವೀಪವಾಯಿತು. ಕ್ರಿ.ಶ.1500ರಲ್ಲಿ

ಕಬ್ರಾಲ್ [Cabral] ಕೆನರಾ ಕರಾವಳಿಯ ಮೂಲಕ ಕಲ್ಲಿಕೋಟೆಗೆ ತೆರಳಿದ್ದ. ಕ್ರಿ.ಶ.1502ರಲ್ಲಿ ವಾಸ್ಕೋಡಗಾಮ ಕಡಲ್ಗಳ್ಳ ತಿಮ್ಮೋಜನ [ವಿಜಯನಗರದ ನೌಕಾಸೇನಾಧಿಪತಿ] ಹಡಗುಗಳನ್ನು ಬೆನ್ನಟ್ಟಿ ಹೊನ್ನಾವರದ ನದಿವರೆಗೂ ಬಂದು ಅವುಗಳನ್ನು ಸುಟ್ಟುಹಾಕಿದನು. ನಂತರ ಭಾರತದ ಇತರ ಭಾಗಗಳಿಗೆ ಅಕ್ಕಿ, ಕಬ್ಬಿಣ, ಸಕ್ಕರೆಯನ್ನು ರಫ್ತು ಮಾಡುತ್ತಿದ್ದ ಸಂಪದ್ಭರಿತ ಬಂದರಾದ ಬಟ್ಕಳವನ್ನು ಆಕ್ರಮಿಸಿದಾಗ, ಅಲ್ಲಿನ ಮುಸ್ಲಿಮರು ಪ್ರತಿರೋಧ ಒಡ್ಡಿದರೂ, ಕೊನೆಗೂ ಅಲ್ಲಿಯ ರಾಜ ಶರಣಾಗತನಾದನು ಹಾಗೂ ಪೋರ್ಚುಗೀಸ್ ಷರತ್ತುಗಳನ್ನು ಒಪ್ಪಿಕೊಂಡನು.[63]

ಪೋರ್ಚುಗೀಸರು ಮುಂದೆ ವಿಜಯನಗರ ಅರಸ ನರಸಿಂಗ ರಾಜನಿಂದ (ಕೃಷ್ಣದೇವರಾಯ) ಭಟ್ಕಳವನ್ನು ಬಿಟ್ಟು ಇತರ ಯಾವುದೇ ಬಂದರುಗಳಲ್ಲಿ ಕಾರ್ಖಾನೆಗಳನ್ನು ಕಟ್ಟಲು ಅನುಮತಿ ಪಡೆದರು. ಪೋರ್ಚುಗೀಸ್ ಯಾತ್ರಿಕ ಡುರೇಟ್ ಬಾರ್ಬೋಸ ಕ್ರಿ.ಶ.1514ರಲ್ಲಿ ಕೆನರಾಕ್ಕೆ ಭೇಟಿನೀಡಿ ಬಸರೂರು ಹಾಗೂ ಮಂಗಳೂರು ಬಗ್ಗೆ ಸಂಪೂರ್ಣ ಚಿತ್ರಣವನ್ನು ನೀಡಿದ್ದಾನೆ. ಬಸರೂರಿಗೆ ಒರ್ಮುಜ್ (Ormuz) ಏಡನ್ (Aden) ಮತ್ತು ಕ್ಸೆಹೆರ್ (Xeher)ನಿಂದ ಹಡಗುಗಳು ಬರುತ್ತಿದ್ದು, ಮಂಗಳೂರಿನಲ್ಲಿ ಅಕ್ಕಿ ಮತ್ತು ಕರಿಮೆಣಸಿನ ವ್ಯಾಪಾರ ಹಲವು ಹಡಗುಗಳಲ್ಲಿ ನಡೆಯುತ್ತಿದೆ ಎಂದಿದ್ದಾನೆ. ಕ್ರಿ.ಶ.1526ರಲ್ಲಿ ಲೋಪೋ ವಾಸ್ ಡಿ ಸ್ಯಾಮ್‌ಫಾಯೋ (Lopo Vas de Sampayo) ವೈಸ್‌ರಾಯ್ ಆಗಿದ್ದಾಗ ಮಂಗಳೂರನ್ನು ಆಕ್ರಮಿಸಿ ಈಗಿನ ರೂಸಾರಿಯೋ ಚರ್ಚ್ ಇದ್ದ ಭಾಗದಲ್ಲಿ ಅವರು ಪ್ರಥಮ ಕಾರ್ಖಾನೆಯನ್ನು ನಿರ್ಮಿಸಿದನು. ಇದೇ ವರ್ಷದಲ್ಲಿ ಫ್ರಾನ್ಸಿಸ್ಕನ್ ಮಿಶನರಿಗಳು ಮಂಗಳೂರು ಮತ್ತು ಅದರ ಸುತ್ತಮುತ್ತ ಧರ್ಮಭೋದನೆ ಮತ್ತು ಮತಾಂತರ ಕಾರ್ಯ ಆರಂಭಿಸಿದರು. ನಂತರ ಪೋರ್ಚುಗೀಸರು ಫರಂಗಿಪೇಟೆಯಲ್ಲಿ ಅವರ ವ್ಯಾಪಾರ ಕೇಂದ್ರವನ್ನು ಆರಂಭಿಸಿದರು. ಕ್ರಿ.ಶ.1528ರಲ್ಲಿ ಬಾರಕೂರಿನ ರಾಜ ಕಲ್ಲಿಕೋಟೆಯ ಕರಿಮೆಣಸಿನ ಜೊತೆ ವಿನಿಮಯ ಮಾಡಲು ಅಕ್ಕಿಯನ್ನು ತುಂಬಿ ಸಿದ್ದವಾಗಿದ್ದ ಸ್ಥಳೀಯ ಹಡಗುಗಳಿಗೆ ಆಶ್ರಯ ನೀಡಿದ್ದನ್ನು ತಿಳಿದ ಸ್ಯಾಂಪ್‌ಯೋ ಅದರ ಮೇಲೆ ಧಾಳಿಮಾಡಿ ನಗರವನ್ನು ಸುಟ್ಟುಹಾಕಿದನು. ಕೆನರಾದ ಬಂಟ ಮತ್ತು ಜೈನರ ಪ್ರಮುಖ ಕೇಂದ್ರವಾಗಿದ್ದ ಬಾರಕೂರನ್ನು ನಾಶಮಾಡಲಾಯಿತು ಎಂದು ಧಾಳಿಯ ಬಗ್ಗೆ ಲೇಖಕರು ವಿವರಿಸಿದ್ದಾರೆ. ಕ್ರಿ.ಶ.1530ರಲ್ಲಿ ಕಲ್ಲಿಕೋಟೆಯ ಶ್ರೀಮಂತ ವ್ಯಾಪಾರಿ ಕರಿಮೆಣಸನ್ನು ಮಂಗಳೂರಿನ ಅಕ್ಕಿಯೊಂದಿಗೆ ವಿನಿಮಯಿಸಲು ಹೊರಟಿರುವುದನ್ನು ತಿಳಿದ ಡಿಯಾಗೋ ಡಾ ಸಿಲ್ವೇರಾ (Diego da silveriara) ಮಂಗಳೂರನ್ನು ಆಕ್ರಮಿಸಿದ. ಈ ಸಂದರ್ಭದಲ್ಲಿ 4000 ಮುಸ್ಲಿಮರು ಆತನಿಗೆ ಪ್ರಬಲ ಪ್ರತಿರೋಧ ನೀಡಿದರೂ, ಕೊನೆಗೆ ಜಯಶಾಲಿಯಾದ ಪೋರ್ಚುಗೀಸರು ಬಂದರನ್ನು ಸುಟ್ಟುಹಾಕಿ, ನಗರಕ್ಕೆ ಬೆಂಕಿ ಕೊಟ್ಟು ಗೋವಾಕ್ಕೆ ತೆರಳಿದರು. ಇದರೊಂದಿಗೆ ಪೋರ್ಚುಗೀಸರು ಕೆನರಾದಲ್ಲಿ ಅವರ ಶಕ್ತಿಯನ್ನು ಬಲಪಡಿಸಿದರು ಎಂಬುದಾಗಿ ಲೇಖಕರು ಬಣ್ಣಿಸಿದ್ದಾರೆ. ಕ್ರಿ.ಶ.1542ರಲ್ಲಿ ಮಾರ್ಟಿನ್ ಅಲ್‌ಫೋನ್‌ಜೋ ಡಿ'ಸೋಜಾ ಬಟ್ಕಳದ ಮೇಲೆ ಧಾಳಿಮಾಡಿ ರಾಣಿಯನ್ನು

ಕಪ್ಪನೀಡುವಂತೆ ಒತ್ತಾಯಿಸಿ, ಬಂದರಿನಲ್ಲಿ ಕಡಲ್ಗಳ್ಳರಿಗೆ ಆಶ್ರಯ ನೀಡಿದ್ದಕ್ಕೆ ಶಿಕ್ಷಿಸಿದನು. ಈ ಸಂದರ್ಭದಲ್ಲಿ ನಗರವನ್ನು ಸುಟ್ಟುಹಾಕಿದರು.[64]

ಪೋರ್ಚುಗೀಸರು ಮಂಗಳೂರನ್ನು ಪ್ರಮುಖ ಸ್ಥಳವೆಂದು ಪರಿಗಣಿಸಿದ್ದು, ಅದನ್ನು ಜಾಗರೂಕತೆಯಿಂದ ಗಮನಿಸುತ್ತಿದ್ದರು. ಕ್ರಿ.ಶ.1555ರಲ್ಲಿ ಉಳ್ಳಾಲದ ರ್ಧಾಣಿ ಕಪ್ಪ ನೀಡಲು ನಿರಾಕರಿಸಿದ್ದರಿಂದ ಡಿ.ಆಳ್ವಾರಿಸ್ ಸಿಲ್ವೇರಿಯಾ ಅದನ್ನು ಆಕ್ರಮಿಸಿ ಸುಟ್ಟು ಹಾಕಿದನು. 1558ರಲ್ಲಿ ಡ ಲೂಯಿಸ್ ಡಿ ಮೆಲ್ಲೋ ಮತ್ತೊಮ್ಮೆ ಅದನ್ನು ಸುಟ್ಟು ಹಾಕಿದನು. ಉಳ್ಳಾಲದ ರಾಣಿ ಪೋರ್ಚುಗೀಸರನ್ನು ಪ್ರಬಲವಾಗಿ ವಿರೋಧಿಸುತ್ತಿದ್ದಳು. ಡಿಸಂಬರ್ 8, 1567ರಂದು ವೈಸ್‌ರಾಯ್ ಗೋವಾದಿಂದ 10,000 ಸೈನಿಕರೊಂದಿಗೆ 54 ಹಡಗುಗಳಲ್ಲಿ ಬಂದು ಜನವರಿ 4ರಲ್ಲಿ ಉಳ್ಳಾಲದಲ್ಲಿ ಇಳಿದರು. ಯೇಸು ಸಭೆಯ ಮೂವರು ಪಾದ್ರಿಗಳು ಶಿಲುಬೆಗಳನ್ನು ಹಿಡಿದು ಸೈನ್ಯದ ಮುಂಭಾಗದಲ್ಲಿ ನಿಂತು ಸೈನಿಕರನ್ನು ಹುರಿದುಂಬಿಸಿದರು ಎಂದು ಲೇಖಕರು ಫಾ। ಜೆ. ಎಪ್. ಎಸ್ಪಿಪೋನಿಯೋ ಎಸ್. ಜೆ. ಅವರನ್ನು ಉಲ್ಲೇಖಿಸಿ ವಿವರಿಸಿದ್ದಾರೆ. ಯುದ್ಧದಲ್ಲಿ ಕೊನೆಗೆ ರಾಣಿ ಸೋತು ಓಡಿ ಹೋದಳು ಹಾಗೂ ವೈಸ್‌ರಾಯ್ ಇಲ್ಲಿ ಹೊಸ ಕೋಟೆ ಕಟ್ಟಲು ಜನವರಿ 20, 1568ರಂದು ಶಿಲಾನ್ಯಾಸ ನೆರವೇರಿಸಿದನು. ಇದನ್ನು ನಂತರ ಸಾನ್ ಸೇಬಾಸ್ಟಿಯನ್ [San Sebastian] ಎಂದು ಕರೆಯಲಾಯಿತು.[65] ಲೇಖಕರಿಗೆ ಪೋರ್ಚುಗೀಸರ ಈ ಕೃತ್ಯಗಳು ಮಹಾತ್ಸಾಧನೆಗಳೆಂದು ಕಂಡದ್ದರಲ್ಲಿ ಆಶ್ಚರ್ಯವಿಲ್ಲ. 'ದೇವರ ರಾಜ್ಯ'ದ ಸ್ಥಾಪನೆಗೆ ಯಾವ ಕೆಲಸವೂ ಮಹಾತ್ಕಾರ್ಯಗಳಾಗುತ್ತವೆ.

ಕ್ರಿ.ಶ.1568ರಲ್ಲಿ ಪೋರ್ಚುಗೀಸರು ಮೊದಲು ಮಂಗಳೂರನ್ನು ನಂತರ ಹೊನ್ನಾವರವನ್ನು ಆಕ್ರಮಿಸಿ ಕಪ್ಪಕೊಡಲು ನಿರಾಕರಿಸಿದ ಗೇರುಸೊಪ್ಪದ ರಾಣಿಯನ್ನು ಶಿಕ್ಷಿಸಿದರು. ನಂತರ ಅಲ್ಲಿ ಕೋಟೆ ಕಟ್ಟಿದ ಅವರು ಅದನ್ನು ಕಾರ್ಖಾನೆಯಾಗಿ ಮಾಡಿದರು. ಅದು ಉತ್ತರ ಕೆನರಾದಲ್ಲಿ ಅವರ ಪ್ರಮುಖ ವ್ಯಾಪಾರ ಕೇಂದ್ರವಾಯಿತು. ನಂತರ ಬಾರಕೂರನ್ನು ಆಕ್ರಮಿಸಿ ಕೆಳ ಬಸರೂರಿನಲ್ಲಿ (ಈಗಿನ ಕುಂದಾಪುರ) ಕೋಟೆಯನ್ನು ಕಟ್ಟಿದರು. ಈ ರೀತಿಯ ಪೋರ್ಚುಗೀಸ್ ವರ್ತನೆ ಸ್ಥಳೀಯ ಅರಸರಲ್ಲಿ ಭಯಭೀತಿ ಹುಟ್ಟಿಸಿ ಬಿಜಾಪುರದ ಸುಲ್ತಾನ, ಅಹಮ್ಮದ್ ನಗರದ ರಾಜ ಮತ್ತು ಕ್ಯಾಲಿಕಟ್‌ನ ಜಾಮೋರಿನ್ ಪೋರ್ಚುಗೀಸರನ್ನು ಪಶ್ಚಿಮ ಭಾರತದಿಂದ ಹೊಡೆದೋಡಿಸಲು ನಿರ್ಧರಿಸಿದರು. ಈ ಸಂದರ್ಭದಲ್ಲಿ ಗೇರುಸೊಪ್ಪದ ರಾಣಿ ಹೊನ್ನಾವರದ ಮೇಲೆ ಧಾಳಿ ಮಾಡಿದರೆ, ಉಳ್ಳಾಲದ ರಾಣಿ, ಜಾಮೋರಿನ್‌ನ ಸಹಾಯದಿಂದ ಮಂಗಳೂರಿನ ಸಂತ ಸೆಬೆಸ್ಟಿಯನ್ ಕೋಟೆಯ ಮೇಲೆ ಧಾಳಿಮಾಡಿದರು. ಕೊನೆಗೂ ಹೊನ್ನಾವರ, ಬಸರೂರು ಮತ್ತು ಮಂಗಳೂರಿನಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸಿ ಪೋರ್ಚುಗೀಸರು ಅವರಿಗೆ ಒದಗಿ ಬಂದ ದೊಡ್ಡ ಸಂಕಷ್ಟದಿಂದ ಪಾರಾಗಿ ಪಶ್ಚಿಮ ಭಾರತದಲ್ಲಿ ತಮ್ಮ ಅಸ್ತಿತ್ವವನ್ನು ಕಾಪಾಡಿದರು ಎಂದು ಲೇಖಕರು ಪೋರ್ಚುಗೀಸರ ಸಾಧನೆಯನ್ನು ವರ್ಣಿಸಿದ್ದಾರೆ. 16ನೇ ಶತಮಾನದ ಅಂತ್ಯದವರೆಗೂ

ಕೆನರಾದಲ್ಲಿ ಪೋರ್ಚುಗೀಸರ ಬಗ್ಗೆ ದಾಖಲಿಸಬಹುದಾದ ಯೋಗ್ಯವಾದ ಅಂಶಗಳಿವೆ. ಆದರೆ 17ನೇ ಶತಮಾನದಲ್ಲಿ ಪ್ರಾರಂಭದಿಂದ ಅವರ ಅಧಿಕಾರ ವ್ಯಾಪ್ತಿಯೆಂಬುದು ಕೆನರಾದ 5 ಕಾರ್ಖಾನೆಗಳಿಗೆ ಸಂಬಂಧಿಸಿತ್ತು. ಅವೆಂದರೆ ಅಂಜದೀವ, ಹೊನ್ನಾವರ, ಭಟ್ಕಳ, ಬಸರೂರು ಮತ್ತು ಮಂಗಳೂರು. 16ನೇ ಶತಮಾನದ ಅಂತ್ಯಕ್ಕೆ ಕೆನರಾದಲ್ಲಿ ವಿಜಯನಗರ ಪಥನವಾಗಿ ಬಿದನೂರು ಅರಸರು ಪ್ರಬಲರಾಗಿದ್ದರು. ಅವರ ಅಧಿಕಾರ 1763ರಲ್ಲಿ ಅಂತ್ಯಗೊಂಡಿತು. ಇನ್ನೊಂದೆಡೆ ಕೆನರಾದ ಉತ್ತರ ಭಾಗದಲ್ಲಿ ಸೊಂಡ (Sonda)ದ ಅರಸರು ಪ್ರಬಲರಾಗಿದ್ದು, ವಿಜಯನಗರ, ಬಿಜಾಪುರದ ಸುಲ್ತಾನ ಮತ್ತು ಮರಾಠರ ಅಧೀನರಾಗಿ ಆಳಿದ್ದರು. 17ನೇ ಶತಮಾನದಲ್ಲಿ ಕೆನರಾದ ಇತರ ಸ್ಥಳೀಯ ಅರಸರೆಂದರೆ ಕಾರವಾರದ ದೇಸಾಯಿಗಳು, ಉಳ್ಳಾಲದ ರಾಣಿ, ಬಂಗೇಲ್‌ರಾಜ (Banghel) ಮತ್ತು ನಿಲೇಶ್ವರದ ರಾಜರು ಪ್ರಮುಖರಾಗಿದ್ದರು.[66]

ಕ್ರಿ.ಶ.1617 ಮತ್ತು 1618ರಲ್ಲಿ ಭೀಕರ ಮಂಗಳೂರು ಕದನ ಇಕ್ಕೇರಿ ಅರಸರಿಂದ ಬೆಂಬಲಿತ ಉಳ್ಳಾಲರಾಣಿ ಮತ್ತು ಪೋರ್ಚುಗೀಸರಿಂದ ಬೆಂಬಲಿತ ಬಂಗೇಲ್ (Banghel) ರಾಜನ ನಡುವೆ ನಡೆಯಿತು. ಇಲ್ಲಿ ಬಂಗೇಲ್ ರಾಜನ ಪರವಾಗಿ ಪೋರ್ಚುಗೀಸರು ಮುಖ್ಯವಾಗಿ ರಣರಂಗದಲ್ಲಿ ಹೋರಾಡಿದರು. ಈ ಯುದ್ಧದಲ್ಲಿ ಎರಡೂ ಕಡೆ ಅಪಾರ ಸಾವು ನೋವು ಸಂಭವಿಸಿತು. ಆದರೆ ಪೋರ್ಚುಗೀಸರು ಉಳ್ಳಾಲ ಹಾಗೂ ಮಂಗಳೂರು ಎರಡು ಪ್ರದೇಶಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿದರು. ಕ್ರಿ.ಶ.1680ರಲ್ಲಿ ವೆಂಕಟಪ್ಪನಾಯಕನು ಪೋರ್ಚುಗೀಸರ ಮೇಲೆ ಎರಗಿ ಲೂಯಿಸ್ ಡಿ ಬ್ರಿಟ್ಟೋ ಡಿ ಮೆಲ್ಲೊ ಹಾಗೂ ಅನ್ರಿಕ್ಯೂಸ್ (Anriques) ಇಬ್ಬರು ಅಧಿಕಾರಿಗಳನ್ನು 180 ಪೋರ್ಚುಗೀಸ್ ಸೈನಿಕರು ಹಾಗೂ 60 ಗುಲಾಮರನ್ನು ಕೊಂದು ಬಂಗೇಲ್‌ನ್ನು ಆಕ್ರಮಿಸಿದನು. ಇಲ್ಲಿಯ ರಾಜ ಕಾಸರಗೋಡಿನ ನಾಯಕನ ಆಸ್ಥಾನಕ್ಕೆ ಓಡಿಹೋದನು. ವೆಂಕಟಪ್ಪನಾಯಕ ನಂತಹ ಶಕ್ತಿಶಾಲಿ ಅರಸನ ವಿರುದ್ಧ ಪ್ರಯೋಜನವಿಲ್ಲದಂತಹ ಯುದ್ಧ ಮಾಡುವುದನ್ನು ಬಿಟ್ಟು ಪೋರ್ಚುಗೀಸರು ರಾಯಾಭಾರಿಯನ್ನು ಕಳುಹಿಸಲು ನಿರ್ಧರಿಸಿದರು. ಆದರೆ ಈ ರಾಯಭಾರವು ಫಲ ಪ್ರದವಾಗಲಿಲ್ಲ. ಈ ರೀತಿ ಲೇಖಕರು ಬಣ್ಣಿಸಿರುವಂತೆ ಪೋರ್ಚುಗೀಸರ ಅಶಿಸ್ತಿನ ಆಡಳಿತ, ಅಹಂಕಾರ, ಜೊತೆಗೆ ವಿನಾಶದ ನೀತಿಯು ಅದರ ಶಕ್ತಿಯನ್ನು ಪೂರ್ವದಲ್ಲಿ ಕುಂದಿಸಿತು. ಕೊನೆಗೆ ಡಚ್ಚರು ಅವರ ಪಥನಕ್ಕೆ ಕಾರಣರಾದರು ಎಂದು ಬಣ್ಣಿಸಿದ್ದಾರೆ. ಡಚ್ಚರು 1641ರಲ್ಲಿ ಮಲಕ, 1658ರಲ್ಲಿ ಸಿಲೋನ್, ನಂತರ ಕೊಚ್ಚಿನ್ ಹಾಗೂ ಮಲಬಾರ್ ಕರಾವಳಿಯ ನೆಲೆಗಳನ್ನು 1662ರಲ್ಲಿ ಆಕ್ರಮಿಸಿ, ಕೆನರಾ ಕರಾವಳಿಯಲ್ಲಿ ಪೋರ್ಚುಗೀಸ್ ಅಧಿಪತ್ಯಕ್ಕೆ ಕೊನೆಹಾಡಿದರು. ಕ್ರಿ.ಶ.1600ರಲ್ಲಿಯೇ ಡಚ್ಚರು ಹೊನ್ನಾವರಕ್ಕೆ ಭೇಟಿ ನೀಡಿದ್ದು ಅಲ್ಲಿ ಅವರು ಕಾರ್ಖಾನೆಯೊಂದನ್ನು ರಚಿಸಿರಬೇಕು[67] ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

ಬ್ರಿಟಿಷರು ಭಾರತಕ್ಕೆ ಡಚ್ಚರೊಂದಿಗೆ ಬಂದಿದ್ದು, ವ್ಯಾಪಾರದಲ್ಲಿ ಇವರು ಬ್ರಿಟಿಷರ ವೈರಿಗಳಾಗಿದ್ದು,ಅವರ ಜೊತೆ ಕಾದಾಟಗಳನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರು ಈ ರೀತಿ ಕೆನರಾದಲ್ಲಿನ ಪೋರ್ಚುಗೀಸರ ಹಲವು ಆಸಕ್ತಿಗಳೊಂದಿಗೆ ಸೇರಿಕೊಂಡ ಡಚ್ಚರು ಮತ್ತು ಇಂಗ್ಲೀಷರು ಇಲ್ಲಿ ನಿರಹಂಕಾರಿಗಳಾಗಿ ವ್ಯಾಪಾರದಲ್ಲಿ ತೊಡಗಿದ್ದರು ಎಂದಿರುವ ಲೇಖಕರು, ಕ್ರಿ.ಶ.18ನೇ ಶತಮಾನದ ಅಂತ್ಯಕ್ಕೆ ಬ್ರಿಟಿಷರು ಕೆನರಾದ ಅಧಿಪತಿಗಳಾದರು ಎಂದಿದ್ದಾರೆ. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಕ್ರಿ.ಶ.1612ರಲ್ಲಿ ತನ್ನ ಮೊದಲ ಕಾರ್ಖಾನೆಗಳನ್ನು ಪಶ್ಚಿಮ ಭಾರತದ ಸೂರತ್, ಕ್ಯಾಂಬೆ, ಅಹಮ್ಮದಾಬಾದ್‌ಗಳಲ್ಲಿ ಸ್ಥಾಪಿಸಿದಾಗ, ಕೊರ್ಟನ್ಸ್ ಅಸೋಸಿಯೇಶನ್ (Courten's) ಎಂಬ ವಿರೋದಿ ಕಂಪೆನಿ ಬಹುಬೇಗ ಅಸ್ತಿತ್ವಕ್ಕೆ ಬಂತು. ಲಂಡನ್ ಈಸ್ಟ್ ಇಂಡಿಯಾ ಕಂಪೆನಿಯ ವೆಡೆಲ್ (Weddel) ಎಂಬವನು ಕ್ರಿ.ಶ.1638ರಲ್ಲಿ ಕಾರವಾರದಲ್ಲಿ ಕಾರ್ಖಾನೆ ಕಟ್ಟಿದನು. ಕ್ರಿ.ಶ.1650ರಲ್ಲಿ ಕಾರ್ಟನ್ಸ್ ಅಸೋಶಿಯೇಶನ್, ಲಂಡನ್ ಈಸ್ಟ್ ಇಂಡಿಯಾ ಕಂಪೆನಿ ಜೊತೆ ವಿಲೀನವಾಯಿತು. ಕೆನರಾದಲ್ಲಿ ಬ್ರಿಟಿಷರ ಎರಡನೇ ಪ್ರಮುಖ ಪ್ರದೇಶವೆಂದರೆ ಅಂಜದೀವ (Anjedivo)ವಾಗಿದೆ. ಕ್ರಿ.ಶ.1668ರಲ್ಲಿ ಬ್ರಿಟಿಷರು ಭಟ್ಕಳದಲ್ಲಿ ಕಾರ್ಖಾನೆ ಕಟ್ಟಿದರೂ, ಅದು ದೀರ್ಘಕಾಲ ಉಳಿಯಲಿಲ್ಲ. ಯಾಕೆಂದರೆ ಕಾರ್ಖಾನೆಗೆ ಸೇರಿದ ನಾಯಿಯೊಂದು, ಇಲ್ಲಿನ ಜನರ ಪವಿತ್ರ ಗೋವುವನ್ನು ಕೊಂದದ್ದು, ಅವರ ಕ್ರೂರದಕ್ಕೆ ಗುರಿಯಾಯಿತು ಎನ್ನುತ್ತಾ, ಇದು ಬ್ರಿಟಿಷರಿಗೆ ಹಸು ಕೊಂದದ್ದಕ್ಕೆ ಉಂಟಾದ ಪ್ರಥಮ ವಿರೋಧವೆಂದು ಆಸಕ್ತಿಯುತವಾಗಿ ಬಣ್ಣಿಸಿದ್ದಾರೆ. ಕ್ರಿ.ಶ.1665ರಲ್ಲಿ ಮರಾಠರು ಕೆನರಾದ ಮೇಲೆ ಧಾಳಿ ಮಾಡುವುದರೊಂದಿಗೆ ಅವರ ಕಾರವಾರದ ಕಾರ್ಖಾನೆಗೆ ಭಾರೀ ಹೊಡೆತ ಉಂಟಾಯಿತು ಹಾಗೂ 1668ರಲ್ಲಿ ಅದು ಬಹುಬೇಗ ಮರು ಆರಂಭವಾಯಿತು. ಬಿಜಾಪುರದ ಸುಲ್ತಾನ ಆದಿಲ್ ಷಾ ಮರಣದ ತರುವಾಯ ಶಿವಾಜಿ ಈ ಪ್ರದೇಶಗಳ ಮೇಲೆ ದಾಳಿ ಮಾಡಿದಾಗ ಸ್ಥಳೀಯ ಸೊಂಡಾದ ಅರಸ (ಮೊದಲು ಬಿಜಾಪುರ ಪೌಜುದಾರ್‌ನಾಗಿದ್ದ) ಶಿವಾಜಿಯ ಅಧೀನತೆ ಒಪ್ಪಿಕೊಳ್ಳಲು ಸಿದ್ಧನಾಗದೇ ದಂಗೆ ಎದ್ದಾಗ, ಬ್ರಿಟಿಷರು ಸಹಾಯ ಮಾಡದಕ್ಕಾಗಿ ಬ್ರಿಟಿಷರ ಕಾರವಾರ ಕೋಟೆಯನ್ನು ಆಕ್ರಮಿಸಿದ. ನಂತರ ಕ್ರಿ.ಶ.1690ರಲ್ಲಿ ಕಾರವಾರ ಮತ್ತು ಇಂಗ್ಲೇಂಡ್ ನಡುವೆ ನೇರ ವ್ಯಾಪಾರ ಸಂಪರ್ಕ ಬೆಳೆಯಿತು ಹಾಗೂ ಅದರ ಶ್ರೀಮಂತಿಕೆಯಸ್ನು ಹೆಚ್ಚಿಸಿತು ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

ಲೇಖಕರು ಕ್ರಿ.ಶ.1673 ಮತ್ತು 1675ರಲ್ಲಿ ಕೆನರಾಕ್ಕೆ ಭೇಟಿ ನೀಡಿದ್ದ ಪ್ರಯರ್‌ನ [Fryer] ಉಲ್ಲೇಖಗಳ ಕುರಿತು ಚರ್ಚಿಸುತ್ತಾ, ಬಿದನೂರು ಅರಸರ ಕಾಲದಲ್ಲಿ ಜನರು ಅವರ ಜೀವ ಮತ್ತು ಸಂಪತ್ತಿಗೆ ಅನುಭವಿಸುತ್ತಿದ್ದ ಭದ್ರತೆಯನ್ನು ಕಂಡು ಆಶ್ಚರ್ಯಗೊಂಡಿದ್ದು ಇಲ್ಲಿ ಎಲ್ಲಾ ಕಡೆ ಅಪಾರ ಕ್ರೈಸ್ತರೀರುವುದನ್ನು ಹಾಗೂ ಹಿಂದೂಗಳು ಭೂತರಾಧನೆಯಲ್ಲಿ ಬಹುವಾಗಿ ತೊಡಗಿರುವುದರ ಬಗ್ಗೆ ಉಲ್ಲೇಖಿಸಿರುವುದನ್ನು ಚರ್ಚಿಸಿದ್ದಾರೆ. ಕ್ರಿ.ಶ.17ನೇ ಶತಮಾನದ ಮಧ್ಯಭಾಗದಲ್ಲಿ ಡಚ್ಚರು,

ಪೋರ್ಚುಗೀಸರಿಂದ ಯುರೋಪ್ ಮತ್ತು ಏಷ್ಯಾದ ಪ್ರಮುಖ ಹೆದ್ದಾರಿಗಳನ್ನು ಆಕ್ರಮಿಸಿದರು. ಕ್ರಿ.ಶ.1652ರಲ್ಲಿ ಮಂಗಳೂರು, ಬಸರೂರು, ಹೊನ್ನಾವರ ಮತ್ತು ಕ್ಯಾಮ್‌ಬೋಲಿನ್‌ನ ಕಾರ್ಖಾನೆಗಳನ್ನು ಡಚ್ಚರು ಕೆನರೀಸ್ ಸೈನ್ಯದ ಸಹಾಯದಿಂದ ಆಕ್ರಮಿಸಿದರು. ಆದರೆ ನಂತರ ಕ್ರಿ.ಶ.1671ರಲ್ಲಿ ಗೋವಾ-ಬಿದನೂರು ಜೊತೆ ಶಾಂತಿ ಒಪ್ಪಂದವಾಗಿ ಅವರ ಕಾರ್ಖಾನೆಗಳನ್ನು ಮರುಸ್ಥಾಪಿಸಲಾಯಿತು. ಮತ್ತೊಮ್ಮೆ ಎರಡು ಪಕ್ಷಗಳ ನಡುವೆ ಉಂಟಾದ ವೈರತ್ವವು ಡಿಸೆಂಬರ್ 15, 1678ರ ಶಾಂತಿ ಒಪ್ಪಂದದೊಂದಿಗೆ ಕೊನೆಗೊಂಡಿತು[68] ಎಂದಿದ್ದಾರೆ.

ಕ್ರಿ.ಶ.1707ರಲ್ಲಿ ಮತ್ತೊಮ್ಮೆ ಬಿದನೂರು ಮತ್ತು ಪೋರ್ಚುಗೀಸರ ನಡುವೆ ಒಪ್ಪಂದವಾದರೂ, ಕ್ರಿ.ಶ.1713ರಲ್ಲಿ ಮಗದೊಮ್ಮೆ ಅವರ ನಡುವೆ ವೈರತ್ವವು ಬೆಳೆಯಿತು. ಕಾರಣವೆಂದರೆ ಬಿದನೂರಿನ ಹಡಗುಗಳು ಪೋರ್ಚುಗೀಸರ ಅನುಮತಿ ಇಲ್ಲದೇ ವ್ಯಾಪಾರಕ್ಕೆ ಇಳಿದವು ಎಂದು ಅವುಗಳನ್ನು ಆಕ್ರಮಿಸಿ ಸುಟ್ಟು ಹಾಕಿದರು. ಮುಂದೆ 1714ರಲ್ಲಿ ಒಪ್ಪಂದವಾಯಿತು. ಇದರೊಂದಿಗೆ ಪೋರ್ಚುಗೀಸರ ಕಾರ್ಖಾನೆ ಹಾಗೂ ಕ್ರೈಸ್ತರಿಗೆ ರಕ್ಷಣೆ ದೊರೆಯಿತು[69] ಎಂದಿದ್ದಾರೆ. ಲೇಖಕರು ಅಭಿಪ್ರಾಯ ಪಡುವಂತೆ ಪೋರ್ಚುಗೀಸರು ನೆಲೆ ಸ್ಥಾಪಿಸಿದಲ್ಲಿ ಅವರ ರಾಷ್ಟ್ರೀಯ ಧ್ವಜದ ಜೊತೆ ಜೊತೆಗೆ ಶಿಲುಬೆಯನ್ನು ನೆಟ್ಟು ಈ ಮಿಶಿನರಿ ಕಾರ್ಯಕ್ಕೆ ಅವರ ಪ್ರಭುವಿನಿಂದ ಬೆಂಬಲ ಮತ್ತು ರಕ್ಷಣೆ ಸಿಕ್ಕಿದೆ ಎಂದು ಪೋರ್ಚುಗೀಸ್ ನೀತಿಯನ್ನು ಶ್ಲಾಘಿಸಿದ್ದಾರೆ. ಈ ರೀತಿ 17ನೇ ಶತಮಾನದ ಮಧ್ಯಭಾಗಕ್ಕಾಗುವಾಗ ಇಡೀ ಕೆನರಾದಲ್ಲಿ ಬಿದನೂರು ರಾಜರ ಆಶ್ರಯದಲ್ಲಿ 20 ಚರ್ಚುಗಳು ಏಳಿಗೆಗೆ ಬಂದವು ಎಂದಿದ್ದಾರೆ. ಈ ಕ್ರೈಸ್ತರು ಬಿದನೂರು ಅರಸರಿಗೆ ಅವರ ಅತೀ ಹೆಚ್ಚು ನಾಗರೀಕ ಮತ್ತು ವಿಧೇಯ ಜನರಾಗಿ ಕಂಡು ಬಂದಿದ್ದಾರೆ. ಕೆಲವು ಸಂದರ್ಭಗಳಲ್ಲಿ ವಿದೇಶಿ ಮಿಶಿನರಿಗಳಿಗೆ ಬಿದನೂರು ಸಾಮ್ರಾಜ್ಯದಲ್ಲಿ ಮಿಶಿನರಿ ಕೆಲಸಕ್ಕೆ ಅಡ್ಡಿಯಾದರೂ, ಅರಸರು ಕ್ರೈಸ್ತರನ್ನು ಪ್ರೋತ್ಸಾಹಿಸಿ, ಅವರ ಚರ್ಚುಗಳಿಗೆ ಭೂದಾನ ಮಾಡಿದ್ದಾರೆ. ಈ ರೀತಿ ಯುರೋಪಿನ ಶಕ್ತಿಯ ವಶವಿಲ್ಲದ ಇತರ ಪ್ರದೇಶಗಳಲ್ಲಿ ಕ್ರೈಸ್ತಧರ್ಮ ಬೆಳೆದುದಕ್ಕಿಂತ ಕೆನರಾದಲ್ಲಿಅದು ಬಹುವಾಗಿ ವಿಸ್ತರಿಸಿ ಸಮೃದ್ಧವಾಗಿ ಬೆಳೆಯಿತು. ಆದರೆ ನಂತರ ಟಿಪ್ಪುವಿನ ಕಾಲದಲ್ಲಿ ಚರ್ಚುಗಳು ಧರೆಗುರುಳಿಸಲ್ಪಟ್ಟವು ಎಂದಿದ್ದಾರೆ. 17ನೇ ಶತಮಾನದ ಮಧ್ಯಭಾಗದಲ್ಲಿ ಪೋರ್ಚುಗೀಸ್ ಶಕ್ತಿಯ ಕುಂದುವಿಕೆಯ ಹೊಣೆಯನ್ನು ಡಚ್ಚರಿಗೆ, ಮಾರಾಠರಿಗೆ ಹಾಗೂ ಕಡಲ್ಗಳ್ಳರಿಗೆ ಲೇಖಕರು ವಹಿಸಿದ್ದಾರೆ. ಬಳಿಕ ಗೋವಾದಿಂದ ಮಂಗಳೂರಿಗೆ ಪೋರ್ಚುಗೀಸ್ ಸಂಪರ್ಕ ಕಡಿದು ಹೋಗಿ, ಕ್ರೈಸ್ತಪಾದ್ರಿಗಳು ಬರುವುದು ಕಷ್ಟವಾಗಿ ಕ್ರೈಸ್ತರು ಮತ ಸಂಸ್ಕಾರ, ಸಾರ್ವಜನಿಕ ಆರಾಧನೆ ಮತ್ತು ಆಧ್ಯಾತ್ಮಿಕ ನಿರ್ದೇಶನವಿಲ್ಲದೆ ಬದುಕ ಬೇಕಾಯಿತು. ನಂತರ ರೋಮ್ ಬಿಷಪ್ ಥೋಮಸ್ ಡಿ ಕ್ಯಾಸ್ಟ್ರೋರವರನ್ನು ಕೆನರಾದ ವಿಕಾರ್ ಅಪೊಸ್ಥಲಿಕ್ ಆಗಿ ನೇಮಿಸಿದಾಗ, ಸೃಷ್ಟಿಯಾದ ಪಾದ್ರಾವ್ದೋ [Padravado] ಘರ್ಷಣೆಯ ಬಗ್ಗೆ ವಿವರಿಸಿರುವ ಲೇಖಕರು, ಜೋಸೆಫ್‌ವಾಜ್‌ರ ಬಗ್ಗೆ ಸವಿಸ್ತಾರವಾಗಿ

ವಿವರಣೆಯನ್ನು ನೀಡಿದ್ದಾರೆ. ಅದೇ ರೀತಿ ಮೊನ್ಸಿಞ್ಞೋರ್ ಜೋ ದೋಮಿಂಗೋ ಡಿ ಸಾಂತಾಕ್ಲಾರ [Monsignor Joao Domingo de Sta. Clara] ಹಾಗೂ ಫಾ। ಜೋಕಿಮ್ ಡಿ ಮಿರಾಂದರ ಜೀವನ ಸಾಧನೆಗಳ ಬಗ್ಗೆ ವಿವರಿಸಿದ್ದಾರೆ.[70]

ಕ್ರಿ.ಶ.1763ರಲ್ಲಿ ಹೈದರಾಲಿ ಕೆನರಾವನ್ನು ಆಕ್ರಮಿಸುವುದರೊಂದಿಗೆ ಇಲ್ಲಿ ಪೋರ್ಚುಗೀಸರ ವ್ಯಾಪಾರ ಮತ್ತು ಆಳ್ವಿಕೆ ನಾಶವಾಗುತ್ತದೆ. ಆದರೆ ಮಂಗಳೂರು ಮತ್ತು ಅಂಜುದೀವದ ಕಾರ್ಖಾನೆಗಳು ಅವರಲ್ಲಿಯೇ ಮುಂದುವರಿದವು. ಕ್ರಿ.ಶ.1764ರಲ್ಲಿ ಹೈದರ್ ಮತ್ತು ಪೋರ್ಚುಗೀಸರ ನಡುವೆ ಒಪ್ಪಂದವಾಗಿ ಕ್ರೈಸ್ತರಿಗೆ ಮತ್ತು ಅವರಿಗೆ ರಕ್ಷಣೆಯ ಬರವಸೆ ದೊರಕಿತು. ಕ್ರಿ.ಶ.1768ರ ಪ್ರಥಮ ಆಂಗ್ಲೋಮೈಸೂರು ಯುದ್ಧದ ಸಂದರ್ಭದಲ್ಲಿ ಮೇಜರ್ ವಾಟ್ಸನ್ (Watson) ಮಂಗಳೂರನ್ನು ಆಕ್ರಮಿಸಿದನು. ಇದರಿಂದ ಹೈದರ್ ಕ್ರೈಸ್ತರ ಗುಪ್ತ ಸಹಾಯದಿಂದ ಬ್ರಿಟಿಷರು ಮಂಗಳೂರನ್ನು ಆಕ್ರಮಿಸಿದರು ಎಂದು ಅನುಮಾನಪಟ್ಟನು. ಆದರೆ ನಂತರ ಹೈದರನ ಅನುಮಾನ ಬಗೆ ಹರಿಯಿತು. 1783ರಲ್ಲಿ ಮಂಗಳೂರಿನ ಕಾರ್ಖಾನೆ ಮತ್ತು ಕೋಟೆಗಳೆರಡನ್ನು ನಾಶಪಡಿಸಲಾಯಿತು. ಹೈದರನ ಅನುಕಂಪದ ಆಳ್ವಿಕೆಯಲ್ಲಿ ವೃದ್ಧಿಹೊಂದಿದ ಕ್ರೈಸ್ತರು ಟಿಪ್ಪುವಿನ ಕಾಲದಲ್ಲಿ ಸರ್ವನಾಶ ಹೊಂದಿದರು. "ಆತ ಕ್ರೈಸ್ತರನ್ನು ಮುಸಲ್ಮಾನರನ್ನಾಗಿ ಮಾಡದಿದ್ದರೆ ಆತನ ಸಾಮ್ರಾಜ್ಯ ಸುರಕ್ಷಿತವಾಗಿರುವುದಿಲ್ಲವೆಂದು ತಿಳಿದಿದ್ದ. ಗುಪ್ತವಾಗಿ ಕೆನರಾದ ಕ್ರೈಸ್ತರನ್ನು ಬಂದಿಸಲು ಆಜ್ಞೆ ನೀಡಿದ." ಟಿಪ್ಪು ಪುರುಷರು, ಮಹಿಳೆಯರು, ಮಕ್ಕಳು, ರೋಗಿಗಳು, ಪ್ರಾಯಸ್ತರು ಒಟ್ಟಾಗಿ 30,000(?) ಜನರನ್ನು ಬಂಧಿಸಿ, ಕುರಿಗಳ ಹಿಂಡನ್ನು ಅಟ್ಟಿಸಿಕೊಂಡು ಹೋದ ಹಾಗೆ ಘಟ್ಟದ ಮೇಲ್ಭಾಗಕ್ಕೆ ಸಾಗಿಸಿದನು. ಮಂಗಳೂರು ಮತ್ತು ಸುತ್ತಮುತ್ತಲಿನಿಂದ ಬಂಧಿಸಿದ ಕ್ರೈಸ್ತರನ್ನು ಗುರುಪುರದಲ್ಲಿ ಸಂಗ್ರಹಿಸಿ, ಬಲಿಷ್ಠ ಕಾವಲಿನಲ್ಲಿ ಜಮಾಲಾಬಾದ್ ಮೂಲಕ ಶ್ರೀರಂಗ ಪಟ್ಟಣಕ್ಕೆ ಕೊಂಡುಹೋದನು. ಎರಡು ಮತ್ತು ಮೂರನೇ ಸನ್ನಿವೇಶದಲ್ಲಿ ಸಾವಿರದಷ್ಟು ಜನರನ್ನು ಬಂಧಿಸಿದನು. ಅವರ ಸಂಪತ್ತನ್ನು ಮುಸ್ಲಿಂರಿಗೆ ಹಾಗೂ ಕ್ರೈಸ್ತರನ್ನು ಬಂಧಿಸಲು ಸಹಾಯ ಮಾಡಿದವರಿಗೆ ಹಂಚಲಾಯಿತು. ಈ ಸಂದರ್ಭದಲ್ಲಿ ಹಲವು ಕ್ರೈಸ್ತ ಕುಟುಂಬಗಳು ಮಲಬಾರ್ ಮತ್ತು ಕೊಡಗಿನಲ್ಲಿ ನಿರಾಶ್ರಿತರಾಗಿ ಆಶ್ರಯ ಪಡೆದಿದ್ದರು. ಇದರ ನಂತರ ಟಿಪ್ಪು ಕೆನರಾದ ಎಲ್ಲಾ ಚರ್ಚುಗಳನ್ನು ನಾಶಪಡಿಸಲು ಆಜ್ಞೆನೀಡಿದ. ಆದರೆ ಕೆಲವೇ ಚರ್ಚುಗಳು ಸಂಪೂರ್ಣವಾಗಿ ನಾಶವಾದವು. ಸ್ಥಳೀಯ ಅಧಿಕಾರಿಗಳು ಕೆಲವು ಚರ್ಚುಗಳ ಮೇಲ್ಛಾವಣಿ ಮಾತ್ರ ತೆಗೆದು ಸಂತೃಪ್ತರಾದರು. ಮಂಗಳೂರಿನ ರೋಸಾರಿಯೋ ಮತ್ತು ಮಿಲಾಗ್ರಿಸ್ ಚರ್ಚುಗಳನ್ನು ನೆಲಸಮ ಮಾಡಲಾಯಿತು. ಆದರ ಕಲ್ಲುಗಳಿಂದ ಮಂಗಳೂರಿನ ಕೋಟೆಯನ್ನು ನವೀಕರಿಸಲಾಯಿತು ಹಾಗೂ ಇಡ್ಯಾಬೆಟ್ಟದಲ್ಲಿ [Edyah Hill] ಮಹಮ್ಮದನರ ಎರಡು ಕಂಬಗಳನ್ನು ಕಟ್ಟಲಾಯಿತು. ಇಲ್ಲಿ ಲೇಖಕರು ನಂತರ ಕ್ರೈಸ್ತರು ಕಟ್ಟಿದಂತಹ 25 ಚರ್ಚುಗಳ ಪಟ್ಟಿಯನ್ನು ನೀಡಿದ್ದಾರೆ.[71]

ಕ್ರಿ.ಶ.1668ರ ಭಟ್ಕಳ ಘಟನೆಯ ನಂತರ ಬ್ರಿಟಿಷರು ಮತ್ತೆ ಅಲ್ಲಿ ತಮ್ಮ ನೆಲೆ ಸ್ಥಾಪಿಸಲು ಪ್ರಯತ್ನಿಸಲಿಲ್ಲ ಎಂದಿರುವ ಲೇಖಕರು, ಬ್ರಿಟಿಷರಿಂದ ಕೆನರಾದ ಆಕ್ರಮಣವು ನಾಲ್ಕು ಕಾಲಘಟ್ಟಗಳನ್ನು ಹೊಂದಿದೆ ಎಂದಿದ್ದಾರೆ. ಪ್ರಥಮವಾಗಿ ಹೈದರನ ಜೊತೆ ಮೈಸೂರು ಯುದ್ಧ (1767–1769) ಹಾಗೂ ಅಂತಿಮವಾಗಿ ಮದ್ರಾಸ್ ಒಪ್ಪಂದದೊಂದಿಗೆ ಇದು ಮುಕ್ತಾಯವಾಯಿತು. ಎರಡನೇ ಹಂತದಲ್ಲಿ ಎರಡನೇ ಮೈಸೂರು ಯುದ್ಧ (1780–1784) ಪ್ರಾರಂಭವಾಗಿ ಟಿಪ್ಪುಸುಲ್ತಾನ್ ಮಂಗಳೂರು ಒಪ್ಪಂದ ಮಾಡಿಕೊಳ್ಳುವವರೆಗೆ, ನಂತರ ಮೂರನೇ ಹಂತದಲ್ಲಿ ಮೂರನೇ ಮೈಸೂರು ಯುದ್ಧವು (1790–92) ಮುಗಿಯುವವರೆಗೆ ಹಾಗೂ ಅಂತಿಮ ಕಾಲಘಟ್ಟದಲ್ಲಿ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸಾವಿಗೀಡಾಗಿ, ಶ್ರೀರಂಗಪಟ್ಟಣ ಬ್ರಿಟಿಷರ ವಶವಾಗುವವರೆಗೆ ಎಂದು ಲೇಖಕರು ವಿವರಿಸಿದ್ದಾರೆ. ತರುವಾಯ ಕೆನರಾ ಬ್ರಿಟಿಷರ ವಸಾಹತುವಾಗಿ, ಅದು ಸಮೃದ್ಧವಾಗಿ ಬೆಳೆಯಿತು ಎಂದು ಲೇಖಕರು ಸಂತುಷ್ಟರಾಗಿದ್ದಾರೆ.[72]

ಕೆನರಾದ ಜೈನರ ಬಗ್ಗೆ ವಿಶೇಷ ಆಸಕ್ತಿಯ ಲೇಖನ ಬರೆದಿರುವ ಲೇಖಕರು ಬಿದನೂರು ಆಳ್ವಿಕೆಯವರೆಗೆ ಜೈನಧರ್ಮ ಕೆನರಾದ ಪ್ರಮುಖ ಧರ್ಮವಾಗಿತ್ತೆಂದು ಬಣ್ಣಿಸಿದ್ದಾರೆ. ಕಾಡಿನಲ್ಲಿ ನೆಲೆಸಿರುವ ಕೊರಗರ [Koragar] ಮತ್ತು ಹೊಲೆಯರ [Holeyas] ಗುಡಿಸಲುಗಳು, ಶಿಥಿಲವಾದ ಜೈನ ಬಸದಿಗಳು, ವಿಜಯನಗರ ಕಾಲದ ಹಿಂದೂ ದೇವಾಲಯಗಳು ಹಾಗೂ ಲಿಂಗಯತ ಮಠಗಳು, ಪೋರ್ಚುಗೀಸರು ಕಟ್ಟಿರುವಂತಹ ರೋಮನ್ ಕೆಥೋಲಿಕ್ ಚರ್ಚುಗಳು, ಟಿಪ್ಪುಸುಲ್ತಾನನ ಕಾಲದ ಮಹಮ್ಮದವರ ಮಸೀದಿಗಳು ಮತ್ತು ಬೃಹತ್ ಕೋಟೆಗಳು ಇವೆಲ್ಲವೂ ಜಿಲ್ಲೆಯ ಹಳೆಯ ರಾಜಕೀಯ ಮತ್ತು ಧಾರ್ಮಿಕ ಜೀವನದ ಹಲವು ಹಂತಗಳನ್ನು ತಿಳಿಸುತ್ತದೆ ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. ಜೈನಧರ್ಮವು ಹಲವು ದಶಕಗಳಷ್ಟು ಕಾಲ ಪ್ರಬಲ ಧರ್ಮವಾಗಿತ್ತು. ಆದರೆ ಕೆನರಾದಲ್ಲಿ ಅದು ಯಾವಾತ್ತೂ ರಾಜ್ಯ ಧರ್ಮವಾಗಿ ಉಳಿಯಲಿಲ್ಲ. ಆದರೆ ಬ್ರಾಹ್ಮಣತ್ವ ಎಂಬುದು ಯಾವತ್ತು ಸಂಪೂರ್ಣ ನಾಶವಾಗಲಿಲ್ಲ. ಅದು ತನ್ನೊಳಗೆ ಸುಧಾರಣೆಗೊಂಡು ಎಲ್ಲಾ ಕಡೆ ತೀವ್ರವಾಗಿ ಮುನ್ನುಗ್ಗಿತು ಹಾಗೂ 12ನೇ ಶತಮಾನದಲ್ಲಿ ಕೆನರಾಕ್ಕೆ ಬಂದು, ಜೈನಧರ್ಮದೊಂದಿಗೆ ಸಮವಾದ ಸ್ಥಾನವನ್ನು ಪಡೆಯಿತು. ವಿಜಯನಗರದ ಅರಸರ ಕಾಲದಲ್ಲಿ ಬ್ರಾಹ್ಮಣತ್ವ ಪ್ರಬಲವಾದರೂ, ಪ್ರಾಂತ್ಯಗಳ ನಾಯಕರು ಹಾಗೂ ಭೂಮಾಲೀಕ ವರ್ಗ ಜೈನಧರ್ಮವನ್ನೇ ಅನುಸರಿಸಿತ್ತು. ಲಿಂಗಾಯತರಾದ ಬಿದನೂರು ಅರಸರು ಸ್ಥಳೀಯ ಜೈನ ಅರಸರನ್ನು ಸೋಲಿಸಿ ಜೈನಧರ್ಮಕ್ಕೆ ಭಾರೀ ಹೊಡೆತ ನೀಡಿದರು. ಈ ಸಂದರ್ಭದಲ್ಲಿ ಹೊಸ ಹಿಂದೂ ಧರ್ಮ ಮತ್ತು ಕ್ರೈಸ್ತಧರ್ಮಗಳು ಕೆನರಾಕ್ಕೆ ಲಗ್ಗೆ ಇಟ್ಟು ಹಲವು ಬೆಂಬಲಿಗರನ್ನು ಗಳಿಸಿಕೊಂಡವು. ಆದರೆ ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ಇವು ಆತನ ಕ್ರೂರ ಆಳ್ವಿಕೆಗೆ ಒಳಪಟ್ಟು ಹಿನ್ನಡೆ ಅನುಭವಿಸಿದವು. ಕ್ರಿ.ಶ.9ನೇ ಶತಮಾನದಲ್ಲಿ ಅರಬರು ಕೆನರಾ ಕರಾವಳಿಗೆ ಬಂದು ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಸಮೃದ್ಧರಾದರು.

12ನೇ ಶತಮಾನದಲ್ಲಿ ಕೆನರಾವು 10,000 ಜೈನರನ್ನು ಹೊಂದಿದ್ದು ಅವರು ಮುಖ್ಯವಾಗಿ ಕಾರ್ಕಳ ಮತ್ತು ಮೂಡಬಿದ್ರೆಗಳಲ್ಲಿದ್ದರು. ಕೆನರಾದ ಜೈನರಲ್ಲಿ ಎರಡು ವರ್ಗಗಳಿದ್ದು, ಅವರೆಂದರೆ ಇಂದ್ರರು ಅಥವಾ ಅರ್ಚಕ ವರ್ಗ ಮತ್ತು ಜೈನ ಬಂಟ್ಸ್‌ಗಳಾಗಿದ್ದಾರೆ. ಇಂದ್ರರಲ್ಲಿ ಕನ್ನಡ ಅರ್ಚಕ ಮತ್ತು ತುಳು ಅರ್ಚಕಗಳೆಂಬ ಉಪವಿಭಾಗಗಳಿವೆ. ಜೈನ ಬಂಟರು ಅಳಿಯಸಂತಾನ ಕಾನೂನನ್ನು ಪಾಲಿಸುತ್ತಿದ್ದು ಈ ಪಂಗಡಕ್ಕೆ ಉಪ್ಪಿನಂಗಡಿ ತಾಲೂಕಿನ ಕನ್ನಡ ಭಾಷೆ ಮಾತಾನಾಡುವ ಜೈನರು ಸೇರುವುದಿಲ್ಲ.[73] ಕೆನರಾದ ಇತಿಹಾಸದಲ್ಲಿ ಜೈನರು ಪ್ರಮುಖಸ್ಥಾನವನ್ನು ಆಕ್ರಮಿಸಿದ್ದಾರೆ ಎಂದಿರುವ ಲೇಖಕರು, ಪ್ರಥಮ ರಾಜವಂಶವಾದ ಶಾತವಾಹನರ ಕಾಲದಲ್ಲಿ ಜೈನರು ಬಹುಶ: ಕೆನರಾದಲ್ಲಿ ಸ್ಥಾಪಿತಗೊಂಡರು. ನಂತರ ಆಳ್ವಿಕೆ ಮಾಡಿದ ಕದಂಬರು ಜೈನಧರ್ಮವನ್ನು ಬಹುವಾಗಿ ಬೆಂಬಲಿಸಿದ್ದು ಅವರು ಇದನ್ನು ಅನುಕರಣೆ ಮಾಡಲಿಲ್ಲವೆಂದಿದ್ದಾರೆ. ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಈ ಧರ್ಮವನ್ನು ಪೋಷಿಸಿದರು. ಹೊಯ್ಸಳ ವಂಶದ ಆರಂಭದ ಇಬ್ಬರು ಅರಸರು ಜೈನಧರ್ಮವನ್ನು ಪಾಲನೆ ಮಾಡಿದರೆ, ವಿಷ್ಣುವರ್ಧನ ವೈಷ್ಣವನಾದರೂ ಜೈನಧರ್ಮವನ್ನು ಬೆಂಬಲಿಸಿದ್ದ. ವಿಜಯನಗರ ಅರಸರು ಈ ಧರ್ಮವನ್ನು ಪೋಷಿಸಿದರೆ, ನಂತರ ಬಂದ ಬಿದನೂರು ಅರಸರು ಇದನ್ನು ದ್ವೇಷಿಸಿದರು ಎಂದಿದ್ದಾರೆ. ಅದೇ ರೀತಿ ಲೇಖಕರಾದ ಸಲ್ದಾನರು ಸ್ಥಳೀಯವಾಗಿ ಜೈನಧರ್ಮವನ್ನು ಪ್ರೋತ್ಸಾಹಿಸಿದ ಅರಸರನ್ನು ಗುರುತಿಸಿದ್ದು, ಅವರಲ್ಲಿ ಸೊಂಡಾದ ಜೈನ ಪಾಳೆಯಗಾರರು, ಕಾರ್ಕಳದ ಬೈರರಸು ಒಡೆಯರು. ಮಂಗಳೂರಿನ ಬಂಗಾರ್ ನಾಯಕ, ಅಲದಂಗಡಿಯ ಚೌಟರು, ಬೈಲಂಗಡಿಯ ಮೂಲರು, [Mular] ಉಳ್ಳಾಲದ ರಾಣಿ ಮತ್ತು ಬಾರಕೂರಿನ ಜೈನ ನಾಯಕರು ಮುಖ್ಯರೆಂದು ಅಭಿಪ್ರಾಯ ಪಟ್ಟಿದ್ದಾರೆ.[74]

ಕೊಂಕಣಿ ಭಾಷೆಯ ಬಗ್ಗೆ ಚರ್ಚಿಸುತ್ತಾ ಲೇಖಕರು ಐತಿಹಾಸಿಕವಾಗಿ ಮತ್ತು ಭೌಗೋಳಿಕವಾಗಿ ಗೋವಾವು ಕೊಂಕಣಿಯ ಮುಖ್ಯ ಕೇಂದ್ರವೆಂದು ಅಭಿಪ್ರಾಯಪಟ್ಟಿದ್ದಾರೆ. ಗೋವಾದಲ್ಲಿನ 3,50,000 ಕ್ರೈಸ್ತರು ಹಾಗೂ ಬ್ರಿಟಿಷ್ ಪ್ರದೇಶಗಳಲ್ಲಿನ 50,000 ಕ್ರೈಸ್ತರು ಕೊಂಕಣಿ ಭಾಷೆಯನ್ನು ಮಾತನಾಡುತ್ತಾರೆ. ಆದರೆ ಗೋವಾದಲ್ಲಿನ ಕೊಂಕಣಿಯು ಹೆಚ್ಚು ಪೋರ್ಚುಗೀಸ್ ಶಬ್ದಗಳಿಂದ ಮಿಶ್ರವಾಗಿದೆ[75] ಎಂದಿದ್ದಾರೆ.

ಲೇಖಕರು ಅಭಿಪ್ರಾಯ ಪಡುವಂತೆ ಮರಾಠಿ ಮತ್ತು ಕೊಂಕಣಿಗಳು ಮಹಾರಾಷ್ಟ್ರೀ ಪ್ರಾಕೃತ್‌ನಿಂದಾಗಿ ಹುಟ್ಟಿವೆ. ಮರಾಠಿ ಮತ್ತು ಕೊಂಕಣಿಗಳು ಆರ್ಯನ್ ಸ್ಥಳೀಯ ಭಾಷೆಗಳಾಗಿದ್ದು, 10ನೇ ಶತಮಾನದಲ್ಲಿ ಅವು ವಿಭಿನ್ನ ಲಕ್ಷಣಗಳನ್ನು ಪಡಕೊಂಡವು. ಕೆನರಾದ ಕರಾವಳಿಯಲ್ಲಿ ಕ್ರಿ.ಶ.8ನೇ ಶತಮಾನದಲ್ಲಿ ನೆಲೆ ನಿಂತ ನವಾಯತರು ಕೊಂಕಣಿ ಭಾಷೆಯನ್ನು ಮಾತನಾಡುತ್ತಿದ್ದು, ಅವರ ಭಾಷೆಯಿಂದ ಕೊಂಕಣಿ ಎಷ್ಟು ಕಲುಷಿತವಾಗಿದೆ ಎಂದು ತಿಳಿಯಬಹುದು ಎಂದಿದ್ದಾರೆ.[76] ಲೇಖಕರು ಗಮನಿಸಿದಂತೆ ಕೊಂಕಣಿ ಮಾತನಾಡುವ ಅತೀ ಪ್ರಮುಖ ಸಮುದಾಯಗಳೆಂದರೆ, 1) ಕೊಂಕಣಿ ಶೆಣ್ವಿ (Shenvi) ಅಥವಾ ಸರಸ್ವತ ಬ್ರಾಹ್ಮಣರು 2) ಬ್ರಾಹ್ಮಣರಲ್ಲದವರಾದ, ಸೋನಾರರು [Sonars], ಕೊಂಕಣಿ

ಕುಡುಂಬಿಗಳು [Kudumbis or Kunbis], ಮರಾಠರು [Marathas] ಬಂಡಾರಿಗಳು, ಕೊಂಕಣಿ ಖಾರ್ವಿಗಳು [Kharvis], ಸುತಾರರು [Sutars], ಶೀರೋಗಾರಾರು [Sherogars], ಪಡಿತರು [Padits], ಕೊಂಕಣಿ ಮಡಿವಾಳರು [Madivals], ಕೊಂಕಣಿ ಕ್ಷೌರಿಕರು [Kelasis], ಬಾವ್‌ಕುಲೆ [Bavkule] ಹಾಗೂ ಇತರರು. 3) ನವಾಯತರು 4) ಗೋವಾ, ಕೆನರಾ ಮತ್ತು ರತ್ನಾಗಿರಿಯ ಕೆಥೋಲಿಕ್ ಕ್ರೈಸ್ತರು ಹಾಗೂ ಉತ್ತರ ಕೆನರಾದ ಕೋಮಾರ್ರೈಪೈಕರು ಮತ್ತು ಹಳೇಪೈಕಾರು[77] [Komaripaiks & Halepaiks] ಲೇಖಕರು ಗೋವಾದ ಬ್ರಾಹ್ಮಣರ ಹಿನ್ನಲೆ ಬಗ್ಗೆ ಗಮನಹರಿಸಿ ಗೋವಾವು ಕ್ರಿ.ಶ.1469ರಲ್ಲಿ ಅದು ಬ್ರಾಹ್ಮಣ ರಾಜನ ಆಳ್ವಿಕೆಗೆ ಒಳಪಟ್ಟಿತ್ತು. ನಂತರ ಬಿಜಾಪುರದ ಸುಲ್ತಾನರು ಆಕ್ರಮಿಸಿದರು. ಕ್ರಿ.ಶ.1510ರಲ್ಲಿ ಗೋವಾ ಪೋರ್ಚುಗೀಸರ ಅಧಿಪತ್ಯಕ್ಕೆ ಒಳಗಾಯಿತು. ಗೋವಾದ ಮೇಲೆ ಮುಸಲ್ಮಾನರ ಆಕ್ರಮಣವಾದಂದಿನಿಂದ ಇಲ್ಲಿನ ಬ್ರಾಹ್ಮಣ ಹಾಗೂ ಇತರ ಸಮುದಾಯಗಳು ಗೋವಾ ಬಿಟ್ಟು ಕೆನರಾ, ಮಾಳ್ವಾ ಮತ್ತು ವೇನ್‌ಗುರ್ಲಾಗಳಲ್ಲಿ[Vengurla] ನೆಲೆಸಿದರು. ನಂತರ ಪೋರ್ಚುಗೀಸರ ಕಾಲದಲ್ಲಿ ಅವರು ಹಿಂದೂ ಆಚರಣೆಯನ್ನು ನಿಷೇಧಿಸಿದ್ದರಿಂದ ವಲಸೆ ಅಧಿಕವಾಯಿತು ಎಂದಿದ್ದಾರೆ[78]. ಇಲ್ಲಿ ಕೊಂಕಣಿ ಭಾಷೆಯ ಬಗೆಗಿನ ಲೇಖಕರ ಲೇಖನಗಳು ಅಸ್ಪಷ್ಟವಾಗಿವೆ ಹಾಗೂ ಅವು ಒಂದಕ್ಕೊಂದು ಸಮಪರ್ಕವಾಗಿ ಕೊಂಡಿಯಾಗಿಲ್ಲದಿರುವುದರಿಂದ ಅವುಗಳನ್ನು ಅರ್ಥೈಸುವುದು ಕಷ್ಟಕರವಾಗಿದೆ ಎನ್ನಬಹುದು.

ಲೇಖಕರಾದ ಜೆ.ಎ.ಸಲ್ಡಾನರು ಐತಿಹಾಸಿಕ ದಾಖಲೆಗಳ ಕೊರತೆ ಇರುವ ಕಾಲದಲ್ಲೂ ಈ ರೀತಿ ಲೇಖನಗಳನ್ನು ಬರೆದಿರುವುದು ಅವರಿಗೆ ಇತಿಹಾಸದ ಮೇಲಿನ ಆಸಕ್ತಿಯನ್ನು ತಿಳಿಸುತ್ತದೆ. ಆದರೆ ಲೇಖಕರು ಅವರ ಲೇಖನಗಳಲ್ಲಿ ಸ್ಪಷ್ಟವಾದ, ನಿಖರವಾದ ದಿನಾಂಕಗಳನ್ನು ನಮೂದಿಸುವಲ್ಲಿ ವಿಫಲರಾಗಿದ್ದಾರೆ. ಕದಂಬರ ಇತಿಹಾಸಕ್ಕೆ ಸಂಬಂಧಿಸಿದಂತೆ ಅವರು ಸ್ಥಳೀಯ ರಾಜಮನೆತನವೆಂದು ಬಣ್ಣಿಸಿ, ಅವರ ಬಗ್ಗೆ ದೀರ್ಘವಾದ ವಿವರಣೆಯನ್ನು ನೀಡಿದ್ದಾರೆ. ಲೇಖಕರು ಸ್ವಾಭಾವಿಕವಾಗಿಯೇ ಪೋರ್ಚುಗೀಸರ ಬಗ್ಗೆ ಮೃದು ದೋರಣೆಯನ್ನು ತಳೆದಿದ್ದಾರೆ. ಕ್ರೈಸ್ತರು ಗೋವಾದಿಂದ ವಲಸೆ ಬಂದರು ಎಂದು ವಿವರಿಸಿರುವ ಲೇಖಕರು ಯಾವ ಕಾರಣಕ್ಕಾಗಿ ಹಾಗೂ ಅದರ ಐತಿಹಾಸಿಕ ಹಿನ್ನಲೆ ತಿಳಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಲೇಖಕರ ಬರವಣಿಗೆಗಳಲ್ಲಿ ಕೆಳದಿಯ ಅರಸರ ಇತಿಹಾಸವು ಅವರು ಕ್ರೈಸ್ತರಿಗೆ ಆಶ್ರಯ ನೀಡಿದರು ಎನ್ನುವ ಅಂಶದೊಂದಿಗೆ ವಿಜ್ರಂಭಿಸಿರುವುದನ್ನು ಕಾಣಬಹುದು. ಹೈದರ್ ಅಷ್ಟೊಂದು ಖಂಡನೆಗೆ ಗುರಿಯಾಗಿದಿದ್ದರೂ, ಟಿಪ್ಪು, ಲೇಖಕರ ಬರವಣಿಗೆಯುದ್ದಕ್ಕೂ ಟೀಕೆಗೆ ಗುರಿಯಾಗಿದ್ದಾನೆ. ಟಿಪ್ಪುವಿನ ಪಥನವು ಕೆನರಾ ಕ್ರೈಸ್ತರಿಗೆ ಒಂದು ಹೊಸ ಯುಗವನ್ನು ತಂದಿತು. ಆ ಕೀರ್ತಿ ಬ್ರಿಟಿಷರಿಗೆ ಸಲ್ಲುತ್ತದೆ. ಹೀಗೆ ವಸಾಹತುಶಾಹಿ ಕಾಲದಲ್ಲಿ ಕೆನರಾ ಎಲ್ಲಾ ರೀತಿಯಲ್ಲೂ ಅಭಿವೃದ್ಧಿಯಾಯಿತು ಎಂದಿದ್ದಾರೆ. ಅದೇ ರೀತಿ ಲೇಖಕರು ಅವಕಾಶ ಸಿಕ್ಕಿದಲ್ಲಿ ಎಲ್ಲಾ ಜೆಸ್ಯೂಟರನ್ನು

ಹಾಗೂ ಪಾದ್ರಿಗಳನ್ನು ಪ್ರಶಂಸಿಸಿ ಬರೆದಿದ್ದಾರೆ. ಪೋರ್ಚುಗೀಸರು ಮರಣಾಂತಿಕವಾದ ನೀತಿ ಅನುಸರಿಸಿದನ್ನು ವರ್ಣಿಸುತ್ತಾ, ಅವರು ಸ್ಥಳೀಯ ರಾಜರಿಂದ ಭಾರಿ ಪ್ರತಿರೋಧವನ್ನು ಅನುಭವಿಸಿದರು. ಪೋರ್ಚುಗೀಸರು ಭಾರತಕ್ಕೆ ಬಂದುದರಿಂದ ಕೆನರಾಕ್ಕೆ ಕ್ರೈಸ್ತ ಧರ್ಮ ಬಂತು ಹಾಗೂ ಅವರು ಅದನ್ನು ಯಾವಾತ್ತೂ ಬೆಂಬಲಿಸಿದರು ಎಂದಿದ್ದಾರೆ. ಇನ್ನೊಂದೆಡೆ ಲೇಖಕರ ಕೆನರಾದ ವಾಣಿಜ್ಯ ಇತಿಹಾಸವು, ವಾಣಿಜ್ಯ ಇತಿಹಾಸಕ್ಕಿಂತ ಭಿನ್ನವಾಗಿ ವಿದೇಶೀ ಶಕ್ತಿಗಳ ಮತ್ತು ಸ್ಥಳೀಯ ಶಕ್ತಿಗಳ ಹೋರಾಟದ ಇತಿಹಾಸದ ವರ್ಣನೆಯಾಗಿದ್ದು, ಅವರು ಬೇರೆ ಬೇರೆ ಕಾಲಘಟ್ಟದಲ್ಲಿ, ವಿಭಿನ್ನ ಹಿತಾಸಕ್ತಿಗಳೊಂದಿಗೆ, ಅವರ ಬೇರೆ ಬೇರೆ ಉದ್ದೇಶಗಳ ರಕ್ಷಣೆಗಾಗಿ ಹೋರಾಡಿರುವುದು ಲೇಖಕರ ಬರವಣಿಗೆಗಳಲ್ಲಿ ಬಿಂಬಿತವಾಗಿದೆ. ಅದರಲ್ಲಿ ವಾಣಿಜ್ಯದ ಹಿತಾಸಕ್ತಿಯು ಒಂದಾಗಿದೆ. ಪೋರ್ಚುಗೀಸರು ಮರಾಠರಿಂದ ಪ್ರಬಲ ಪ್ರತಿರೋಧ ಎದುರಿಸಿದ್ದಾರೆ ಹಾಗೂ ಡಚ್ಚರು ಮತ್ತು ಇಂಗ್ಲೀಷರು ಅವರ ಪ್ರಾಬಲ್ಯವನ್ನು ಕೆನರಾದಲ್ಲಿ ಮುರಿದರೂ, ಕ್ರೈಸ್ತರು ಬ್ರಿಟಿಷರ ರಕ್ಷಣೆಯಲ್ಲಿ ಸಮೃದ್ಧವಾಗಿ ಬೆಳೆದರು ಎಂದಿದ್ದಾರೆ.

ಸಂದರ್ಭ ಸೂಚಿ

1. ಡೆನ್ನಿಸ್ ಫೆರ್ನಾಂಡಿಸ್, 'ಯೂಜಿಂಗ್ ದಿ ಫಾಸ್ಟ್ : ಮ್ಯಾಂಗಲೋರ್ ಮ್ಯಾಗಜೀನ್ ಆ್ಯಂಡ್ ದಿ ಹಿಸ್ಟರಿ ಆಫ್ ಕೆನರಾ', *ಪ್ರೋಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್*, 66ನೇ ಅಧಿವೇಶನ, ಶಾಂತಿನಿಕೇತನ, 2005–06, ಲ್ವಥೋ ಕಲರ್ ಪ್ರಿಂಟರ್ಸ್, ಅಲಿಘರ್, ಪುಟ 919.
2. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:2, 1898, ಪುಟ 44.

   "The year 1899 will see the people of kanara joyfully celebrate the first centenary of the most important and happiest event in the history of their land, namely, the fall of Seringapatam and their deliverance from the tyranny and misrule of Tippu Sultan, and the commencement of the golden age of their country. At a time of such universal jubilation it is natural that they should like to take a view of the past"
3. *ಮ್ಯಾಂಗಲೋರ್ ಮ್ಯಾಗಜೀನ್*, ಪೂರ್ವೋಕ್ತ, ಪುಟ 45.
4. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ III, 1905, ಪುಟ 249.
5. ಅದೇ, ಸಂಪುಟ I, ನಂ:2, 1898, ಪುಟ 45.
6. ಅದೇ .
7. ಜೆ. ಸ್ಟರಕ್, *ಮೆಡ್ರಾಸ್ ಡಿಸ್ಟ್ರಿಕ್ಸ್ ಮಾನ್ಯುವೆಲ್ಸ್ : ಸೌತ್ ಕೆನರಾ*, ಸಂಪುಟ 1, ಗವರ್ನಮೆಂಟ್ ಪ್ರೆಸ್, ಮೆಡ್ರಾಸ್, 1894, ಪುಟ 2.
8. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:2, 1898, ಪುಟ 45–46.

   The history of Kanara was no different as it had to depend on a "hopeless mixture of myths and legends".
9. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ I, ನಂ:2, 1898, ಪುಟ 46–47. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ III, 1905, ಪುಟ 250. ಜೆ. ಸ್ಟರಕ್, ಪೂರ್ವೋಕ್ತ, ಪುಟ 57.

   "To geologist it offers points of great interest and it is now a proved fact that the mythological tradition of parusharamashreshti is not an invention of the Brahmans, but a geological truth, proved by marine deposits of coral and sea-shells right on the top of the hills which establish the fact that the tract now forming the line of hills was once washed by the sea and the valley's below have been lifted up by a great earth quake".
10. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:2, 1898, ಪುಟ 47–48.

11. ಕೆ.ವಿ.ರಮೇಶ್, *ತುಳುನಾಡಿನ ಇತಿಹಾಸ*, ಗೀತಾ ಬುಕ್ ಹೌಸ್, ಮೈಸೂರು, 1969, ಪುಟ 17–18.

12. ಪಿ. ಗುರುರಾಜ ಭಟ್, ತುಳುನಾಡು, ಭವ್ಯವಾಣಿ ಪಬ್ಲಿಕೇಶನ್, ಉಡುಪಿ, 1963, ಪುಟ 4.

13. ಕಡವ ಶಂಭು ಶರ್ಮ, ತುಳು *ದೇಶ ಭಾಷಾ ವಿಚಾರವು*, ಜನತಾ ಪವರ್ ಪ್ರೆಸ್, ದ. ಕನ್ನಡ,1970, ಪುಟ 7.

14. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:2, 1898, ಪುಟ 48.

15. ಮಳವಳ್ಳಿಯು ಮೈಸೂರಿನ ಶಿಕಾರಿಪುರ ತಾಲೂಕಿನಲ್ಲಿದೆ.

16. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:2, 1898, ಪುಟ 76.

17. ಅದೇ, ಪುಟ 76–77.

"Essentially a hilly country lying between the high ghauts on one side and the vast ocean on the other, kanara with its hills, valley's, rivers and forests would appeal strongly to the imagination of any people, and its early settlers, Dravidians, must have found the country teeming with the demons".

18. ಅದೇ, ಪುಟ 77.

19. ಅದೇ.

20. ಜೆ. ಸ್ಟರಕ್, ಪೂರ್ವೋಕ್ತ, ಪುಟ 181–182.

The earliest mention of Christianity, at a place which may have been in canara, is in the writings of Cosmos Indico pleustes, who visited the coast a bout 522 A.D. and mentions the existence of a Persian Bishop at Kalliana, which is ordinarily understood to be Kalianpur near Udupi and owing to certain apparent points of resemblance to Christian precepts, Suggestions have been made that the teaching of the Hindu reformer Madhavacharya was affected by the Christian influences prevailing So near to his birth – place, Udupi, which is still one of the head-quarters of the sect founded by him.

ಗಣಪತಿರಾವ್ ಐಗಳ್, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*, ಶಾರದ ಪ್ರೆಸ್, ಮಂಗಳೂರು 1923, ಪುಟ 138. ಸೆವ್ರಿನ್ ಸಿಲ್ವಾ, *ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ*, ಸಂಪುಟ 1, ಸ್ಟರ್ ಆಫ್ ಕೆನರಾ ಪ್ರೆಸ್, ಕುಮುಟಾ, 1957, ಪುಟ 23.

Christianity existed in Kalyanpur in the early centuries of the Christian Era, towards the approach of the 16th century, every trace of it had vanished and Christianity was absolutely extinct in canara.

ಡೆನ್ನಿಸ್ ಫೆರ್ನಾಂಡಿಸ್, *ಯುಜಿಂಗ್ ದಿ ಫಾಸ್ಟ್ : ಮ್ಯಾಂಗಲೋರ್ ಮ್ಯಾಗಜೀನ್ ಆ್ಯಂಡ್ ದಿ ಹಿಸ್ಟರಿ ಆಫ್ ಕೆನರಾ*, ಪ್ರೋಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, 66ನೇ

ಅಧಿವೇಶನ, 2005-06, ಲ್ವಥೋಕಲರ್ ಪ್ರಿಂಟರ್ಸ್, ಆಲಿಫರ್, ಪುಟ 920. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ 1, ನಂ:3, 1898, ಪುಟ 77.

21. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ1, ನಂ:3, 1898, ಪುಟ 78. ಉದಯ ವರ್ಮರಾಜ, *ತುಳುನಾಡಿನ ಗತವೈಭವ*, 1998 ಪುಟ 12.

22. ಕೆ.ವಿ.ರಮೇಶ, *ತುಳುನಾಡಿನ ಇತಿಹಾಸ*, ಪೂರ್ವೋಕ್ತ, ಪುಟ 21.

23. *ಮ್ಯಾಂಗಲೋರ್ ಮ್ಯಾಗಜೀನ್*, ಪೂರ್ವೋಕ್ತ ಪುಟ 78. ಉದಯ ವರ್ಮರಾಜ, ಪೂರ್ವೋಕ್ತ, ಪುಟ 11.

24. ಉದಯ ವರ್ಮರಾಜ, *ತುಳುನಾಡಿನ ಗತವೈಭವ*, 1998, ಪುಟ 11.

25. *ಮ್ಯಾಂಗಲೋರ್ ಮ್ಯಾಗಜೀನ್*, ಪೂರ್ವೋಕ್ತ, ಪುಟ 78-79.

26. ಅದೇ, ಪುಟ 79.

1) From Halsi by Mrigesavarman to the gods the Supreme arhats.
2) From Devagere by Mrigesavarman to the gods the Supreme arhats
3) From Devagere by Mrigesavarman to the community of ascetics of the Svetapata sect, to the gods, the divine arhats and the great Jinendra and to the community of ascetics of the Nirgra sect.
4) From Halsi by Ravivarman for the festival of the god Jinendra.
5) From Halsi by the same king to the god Jinendra.
6) From Halsi by Harivarman for a shrine of an arhat.
7) From Halsi by Harivarman for a Jain temple.
8) From Devagere by Devavarman to the members of the yapaniya community for a temple of the divine arhat.
9) From Banahalli in the Kadur District by Krishnavarman II to a Brahmin.
10) From kudgere by Madhatrivarman to a Bhrahmin.

27. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನ:3, 1898, ಪುಟ 79. ಕಡವ ಶಂಭು ಶರ್ಮ, *ದೇಶ ಭಾಷಾ ವಿಚಾರವು*,ಜನತಾ ಪವರ್ ಪ್ರೆಸ್, ದ. ಕನ್ನಡ, 1970, ಪುಟ 7. ಕೆ.ವಿ.ರಮೇಶ, ಪೂರ್ವೋಕ್ತ, ಪುಟ 21. ಜೆ. ಸ್ಟರಕ್, ಪೂರ್ವೋಕ್ತ, ಪುಟ 59-60.

Mayura Varma was born at Valabhipur and brought Brahmins from the north to the western coast and Banavasi, whence they were distributed by his son throughout Haiga and Tuluva and especially at Gokarnam. They seem to have been followers of Bhattacharya and this may have given rise to the tradition that they came from the banks of the Godavari.

28. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:3, 1898, ಪುಟ 79–80.

29. ಅದೇ, ಪುಟ 80.

30. ಕೆ.ವಿ.ರಮೇಶ, ಪೂರ್ವೋಕ್ತ, ಪುಟ 21.

31. *ಮ್ಯಾಂಗಲೋರ್ ಮ್ಯಾಗಜೀನ್*, ಪೂರ್ವೋಕ್ತ, ಪುಟ 80.

32. ಅದೇ, ಪುಟ 80. ಉದಯ ವರ್ಮರಾಜ, ಪೂರ್ವೋಕ್ತ, ಪುಟ 30–31.

ಮಯೂರ ವರ್ಮನು ಕ್ಷತ್ರಿಯ ವೃತ್ತಿಯನ್ನು ಸ್ವೀಕರಿಸಿ ಸ್ವತಂತ್ರ್ಯ ರಾಜ್ಯವನ್ನೇ ಕಟ್ಟುವುದರಲ್ಲಿ ಕಾಲ ಕಳೆದುದರಿಂದ ಆತನು ಅಹಿಚ್ಛತ್ರದಿಂದ 32 ಬ್ರಾಹ್ಮಣ ಕುಟುಂಬಗಳನ್ನು ತಂದು ನೆಲೆ ನಿಲ್ಲಿಸಿದನೆಂಬುದು ಸರಿಯಲ್ಲ. ಈತನ ಐದು ತಲೆಯ ಮುಂದಿನವನಾದ ಮುಕ್ಕಣ್ಣನು ಈ ಕಾರ್ಯವನ್ನು ಮಾಡಿದನೆಂಬ ವಿಷಯಕ್ಕೆ ಆಧಾರಗಳಿವೆ, ಈ ಮುಕ್ಕಣ್ಣನಿಗೆ ಮಯೂರ ವರ್ಮನೆಂಬ ಹೆಸರು ಇದ್ದಿಲ್ಲ.

33. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:4, 1898, ಪುಟ 108–109.

34. ಅದೇ, ಪುಟ 109.

35. ಅದೇ.

36. ಅದೇ, ಪುಟ 110.

37. ಅದೇ.

38. ಅದೇ.

39. ಅದೇ, ಪುಟ 110–111.

40. ಅದೇ, ಪುಟ 111–112.

41. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:5, 1899, ಪುಟ 139.

42. ಅದೇ, ಪುಟ 139–140.

43. ಅದೇ, ಪುಟ 140.

44. ಅದೇ, ಪುಟ 141.

45. ಅದೇ, ಪುಟ 141–142.

46. ಪಿಯುಸ್ ಫಿಡೆಲಿಸ್ ಪಿಂಟೊ, *ಆಂಗ್ಲೋ-ಮೈಸೂರು ಸಂಬಂಧದ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ಕೊಂಕಣಿ ಕ್ರೈಸ್ತರು* (ಕ್ರಿ.ಶ.1761–1799), ಸಮನ್ವಯ ಪ್ರಕಾಶನ, ಮಂಗಳೂರು, 1999, ಪುಟ 24.

47. ಡೆನ್ನಿಸ್ ಫೆರ್ನಾಂಡಿಸ್, ಪೂರ್ವೋಕ್ತ, ಪುಟ 922.

48. ಪಿಯುಸ್ ಫಿಡೆಲಿಸ್ ಪಿಂಟೋ, *ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ*(ಕ್ರಿ.ಶ.1500–1763), ಸಮನ್ವಯ ಪ್ರಕಾಶನ, ಮಂಗಳೂರು, 1999, ಪುಟ 109–132. ಪಿಯುಸ್ ಫಿಡೆಲಿಸ್ ಪಿಂಟೊ, ಪೂರ್ವೋಕ್ತ, ಪುಟ 12–16.

49. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:5, 1899, ಪುಟ 142.

"To the rapacity of his father Tippu added cruelty, bigotry and intolerance. As vindictive as he was fanatical, he selected the Christians of Kanara for the special objects of his vengeance and mahommedan hate".

50. ಅದೇ, ಪುಟ 142.

51. ಅದೇ, ಪುಟ 142–143.

"What India requires with its numberless races, communities, castes, sects and religions, is one strong bureaucracy able to defend the country from invasion from abroad, to hold the balance of Justice even for all classes and conditions of men and to assure to all security of life and property and the free exercise of their religion. Can India provide such a government for itself? It is true that great and wise rulers have risen up in it, but its Akbar was followed by an Aurangazib, India can boast of a Sivaji, a great warrior and a benevolent king, but he was soon succeeded by the sensual, indolent and cruel Sambaji. Of the foreign powers France narrowly missed conquering India, and the prize was carried off by England."

52. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:5, 1899, ಪುಟ 143.

England, on the contrary to whom the achievement and liberties of generations have given an empire upon which the sun never sets, who is wise with the experience of centuries of constitutional government, and who carries liberty, Justice and a spirit of honour and enterprise whenever she plants her flag alone of all European powers can work India's weal. Under the Sway of England's power Kanara passed on May 4, 1799 and under her beneficent and wise rule we have enjoyed a century of Uninterrupted peace, Steady progress and unprecedented prosperity.

53. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 2, ನಂ:2, 1901, ಪುಟ 46.

54. ಅದೇ, 46-47.

The discontent caused by this state of things was fanned into a flame by some intriguing agitators who had other objects than the interest of the ryots at heart, and in 1831 the country was threatened with serious disturbances by riotous assemblies (kuts) of the people, who resisted the demands of Government officials for rent. The madras Government, anxious to redress their grievances deputed Mr. Stokes as a commissioner to investigate into the causes of their discontent. His investigations, however, disclosed that it was not so much heavy assessment that caused the disturbances, as the intrigues of the Brahmin officials in the collector's kutehery, who wished to discredit the administration of the collector Mr. Dickinson and to oast the Christians from the high positions they held in the revenue service. These intriguers were punished and order was soon restored, with the gradual increase in the population and improvement of trade, prices rose, profite increased and the country soon settled into its normal state.

55. ಜೌನ್‌ಸ್ಟೋಕ್ಸ್, *ಸಿಲೆಕ್ಷನ್ ಫ್ರಮ್ ದಿ ರೆಕಾರ್ಡ್ ಆಫ್ ದಿ ಕಲೆಕ್ಟರ್ ಆಫ್ ಸೌತ್ ಕೆನರಾ*, ಮ್ಯಾಂಗಲೋರ್, 1885.

56. *ಮ್ಯಾಗಲೋರ್ ಮ್ಯಾಗಜೀನ್*, ಸಂಪುಟ 2, ನಂ:2, 1901, ಪುಟ 47-48.

57. ಅದೇ, ಪುಟ 48.

58. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:6, 1899, ಪುಟ 174-175.

59. ಮೋರ್‌ಸ್ ಎಂದರೆ ಮಹಮ್ಮದನರು ಅಥವಾ ಮುಸಲ್ಮಾನರು ಎಂದಾಗಿದೆ.

60. *ಮ್ಯಾಂಗಲೋರ್ ಮ್ಯಾಗಜೀನ್*, ಪೂರ್ವೋಕ್ತ, ಪುಟ 175-176.

61. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:7, 1899, ಪುಟ 204.

It was from Portugal or from Goa, the capital of her oriental empire and the 'Rome of the East' that year after year bands of missionaries went both with apostolic zeal to carry the blessings of the true faith to the Gentiles and to die were it necessary, Martyrs in its cause. They were men who had turned their backs on the world with all its pomps and pleasures, who could rise superior to the attractions of home, country, and kindred and who valued the salvation of a single soul as of more worth than the conquest of an empire. They were humble in the eyes of the world and utterly despised money, glory and honour. Fearing

none but God and hoping nothing but from him, they went both bearing their lives in their hands and looking upon death as a deliverance, their sole hope and consolation being to carry the light of the Faith to those "who were setting in the darkness and shadow of death" How well they labored and how efficaciously they preached and taught may be gathered from the numerous conversions which they worked among the native population, no less by the example of their noble and self sacrificing lives than by the charm of the sublime religion which they announced. Their zeal was seconded and their efforts were powerfully aided by the crown of Portugal, as became a Christian government and nation, by lending its influence and prestige to uphold the catholic religion and to bring pressure to bear on the Native prices to allow the missionaries liberty to preach and build churches and to guarantee religious and civil liberty to their converts.

62. ಜೌನ್‌ಸ್ಟೋಕ್ಸ್, ಪೂರ್ವೋಕ್ತ.

63. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:7, 1899, ಪುಟ 205.

"The king of Portugal is the lord of the sea of all the would and also of all this coast, for which reason all the rivers and ports which have got shipping have to obey him, and pay tribute for their people who go in their fleets, and this only as a sign of obedience, in order that there by their ports may be free and that they may carry on in them their trade and profits in security, neither trading in pepper nor bringing Turks, nor going to the port of Calicut, because for any of these three things the ships which shall be found to have done them shall be burned, with as many as may be captured in them."

64. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:7, 1899, ಪುಟ 206–208.

65. ಅದೇ, ಪುಟ 208.

66. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:8, 1899, ಪುಟ 238–239.

67. ಅದೇ, ಪುಟ 239–240.

68. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:10, 1900, ಪುಟ 302–304.

69. ಅದೇ, ಪುಟ 304.

70. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 1, ನಂ:11, 1900, ಪುಟ 333–336.

Whenever the Portuguese settled they planted the cross side by side with their national flag, but their missionaries, under the patronage and protection of the crown, pushed their religious

conquests for beyond the territory under its control. Thus it happened that by the middle of the 17th century the whole of Kanara, then subject to the Bednore kings, was mapped out into some 20 parishes with large Christian congregations. In there Christians the Bednore found their most civilized and loyal subjects. Though opposed to the admission of European missionaries in to their kingdom, the Bednore Government as a rule patronized their Christian subjects and made large grants of land to Christian churches. Christianity thus spread and flourished in kanara to an extent unparalleled perhaps in any other province not under the direct control of a European power.

71. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ 1, ನಂ:12, 1900, ಪುಟ 365–367.

1. Rosario of Mangalore 2.Milagres of Mangalore 3.Bolar, Mangalore, the chapel rebuilt by Father Miranda 4. Monte Marian, Feringapet, built by father Miranda. 5. Omzur [The Woly Family] 6. Ullal [Our lady of mercy] 7. Pejar [St. Joseph] 8. Bantwal [Bom Jesu] 9. Bidrem [Santa Cruz], the church preserved intact by favour, it is said of the chowder Raja of Mudbidri. 10. Mogarnada [The mother of God] 11. Agrar [San Salvada] 12. Mulki [The Immaculate conception] 13. Kiren [N.S. dos Remedios] 14. Sirva [N.S.de Saude] 15. Karkal [St. Lowrence] 16. Kallianpur [N.S. de milagres] 17. Condapoor [N.S. de Rosario] 18. Gangoli [Immaculate conception] 19.Barcelore [N.S.de Rosario] 20. Baindur [Immaculate Conception] 21. Chando [St. Francis Xavier] 22. Honore [San Salvador] 23. Sulmona [N.S.dos Remedos Remedios] 24. Kumpta 25. Sunkey [Immaculate conception] built by the Carmelite fathers.

72. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ 1, ನಂ:12, 1900, ಪುಟ 367–368.

73. ಅದೇ, ಸಂಪುಟ 2, ನಂ:3, 1901, ಪುಟ 74.

74. ಅದೇ, ಸಂಪುಟ 2; ನಂ:4, 1901, ಪುಟ 107–108.

75. ಅದೇ, ಸಂಪುಟ 2, ನಂ:5, 1902, ಪುಟ 170.

76. ಅದೇ, ಸಂಪುಟ 2, ನಂ:7, 1902, ಪುಟ 204.

77. ಅದೇ, ಸಂಪುಟ 2, ನಂ:9, 1903, ಪುಟ 266.

78. ಅದೇ, ಸಂಪುಟ 2, ನಂ:1, 1904, ಪುಟ 13–14.

ಅಧ್ಯಾಯ : ನಾಲ್ಕು

ಮಂಗಳೂರು ಧರ್ಮಪ್ರಾಂತ್ಯದ ಚರಿತ್ರೆ

ಅಧ್ಯಾಯ : ನಾಲ್ಕು

ಮಂಗಳೂರು ಧರ್ಮಪ್ರಾಂತ್ಯದ ಚರಿತ್ರೆ

'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಕೆನರಾದ ಚರಿತ್ರೆಯಂತೆಯೇ ಮಂಗಳೂರು ಧರ್ಮಪ್ರಾಂತ್ಯದ ಬಗ್ಗೆ ಹಲವು ಕಂತುಗಳ ದೀರ್ಘವಾದ ಲೇಖನಗಳು 'ದಿ ಹಿಸ್ಟರಿ ಆಫ್ ದಿ ಡಯಸೀಸ್ ಆಫ್ ಮ್ಯಾಂಗಲೋರ್' ಎಂಬ ಶೀರ್ಷಿಕೆಯಡಿ ಪ್ರಕಟವಾಗಿವೆ. ಮಂಗಳೂರು ಧರ್ಮ ಪ್ರಾಂತ್ಯದ ಇತಿಹಾಸವನ್ನು ಫಾ।ಮಾಫೇಯವರು ಬರೆದ ಕೆನರಾ ಇತಿಹಾಸದ ಹಸ್ತಪ್ರತಿಗಳಿಂದ ಆಯ್ದುಕೊಳ್ಳಲಾಗಿದೆ ಎಂದು ಹೇಳಲಾಗಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಮಲಬಾರ್‌ನ ಕೆಥೋಲಿಕ್ ಚರ್ಚ್‌ಗಳ ಬಗ್ಗೆ[1] ಪೋರ್ಚುಗೀಸರು ಭಾರತಕ್ಕೆ ಬರುವ ಮೊದಲಿನ ಕಾಲದಿಂದ ಆರಂಭಿಸಿ, 19ನೇ ಶತಮಾನದವರೆಗಿನ ಇತಿಹಾಸವನ್ನು ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ 1901 ರಿಂದ 1904 ರ ವರೆಗೆ ಪ್ರಕಟಿಸಲಾಗಿದೆ. ಫಾ।ಮಾಫೇಯವರು ಮಂಗಳೂರಿಗೆ ಮೊದಲು ಆಗಮಿಸಿದ 9 ಮಂದಿ ಜೆಸ್ಯೂಟರಲ್ಲಿ ಒಬ್ಬರಾಗಿದ್ದು, ಒಬ್ಬ ಬಹುಭಾಷಾತಜ್ಞ (linguist) ಹಾಗೂ ಇತಿಹಾಸಕಾರರಾಗಿದ್ದರು.[2] ಇವರು ಸಂಗ್ರಹಿಸಿದ ಐತಿಹಾಸಿಕ ದಾಖಲೆಗಳನ್ನು ಬಳಸಿಕೊಂಡು ಫಾ। ಮೋರ್.ಎಸ್.ಜೆ ರವರು ತಮ್ಮ ಅಮೂಲ್ಯ ಕೃತಿಯಾದ 'ದಿ ಹಿಸ್ಟರಿ ಆಫ್ ದಿ ಡಯಸೀಸ್'ನ್ನು 1905ರಲ್ಲಿ ಪ್ರಕಟಿಸಿದರು.

ಲೇಖಕರು ಪೋರ್ಚುಗೀಸರು ಬರುವುದಕ್ಕಿಂತ ಮೊದಲಿನ ಕೆನರಾದ ಕ್ರೈಸ್ತಧರ್ಮದ ಬಗ್ಗೆ ವಿವರ ಕೊಡುವ ಪ್ರಯತ್ನ ಮಾಡಿದ್ದಾರೆ. ಅವರ ಪ್ರಕಾರ ಕ್ರಿಸ್ತಶಕಾರಂಭದಲ್ಲೇ ಕ್ರೈಸ್ತ ಧರ್ಮದ ಪ್ರಚಾರ ಇಲ್ಲಿ ನಡೆದಿರಬೇಕು. ಕ್ರಿಸ್ತಶಕಾರಂಭದಲ್ಲಿ ಸಂತ ಥೋಮಸರು ಇದನ್ನು ಭಾರತಕ್ಕೆ ತಂದರು. ಇವರನ್ನೇ ತಮ್ಮ ಸ್ಥಾಪಕನೆಂದು ಹೇಳುತ್ತಿರುವ ಸಿರಿಯನ್ ಕ್ರೈಸ್ತರ ಇತಿಹಾಸ ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಕ್ರಿಸ್ತಶಕಾರಂಭದಿಂದಲೇ ಪ್ರಾರಂಭವಾಗುತ್ತದೆ. ಪ್ರಾಚೀನ ಕಾಲದಿಂದಲೇ ದೂರದ ವಿದೇಶಿಯರಿಗೆ ಮಂಗಳೂರಿನ ಪರಿಚಯವಿತ್ತು. ರೋಮ್‌ನ ಅರಸನಾದ ಅಗಸ್ಟಸ್‌ನ ಕಾಲದಿಂದ ರೋಮ್ ಸಾಮ್ರಾಜ್ಯ ಬಿದ್ದು ಹೋಗುವವರೆಗೆ ರೋಮನರ ನಾವೆಗಳು ಪಶ್ಚಿಮ ಕರಾವಳಿಯಲ್ಲಿ ವ್ಯಾಪಾರ ಮಾಡುತ್ತಿದ್ದವು. ಆದುದರಿಂದ ಕ್ರಿಸ್ತಶಕಾರಂಭದಿಂದಲೇ ಕ್ರೈಸ್ತ ಧರ್ಮ ದಕ್ಷಿಣ ಭಾರತದಲ್ಲಿ ಭೋದಿಸಲ್ಪಟ್ಟಿತು ಎಂದು ಲೇಖಕರು ಹೇಳುತ್ತಾರೆ. ಆದರೆ ಕೆನರಾದಲ್ಲಿ ಕ್ರೈಸ್ತಧರ್ಮದ ಪ್ರಚಾರದ ಬಗ್ಗೆ ತಿಳಿಯಲು ಆಧಾರಗಳಿಲ್ಲ. ಕಲ್ಯಾಣಪುರದಲ್ಲಿ ಆರನೇ ಶತಮಾನದಲ್ಲಿ ಒಬ್ಬ ಕ್ರೈಸ್ತಧರ್ಮ ಗುರು ಇದ್ದನೆಂದು ಚರಿತ್ರೆ ಹೇಳುತ್ತದೆ. ಆದರೆ ಇದು ನಮ್ಮ ದಕ್ಷಿಣ ಕನ್ನಡದ ಕಲ್ಯಾಣಪುರವಾಗಿರದೇ ಕಲಚೂರಿ ಅರಸರ ರಾಜಧಾನಿ ಕಲ್ಯಾಣಿ (ಮುಂಬೈಯ ಥಾನಾ ಜಿಲ್ಲೆಯಲ್ಲಿದೆ)ಯಾಗಿರಬೇಕೆಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.[3] ಲೇಖಕರು

'ಓರಿಯಂಟಲ್ ಕಾಂಕ್ವಿಸ್ಟಾಡೊ'ವನ್ನು ಉಲ್ಲೇಖಿಸುತ್ತಾ, ಕ್ರಿ.ಶ 1493 ರಲ್ಲಿ ಕೆಲವು ಮೊಗೇರರು ಮಂಗಳೂರಿನ ಹತ್ತಿರ ಸಮುದ್ರದಲ್ಲಿ ಒಂದು ದಿವಸ ಸಾಯಂಕಾಲ ಮೀನು ಹಿಡಿಯಲಿಕ್ಕೆ ಹೋದರು. ಮರುದಿವಸ ಮುಂಜಾನೆ ಅವರು ತಮ್ಮ ಬಲೆಗಳನ್ನು ಮೇಲಕ್ಕೆ ಎಳೆದಾಗ ಒಂದೇ ಒಂದು ಮೀನಾದರೂ ಅದರಲ್ಲಿ ಇರಲಿಲ್ಲ. ಒಂದು ಮರದ ಶಿಲುಬೆ ಮಾತ್ರವೇ ಸಿಕ್ಕಿತು. ಇದು ಏನೆಂಬುದಾಗಲೀ ಅಥವಾ ಅದರ ಮಹತ್ವವೇನೆಂಬುದಾಗಲೀ ಅವರಿಗೆ ಗೊತ್ತಾಗಲಿಲ್ಲ. ಅದು ಸಿಕ್ಕಿದ ಸ್ಥಳಗಳಲ್ಲಿ ಸಮುದ್ರ ಶಾಂತವಾಗಿತ್ತಲ್ಲದೆ, ಮೀನುಗಳು ಧಾರಳವಾಗಿ ದೊರಕಿದವು. ಈ ಆಶ್ಚರ್ಯವನ್ನು ಕಂಡು ಅವರು ಆ ಶಿಲುಬೆಯನ್ನು ತಮ್ಮ ದೇಶದ ರಾಜನಾದ ಬಂಗರಾಜನಿಗೆ ಕೊಟ್ಟರು. ರಾಜನು ಬಹಳ ಸಂತೋಷಪಟ್ಟು ಅದನ್ನು ಸ್ವೀಕರಿಸಿ ಅದನ್ನು ತನ್ನ ಅಪೂರ್ವವಾದ ವಸ್ತುಗಳ ಸಂಗ್ರಹಾಲಯದಲ್ಲಿ ಇರಿಸಿದನು. ಇದನ್ನು ಒಲಿವ್ ಮರದಿಂದ ಮಾಡಲಾಗಿತ್ತು ಹಾಗೂ ಕಾನಾ ದೇಶದ ಅನೇಕ ವಿಷಯಗಳು ಅದರಲ್ಲಿ ಕೆತ್ತಲ್ಪಟ್ಟಿದ್ದವು. ಕ್ರಿ.ಶ 1611 ರಲ್ಲಿ ಗೋವೆಯ ಮಿಕಾಯೇಲ್ ಡಿ.ಅಲ್ಮೇಡಾ ಬಂಗರಾಜನ ಆಸ್ಥಾನಕ್ಕೆ ಭೇಟಿ ಕೊಟ್ಟು ಆತನ ಸ್ನೇಹವನ್ನು ಬೆಳೆಸಿಕೊಂಡಿರಲು, ರಾಜನು ಒಂದು ದಿನ ತನ್ನ ಅರಮನೆಯ ಅಪೂರ್ವ ಸಂಗ್ರಹಾಲಯವನ್ನು ಆತನಿಗೆ ತೋರಿಸಿದನು. ಅದರಲ್ಲಿ ಆ ಶಿಲುಬೆಯನ್ನು ಗಮನಿಸಿ, ಅದನ್ನು ತನಗೆ ಕೊಡಬೇಕೆಂದು ಬೇಡಿಕೊಂಡನು. ನಂತರ ರಾಜನಿಗೆ ಬೇರೆ ಹೆಚ್ಚು ಬೆಲೆಯುಳ್ಳ ವಸ್ತುಗಳನ್ನು ಕೊಟ್ಟು ಅದನ್ನು ಪಡಕೊಂಡನು. ಪೋರ್ಚುಗೀಸರಿಗಿಂತಲೂ ಮೊದಲು ಈ ಕರಾವಳಿಯಲ್ಲಿ ಸಂಚಾರ ಮಾಡುತ್ತಿದ್ದ ಯಾವುದೋ ಒಂದು ಆರ್ಮೇನಿಯಾರ ಹಡಗಿನಿಂದ ಇದು ಬಿದ್ದಿರಬೇಕೆಂದು ಊಹಿಸಲಾಗಿದೆ.[4]

ಲೇಖಕರು ಮುಂದೆ ಭಾರತಕ್ಕೆ ಬಂದ ಪ್ರಥಮ ಮಿಶಿನರಿಗಳ ಬಗ್ಗೆ ಚರ್ಚಿಸುತ್ತಾ ಫಾ। ಪೆದ್ರೋ ಡಿ ಕ್ಯಾಬಿಲೋನ್ಸ್ ಕ್ರಿ.ಶ1498ರಲ್ಲಿ ವಾಸ್ಕೋ ಡ ಗಾಮಾನ ಜೊತೆ ಬಂದು, ಕ್ರಿ.ಶ. 1498 ಜುಲೈ 31 ರಂದು ಅವರು ಕ್ಯಾಲಿಕಟ್‌ನ ಸ್ಥಳೀಯರಿಂದ ಹತರಾದರು. ಅವರ ಮರಣದ ನಂತರ ಫ್ರಾನ್ಸಿಸ್ಕನ್ ಮಿಶನರಿಗಳು ಯೂರೋಪಿನಿಂದ ಕ್ರಿ.ಶ 1500 ರಲ್ಲಿ ಇಲ್ಲಿಗೆ ಬಂದರು. ಅವರಲ್ಲಿ ಮೂವರು ಕ್ಯಾಲಿಕಟ್‌ನಲ್ಲಿ ಹುತಾತ್ಮರಾದರು. 3 ವರ್ಷಗಳ ನಂತರ ಪೋಪರಾದ 6ನೇ ಅಲೆಗ್ಸಾಂಡರ್‌ರವರು ಪ್ರಾಯರ್ ಡ್ಯೂರೇಟ್ ನ್ಯೂನಿಸ್ (Fra Duarte Nunes) ರನ್ನು ನಂತರ ಇತರ 12 ಮಂದಿ ಮಿಶಿನರಿಗಳನ್ನು ಕಳುಹಿಸಿದರು. ಇವರು ಕೊಚ್ಚಿನ್‌ನಲ್ಲಿ ಮತಭೋದನೆ ಮಾಡಿದರೂ, ಅದರ ಉತ್ತರಕ್ಕೆ ಇವರ ಕೆಲಸ ಅನುಮಾನಸ್ಪಾದವಾಗಿದೆ. ಪೋಪರಾದ 2ನೇ ಜ್ಯೂಲಿಯಸ್‌ರವರು ಕ್ರಿ.ಶ 1505 ರಲ್ಲಿ ಪೋರ್ಚುಗಲ್ ಗವರ್ನರ್, ಅಲ್ಮೇಡಾರ ಜೊತೆ ಕೆಲವು ಪಾನ್ಸಿಸ್ಕನ್ ಮಿಶನರಿಗಳನ್ನು ಭಾರತಕ್ಕೆ ಕಳುಹಿಸಿಧರು. ಇವರೊಂದಿಗೆ ಬಂದ ಫಾ।ಲೂಯಿಜ್ ವಿಜಯನಗರಕ್ಕೆ ಹೋಗಿ ಆಗ ರಾಜ್ಯವಾಳುತ್ತಿದ್ದ ನರಸಿಂಹ(ಗ)ನನ್ನು ಭೇಟಿ ಮಾಡಿ, ಅವನ ರಾಜ್ಯದ ಕರಾವಳಿಯಲ್ಲಿ ವ್ಯಾಪಾರ ಮಾಡುವುದಕ್ಕೂ, ತಮ್ಮ ಮತವನ್ನು ಭೋಧಿಸುವುದಕ್ಕೂ ಅನುಮತಿಯನ್ನು ಪಡೆದನು. ಆದರೆ ರಾಜನನ್ನು ಮತಾಂತರಿಸುವಲ್ಲಿ ವಿಫಲನಾದನು.

ಕಣ್ಣನೂರಿನಲ್ಲಿ ಫಾ।ಮಾರ್ಟಿನ್, ಫಾ। ಎಸ್ಟೆವೋ (Estevao) ಮತ್ತು ಫಾ। ಜೋನ್‌ರವರು ಧರ್ಮಪ್ರಚಾರಗೈದು ಸಂತ ಆಂಜೋಲೋ ಕೋಟೆಯಲ್ಲಿ ಚರ್ಚ್‌ನ್ನು ಕಟ್ಟಿದರು. ಪಾದ್ರಿಗಳಾದ ಪೇದ್ರೊ ಮತ್ತು ಕ್ಲೇಮೆಂಟ್ ಬಿಜಾಪುರದಲ್ಲಿ ಕಾರ್ಯನಿರ್ವಹಿಸಿದರೆ, ಪಾದ್ರಿಗಳಾದ ಸ್ಟ್ಯಾಸ್ಟಸ್ ಮತ್ತು ಪ್ರಾನ್ಸಿಸ್‌ರವರು ಕೊಚ್ಚಿನ್‌ನಲ್ಲಿ ಧರ್ಮಪ್ರಚಾರ ನಡೆಸಿ ಹುತಾತ್ಮರಾದರು. ಭಾರತದಲ್ಲಿ ಪೋರ್ಚುಗೀಸ್ ಹತೋಟಿ ಹೆಚ್ಚಿದಂತೆ ಮಿಶಿನರಿ ಕೆಲಸವು ಹೆಚ್ಚಾಗುತ್ತಾ ಹೋಗುತ್ತದೆ. ಕ್ರಿ.ಶ 1510 ರಲ್ಲಿ ಗೋವಾ ಆಕ್ರಮಣದೊಂದಿಗೆ ಇದು ದ್ವಿಗುಣವಾಯಿತು[5] ಎಂದು ಲೇಖಕರು ಬಣ್ಣಿಸಿದ್ದಾರೆ.

ಗೋವಾವು 1510ರ ನಂತರ ಪೋರ್ಚುಗೀಸರ ರಾಜಕೀಯ ಕೇಂದ್ರಬಿಂದು ಹಾಗೂ ಕೆಥೋಲಿಕರ ಕ್ರೈಸ್ತಧರ್ಮದ ಕೇಂದ್ರವಾಯಿತು. ಕ್ರಿ.ಶ 1514ರಲ್ಲಿ ಡೋಮಿನಿಕನ್ ಮಿಶನರಿಯಾದ ಫಾ। ಡ್ಯೂರೇಟ್ ನ್ಯೂನಿಸ್ (Duarte Nunes) ರನ್ನು ಭಾರತಕ್ಕೆ ಕಳುಹಿಸಿದರು. ಅವರು ಗೋವಾದಲ್ಲಿದ್ದು ವಿಕಾರ್ ಅಪೋಸ್ತಲಿಕ್ ಆಗಿ ಕಾರ್ಯನಿರ್ವಹಿಸಿದರು. ಮೂರು ವರ್ಷದ ನಂತರ ಅವರು ಪೋರ್ಚುಗಲ್‌ಗೆ ತೆರಳಿದಾಗ, ಇಬ್ಬರು ಪ್ರಾನ್ಸಿಸ್ಕನ್ ಮಿಶನರಿಗಳು ಅವರ ಉತ್ತಾರಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು. ಕ್ರಿ.ಶ 1534ರಲ್ಲಿ ಪೋಪರಾದ 3ನೇ ಪೌಲ್‌ರವರು ಗೋವಾವನ್ನು ಒಂದು ಧರ್ಮಪ್ರಾಂತ್ಯವಾಗಿ ರಚಿಸಿದರು. 20 ವರ್ಷಗಳ ನಂತರ ಪೋಪರಾದ 4ನೇ ಪೌಲ್‌ರವರು ರಾಜನಾದ ಸೆಬೆಸ್ಟಿಯನ್ ಬೇಡಿಕೆಯಂತೆ ಅದನ್ನು ಮೆಟ್ರೋಪೋಲಿಟನ್ ಆರ್ಚ್‌ಡಯೋಸಿಸ್ ಆಗಿ ಪರಿವರ್ತಿಸಿದರು. ಇದೇ ಸಂದರ್ಭದಲ್ಲಿ ಕೊಚ್ಚಿನ್ ಮತ್ತು ಮಲಕಗಳಲ್ಲಿ ಬಿಷಪರನ್ನು ಸ್ಥಾಪಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು. ನಂತರದಲ್ಲಿ ಲೇಖಕರು ಬಹುದೀರ್ಘವಾದ ಹಾಗೂ ವಿವರಣಾತ್ಮಕವಾದ ರೀತಿಯಲ್ಲಿ ಗೋವಾದಲ್ಲಿ ಕ್ರಿ.ಶ.1514 ರಿಂದ 1886ರವರೆಗೆ ಕಾರ್ಯನಿರ್ವಹಿಸಿರುವ ವಿಕಾರ್ ಅಪೋಸ್ತಲಿಕರು, ಬಿಷಪರು ಹಾಗೂ ಆರ್ಚ್ ಬಿಷಪರ ಪಟ್ಟಿಯನ್ನೇ ನೀಡಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಇವರಲ್ಲಿ ಹೆಚ್ಚಿನವರು ಅಗಸ್ಟೀನಿಯನ್ಸ್[Augustinians]ಪ್ರಾನ್ಸಿಸ್ಕನ್ಸ್ [Franciscans] ಮತ್ತು ಡೋಮಿನಿಕನ್ಸ್ [Dominicans] ಪಂಗಡಕ್ಕೆ ಸೇರಿದವರಾಗಿದ್ದಾರೆ.[6] ಇಲ್ಲಿ ಲೇಖಕರು ಸಂಪೂರ್ಣವಾಗಿ ಪೋಪರು, ಬಿಷಪರು ಹಾಗೂ ಪಾದ್ರಿಗಳಿಗೆ ಸಂಬಂಧಿಸಿದ ಇತಿಹಾಸವನ್ನು ಬರೆದಿದ್ದಾರೆ.

ಲೇಖಕರು ಕೆನರಾದ ಮಿಶನ್ ಬಗ್ಗೆ ಚರ್ಚಿಸುತ್ತಾ ಕ್ರಿ.ಶ.1510 ರಲ್ಲಿ ಗೋವಾವನ್ನು ಪೋರ್ಚುಗೀಸರು ಆಕ್ರಮಿಸುವ ಮೊದಲು, ಕೆನರಾದಲ್ಲಿ ಪೋರ್ಚುಗೀಸರ ನೆಲೆಗಳಿದ್ದು, ಇಲ್ಲಿ ಕ್ರೈಸ್ತ ಧರ್ಮದ ಬೋಧನೆ ಆಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ವಾಸ್ಕೋಡಗಾಮ 1498ರಲ್ಲಿ ಪ್ರಥಮ ಬಾರಿಗೆ ಕೆನರಾಕ್ಕೆ ಬಂದಿದ್ದ.[7] ಕ್ರಿ.ಶ.1526ರಲ್ಲಿ ಲೊಪೆಜ್ ಡಿ ಸಂಪಾಯೋ ಗವರ್ನರ್ ಜನರಲ್ ಆಗಿದ್ದ ಸಮಯದಲ್ಲಿ ಕೆಲವು ಪ್ರಾನ್ಸಿಸ್ಕನ್ ಮತಬೋಧಕರು ಗೋವೆಯಿಂದ ಬಂದು ತಮ್ಮ ಮತಭೋದನೆಯನ್ನಾರಂಭಿಸಿದರು. ಈ ಸಮಯದಲ್ಲಿ 'ಅವರ್ ಲೇಡಿ ಆಫ್ ರುಜಾರಿಯೋ', 'ಅವರ್

ಲೇಡಿ ಆಫ್ ಮರ್ಸಿ', 'ಸೈಂಟ್ ಪ್ರಾನ್ಸಿಸ್' ಹೀಗೆ ಕೆನರಾದಲ್ಲಿ 3 ಚರ್ಚುಗಳು ಸ್ಥಾಪಿತವಾದುವು. ಕ್ರಿ.ಶ.1623ರಲ್ಲಿ ಈ ಚರ್ಚುಗಳನ್ನು ಕಂಡಿರುವ ಬಗ್ಗೆ ಕೆನರಾಕ್ಕೆ ಭೇಟಿ ನೀಡಿದ್ದ ಪಿಯಾತ್ರೋ ಡೆಲ್ಲಾ ವೆಲ್ಲೆಯು ಹೇಳುತ್ತಾನೆ. ನರಸಿಂಗ ರಾಯನ ಕಾಲದಲ್ಲಿ ಈ ಚರ್ಚುಗಳು ಸಂಕಷ್ಟದಲ್ಲಿದ್ದು, 1529ರಲ್ಲಿ ಪೋರ್ಚುಗೀಸರು ಮಂಗಳೂರನ್ನು ಆಕ್ರಮಿಸಿದರು[8] ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಸೆವ್ರಿನ್ ಸಿಲ್ವಾರವರು 'ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ' ಗ್ರಂಥದಲ್ಲಿ ಪೋರ್ಚುಗೀಸರಿಂದ ಮಿಲಿಟರಿ ಮತ್ತು ನೌಕ ದಾಳಿಯು ಮಂಗಳೂರಿನ ಮೇಲೆ ಪ್ರಥಮವಾಗಿ ಕ್ರಿ.ಶ 1530 ರಲ್ಲಿ ನಡೆಯಿತು[9] ಎಂದಿದ್ದಾರೆ.

ಲೇಖಕರು ಸಂತ ಪ್ರಾನ್ಸಿಸ್ ಸವೆರರ ಬಗ್ಗೆ ಚರ್ಚಿಸುತ್ತಾ ಆತ ಕ್ರಿ.ಶ 1543 ರಲ್ಲಿ ಗೋವಾಕ್ಕೆ ಬಂದು, 'ಅವರು ಪೋರ್ಚುಗೀಸ್ ಮತ್ತು ಇತರ ಕ್ರೈಸ್ತರ ಮೇಲೆ ಪ್ರಭಾವ ಹೊಂದಿದ್ದರೇ ಹೊರತು ಅಲ್ಲಿನ ಮೂರ್ತಿ ಆರಾಧಕರ ಜೊತೆಯಲ್ಲ' ಎಂದಿದ್ದಾರೆ. ಆದ್ದರಿಂದ ಸ್ಥಳೀಯ ಕೆನರಾ ಕ್ರೈಸ್ತರ ನಂಬಿಕೆಯಾದ, ಅವರ ಪೂರ್ವಜರನ್ನು ಸವೆರರು ಮತಾಂತರಿಸಿದರು ಎಂಬುದರಲ್ಲಿ ಯಾವುದೇ ಹುರುಳಿಲ್ಲ. ಅವರ ಮರಣದ ನಂತರ ಸಂಪೂರ್ಣ ಗೋವಾದ ಮೂರ್ತಿ ಆರಾಧಕರನ್ನು ಮತಾಂತರಗೊಳಿಸಲಾಯಿತು. ಲೇಖಕರು ಅಭಿಪ್ರಾಯಪಡುವಂತೆ ಸವೆರರು ಕೆನರಾಕ್ಕೆ ಭೇಟಿ ನೀಡಿದ ಬಗ್ಗೆ ಯಾವುದೇ ಆಧಾರಗಳಿಲ್ಲದಿದ್ದು, ಅವರು ಕಣ್ಣನೂರಿನಲ್ಲಿ ಸ್ವಲ್ಪಕಾಲ ತಂಗಿದ್ದರು ಎಂದಿದ್ದಾರೆ. ಕೆನರಾದಲ್ಲಿ ಕ್ರೈಸ್ತ ಧರ್ಮವು ಮೊದಲು ಪ್ರಾನ್ಸಿಸ್ಕನರಿಂದ ಪರಿಚಿತಗೊಂಡಿದೆ. ಪೋರ್ಚುಗೀಸರು ಎಲ್ಲೆಲ್ಲಿ ತೆರಳಿದರೂ ಅಲ್ಲಲ್ಲಿ ಅವರು ಕ್ರೈಸ್ತ ಸಮುದಾಯವನ್ನು ಹುಟ್ಟು ಹಾಕಿದ್ದಾರೆ ಎಂದಿರುವ ಲೇಖಕರು, 16ನೇ ಶತಮಾನದ ಪ್ರಾರಂಭದಲ್ಲಿ ಪೋರ್ಚುಗೀಸರು ಕೆನರಾದಲ್ಲಿ ಕೆಲವು ನೆಲೆಗಳನ್ನು ಸ್ಥಾಪಿಸಿದರು ಎಂದಿದ್ದಾರೆ. ನಂತರದಲ್ಲಿ ಗೋವಾ ಪ್ರದೇಶದಿಂದ ಅನೇಕ ಕ್ರೈಸ್ತ ಕುಟುಂಬಗಳು ಇಲ್ಲಿಗೆ ಬಂದು ನಿಂತವು. ವಿಜಯನಗರ ಮತ್ತು ಬಿದನೂರು ಅರಸರ ಕಾಲದಲ್ಲಿ ಕ್ರೈಸ್ತರು ಗುಂಪು ಗುಂಪಾಗಿ ಗೋವೆಯಿಂದ ಬಂದು ನಿಂತರು. ಈ ಕ್ರೈಸ್ತರು ವ್ಯವಸಾಯ ಮಾಡುವುದರಲ್ಲಿ ಬಹಳ ಪ್ರವೀಣರಾದ್ದರಿಂದ ಅವರಿಗೆ ಹೆಚ್ಚು ಹಕ್ಕುಗಳನ್ನು ಕೊಟ್ಟು, ಇಲ್ಲಿ ನೆಲೆ ನಿಲ್ಲಲು ಪ್ರೋತ್ಸಾಹಿಸಿದರು. ಕ್ರಿ.ಶ 1574ರಲ್ಲಿ ಅನೇಕರು ಗೋವೆಯಿಂದ ಬಂದು ಬಸರೂರಿನಲ್ಲಿ ನೆಲೆನಿಂತರು. ಲೇಖಕರು ಅಭಿಪ್ರಾಯ ಪಡುವಂತೆ ಗೋವಾದ ಮೇಲೆ ಮರಾಠರ ದಾಳಿಗಳು ಹಾಗೂ ಅಲ್ಲಿನ ಬರಗಾಲಗಳು ಇವರ ವಲಸೆಗೆ ಕಾರಣಗಳಾಗಿವೆ.[10] ಡಾ। ಪಿಯುಸ್ ಫಿಡೆಲಿಸ್ ಪಿಂಟೊರವರು ಕ್ರೈಸ್ತರ ವಲಸೆಗೆ ಸಂಬಂಧಿಸಿದಂತೆ ಈ ಮೇಲಿನ ಕಾರಣಗಳ ಜೊತೆಗೆ ಹಲವು ಇತರ ಕಾರಣಗಳನ್ನೂ ಗುರುತಿಸಿದ್ದಾರೆ.[11] 'ಮ್ಯಾಂಗಲೋರ್ ಮ್ಯಾಗಜೀನ್'ನಲ್ಲಿ ಲೇಖಕರು 'ಬಾಂಬೆ ಗೆಜೇಟಿಯರ್' ಮತ್ತು ಹಂಟರ್‌ರವರ 'ಇಂಪಿರಿಯಲ್ ಗೆಜೇಟಿಯರನ್ನು' ಚರ್ಚಿಸಿ ಇಲ್ಲಿನ ಸ್ಥಳೀಯ ಕೊಂಕಣಿ ಕ್ರೈಸ್ತರು, ಪೋರ್ಚುಗೀಸರು ಮತ್ತು ಸ್ಥಳೀಯರ ವಂಶಜರಾಗಿದ್ದಾರೆ. ಹೆಚ್ಚಿನ ಸ್ಥಳೀಯ ಕೊಂಕಣಿ ಕ್ರೈಸ್ತರು ಗೋವಾ,

ಸಾಲ್ಸೆಟ್ ಮತ್ತು ಇತರ ಜಿಲ್ಲೆಗಳಲ್ಲಿ ಜೆಸ್ಯೂಟರಿಂದ ಹಾಗೂ ಇತರರಿಂದ ಮತಾಂತರ ಹೊಂದಿದವರ ವಂಶಸ್ಥರಾಗಿದ್ದು, ಕೆಲವರು ಪೋರ್ಚುಗೀಸರೊಂದಿಗೆ ವೈವಾಹಿಕ ಸಂಬಂಧ ಹೊಂದಿದವರಾಗಿದ್ದಾರೆ. ಗೋವಾದ ಸಂತ ಫೇ [Santa Fe] ಕಾಲೇಜಿನ ಬಗ್ಗೆ ಚರ್ಚಿಸುತ್ತಾ, ಇದು ಮಂಗಳೂರು ಧರ್ಮಪ್ರಾಂತ್ಯದ ಇತಿಹಾಸದಲ್ಲಿ ಮಹತ್ವದ ವಿಷಯವಾಗಿದೆ ಎಂದಿದ್ದಾರೆ. ಯಾಕೆಂದರೆ ಇಲ್ಲಿ ಶಿಕ್ಷಿತರಾದ ಮಿಶನರಿಗಳು ಕೆನರಾ ಕ್ರೈಸ್ತರ ಪೂರ್ವಜರನ್ನು ಮತಾಂತರಿಸಿದ್ದು ಮಾತ್ರವಲ್ಲದೇ, ಕೆನರಾದಲ್ಲಿನ ಕ್ರೈಸ್ತರ ಒಳಿತಿಗಾಗಿ ಶ್ರಮಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಕಾಲೇಜಿನ ಪ್ರಮುಖ ಸಂಸ್ಥಾಪಕರೆಂದರೆ ಡೊನ್ ಮಾರ್ಟಿನ್ ಆಲ್ಫೊನ್ಸೋ ದೆ ಸೋಜಾ [Don Martin Alfonso de souza] ಮತ್ತು ವಾಸ್ಕೋ ಡಿ ಗಾಮಾರ ಮಗನಾದ ಡೊನ್ ಎಸ್ತೆವನ್ ದೆ ಗಾಮಾ [Don Estevan da Gama]ರಾಗಿದ್ದಾರೆ. ಕೆಲವು ಜನರು ಇದನ್ನು 'ಸಂತ ಪಾಲರ ಮತಾಂತರದ ಕಾಲೇಜು' ಎಂದು ಕರೆದರೆ [College of the conversion of St.Paul] ಇತರರು 'ಪವಿತ್ರ ನಂಬಿಕೆ' [College of the holy faith]ಯ ಕಾಲೇಜು ಎಂದು ಕರೆಯುತ್ತಾರೆ.[12]

ಕೆನರಾ ಕ್ರೈಸ್ತರು ಮೂಲತ: ಗೋವಾದ ಸಾಲ್ಸೆಟ್‌ನಿಂದ ಬಂದವರಾಗಿದ್ದು, ಅವರ ಮತಾಂತರದ ಇತಿಹಾಸವು ತುಂಬಾ ಕುತೂಹಲದಿಂದ ಕೂಡಿದೆ. ಕ್ರಿ.ಶ.1560ರಲ್ಲಿ ಡೊನ್ ಕೊನ್ಸ್ಟೆಂಟೈನ್ ದೆ ಬ್ರೆಗಾಂಜಾ ಎಂಬ ವೈಸ್‌ರಾಯ್ ಜೆಸ್ಯೂಟರನ್ನು ಗೋವಾದಲ್ಲಿ ಮತಾಂತರ ಕಾರ್ಯಕ್ಕೆ ಕಳುಹಿಸಿದನು. ಮುಂದೆ 50 ವರ್ಷಗಳ ಒಳಗಡೆ ಸಾಲ್ಸೆಟ್‌ನ ಎಲ್ಲಾ 77 ಗ್ರಾಮಗಳಲ್ಲಿನ ಜನರನ್ನು ಮತಾಂತರಿಸಲಾಯಿತು. ಇದು ಸರ್ಕಾರದಿಂದ ಬೆಂಬಲಿತವಾಗಿದ್ದು, ಯಾವುದೇ ಅಡಚಣೆ ಇಲ್ಲದೇ ಅವರ ದೇವಸ್ಥಾನಗಳನ್ನೆಲ್ಲಾ ನಾಶಮಾಡಿ ಅವರನ್ನು ಮತಾಂತರಿಸಲಾಯಿತು. ಅದೇ ರೀತಿ ಕ್ರಿ.ಶ.1583 ಜುಲಾಯಿ 15ರಂದು ಜೆಸ್ಯೂಟರಾದ ರೂಡಾಲ್ಫ್ ಅಕ್ವಾವಿನಾ [Rudolph Acquaviva] ಮತ್ತು ಇತರ 4 ಮಂದಿ ಸಹಚರರು ಹಾಗೂ ಕೆಲವು ಕ್ರೈಸ್ತರನ್ನು ಕುಂಕಲಿಮ್ ಎಂಬಲ್ಲಿ ಹತ್ಯೆಗೈಯಲಾಯಿತು. ಈ ಘಟನೆಯ ನಂತರ ಮತಾಂತರ ಬಹುವೇಗದೊಂದಿಗೆ ಮುಂದುವರಿಯಿತು. ಈ ರೀತಿ ಹಿಂದೂಗಳೂ ಮತಾಂತರ ಹೊಂದಿದ ಮೇಲೆ ಕೆನರಾಕ್ಕೆ ವಲಸಿಗರಾಗಿ ಬಂದರು. ಇಲ್ಲಿ ಲೇಖಕರು ಓದುಗರಿಗೆ ಮತಾಂತರದ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ರೆ। ಪ್ರಾನ್ಸಿಸ್ ಗೋಲ್ಡಿ ಎಸ್.ಜೆ. [Francis Goldie S.J] ರವರ 'ದಿ ಫಸ್ಟ್ ಕ್ರಿಶ್ಚಿಯನ್ ಮಿಶನ್ ಟು ದಿ ಗ್ರೇಟ್ ಮೊಗಲ್' [The first Christian mission to the Great Mogul] ಎಂಬ ಗ್ರಂಥವನ್ನು ಓದಬಹುದೆಂದಿದ್ದಾರೆ. ಕ್ರಿ.ಶ.1552ರಲ್ಲಿ ಪ್ರಾನ್ಸಿಸ್ ಸವೆರರ ಮರಣದ ನಂತರ ಗೋವಾದ ಪ್ರದೇಶಗಳನ್ನು ವಿವಿಧ ಪಂಗಡಗಳಿಗೆ ಹಂಚಿಕೆ ಮಾಡಿದುದರ ಬಗ್ಗೆ ಮಾಹಿತಿ ನೀಡಿದ್ದಾರೆ. ಗೋವಾದ ಆರ್ಚ್ ಬಿಷಪರಾದ ಲಿಯೋ ಪಿರೇರಾ [Leao Pereira] ರವರು ಮಂಗಳೂರು, ಹೊನ್ನಾವರ ಮತ್ತು ಬಸರೂರಿಗೆ ಮಿಶನರಿಗಳನ್ನು ಕಳುಹಿಸಿದ್ದರು. ಫಾ। ತಿಮುದೋ

[Timudo] ರವರು ಬಸರೂರಿನಲ್ಲಿದ್ದು, ಮೇಲಿನ ಮೂರು ಸ್ಥಳಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಿದ್ದರು. ಈ ಕಾಲಘಟ್ಟದಲ್ಲಿ ಗೋವಾದಿಂದ ಕ್ರೈಸ್ತರು ಕೆನರಾಕ್ಕೆ ವಲಸೆ ಬರಲು ಆರಂಭಿಸಿದರು. ಕ್ರಿ.ಶ.1567 ಡಿಸೆಂಬರ್ 8 ರಂದು ಮೂರು ಮಂದಿ ಜೆಸ್ಯೂಟರು ಡೊನ್ ಆಂಟಾವೊ ಡಿ ನೊರೊನ್ಹಾರ ನೇತೃತ್ವದಲ್ಲಿ 44 ಹಡಗುಗಳಲ್ಲಿ 10,000 ಸೈನಿಕರೊಂದಿಗೆ ಉಳ್ಳಾಲದ ಚೌಟರ ರಾಣಿಯಾದ ಅಭಯದೇವಿ, ಅಬ್ಬಕ್ಕಾದೇವಿ ಅಥವಾ ಬುಕ್ಕಾದೇವಿಯಿಂದ ಕಪ್ಪವನ್ನು ಪಡೆಯಲು ಹೊರಟು ರಾಣಿಯನ್ನು ಸೋಲಿಸಿ, ಉಳ್ಳಾಲದಲ್ಲಿಯೂ ಕ್ರೈಸ್ತಮತವನ್ನು ಬೋಧಿಸಲಾರಂಭಿಸಿದರು. ಫಾ। ಪ್ರಾನ್ಸಿಸ್ಸ್ ಡಿಸೋಜ ಎಸ್.ಜೆ.ರವರ 'ಓರಿಯಂಟೆ ಕೊನ್‌ಕ್ವಿಸ್ತಾದೊ' [Oriente conquistado] ನಲ್ಲಿನ ವಿವರಣೆಯನ್ನು ಚರ್ಚಿಸಿರುವ ಲೇಖಕರು ಫಾ।ಜೆ.ಎಫ್.ಎಸ್ತೆಪೋನಿಯೋ [Estefonio]ರವರು ಸೈನ್ಯದ ಮುಂಭಾಗದಲ್ಲಿ ಶಿಲುಬೆಯೊಂದಿಗೆ ನಿಂತು ಸೈನಿಕರನ್ನು ಹುರಿದುಂಬಿಸಿದ ಬಗ್ಗೆ ವಿವರಿಸಿದ್ದಾರೆ.[13] ಈ ರೀತಿ ಹೊಸ ಮತಾಂತರ ಹೊಂದಿದವರು ಪೋರ್ಚುಗೀಸ್ ಹೆಸರುಗಳಾದ ಲೋಬೋ, ಸಲ್ಡಾನ, ಡಿ'ಸೋಜ, ಮೆಸ್ಕರೇನಸ್, ಮಿನೇಜಸ್, ಫೆರ್ನಾಂಡೀಸ್, ನೊರೋನ್ಹಾ ಇತ್ಯಾದಿ ಉಪನಾಮಗಳನ್ನು ಪೋರ್ಚುಗೀಸರಿಂದ ಬಳುವಳಿಯಾಗಿ ಪಡೆದಿದ್ದಾರೆ.[14]

ಕ್ರಿ.ಶ.1534ರಲ್ಲಿ ಗೋವೆಯನ್ನು ಒಂದು ಡಯೋಸಿಸಾಗಿ ಮಾಡಿದಾಗ ಕೆನರಾದ ಮೇಲೆ ಅಧಿಕಾರ ಕ್ಷೇತ್ರವು ವಿಸ್ತಾರಗೊಂಡಿತು. ಇದರಿಂದ ಗೋವಾದಿಂದ ಬಂದ ಕ್ಯಾಥೋಲಿಕ್ ವಲಸಿಗರಿಗೆ ಪದ್ರಾವ್ದೋ ಮಿಶನರಿ ಪಾದ್ರಿಗಳು [ಪೋರ್ಚುಗೀಸ್ ಪಾದ್ರಿಗಳು] ಸೇವೆ ಸಲ್ಲಿಸುತ್ತಿದ್ದರು. ಹದಿನೇಳನೆ ಶತಮಾನದ ಮಧ್ಯಭಾಗದಿಂದ ಈ ಪ್ರದೇಶದಲ್ಲಿ ಪೋರ್ಚುಗೀಸರ ಶಕ್ತಿಯು ಕುಂಠಿತವಾಗುತ್ತಾ ಬಂದಿತು. ಇದು ಕ್ಯಾಥೋಲಿಕರ ಧಾರ್ಮಿಕ ಜೀವನದ ಮೇಲೆ ದುಷ್ಪರಿಣಾಮವನ್ನುಂಟು ಮಾಡಿತು ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಅವರ ಧಾರ್ಮಿಕ ಜೀವನವನ್ನು ನೋಡಿಕೊಳ್ಳುವುದಕ್ಕೆ ಬೇಕಾದಷ್ಟು ಜನ ಮಿಶನರಿ ಪಾದ್ರಿಗಳು ಇರಲಿಲ್ಲ.[15] ಈ ಸಂದರ್ಭದಲ್ಲಿ ಕೆನರಾದಲ್ಲಿ ಮಂಗಳೂರು, ಹೊನ್ನಾವರ ಮತ್ತು ಬಸರೂರಿನಲ್ಲಿ ಚರ್ಚುಗಳಿದ್ದು ಇವುಗಳಿಗೆ ಕಾಯಂ ಆದ ಪಾದ್ರಿಗಳಿರಲಿಲ್ಲ. ಈ ಸಂದರ್ಭದಲ್ಲಿ ಪೋರ್ಚುಗಲ್ ರಾಜ ಸ್ಥಳೀಯ ಪಾದ್ರಿಯಾದ ಅಂಡ್ರ್ಯೂ ಗೋಮೆಜ್ [Andrew Gomez] ರನ್ನು ಕೆನರಾದ ಅಪೋಸ್ತಲಿಕ್ ಆಗಿ ನೇಮಿಸುವಂತೆ ಒತ್ತಾಯಿಸಿದರು. ಯಾಕೆಂದರೆ ಬಿದನೂರು ರಾಜ ಶಿವಪ್ಪನಾಯಕ ತನ್ನ ಪ್ರದೇಶದಲ್ಲಿ ಯುರೋಪಿಯನ್ ಬಿಷಪರ ನೇಮಕವನ್ನು ವಿರೋಧಿಸಿದನು. ಆದರೆ ಗೋಮೆಜ್ ಭಾರತಕ್ಕೆ ಬರುವ ಮೊದಲೇ ತೀರಿ ಕೊಂಡರು. ಕ್ರಿ.ಶ.1652ರಿಂದ 1675ರವರೆಗೆ ಗೋವಾಕ್ಕೆ ಆರ್ಚ್ ಬಿಷಪರಿರಲಿಲ್ಲ. ಕ್ರಿ.ಶ.1675ರಲ್ಲಿ ಗೋವಾಕ್ಕೆ ಆ್ಯಂಟನಿ ಬ್ರಾಂಡವೋರವರನ್ನು [Antony Brandao] ಪದ್ರಾವ್ದೋ ಗೋವಾದ ಆರ್ಚ್‌ಬಿಷಪರಾಗಿ ನೇಮಿಸಿತು.[16] ವೇರಪೋಲಿಯ ಮೊದಲನೆಯ ವಿಕಾರ್ ಅಪೋಸ್ಥಲಿಕ್ ಆದ ಡಾ। ಜೋಸೆಫ್ ಸೆಬಾಸ್ಟಿಯಾನಿ ಮತ್ತು ಕೆನರಾದಲ್ಲಿ ಸಂಚಾರ ಮಾಡಿದ

ಫಾ।ವಿನ್ಸೆಂಟೋ ಮರಿಯ ಡಿ ಸಾಂತಾ ಕೆಥರಿನಾ ಮೊದಲಾದವರು ಇಲ್ಲಿನ ಕ್ಯಾಥೋಲಿಕರ ದುಸ್ಥಿತಿಯನ್ನು ಪೋಪ್ ಹತ್ತನೆಯ ಕ್ಲೆಮೆಂಟ್‌ರ ಗಮನಕ್ಕೆ ತಂದರು. ಕೆನರಾದಲ್ಲಿನ ಕ್ರೈಸ್ತಧರ್ಮದ ಹೀನಾಯ ಸ್ಥಿತಿಯ ಬಗ್ಗೆ ಬಿಷಪ್ ಮ್ಯಾಥ್ಯೂ ಡಿ ಕ್ಯಾಸ್ಟ್ರೊ ಕೂಡಾ ವ್ಯಾಟಿಕನ್ ಅಧಿಕಾರಿಗಳಿಗೆ ತಿಳಿಯಪಡಿಸಿದರು. ಪೋಪರು ಕೂಡಲೇ ಕ್ರಮ ಕೈಗೊಂಡು ಬಿಷಪ್ ಥಾಮಸ್ ಡಿ ಕ್ಯಾಸ್ಟ್ರೋರವರನ್ನು ಕೆನರಾದ ವಿಕಾರ್ ಅಪೋಸ್ಟಲಿಕ್ ಆಗಿ ನೇಮಕ ಮಾಡಿ, ಕ್ರಿ.ಶ 1677ರಲ್ಲಿ ಅವರು ಇಲ್ಲಿಗೆ ಬಂದರು. ಇದು ಇಲ್ಲಿ ಕಲಹಕ್ಕೆ ಕಾರಣವಾಯಿತು. ಕ್ಯಾಸ್ಟ್ರೋರವರು ಕೆನರಾಕ್ಕೆ ಬಂದೊಡನೆ ಗೋವೆಯ ಆರ್ಚ್ ಬಿಷಪ್ ಡಿ ಫ್ರೇ ಆ್ಯಂಟನಿ ಬ್ರಾಂಡವೋರೊಂದಿಗೆ ವ್ಯಾಜ್ಯವನ್ನು ಪ್ರಾರಂಬಿಸಿದರು. ಈ ರೀತಿ 17ನೇ ಶತಮಾನದಲ್ಲಿ ಪದ್ರಾವ್ದೋ, ಮಿಶನಿನ ಅಗತ್ಯಗಳನ್ನು ಪೂರೈಸಲು ವಿಫಲವಾದಾಗ ಪೋಪರು ಇಲ್ಲಿ ನೇರವಾಗಿ ಧರ್ಮಪ್ರಚಾರ ಕಾರ್ಯವನ್ನು ಕೈಗೊಳ್ಳಲು ನಿರ್ಧರಿಸಿದ್ದು 'ಪದ್ರಾವ್ದೋ – ಪ್ರಾಪಗ್ಯಾಂಡಾ' ಬಿಕ್ಕಟ್ಟಿಗೆ ಕಾರಣವಾಯಿತು. ಕ್ಯಾಸ್ಟ್ರೋರವರು ಬಸರೂರಿನಿಂದ ತನ್ನ ಕೆಲಸದಲ್ಲಿ ತೊಡಗಿದರು. ಬಸರೂರು ಒಂದು ಮುಖ್ಯವಾದ ಸ್ಥಳವಾಯಿತು. ನಂತರ ಮುಲ್ಕಿ, ಕಲ್ಯಾಣಪುರ ಮತ್ತು ಇತರ ಸ್ಥಳಗಳಲ್ಲಿಯೂ ಅವರು ಕೆಲಸ ನಿರ್ವಹಿಸಿದರು. ಬಿಷಪ್ ಥಾಮಸ್ ಡಿ ಕ್ಯಾಸ್ಟ್ರೋರ ಪತ್ರಗಳಲ್ಲಿದ್ದ ತೀಕ್ಷ್ಣತೆಯನ್ನು, ಕಟುತ್ವವನ್ನು ಗಮನಿಸಿದ ಆ್ಯಂಟನಿಯವರು ಈ ಕಲಹದ ಉದ್ದೇಶ ಪದ್ರಾವ್ದೋ ಅನುಭವಿಸಿಕೊಂಡು ಬಂದಿದ್ದ ಹಕ್ಕುಗಳನ್ನು ತನ್ನಿಂದ ಕಸಿದುಕೊಳ್ಳುವುದು ನಿಜವಾದ ಉದ್ದೇಶವೆಂಬುದು ಸಂದೇಹ ಪಟ್ಟರು. ತನ್ನ ಅಧೀನರೆಲ್ಲರಿಗೂ ಒಂದು ಧರ್ಮದೇಶದ ಪತ್ರ ಬರೆದು ಯಾರೊಬ್ಬರೂ ಮೇಲ್ಕಂಡ ಬಿಷಪನನ್ನಾಗಲಿ, ಅವನ ಮಿಶನರಿಗಳನ್ನಾಗಲೀ ಈ ಪ್ರದೇಶದ ನ್ಯಾಯಧಿಕಾರವನ್ನು ಕೊಟ್ಟಿರುವ ಪೋಪಧಿಕಾರದ ಶಾಸನ ಪತ್ರವನ್ನು ತೋರಿಸದ ಹೊರತು, ಮಾನ್ಯ ಮಾಡಕೂಡದು ಎಂದು ತಿಳಿಸಿದನು. ಒಂದು ಕಡೆ ಕ್ಯಾಸ್ಟ್ರೋರವರು ಪೋಪರ ಶಾಸನವನ್ನು ನಕಲಿ ಸೃಷ್ಟಿಸಿದ್ದಾರೆ ಎಂಬ ಆಪಾದನೆಗೂ ಗುರಿಯಾಗಿದ್ದರು. ಈ ಸಂದರ್ಭದಲ್ಲಿ ಆರ್ಚ್ ಬಿಷಪ್ ಬ್ರಾಂಡವೋರವರು ಜುಲೈ 6, 1678 ರಂದು ವಿಧಿವಶರಾದರು ಹಾಗೂ ಆತ ಕೆನರಾಕ್ಕೆ ಕಳುಹಿಸಿದ್ದ ಮಿಶನರಿಗಳು ಗೋವೆಗೆ ಹಿಂತಿರುಗಿದರು. ಇದು ಕ್ಯಾಸ್ಟ್ರೋರವರ ಸ್ಥಾನವನ್ನು ಬಲಪಡಿಸಿತು.[17]

ಈ ಸಂದರ್ಭದಲ್ಲಿ ಕೆನರಾದಲ್ಲಿ ಕ್ಯಾಥೋಲಿಕರ ಕಲ್ಯಾಣಕ್ಕೆ ದುಡಿದ ಕೆಲವು ಪದ್ರಾವ್ದೋ ಪಾದ್ರಿಗಳಿದ್ದರು. ಅವರಲ್ಲಿ ಫಾ। ಜೋಸೆಫ್ ವಾಜ್ ಮುಖ್ಯರು. ಅವರನ್ನು ಕ್ಯಾಸ್ಟ್ರೋ ವಿರುದ್ಧ, ಪದ್ರಾವ್ದೋ ನ್ಯಾಯಾಧಿಕಾರ ವ್ಯಾಪ್ತಿಯನ್ನು ಕೆನರಾದಲ್ಲಿ ಭದ್ರಪಡಿಸಲು ಅವರಿಗೆ 'ಪ್ರೇಮ್ ಆಫ್ ಕೆನರಾ' ಎಂಬ ಬಿರುದಿನೊಂದಿಗೆ ಕಳುಹಿಸಲಾಯಿತು. ಇಲ್ಲಿಗೆ ಬಂದಾಗ ಕ್ಯಾಸ್ಟ್ರೋವಿನ ಶಾಸನಬದ್ಧ ಅಧಿಕಾರ ತಿಳಿದುಕೊಂಡ ವಾಜ್ ಅದನ್ನು ಪುರಸ್ಕರಿಸಿ, ಪದ್ರಾವ್ದೋ ವ್ಯವಸ್ಥೆಯಲ್ಲಿಯೇ ಜನರ ಕಲ್ಯಾಣಕ್ಕಾಗಿ ದುಡಿದರು. ಫಾ। ಜೋಸೆಫ್ ವಾಜ್‌ರವರು ಗೋವಾದ ಸಾಲ್ಸೆಟ್‌ನಲ್ಲಿ ಹುಟ್ಟಿದ್ದು, 1681 ರಲ್ಲಿ ಕೆನರಾಕ್ಕೆ

ಬಂದರು. ಲೇಖಕರು ಈ ಮಿಶನರಿಯ ಬಗ್ಗೆ ಬಹಳಷ್ಟು ಹೊಗಳಿಕೆಯ ಮಾತನಾಡಿದ್ದಾರೆ. “ ಅವರು ನಡೆಯುತ್ತಾ, ಮಕ್ಕಳಿಗೆ ಬೋಧನೆಯನ್ನು ಮಾಡುತ್ತಾ, ಅಲ್ಲಲ್ಲಿ ಶಾಲೆಗಳನ್ನು ತೆರೆಯುತ್ತಾ, ಅಸ್ಪ್ರಶ್ಯರನ್ನು ಉಪಚರಿಸುತ್ತಾ, ಬಡವರಿಗೆ ಸಹಾಯ ಮಾಡುತ್ತಾ ಮಿಶಿನರಿ ಜೀವನ ಕಳೆದರು”. ಇವರು ಮಂಗಳೂರಿಗೆ ಬರುವಾಗ ರುಜಾರಿಯೋ ಚರ್ಚು ಒಂದು ‘ಫ್ಯಾಕ್ಟರಿ’ ಚರ್ಚಾಗಿತ್ತು. ಇವರು ಉಳ್ಳಾಲದಲ್ಲಿ, ಕುಂದಾಪುರ ಮತ್ತು ಗಂಗೊಳ್ಳಿಯಲ್ಲಿ ಹೊಸ ಚರ್ಚುಗಳನ್ನು ಕಟ್ಟಿಸಿದರು.[18] ನಂತರ ಕ್ರಿ.ಶ 1685 ರಲ್ಲಿ ಗೋವಾಕ್ಕೆ ತೆರಳಿದ ಅವರು ಅಲ್ಲಿಂದ ಮುಂದೆ ಸಿಲೋನ್‌ಗೆ ತೆರಳಿದರು. ಅಲ್ಲಿ ಅವರು 30,000 ಜನರನ್ನು ಮತಾಂತರಿಸಿದರು ಎಂದು ಹೇಳಲಾಗಿದ್ದು, ಅವರನ್ನು ‘ಅಪೋಸ್ತಲ್ ಆಪ್ ಸಿಲೋನ್’ ಎಂದೇ ಕರೆಯಲಾಗಿದೆ. ಫಾ। ವಾಜ್ ರವರು ಕ್ರಿ.ಶ 1711 ಜನವರಿ 16 ರಂದು ಮರಣವನ್ನಪ್ಪಿದರು.[19] ಇನ್ನೊಂದು ಕಡೆ ಕ್ಯಾಸ್ಟ್ರೋ ಪ್ರಾಪಗ್ಯಾಂಡಾ ವ್ಯವಸ್ಥೆಯಲ್ಲಿ ಮಿಲಾಗ್ರಿಸ್‌ನಿಂದ (ಮಂಗಳೂರು) ಕೆಲಸ ನಿರ್ವಹಿಸುತ್ತಾ ಹೋದರು. ಹೀಗೆ 1684 ರಲ್ಲಿ ಕ್ಯಾಸ್ಟ್ರೋ ಮೃತರಾಗಲು, ಅವರ ಬದಲು ಇನ್ನೊಬ್ಬ ಬಿಷಪರನ್ನು ನೇಮಿಸದೇ, 1700ರಲ್ಲಿ ಮತ್ತೆ ಕೆನರಾದಲ್ಲಿ ಗೋವೆಯ ಪದ್ರಾವ್ದೋ ಅಧಿಕಾರ ಹೆಚ್ಚಿತು.[20] ಈ ರೀತಿ ಗೋವಾ 1700 ರಿಂದ 1735 ರವರೆಗೆ ಕೆನರಾದ ಮೇಲೆ ಹತೋಟಿ ಹೊಂದಿತ್ತು. ಈ ಬಿಕ್ಕಟ್ಟು ಮತ್ತೊಮ್ಮೆ 1836ರಲ್ಲಿ ಕರ್ಮೆಲೈಟರು ಕೆನರಾಕ್ಕೆ ಬರುವುದರೊಂದಿಗೆ ಆರಂಭವಾಯಿತು. ಕ್ರಿ.ಶ 1832 ರಲ್ಲಿ ಪೋಪರು ಕೆಲವು ಮಿಶನರಿಗಳನ್ನು ಭಾರತಕ್ಕೆ ಕಳುಹಿಸಲು ನಿರ್ಧರಿಸಿದರು. ಇದನ್ನು ವಿರೋಧಿಸಿ 1836 ಸೆಪ್ಟಂಬರ್ 20 ರಂದು ಪೋರ್ಚುಗಲ್ 1831 ರಿಂದ ಖಾಲಿ ಇದ್ದ ಗೋವಾ ಬಿಷಪರ ಸ್ಥಾನಕ್ಕೆ ಅಂತೋನಿಯೋ ಪೆಲ್ಸಿಯಾನ್ ಡಿ ಸಾಂತ ರೀಟಾ ಕಾರ್ವಲೋರವರನ್ನು ನೇಮಿಸಿದರು. ಈ ರೀತಿ ಇಲ್ಲಿನ ಕ್ರೈಸ್ತರಿಗೆ ವೆರಪೋಲಿ ವಿಕಾರೇಟನ್ನು ಒಪ್ಪಿಕೊಳ್ಳುವುದೇ ಅಥವಾ ಗೋವಾದ ಅಧಿಕಾರದಡಿಯಲ್ಲಿರುವುದೇ ಎಂಬ ಸಮಸ್ಯೆ ಉದ್ಭವಿಸಿತು. ಈ ಸಂದರ್ಭದಲ್ಲಿ ವೇರಪೋಲಿಯಿಂದ ಕರ್ಮೆಲೈಟರು ಕೆನರಾಕ್ಕೆ ಬಂದು ಮಿಶಿನರಿ ಕೆಲಸ ನಿರ್ವಹಿಸಿದ್ದರು. ಇದು ಕೊನೆಗೆ 1857 ರಲ್ಲಿ ಪೋಪ್ IX ನೇ ಪಿಯುಸ್ ಮತ್ತು ಪೋರ್ಚುಗಲ್ ರಾಜನ ನಡುವಿನ ಒಪ್ಪಂದದಿಂದ ಪರಿಹಾರವಾಯಿತು.[21]

ಬಿಷಪ್ ಡಿ ಕ್ಯಾಸ್ಟ್ರೋರವರು ಕೆನರಾದ ವಿಕಾರ್ ಅಪೋಸ್ತಲಿಕ್ ಆಗಿ ಹಲವು ಪ್ರಮುಖ ಕೆಲಸಗಳನ್ನು ಮಾಡಿದ್ದು, ಮಿಲಾಗ್ರಿಸ್ ಚರ್ಚ್‌ನ್ನು ಕಟ್ಟಿದರು. ಕ್ರಿ.ಶ 1684 ಜುಲೈ16ರಂದು ಅವರು ಮರಣ ಹೊಂದಿದಾಗ, ಅವರನ್ನು ಮಿಲಾಗ್ರಿಸ್ ಚರ್ಚಿನಲ್ಲಿ ಅಂತ್ಯ ಸಂಸ್ಕಾರ ಮಾಡಲಾಗಿತ್ತು. ಅವರು ರಾಣಿ ಚೆನ್ನಮ್ಮಾಜಿಯಿಂದ ಕೆನರಾ ಕೆಥೋಲಿಕರಿಗೆ ಹಲವು ಅಪ್ಪಣೆಗಳನ್ನು ಪಡೆದಿದ್ದರು ಹಾಗೂ ಮಿಲಾಗ್ರಿಸ್ ಚರ್ಚು ಕಟ್ಟಲು ಅನುಮತಿ ಮತ್ತು ಸ್ಥಳವನ್ನು ಉಂಬಳಿಯಾಗಿ ಪಡೆದಿದ್ದರು. ಕೆಸ್ಟ್ರೊವಿನ ಮರಣಾನಂತರ ಚೆನ್ನಮ್ಮಾಜಿಯು ಮಿಲಾಗ್ರಿಸ್ ಚರ್ಚ್ ಇರುವ ಸ್ಥಳವನ್ನು ಸ್ವಾಧೀನ ಪಡಿಸಿದಳು. ನಂತರ ಪುನ: ಭೂಮಿ ಮರಳಿ ಕೊಡಲಾಯಿತು. ಆದರೆ ಬಸಪ್ಪನಾಯಕರು ಅದನ್ನು ಮರಳಿ ವಶಪಡಿಸಿದರು. ನಂತರ ಮಿಲಾಗ್ರಿಸ್

ಚರ್ಚಿನ ಫಾ। ಎಲ್ ಪಿಂಟೊ ಹಾಗೂ ಮಂಗಳೂರಿನ ಜನರು 2 ನೇ ಸೋಮಶೇಖರನಿಂದ ಭೂಮಿಯನ್ನು ಮರಳಿ ಪಡೆದರು. ಕ್ರಿ.ಶ. 1740ರಲ್ಲಿ ಈ ಭೂಮಿಯು ಫಾ। ಎಲ್ ಪಿಂಟೊರವರ ಕೈಸೇರಿತು. ಹೀಗೆ 1756ರಲ್ಲಿ ಹೊಸ ಮಿಲಾಗ್ರಿಸ್ ಚರ್ಚ್ ಸ್ಥಾಪನೆಯಾಯಿತು. ಈ ರೀತಿಯಾಗಿ ಲೇಖಕರು ಮಿಲಾಗ್ರಿಸ್ ಚರ್ಚಿನ ಭೂ ಸಂಬಂಧಿ ವಿವಾದದ ಬಗ್ಗೆ ವಿವರವಾದ ಮಾಹಿತಿ ನೀಡಿದ್ದಾರೆ.[22]

ಹೈದರ್, ಟಿಪ್ಪುವಿನ ಆಳ್ವಿಕೆಯ ಮೊದಲು ಕ್ರೈಸ್ತರು ಸುಖಶಾಂತಿಯಿಂದ ಬಾಳ್ವಿಕೆ ನಡೆಸಿದರು ಎಂಬುದೇ ಲೇಖಕರ ಬಲವಾದ ವಾದ. ಹಾಗಾಗಿ ಮೈಸೂರಿನ ಆಳ್ವಿಕೆಗಿಂತ, ಮೊದಲಿದ್ದ ಬಿದನೂರು ರಾಜ್ಯದಲ್ಲಿ ಸುಮಾರು 80,000ಮಂದಿ ಕ್ರೈಸ್ತರಿದ್ದರು. ಇವರಲ್ಲಿ ಅನೇಕರು ಬಿದನೂರಿನ ಸೈನಿಕರಾಗಿದ್ದರು. ಕ್ರಿ.ಶ 1763ರಲ್ಲಿ ಕೆನರಾವು ಹೈದರಾಲಿಯ ಕೈ ಸೇರಿತು. ಸುಮಾರು 5 ವರ್ಷಗಳವರೆಗೆ ಕ್ರೈಸ್ತರಿಗೆ ಮೊದಲಿದ್ದ ಹಕ್ಕು ಸ್ವಾತಂತ್ರ್ಯಗಳು ಸಿಕ್ಕಿದವು. ಅರ್ಕುಳದಲ್ಲಿರುವ ಮೋಂತೆ ಮರಿಯಾನೋ ಗುಡ್ಡದ ಮೇಲಿರುವ ಚರ್ಚಿನಲ್ಲಿ ಪೋರ್ಚುಗೀಸರ ಧ್ವಜವನ್ನು ಏರಿಸಲಿಕ್ಕೆ ಫಾ। ಮಿರಾಂದರಿಗೆ ಹೈದರಾಲಿಯ ಪರವಾನಿಗೆ ಇತ್ತು.[23] ಕ್ರಿ.ಶ 1768ರಲ್ಲಿ ಇಂಗ್ಲೀಷ್ ಎಡ್ಮಿರಲ್ ವಾಟ್ಸನನು ಮಂಗಳೂರನ್ನು ಅಲ್ಲಿದ್ದ ನೌಕೆಗಳ ಸಮೇತ ವಶಪಡಿಸಿಕೊಂಡನು. ಈ ಸಂದರ್ಭದಲ್ಲಿ ಇಲ್ಲಿನ ಕ್ರೈಸ್ತರು ಇಂಗ್ಲೀಷರ ಪಕ್ಷ ಸೇರಿರಬಹುದೆಂದು ಹೈದರನಿಗೆ ಸಂಶಯ ಹುಟ್ಟಿತು. ಅವರು ತಾವು ಈ ರೀತಿ ಮಾಡಿಲ್ಲವೆಂದು ಹೇಳಿದಾಗ, ಹೈದರನು ಯುರೋಪಿಯನರು ಇನ್ನೊಂದು ಸರ್ತಿ ಇಲ್ಲಿಗೆ ಬಂದರೆ ನೀವು ಬಿದನೂರಿಗೆ ಬಂದು ನಿಲ್ಲಿರಿ ಎಂದು ಹೇಳಿದ್ದನು. ಈ ಯುದ್ಧದಲ್ಲಿ ಮಂಗಳೂರು ಅತೀ ಶೀಘ್ರದಲ್ಲಿ ಹೈದರನ ವಶವಾಯಿತು.[24] ಕ್ರಿ.ಶ 1782ರಲ್ಲಿ ಹೈದರನ ಮರಣ ನಂತರ ಟಿಪ್ಪು ಅಧಿಕಾರಕ್ಕೆ ಬಂದನು. ಈತನ ಆಳ್ವಿಕೆಯ 15 ವರ್ಷಗಳು ಎಂದರೆ ಕ್ರಿ.ಶ 1784 ರಿಂದ 1799ರ ವರೆಗಿನ ಕಾಲವು ಇಲ್ಲಿನ ಕ್ರೈಸರ ಇತಿಹಾಸದಲ್ಲಿ ಕತ್ತಲೆಯ ಯುಗವಾಗಿದೆ.[25] ಕ್ರಿ.ಶ 1781ರಲ್ಲಿ ಜನರಲ್ ಮ್ಯಾಥ್ಯೂಸ್‌ನ ನೇತ್ರತ್ವದಲ್ಲಿ ಬ್ರಿಟಿಷರು ಮಂಗಳೂರನ್ನು ಆಕ್ರಮಿಸಿದರು. 1783ರ ವರೆಗೆ ತಡೆ ಇಲ್ಲದೇ ಬ್ರಿಟಿಷರಲ್ಲಿ ಮುಂದುವರಿದ ಈ ಪ್ರದೇಶದ ಮೇಲೆ ಟಿಪ್ಪು ಮೇ 16, 1783ರಂದು, 1,00,000 ಲಕ್ಷ ಸೈನಿಕರೊಂದಿಗೆ ಹಾಗೂ 96 ಬಂದೂಕುಗಳೊಂದಿಗೆ ಕೋರ್ಡೆಲ್‌ನಲ್ಲಿ ಪ್ರತ್ಯಕ್ಷನಾದನು. ಈ ಸಂದರ್ಭದಲ್ಲಿ ಮಂಗಳೂರಿನ ಕೋಟೆಯನ್ನು ಕರ್ನಲ್ ಕ್ಯಾಂಪಬೇಲ್ [Campbell] 210 ಯೂರೋಪಿಯನ್ ಮತ್ತು 1,500 ಸೈನಿಕರೊಂದಿಗೆ ವಶಪಡಿಸಿದ್ದನು. ಟಿಪ್ಪುವಿನ ಸೈನ್ಯ ಪ್ರೆಂಚ್ ಫಿರಂಗಿದಳದ ಅಧಿಕಾರಿಗಳು ಹಾಗೂ ಇಂಜನಿಯರ್ ಗಳಿಂದ ಬೆಂಬಲಿತವಾಗಿತ್ತು. ಬ್ರಿಟಿಷ್ ಸೈನ್ಯವು ಬರಗಾಲದಿಂದ ತತ್ತರಿಸಿ ಹೋಗಿ, ನೀರು ಮತ್ತು ಆಹಾರ ಸಿಗದೇ ಸಂಕಷ್ಟದಲ್ಲಿತ್ತು. ಇವರನ್ನು ಮುತ್ತಿಗೆ ಹಾಕಿದ್ದ ಟಿಪ್ಪು ಸೈನ್ಯ ಆಕಸ್ಮಿಕ ದಾಳಿಗಳನ್ನು ಎಸಗುತಿತ್ತು. ಕೊನೆಗೆ ಜನವರಿ 30, 1784ರ ಶಾಂತಿ ಒಪ್ಪಂದದಂತೆ ಮಂಗಳೂರು ಟಿಪ್ಪುವಿನ ವಶವಾಯಿತು.[26] ಇದರ ನಂತರ ಕ್ರೈಸ್ತರು ಇಂಗ್ಲೀಷರ ಕಡೆಗೆ ಸೇರಿದರೆಂದು ಅನುಮಾನಿಸಿ ಕ್ರಿ.ಶ 1784 ಫೆಬ್ರವರಿ 24 ರಂದು ಕೆನರಾದಲ್ಲಿನ ಎಲ್ಲಾ ಕ್ರೈಸ್ತರನ್ನು ಸೆರೆ ಹಿಡಿಯಬೇಕೆಂದು ರಾಜ ಮುದ್ರೆಯುಳ್ಳ ಆಜ್ಞೆಗಳನ್ನು ಕೆನರಾದ ಎಲ್ಲಾ ಸೇನಾಧಿಪತಿಗಳಿಗೆ ಕಳುಹಿಸಿಕೊಟ್ಟನು.

"ಕೆನರಾದಲ್ಲಿರುವ ಎಲ್ಲಾ ಪಾದ್ರಿಗಳನ್ನು ಕುಲಿಸ್ಥಾನರನ್ನು (ಕ್ರೈಸ್ತರನ್ನು) ಹಿಡಿದು ಬಂದೋಬಸ್ತಿನಿಂದ ಹುಜೂರಿಗೆ ಕಳುಹಿಸತಕ್ಕದ್ದು. ಪ್ರತಿಯೊಬ್ಬರ ಚರಸೊತ್ತು, ಧಾನ್ಯ, ದನಕರುಗಳು, ಭೂಮಿ, ಬಾಗ್ಯೈತುಗಳು ಎಲ್ಲಾ ತನಿಖೆಮಾಡಿ ಎಲ್ಲವನ್ನೂ ಸರಕಾರ ಸ್ವಾಧೀನ ಮಾಡಿಕೊಂಡು ಭೂಮಿಯನ್ನು ಬೇರೆಯವರಿಗೆ ಕೊಟ್ಟು ಬೇಸಾಯ ಮಾಡಿಸತಕ್ಕದ್ದು. ಅವರು ಬೇಸಾಯ ಮಾಡದಿದ್ದರೆ ಹುಟ್ಟುವಳಿಯ ಬೆಲೆಯನ್ನು ಅವರಿಂದ ತೆಗೆದುಕೊಳ್ಳತಕ್ಕದ್ದು. ಇನ್ನು ಮುಂದೆ ಯಾವ ಕುಲಿಸ್ತಾನನಾದರೂ ಕೆನರಾದಲ್ಲಿ ಬಂದುವಾಸಮಾಡಿದರೆ ಇದೆ ಆಜ್ಞೆಯಂತೆ ಅವನನ್ನು ಅವನ ಹೆಂಡತಿ ಮಕ್ಕಳನ್ನೂ ಸೆರೆಹಿಡಿದು ಹುಜೂರಿಗೆ ಕಳುಹಿಸಿಕೊಡ ತಕ್ಕದು"[27] ಈ ರೀತಿ ಆತನ ಆಜ್ಞೆಯಂತೆ ಬಂಧಿಸಿದ ಕ್ರೈಸ್ತರ ಸಂಖ್ಯೆಯ ಬಗ್ಗೆ ಇತಿಹಾಸಕಾರರಲ್ಲಿ ಒಮ್ಮತವಿಲ್ಲ. ವಿವಿಧ ಮೂಲಗಳು ವಿವಿಧ ಸಂಖ್ಯೆಯನ್ನು ನೀಡುತ್ತವೆ. ಈ ಸಂಖ್ಯೆಯು 20,000ದಿಂದ 80,000ರ ವರೆಗೆ ಇದೆ.[28] ಮ್ಯಾಥ್ಯೂಸ್ ನಿಗೆ ಕ್ರೈಸ್ತರು ರೂ. 3,30,000 ನೀಡಿದ್ದರು. ಆದ್ದರಿಂದ ಲೇಖಕರು ಕ್ರೈಸ್ತರು ರೂ.5 ಲಕ್ಷದಷ್ಟು ಆಸ್ತಿಯನ್ನು ಹೊಂದಿದ್ದರು ಎಂದು ಅಂದಾಜಿಸಿದ್ದಾರೆ.[29]

ಕೆನರಾದಲ್ಲಿ 5000ದಷ್ಟು ಕ್ರೈಸ್ತರು ಬಂಧಿಸದೇ ಉಳಿದಿದ್ದರು. 21 ಪಾದ್ರಿಗಳನ್ನು ಈ ಸಂದರ್ಭದಲ್ಲಿ ಬಂಧಿಸಿ ಗಡಿಪಾರು ಮಾಡಲಾಯಿತು. ಈ ಅಂಶವನ್ನು ಲೇಖಕರು ಸ್ಪೇನಿನಲ್ಲಿ 3ನೇ ಚಾರ್ಲ್ಸ್‌ನ ಕಾಲದಲ್ಲಿ 5000 ಜೆಸ್ಯೂಟರನ್ನು ಗಡಿಪಾರು ಮಾಡಿದುದರೊಂದಿಗೆ ಹೋಲಿಸಿದ್ದಾರೆ. ನಂತರ ಲೇಖಕರು ಬಹು ದೀರ್ಘವಾದ ಬಾರಕೂರಿನ ಹಸ್ತಪ್ರತಿಯಲ್ಲಿನ ವಿಷಯಗಳನ್ನು ಚರ್ಚಿಸಿದ್ದಾರೆ.[30] "ಒಂದು ವರ್ಷ ಮಾಯಿ [1784 ಫೆಬ್ರವರಿ- ಮಾರ್ಚಿಗೆ ಹೊಂದುವ ತುಳು ತಿಂಗಳು] 30ರಂದು ಒಂದೇ ರಾತ್ರಿ ಕೆನರಾ ಜಿಲ್ಲೆಯಲ್ಲಿದ್ದ ಎಲ್ಲಾ ಕ್ರೈಸ್ತರನ್ನು ಆಯಾ ಹಳ್ಳಿಗಳಲ್ಲಿ ಒಂದು ಕಡೆ ಕೂಡಿಹಾಕಲಾಯಿತು. ಬಾರ್ಕೂರು ತಾಲೂಕಿನವರನ್ನು ಮಾರನೆಯ ದಿನ ಬ್ರಹ್ಮಾವರದ ಕಚೇರಿಗೆ ಕರೆದೊಯ್ದು ಅಲ್ಲಿ 8 ದಿನ ಬಂಧಿಸಿಡಲಾಯಿತು. ನಂತರ ಕುಂದಾಪುರ ತಾಲೂಕಿನ ಕೋಟೇಶ್ವರಕ್ಕೆ ಕರೆದುಕೊಂಡು ಹೋಗುವಾಗ ಆ ತಾಲೂಕಿನವರನ್ನು ಸೇರಿಸಿ, ಕೋಟೇಶ್ವರ ನೆರಗಿಯ ಹಂಗೂರು ಎಂಬಲ್ಲಿನ ಬೆಟ್ಟ ಪ್ರದೇಶದಲ್ಲಿ ಅವರನ್ನು 2 ತಿಂಗಳು ಬಂಧಿಯಾಗಿ ಇಡಲಾಯಿತು. ನಂತರ ನಾಗೂರು ಘಟ್ಟವನ್ನು ದಾಟಿ ಶ್ರೀರಂಗ ಪಟ್ಟಣಕ್ಕೆ ನಡೆಸಿಕೊಂಡು ಹೋಗಲಾಯಿತು". ಈ ರೀತಿ ಇಲ್ಲಿ ಇವರನ್ನು ಬಂಧಿಸಿದ ಒಂದು ಹಂತದ ಚಿತ್ರಣವನ್ನು ಲೇಖಕರು ಹಸ್ತಪ್ರತಿಯಿಂದ ತಿಳಿಸಿದ್ದಾರೆ. ಮುಂದೆ ಈ ಜನರು ತಮ್ಮ ಪಯಣದ ಸಂದರ್ಭದಲ್ಲಿ ಅನುಭವಿಸಿದ ಕಷ್ಟಗಳ ಬಗ್ಗೆ, ಸಾವು ನೋವಿನ ಬಗ್ಗೆ ಹಾಗೂ ಶ್ರೀರಂಗಪಟ್ಟಣದಲ್ಲಿ ಇವರನ್ನು ನಡೆಸಿಕೊಂಡ ರೀತಿಯ ಬಗ್ಗೆ ವಿವರಣೆ ಲಭ್ಯವಿದೆ. "ದಾರಿಯುದ್ದಕ್ಕೂ ಅಪಾರ ಸಾವು ನೋವಾಯಿತು. ಮೇಲಿನ ಎರಡೂ ತಾಲೂಕಿಗೆ ಸೇರಿದ ಸುಮಾರು 20,000 ಜನರಿದ್ದರು. ನಡೆಯುವಾಗ ಇವರನ್ನು 2 ಪಂಗಡಗಳಾಗಿ ಮಾಡಲಾಯಿತು, ಕೂಲಿಕಾರರು ಮತ್ತು ರೈತರು. ರೈತರು ಮುಂದೆ ಹಾಗು ಕೂಲಿಕಾರರು ಹಿಂದೆ ನಡೆಯಬೇಕಿತ್ತು. ಕೂಲಿಕಾರರಿಗೆ ದಿನಭತ್ಯೆ ಸಿಗುತಿತ್ತು, ರೈತರಿಗೆ ಸಿಗುತ್ತಿರಲಿಲ್ಲ. ಈ ರೀತಿ ಪ್ರಯಾಣ

ಮಾಡುತ್ತಿರುವಾಗ ಗರ್ಭಿಣಿ ಹೆಂಗಸರು ಸಮುದಾರಿಯಲ್ಲೇ ಹೆರಬೇಕಾಯಿತು. ಹುಟ್ಟಿದ ಮಕ್ಕಳನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಹೋಗಬೇಕಾಯಿತು. ಯಾರದರೂ ಸತ್ತರೆ ಅವರ ದೇಹವನ್ನು ಅಲ್ಲೇ ಹೂತು ಬೀಡುತ್ತಿದ್ದರು. 'ಹೊರಡಿ' ಎಂದು ಆಜ್ಞೆ ಬಂದರೆ, ಅಡಿಗೆ ಮುಗಿಯದಿದ್ದರೆ, ಅನ್ನವನ್ನು, ಮಡಿಕೆಗಳನ್ನು ಅಲ್ಲೇ ಬಿಟ್ಟು ಹೊರಡಬೇಕಾಗಿತ್ತು. ಈ ರೀತಿ ಪಯಣ ಮಾಡಿ ಉಳಿದವರನ್ನು ಶ್ರೀರಂಗಪಟ್ಟಣದಿಂದ ಸ್ವಲ್ಪ ದೂರವಿರುವ ಕರಿಕಟ್ಟೆ ಎಂಬಲ್ಲಿ ತಂಗುವಂತೆ ಮಾಡಲಾಯಿತು. ಅಲ್ಲಿ 8-10 ದಿನ ಕಳೆದ ನಂತರ ಅವರನ್ನು ಮಗ್ಗೆ ಹೊಳೆ ದಾಟಿಸಿ ಶಹರ್‌ಗಂಜಾಂಗೆ ಕೊಂಡು ಹೋಗಲಾಯಿತು. ಅಲ್ಲಿ ಒಂದು ಗೂಡಾರದಲ್ಲಿ 100 ಮಂದಿ ವಾಸಮಾಡಬೇಕಿತ್ತು. ಬಾರಕೂರಿನ ಜನರಿಗಿಂತ ಮೊದಲೇ ಅಲ್ಲಿ ಮಂಗಳೂರು, ಬಂಟ್ವಾಳ ಮತ್ತು ನೆರೆಯ ತಾಲೂಕುಗಳಿಗೆ ಸೇರಿದ ಕ್ರೈಸ್ತರು ಬಂದಾಗಿತ್ತು. ನಂತರ ಹೋನೋರು ಹಾಗೂ ಅವರ ಸುತ್ತಮುತ್ತಲಿನವರು ಬಂದು ಸೇರಿದರು. ಹೀಗೆ ಒಟ್ಟು ಸೇರಿದವರ ಸಂಖ್ಯೆ 80,000ವಾಗಬಹುದು. ಶಹರ್‌ಗಂಜಾಂನಲ್ಲಿ ನೆಲೆಸಿದ ಒಂದು ತಿಂಗಳಲ್ಲಿ ಸಾಂಕ್ರಾಮಿಕ ರೋಗಗಳಿಂದ ಮೂರನೇ ಒಂದರಷ್ಟು ಜನ ಮರಣ ಹೊಂದಿದರು ಎಂದಿದ್ದಾರೆ."[31]

"ಆಗ ಅವರು ಅನುಭವಿಸಿದ ದು:ಖವನ್ನು ವರ್ಣಿಸಲು ಸಾಧ್ಯವಿಲ್ಲ. ಒಬ್ಬ ಸತ್ತರೆ ಆ ಸುದ್ದಿಯೇ ಇನ್ನೊಬ್ಬರ ಸಾವಿಗೆ ಕಾರಣವಾಗುತ್ತಿತ್ತು. ಹಾಗಾಗಿ ತಂದೆ ಸತ್ತ ಸುದ್ದಿ ಮಗನಿಗೆ, ಮಗ ಸತ್ತ ಸುದ್ದಿ ತಂದೆಗೆ ಹೀಗೆ ಪರಸ್ಪರರಿಗೆ ತಿಳಿಸುತ್ತಿರಲಿಲ್ಲ. ಒಬ್ಬ ಸೋದರನು ಇನ್ನೊಬ್ಬನ ಸಾವನ್ನು ತಿಳಿಯದೇ ಹೋಗುತ್ತಿದ್ದನು. ಅರ್ಧದಷ್ಟು ಗುಂಡಿ ತೆಗೆದು ಹೆಣ ಹಾಕಿಬಿಡುತ್ತಿದ್ದರು. ಕೆಲವರು ಹೆಣ ಬಿದ್ದಲ್ಲೇ, ಅದರ ಮೇಲೆ ಒಂದಷ್ಟು ಮರಳು, ಮಣ್ಣು ಸುರಿದು ಹೋಗುತ್ತಿದ್ದರು. ಕೆಲವರು ಚರಂಡಿಯೋ ಬಾವಿಗೋ ದೂಡಿಬಿಡುತ್ತಿದ್ದರು. ಮನೆಗಳಲ್ಲಿ ಹೆಣಗಳು ಬಿದ್ದಿರುವಾಗಲೇ ಬದುಕಿರುವವರು ಅನ್ನ ಬೇಯಿಸಬೇಕಾಗಿತ್ತು. ನಾಯಿ ನರಿಗಳು ಹೆಣಗಳನ್ನು ಮುಗಿಬಿದ್ದು ತಿನ್ನುತ್ತಿದ್ದುವು. ಸುಲ್ತಾನನು ಮಂಗಳೂರಿನ ತನ್ನ ದಂಡಯಾತ್ರೆಗಳನ್ನು ಮುಗಿಸಿಕೊಂಡು ಹಿಂದಿರುಗಿದ ಮೇಲೆ ಶಹರ್‌ಗಂಜಾಂನಲ್ಲಿದ್ದ ಇವರನ್ನು ಭೇಟಿ ಮಾಡಿದನು. ಕೆಲಕಾಲದ ನಂತರ ಎಣ್ಣೆಹೊಳೆ, ಪಡುಳ್ಳಿ ಮತ್ತು ಇತರ ಗ್ರಾಮಗಳನ್ನು ಅವರಿಗೆ ಬೇಸಾಯಕ್ಕಾಗಿ ಕೊಡಲಾಯಿತು. ತಕ್ಷಣದ ಜೀವಿಕೆಗೆ ಭತ್ತದ ಗದ್ದೆಗಳನ್ನು ಕೊಟ್ಟರೂ, ಅದನ್ನು ತಿಂದು ವ್ಯಾಧಿಗಳು ಕಾಣಿಸಿಕೊಂಡವು. ನಂತರ ಹೊಸ ಭತ್ತವನ್ನು ಒದಗಿಸಲಾಯಿತು. ಈ ರೀತಿ ಅವರು ಅದನ್ನು ತಿಂದು, ಬೇಸಾಯ ಮಾಡತೊಡಗಿದರು. ಈ ಸಮಯಕ್ಕೆ ಹರಕಾರಿ (ಸೇನಾಭರ್ತಿ ಅಧಿಕಾರಿ) ಶಿಬಿರಕ್ಕೆ ಭೇಟಿ ಕೊಟ್ಟು ತರುಣರನ್ನು ಅವರ ಕುಟುಂಬದೊಂದಿಗೆ ಯುದ್ಧನಿರತ ಸೈನ್ಯಕ್ಕೆ ಸೇರಿಸಿದನು. ಅದರಲ್ಲಿ ಕೆಲವರು ನಗರದ ಕಾವಲುಗಾರರಿಗೆ ಲಂಚಕೊಟ್ಟು, ಪಟ್ಟಿಯಲ್ಲಿ ಸತ್ತುಹೋದರು ಎಂದು ಬರೆಸಿ ಓಡಿ ಹೋದರು. ಕೆಲವರು ಕಟ್ಟಿಗೆ ತರುವ ನೆಪದಲ್ಲಿ, ಕೆಲವರು ನಿರ್ಜನ ರಾತ್ರಿಯಲ್ಲಿ ಗಂಡ ಹೆಂಡತಿಯನ್ನು, ತಂದೆ ಮಗನನ್ನು ಬಿಟ್ಟು ಓಡಿ ಹೋದರು. ಹೀಗೆ 4 ಸಲ ತರುಣರನ್ನು ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳಲಾಯಿತು. ಇನ್ನು ಉಳಿದ ಕುಂಟರು, ಕುರುಡರು, ಮುದುಕರು, ಬೇಸಾಯ, ದೈಹಿಕ ಕೆಲಸಗಳನ್ನು ಮಾಡುತ್ತಲೆ ಇದ್ದರು. ಸೈನ್ಯಕ್ಕೆ

ಸೇರಿದವರನ್ನು ಶಹರ್ ಗಂಜಾಂನ ವಸತಿಗಳಲ್ಲಿ ಉಳಿಸಲಾಯಿತು. ಅವರಿಗೆ ತಿಂಗಳಿಗೆ ಒಂದು ಪಗೋಡ, ಹೆಂಗಸರು ಮತ್ತು ಹತ್ತು ವರ್ಷದೊಳಗಿನ ಮಕ್ಕಳಿಗೆ ಒಂದು ರೂಪಾಯಿ ನೀಡಲಾಗುತ್ತಿತ್ತು. ಹೀಗೆ ಇವರನ್ನು ಹೊಂದಿದ್ದ ನೂರು ಸೈನಿಕರ ಒಂದು ಕಂಪೆನಿ, ನಾಲ್ಕು ಕಂಪೆನಿಗಳು ಸೇರಿ ಒಂದು ರಿಸಾಲ, ನಾಲ್ಕು ರಿಸಾಲಗಳು ಕೂಡಿ ಸುಫೇದಾರ್ ಮತ್ತು ನಾಲ್ಕು ಸುಫೇದಾರ್‌ರನ್ನು ಒಬ್ಬ ಬಕ್ಷಿಯ ಕೈಕೆಳಗೆ ಇರಿಸಲಾಗಿತ್ತು. ಇಡೀ ಕಂಪೆನಿಯನ್ನು ಇಸ್ಲಾಂ ಧರ್ಮಕ್ಕೆ ಪರಿವರ್ತಿಸಲಾಗುತಿತ್ತು. ಅದೇ ಸಮಯಕ್ಕೆ ಸುಮಾರು 200 ಜನ ತರುಣಿಯರನ್ನು ಆರಿಸಿ ಅಂತಪುರಕ್ಕೆ ಸೇರಿಸಲಾಯಿತು. ಸುಲ್ತಾನನು ಆದೋನಿಯಿಂದ ಶ್ರೀರಂಗ ಪಟ್ಟಣಕ್ಕೆ ಬಂದ ಮೇಲೆ ತಪ್ಪಿಸಿಕೊಂಡು ಹೋದವರನ್ನು ಬಂಧಿಸಿ, ಸುನ್ನತಿ ಮಾಡಿ, ಮೈಸೂರಿಗೆ ಕಳಿಸಿದರು. ಕೆಲವು ಅಧಿಕಾರಿಗಳು ಅಂತಃಪುರದ ಹುಡುಗಿಯನ್ನು ಆರಿಸಲು ಮುಂದಾದಾಗ, ಅಲ್ಲಿದ್ದ ತರುಣರು ಅವರನ್ನು ತಡೆದರು. ಆದರೆ ಅವರಿಗೆ ಭಯಾನಕ ಶಿಕ್ಷೆ ವಿಧಿಸಲಾಯಿತು. ನಂತರ ಕೆಲವು ಕ್ರೈಸ್ತರು ಪುಸ್ತಕಗಳನ್ನು ಓದಿ ಧಾರ್ಮಿಕ ಕರ್ತವ್ಯಗಳನ್ನು ಆಚರಿಸತೊಡಗಿದರು. ಇದನ್ನು ಅಲ್ಲಿ ನಿರ್ಬಂಧಿಸಲಾಯಿತು. [32]

ಕ್ರಿ.ಶ 1784, ಪೆಬ್ರವರಿ 24ರ ರಾತ್ರಿ ಬಂಧಿಸಿದವರನ್ನು ಹೊರತು ಪಡಿಸಿ ಕೆಲವು ಸಾವಿರ ಮಂದಿಯನ್ನು ಇತರ ಎರಡು ಸಂದರ್ಭದಲ್ಲಿ ಬಂಧಿಸಲಾಯಿತು. ಈ ರೀತಿ ಇವರ ಒಟ್ಟು ಸಂಖ್ಯೆ 80,000 ದಷ್ಟಾಗಬಹುದೆಂದುಲೇಖಕರು ಅಂದಾಜಿಸಿದ್ದಾರೆ. ಅವರ ಸುಮಾರು 5ಲಕ್ಷ ರೂ. ಬೆಲೆ ಬಾಳುವ ಆಸ್ತಿಯನ್ನು ಆಕ್ರಮಿಸಿ ಮುಸ್ಲಿಮರಿಗೆ ಹಾಗೂ ಇತರರಿಗೆ ಹರಾಜು ಮಾಡಿದರು. ಕೆಲವು ಕ್ರೈಸ್ತರು ಸೆರೆಹಿಡಿಯಲ್ಪಡುವ ಮೊದಲೇ ತಮ್ಮ ಆಸ್ತಿಗಳನ್ನು ನೆರೆಯವರಿಗೆ ಕೊಟ್ಟಿದ್ದರು. ಕ್ರೈಸ್ತರನ್ನು ಬಂಧಿಸಿ ಕೊಂಡುಹೋದ ಮೇಲೆ ಟಿಪ್ಪು ಚರ್ಚುಗಳ ನಾಶವನ್ನು ಆರಂಭಿಸಿದನು. ಕೆಲವು ಚರ್ಚುಗಳನ್ನು ಸಂಪೂರ್ಣ ನಾಶಪಡಿಸಿದರೆ, ಇನ್ನೂ ಕೆಲವು ಚರ್ಚುಗಳ ಮೇಲ್ಛಾವಣಿಗಳನ್ನು ತೆಗೆದು ಬಿಟ್ಟನು. ಧ್ವಂಸವಾಗದೇ ಉಳಿದ ಒಂದೇ ಒಂದು ಚರ್ಚೆಂದರೆ ಮೂಡಬಿದರೆಯ ಹೊಸಬೆಟ್ಟುವಿನ ಚರ್ಚಾಗಿದ್ದು, ಅಲ್ಲಿನ ಚೌಟರಾಯನ ಸಹಾಯದಿಂದ ಹಾಳಾಗದೆ ಉಳಿಯಿತು. ಅವುಗಳಲ್ಲಿ ಮಂಗಳೂರಿನ ರೊಜಾರಿಯೋ, ಮಿಲಾಗ್ರಿಸ್, ಬೋಳಾರದವು ನಾಶವಾದವು. ಮಿಲಾಗ್ರಿಸ್ ಚರ್ಚಿನ ಕಲ್ಲುಗಳಿಂದ ಇಡ್ಯಾ ಗುಡ್ಡ (ಬಾವುಟ ಗುಡ್ಡೆ)ದ ಮೇಲೆ ಮುಸ್ಲಿಂರಿಗೆ ನಮಾಜ್ ಮಾಡಲು ಒಂದು ಕಟ್ಟಡವನ್ನು ಮೆಕ್ಕಕ್ಕೆ ಮುಖ ಮಾಡಿ ಕಟ್ಟಲಾಯಿತು. ಇದಕ್ಕೆ 2 ಮೂಲೆಗಳಲ್ಲಿ 2 ಶಿಖರಗಳಿವೆ. ಇಲ್ಲಿ ಮುಸಲ್ಮಾನರು ಬಕ್ರಿದ್ ಮತ್ತು ರಮಜಾನದ ಸಮಯದಲ್ಲಿ ಒಟ್ಟುಗೂಡಿ ಅದರಲ್ಲಿರುವ ಮಿನಿಬಾರಿ [pulpit] ನಿಂದ ಓದುವ ಕುತುಬವನ್ನು ಕೇಳುತ್ತಾರೆ. ಧ್ವಂಸವಾದ ಇತರ ಚರ್ಚುಗಳೆಂದರೆ ಫರಂಗಿಪೇಟೆ, ವಾಮಂಜೂರು, ಉಳ್ಳಾಲ, ಬಂಟ್ವಾಳ, ಅಗ್ರಹಾರ, ಮೊಗರ್‌ನಾಡ್, ಪೇಜಾವರ, ಮುಲ್ಕಿ, ಕಿರೆಂ, ಶಿರ್ವ, ಕಾರ್ಕಳ, ಕಲ್ಯಾಣಪುರ, ಸುರಾಲ, ಕುಂದಾಪುರ, ಗಂಗೊಳ್ಳಿ, ಬಸರೂರು, ನಗರ, ಬೈಂದೂರು, ಹೊನ್ನಾವರ, ಚಾಂದೂರು [Chandur] ಗುಲ್‌ಮೋನ [Gulmona]

ಕುಮುಟಾ ಮತ್ತು ಸುಂಕಾರಿ. ಕೆಲವು ಕ್ರೈಸ್ತರು ಬಂಧನದಿಂದ ಪಾಲಾಯನ ಗೈದರು. ಅವರಲ್ಲಿ ಕೆಲವರು ಮಂಗಳೂರಿನ ದೇರೆಬೈಲಿನ ಚಾಪೆಲ್‌ನಲ್ಲಿ ಸಭೆ ಸೇರುತ್ತಿದ್ದರು.[33]

ಈ ಬಂಧನಕ್ಕೆ ಸಂಬಂಧಿಸಿದಂತೆ ಇರುವ ಬಹುದೊಡ್ಡ ಸಮಸ್ಯೆ ಎಂದರೆ ನಿಕರವಾದ ಕ್ರೈಸ್ತರ ಸಂಖ್ಯೆಯನ್ನು ತಿಳಿಯಲು ಸಾಧ್ಯವಾಗದೇ ಇರುವಂತದ್ದು. ಇದಕ್ಕೆ ಸಂಬಂಧಿಸಿದಂತೆ ವಿವಿಧ ಮೂಲಗಳು ವಿವಿಧ ರೀತಿಯ ಮಾಹಿತಿಯನ್ನು ನೀಡುತ್ತವೆ. ಅವು 20,000 ದಿಂದ ಆರಂಭಿಸಿ 80,000ದವರೆಗಿನ ಲೆಕ್ಕಾಚಾರವನ್ನು ಹೊಂದಿದೆ. ಇಲ್ಲಿ ಒಂದು ವಿಶ್ವಾಸನೀಯ ದಾಖಲೆ ಬಹುಶ: ಪೋರ್ಚುಗೀಸ್ ವರದಿ. ಯಾಕೆಂದರೆ ಕೆನರಾ ಪ್ರದೇಶವು ಗೋವಾದ ಆರ್ಚ್‌ಡಯೋಸೀಸ್‌ನ ವ್ಯಾಪ್ತಿಗೆ ಸೇರಿತು. ಆದ್ದರಿಂದ ಸಹಜವಾಗಿಯೇ ಅದರ ಅಧಿಕಾರಿಗಳು ಕ್ರೈಸ್ತ ಜನಸಂಖ್ಯೆಯ ಬಗ್ಗೆ ದಾಖಲೆಯನ್ನು ಇಟ್ಟುಕೊಂಡಿದ್ದರು. ಈ ಆಧಾರದ ಮೇಲೆ ಪೋರ್ಚುಗೀಸ್ ದಾಖಲೆ ಪ್ರಕಾರ 20,000 ಎಂಬ ಸಂಖ್ಯೆ ಜೊತೆಗೆ, ಫಾ। ಮಿರಾಂದರ 40,000 ಎರಡನ್ನು ಆಧಾರವಾಗಿರಿಸಿ, ಅದು 20,000 ದಿಂದ 40,000 ದವರೆಗೆ ಇದ್ದಿತು ಎಂದು ಹೇಳಬಹುದು.[34] ಆದರೆ ಬಾರಕೂರಿನ ಹಸ್ತಪ್ರತಿಯಂತೆ ಇದು 80,000 ಹಾಗೂ ಕೋಟೇಶ್ವರ ಮತ್ತು ಕುಂದಾಪುರ ಎರಡು ತಾಲೂಕಿನವರೇ ಸೇರಿ 20,000 ಜನರಿದ್ದರು ಎಂದಾಗ ಇಡೀ ಕೆನರಾದ ಕ್ರೈಸ್ತರ ಸಂಖ್ಯೆ 80,000ದಷ್ಟಾಗಬಹುದು ಅಥವಾ ಅದನ್ನು ದಾಟಬಹುದು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಕೆನರಾದಿಂದ ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಕ್ರೈಸ್ತರ ಸಂಖ್ಯೆ 40,000 ಕ್ಕಿಂತ ಹೆಚ್ಚಲ್ಲ ಮತ್ತು 20,000ಕ್ಕಿಂತ ಕಡಿಮೆಯಾಗಿರುವ ಸಾಧ್ಯತೆಯೂ ಇಲ್ಲ ಎಂದು ಸೆವ್ರಿನ್ ಸಿಲ್ವಾ ಅಭಿಪ್ರಾಯ ಪಟ್ಟಿದ್ದಾರೆ.[35]

ಕ್ರಿ.ಶ.1799 ಮೇ 4ರಂದು ಶ್ರೀರಂಗಪಟ್ಟಣದ ಪಥನ ಹಾಗೂ ಟಿಪ್ಪುವಿನ ಮರಣದೊಂದಿಗೆ ಆಳಿದುಳಿದ ಕ್ರೈಸ್ತರು ಹಿಂತಿರುಗಿ ಬಂದರು. ಕ್ರಿ.ಶ.1792ರ ಯುದ್ಧದ ಸಂದರ್ಭದಲ್ಲಿ ಕೆಲವರು ಶ್ರೀರಂಗಪಟ್ಟಣದಿಂದ ಪಲಾಯಣಗೈದಿದ್ದರು. ಆದರೆ ಕ್ರಿ.ಶ.1799ರಲ್ಲಿ ಸಂಪೂರ್ಣವಾಗಿ ಬಿಡುಗಡೆಹೊಂದಿ, ಕೆನರಾಕ್ಕೆ ಆಗಮಿಸಿದಾಗ ನೆಲೆ ಇಲ್ಲದಂತಾದರು. ಸ್ವಲ್ಪ ಸಮಯದವರೆಗೆ ಸಿಕ್ಕಿದ ಸ್ಥಳದಲ್ಲಿ ಬೇಸಾಯಮಾಡಿ ಜೀವನ ಮಾಡಿದರು. ಕಡೆಗೆ 145 ಕುಟುಂಬಗಳು ಒಂದು ಮನವಿಗೆ ಸಹಿಮಾಡಿ ಅದನ್ನು ಮೇಜರ್ ಮುನ್ರೋವಿಗೆ ನೀಡಿದರು. ಇದರ ಫಲವಾಗಿ ಕೆಲವರು ಅವರ ಭೂಮಿ ಪಡೆದರು. ಕ್ರಿ.ಶ.1800ರಲ್ಲಿ ಮುನ್ರೋ ಮದರಾಸಿಗೆ ಹೋದಾಗ ನಂತರ ಬಂದ ರೇವನ್‌ಷಾ ಇವರಿಗೆ ಸಾಧ್ಯವಾದಷ್ಟು ಸ್ಥಳವನ್ನು ಕೊಡಿಸಿದನು. ಇವರು ಉತ್ತಮ ಮೊತ್ತದ ಸಂಪತ್ತನ್ನು ಸಂಪಾದಿಸುವಲ್ಲಿ ಯಶಸ್ವಿಯಾದರು.[36] ಲೇಖಕರು ಇಲ್ಲಿ ಅಭಿಪ್ರಾಯಪಡುವಂತೆ ವಸಾಹತುಶಾಹಿ ಸರಕಾರ ಕ್ರೈಸ್ತರಿಗೆ ಎಲ್ಲಾ ರೀತಿಯಲ್ಲೂ ಸಹಾಯಮಾಡಿ ಅವರ ಅಭಿವೃದ್ಧಿಗೆ ಶ್ರಮಿಸಿದೆ ಎಂಬುದಾಗಿದೆ. ಶ್ರೀರಂಗಪಟ್ಟಣದ ಪಥನದ ನಂತರ ಕೆನರಾದಲ್ಲಿ 15,000 ದಷ್ಟು ಕ್ರೈಸ್ತರಿದ್ದರು ಎಂದಿರುವ ಲೇಖಕರು, ಸಾವಿರದಷ್ಟು ಜನರು ಮಲಬಾರ್‌ಗೆ ಹಾಗೂ ಕೆಲವರು ಕೊಡಗಿಗೆ ಹೋದರು ಎಂದಿದ್ದಾರೆ. ಕೊಡಗಿನಲ್ಲಿ ಇವರು ದೊಡ್ಡ ವೀರ ರಾಜೇಂದ್ರನಿಂದ ಸ್ವಾಗತಿಸಲ್ಪಟ್ಟರು.

ಆತನು ವರ್ಷದ ಮೊದಲು ನಿರಾಶ್ರಿತ ಕ್ರೈಸ್ತರಿಗಾಗಿ ಚರ್ಚನ್ನು ಕಟ್ಟಿಸಿ, ಇವರ ಆಧ್ಯಾತ್ಮಿಕ ಬೇಡಿಕೆಗಳ ಪೂರೈಕೆಗೆ ಫಾ। ಜೋನ್ ಡಿ ಕೋಸ್ಟಾರನ್ನು ಗೋವಾದಿಂದ ತರಿಸಿದನು. ಆತ ಚರ್ಚಿಗೆ ಎಣ್ಣೆ, ಕ್ಯಾಂಡಲ್ ಮತ್ತು 84 ಭಟ್ಟಿ [Buttis] ಭತ್ತವನ್ನು ವಾರ್ಷಿಕವಾಗಿ ಕೊಡುತ್ತಿದ್ದನು. ಆದರೆ ಬ್ರಿಟಿಷರು ಕೊಡಗನ್ನು ಆಕ್ರಮಿಸಿದ ನಂತರ ಇದನ್ನು ತಿಂಗಳಿಗೊಮ್ಮೆ ಪಾವತಿಸಲು ಆರಂಭಿಸಿದರು. ಇನ್ನುಳಿದ ಕ್ರೈಸ್ತರು ಮಲಬಾರ್, ಕೊಚ್ಚಿನ್ ಮತ್ತು ಉಳಿದವರು ಮೈಸೂರಿನಲ್ಲಿಯೇ ಉಳಿದರು.[37] ಪಿಯುಸ್ ಫಿಡೆಲಿಸ್ ಪಿಂಟೊರವರು ವಿವಿಧ ದಾಖಲೆಗಳ ಆದಾರದೊಂದಿಗೆ ಹಿಂತಿರುಗಿದ ಕ್ರೈಸ್ತರ ಬಗ್ಗೆ ಮಾಹಿತಿ ನೀಡಿದ್ದಾರೆ. ಕ್ರಿ.ಶ.1801ರಲ್ಲಿ ಕೆನರಾಕ್ಕೆ ಭೇಟಿ ನೀಡಿದ್ದ ಬುಕನಾನ್ ಪ್ರಕಾರ 15,000 ಜನರು ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಕ್ಕೆ ಮರಳಿದ್ದಾರೆ. 10,000 ಜನರು ಮಲಬಾರಿಗೆ ತಪ್ಪಿಸಿಕೊಂಡು ಹೋಗಿದ್ದಾರೆ. ಅಬೆ-ದುಬ್ವಾ ಪ್ರಕಾರ 20,000 ಜನರು ವಾಪಾಸು ಬಂದಿದ್ದಾರೆ ಎಂದರೆ, ಮೂರನೆಯ ಒಂದರಷ್ಟು ಜನರು ಒಂದು ವರ್ಷ ದಾಟಿ ಉಳಿಯಲಿಲ್ಲ ಎಂದು ವಿಲ್ಕ್ಸ್ ಅಭಿಪ್ರಾಯಪಟ್ಟಿದ್ದಾರೆ. ಕೊನೆಗೆ ಪಿಂಟೊರವರು ಬಂಧನದಿಂದ ಬಹುತೇಕ ಜನರು ಕೆನರಾಕ್ಕೆ ಹಿಂತಿರುಗಿಲ್ಲ ಎಂದಿದ್ದಾರೆ.[38]

ಕ್ರೈಸ್ತರು ಬಂಧನದಿಂದ ಬಂದ ಮೇಲೆ ಲಾರೆನ್ಸ್ ಬೆಲ್ಲೋ (Bello) ಈಗಿನ ಮಿಲಾಗ್ರಿಸ್ ಚರ್ಚ್‌ನ ನಿವೇಶನದಲ್ಲಿ ಚಾಪೆಲ್ ಕಟ್ಟಲು 400 ರೂಪಾಯಿ ನೀಡಿದರು. ಇದರ ವಿಕಾರ್ ಮೆಂಡೇಜ್ (mendez) ಆಗಿದ್ದರು. ನಂತರ ಹೊಸ ಮಿಲಾಗ್ರಿಸ್ ಚರ್ಚ್ ಕಟ್ಟಲು ತಯಾರಿ ಆರಂಭವಾಯಿತು. ಸರಕಾರ ಇದಕ್ಕಾಗಿ 600 ರೂಪಾಯಿಗಳನ್ನು ನೀಡಿತು. ಕ್ರಿ.ಶ1811 ರಂದು ಫಾ। ಮೆಂಡೇಜ್ ಹೊಸ ಮಿಲಾಗ್ರಿಸ್ ಚರ್ಚ್ ಕಟ್ಟಲು ಶಂಕು ಸ್ಥಾಪನೆ ನೆರವೇರಿಸಿದರೇ, ಎರಡು ವರ್ಷಗಳ ನಂತರ ರೋಜಾರಿಯೋ ಚರ್ಚ್ ಕಟ್ಟುವ ಕೆಲಸ ಆರಂಭವಾಯಿತು. ನಂತರ ಸರಕಾರ ಮತ್ತೊಮ್ಮೆ ಚರ್ಚುಗಳನ್ನು ನಿರ್ಮಿಸಲು 4000 ರೂಪಾಯಿಗಳನ್ನು ನೀಡಿತು. ಕೂಯೆಲ್ಲೊ, (Coelho) ಸಲ್ದಾನ, ಪಿಂಟೊ, ನೊರೋನ್ಹಾ ಮತ್ತು ಪಾಯಸ್ ಕುಟುಂಬಗಳು ರೊಜಾರಿಯೋ ಚರ್ಚ್‌ಗೆ ದೇಣಿಗೆ ನೀಡಿದ ಪ್ರಮುಖ ಕುಟುಂಬಗಳಾದರೆ, ಎರಡು ಕೂಯೆಲ್ಲೊ ಕುಟುಂಬಗಳು, ಗೋನ್‌ಸಾಲ್‌ವೇಸ್ (Gonsalves),ಮಸ್ಕರೇನಸ್, ಮತ್ತು ವಾಸ್ ಕುಟುಂಬಗಳು ಮಿಲಾಗ್ರಿಸ್ ಚರ್ಚ್‌ನ ಆದಾರ ಸ್ತಂಭಗಳಾಗಿದ್ದವು. ಕೊಡಿಯಾಲ್ ಬೈಲಿನ ಕಜೆಥಾನ್ [Cajetan] ಸಲ್ದಾನ ಕಲ್ಲನ್ನು, ಪ್ರಾನ್ಸಿಸ್ ಸಲ್ದಾನ ಮರವನ್ನು, ಕಾನ್‌ಸ್ಟಂಟೈನ್ ನೊರೋನ್ಹಾ ಕಬ್ಬಿಣವನ್ನು ಒದಗಿಸಿದರು. ಇದಲ್ಲದೇ ವಂತಿಗೆಯಿಂದ ಇಪ್ಪತ್ತೊಂದು ಇತರ ಚರ್ಚುಗಳನ್ನು ಕಟ್ಟಿದರು. ಮಂಗಳೂರು ಮತ್ತು ಬಂಟವಾಳದ ಸುತ್ತಮುತ್ತಲು 9, ಮುಲ್ಕಿಯ ಸುತ್ತಮುತ್ತಲೂ 4, ಕುಂದಾಪುರ ಬಾರಕೂರಿನ ಸುತ್ತಮುತ್ತಲೂ 4, ಹೊನ್ನಾವರದಲ್ಲಿ 3 ಹಾಗೂ ಒಂದು ಇತರೆಡೆ ನಿರ್ಮಾಣವಾದವು. ಕ್ರಿ.ಶ.1821ರಲ್ಲಿ ಕೆನರಾ ಕ್ರೈಸ್ತರು ಚರ್ಚುಗಳ ತೀರ್ವೆ ಮಾಫಿಮಾಡಬೇಕೆಂದು ಕಲೆಕ್ಟರ್ ಥೋಮಸ್ ಹ್ಯಾರಿಸರನ್ನು ಒತ್ತಾಯಿಸಿದರು. ಆಗಿನ ಮದ್ರಾಸ್ ಗವರ್ನರ್ ಮುನ್ರೋ ಮಾಫಿ ಮಾಡಬೇಕೆಂದು ಹೇಳಿದನು.

ಇದರಿಂದಾಗಿ ಮಿಲಾಗ್ರಿಸ್, ಕುಂದಾಪುರ, ವಾಮಂಜೂರು, ಪೇಜಾವರ, ಕಲ್ಯಾಣಪುರ, ಸುಂಕಾರಿ ಹಾಗೂ ಇತರ ಚರ್ಚುಗಳು ತೀರ್ವೆಯಿಂದ ಮುಕ್ತಾವಾದುವು.[39] ಲೇಖಕರು ಕ್ರಿ.ಶ.1818ರಲ್ಲಿನ ಒಟ್ಟು ಜನಸಂಖ್ಯೆಯಾದ 6,70,355ರಲ್ಲಿ 21,820 ಕ್ರೈಸ್ತರಿದ್ದರು ಎಂದಿದ್ದಾರೆ. ಆದರೆ ಕ್ರಿ.ಶ.1900ರಲ್ಲಿ ದಕ್ಷಿಣ ಕೆನರಾದಲ್ಲಿಯೇ ಒಟ್ಟು ಸಂಖ್ಯೆಯಾದ 11,34,713ರಲ್ಲಿ 78,805 ಕ್ರೈಸ್ತರಿದ್ದರು.[40]

ಲೇಖಕರು ಅಬೆದುಬ್ವಾ [Abbe Dubois]ರ ಮಿಶನರಿ ಕಾರ್ಯದ ಬಗ್ಗೆ ವಿವರಿಸಿದ್ದಾರೆ. ಇವರು ದಕ್ಷಿಣ ಭಾರತದಲ್ಲಿ 3 ದಶಕಗಳಷ್ಟು ಕಾಲ ಮಿಶನರಿ ಕೆಲಸ ನಿರ್ವಹಿಸಿ ಫ್ರಾನ್ಸ್‌ಗೆ ಮರಳಿ, ತಮ್ಮ 83ನೇ ವಯಸ್ಸಿನಲ್ಲಿ ಮರಣ ಹೊಂದಿದ್ದರು. ಅವರ ಹೆಚ್ಚಿನ ಮಿಶನರಿ ಕೆಲಸವು ಮೈಸೂರು ಪ್ರಾಂತ್ಯದಲ್ಲಾಗಿತ್ತು. ಇವರನ್ನು ಕರ್ನಲ್ ವೆಲ್ಲೆಸ್ಲಿಯು ಮೈಸೂರಿಗೆ ಆಮಂತ್ರಿಸಿ ಟಿಪ್ಪುವಿನ ಕೂರತ್ವಕ್ಕೆ ಬಲಿಯಾಗಿ, ಮುಸ್ಲಿಂ ಮತವನ್ನು ಅನುಸರಿಸಿದವರನ್ನು ಮರು ಮತಾಂತರ ಮಾಡಲು ಹೇಳಿದ್ದರು. ಈ ರೀತಿ ನೊಂದವರ ಸೇವೆಯ ಮೂಲಕ ಅಪಾರ ಪ್ರಭಾವವನ್ನು ಅವರು ಹೊಂದಿದ್ದರು. ಈ ರೀತಿ ಅವರು ಈ ಕ್ರೈಸ್ತರ 16 ವರ್ಷದ ಬಂಧನದ ಬಗ್ಗೆ ಕಣ್ಣಾರೆ ಕಂಡಿರುವ ವ್ಯಕ್ತಿಯಾಗಿದ್ದಾರೆ. ನಂತರದಲ್ಲಿ ಲೇಖಕರು ಅವರು ಫ್ರಾನ್ಸ್‌ಗೆ ತೆರಳಿದ ನಂತರ ಲಂಡನ್‌ನಲ್ಲಿ ಬಿಡುಗಡೆಯಾದ ಅವರ ಪತ್ರಗಳಾದ "ಆನ್ ದಿ ಸ್ಟೇಟ್ ಆಫ್ ಕ್ರಿಶ್ಚಿಯಾನಿಟಿ ಇನ್ ಇಂಡಿಯಾ"ಗಳನ್ನು ಚರ್ಚಿಸಿದ್ದಾರೆ.[41]

ಇಲ್ಲಿ ಲೇಖಕರಾದ ಮೋರ್‌ರವರು ಕೆನರಾದ ಕ್ರೈಸ್ತರಲ್ಲಿ ಚಿರಪರಿಚಿತವಾಗಿರುವ ಹಾಗೂ 'ಅರ್ಕುಳ ಗುರು' ಎಂದು ಖ್ಯಾತಿ ಪಡೆದಿರುವ, ಹೈದರಾಲಿಯ ಜೊತೆ ಉತ್ತಮ ಭಾಂದವ್ಯ ಹೊಂದಿದ್ದ ಫಾ। ಜೋಕಿಮ್ ಮಿರಾಂದರ ಬಗ್ಗೆ ಮಾಹಿತಿ ನೀಡಿದ್ದಾರೆ. ಇವರು ಗೋವಾದ ಸಂತ ಅನ್ [St.Ann]ನಲ್ಲಿ ಹುಟ್ಟಿದ್ದು, ಮುಂದೆ ಗೋವಾ ಹಾಗೂ ಯೂರೋಪ್ ಎರಡೂ ಕಡೆ ಶಿಕ್ಷಣ ಪಡೆದಿದ್ದರು. ನಂತರ ಧರ್ಮದೀಕ್ಷೆ ಸ್ವೀಕಾರದ ನಂತರ ಅವರನ್ನು ಕುಂದಾಪುರದ ಹತ್ತಿರದ ಗಂಗೊಳ್ಳಿಗೆ ಪಾದ್ರಿಯಾಗಿ ಕಳುಹಿಸಲಾಯಿತು. ಈ ಸಂದರ್ಭದಲ್ಲಿ ಮಿರಾಂದರಿಗೆ ಹೈದರನ ಜೊತೆ ಸಂಪರ್ಕ ಬೆಳೆಯಿತು. ನಂತರ ಮಿರಾಂದರವರು ಗಂಗೊಳ್ಳಿಯಿಂದ ಮಂಗಳೂರಿಗೆ ಬಂದು ಪರಂಗಿಪೇಟೆಯ ಮೋಂತೆ ಮಾರಿಯಾನೋ ಅಥವಾ ಅರ್ಕುಳದಲ್ಲಿ ಸೆಮಿನರಿಯನ್ನು ನಿರ್ಮಿಸಿ, 12 ಮಂದಿ ಯುವಕರನ್ನು ಧರ್ಮದೀಕ್ಷೆಗಾಗಿ ಸಿದ್ಧಗೊಳಿಸಿದರು. ಅವರು ಈ ಸೆಮಿನರಿಯನ್ನು ವೇರಪೊಲಿ ಮಿಶನಿಗೆ ಹಸ್ತಾಂತರಿಸಲು ಆಸಕ್ತಿ ಹೊಂದಿದ್ದರು. ಕೆನರಾ, ಗೋವಾದ ಆರ್ಚ್ ಬಿಷಪ್‌ರ ಅಧೀನವಿದ್ದುದರಿಂದ ಇದು ಸಾಧ್ಯವಾಗಲಿಲ್ಲ. ಕ್ರಿ.ಶ.1778 ರಲ್ಲಿ ಅದನ್ನು ಪ್ರೋಪಗಾಂದಕ್ಕೆ [propaganda] ಒಪ್ಪಿಸಿದರು. ಹೈದರಾಲಿಯ ರಕ್ಷಣೆಯಲ್ಲಿ ಮಿರಾಂದರಿಗೆ ಇಲ್ಲಿ ಪೋರ್ಚುಗೀಸ್ ಧ್ವಜ ಹಾರಿಸಲು ಅವಕಾಶವು ಇತ್ತು. ಆದರೆ 1782ರ ನಂತರ ಕ್ರೈಸ್ತರು ಸಂಕಷ್ಟಕ್ಕೆ ಸಿಲುಕಿದರು. ಸೆಮಿನರಿಯ ವಿದ್ಯಾರ್ಥಿಗಳನ್ನು ವೇರಪೊಲಿಗೆ ಕಳುಹಿಸಲಾಯಿತು. ಒಂದು ವರ್ಷದ ನಂತರ ಅವರನ್ನು ಗೋವಾಕ್ಕೆ ಕಳುಹಿಸಿ, ಅವರು ಅಗಸ್ಟಿನ್ ಪಂಗಡಕ್ಕೆ ಸೇರಿದ

ವಿದ್ಯಾರ್ಥಿಗಳಾದರು. ಫಾ। ಮಿರಾಂದರು ಮೊದಲು ತಲಚೇರಿಗೆ ಹೋಗಿ, ನಂತರ ಕ್ರೈಸ್ತರ ರಕ್ಷಣೆಗಾಗಿ ಪ್ರೆಂಚ್ ಸರಕಾರದಿಂದ ಸಹಾಯ ಪಡೆಯುವ ಉದ್ದೇಶದಿಂದ ಕೊಚ್ಚಿನ್‌ಗೆ ತೆರಳಿದರು. ಅವರು ಮೋಂತೆ ಮಾರಿಯಾನೋದಲ್ಲಿ ಸಂತ ಪ್ರಾನ್ಸಿಸ್ ಅಸ್ಸಿಸ್ಸಿಯವರ ಹಬ್ಬ ಆಚರಿಸುವ ಸಂಪ್ರಾದಾಯವನ್ನು ಆರಂಭಿಸಿದರು. ಅದೇ ರೀತಿ ಇವರು ರಚಿಸಿರುವ ದೇವರ ಸ್ತೋತ್ರಗಳ ಬಗ್ಗೆ ವಿವರಿಸಿರುವ ಲೇಖಕರು ಅವು ಇಂದಿಗೂ ಬಳಕೆಯಲ್ಲಿವೆ ಎಂದಿದ್ದಾರೆ.[42] ಲೇಖಕರು ತಮ್ಮ ಬರವಣಿಗೆಗಳಲ್ಲಿ ಪಾದ್ರಿವರ್ಗಗಳ ಸಾಧನೆಯನ್ನು, ಅವರು ಕ್ರೈಸ್ತರಿಗಾಗಿ ಪಡುವ ಶ್ರಮವನ್ನು ಹೊಗಳುತ್ತಾ,ಬರೆದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಕಾರವಾರ ಅಥವಾ ಸುಂಕಾರಿ ಮಿಶನಿನ ಬಗ್ಗೆ, ಅಲ್ಲಿ ಸೇವೆ ಸಲ್ಲಿಸಿದ ವಿವಿಧ ಪಾದ್ರಿಗಳ ಬಗ್ಗೆ ವಿವರಣಾತ್ಮಕ ಮಾಹಿತಿಯನ್ನು ಲೇಖನದಲ್ಲಿ ನೀಡಿದ್ದಾರೆ. ಹಳೆ ಕಾರವಾರ ಅಥವಾ ಸುಂಕಾರಿಯು ಆಧುನಿಕ ಕಾರವಾರ ನಗರದಿಂದ ಮೂರು ಮೈಲಿ ಪೂರ್ವಕ್ಕಿದೆ. ಇದು ಮಿಶನ್ ಕೇಂದ್ರ ಹಾಗೂ ವ್ಯಾಪಾರ ಕೇಂದ್ರವಾಗಿ ಪ್ರಮುಖವಾಗಿತ್ತು. ಕ್ರಿ.ಶ.1638ರಲ್ಲಿ ಸರ್ ವಿಲಿಯಂ ಕೋಟನ್ಸ್ ಕಂಪೆನಿಯ ಕ್ಯಾಪ್ಟನ್ ವೆಡ್ಡೆಲ್ [weddell] ಇಲ್ಲಿ ಕಾರ್ಖಾನೆ ಸ್ಥಾಪಿಸಿದರು. ನಂತರ ಕ್ರಿ.ಶ.1653ರಲ್ಲಿ ಇದು ಲಂಡನ್ ಈಸ್ಟ್ ಇಂಡಿಯಾ ಕಂಪೆನಿಯ ಅಧೀನವಾಯಿತು. ನಂತರ ಪೋರ್ಚುಗೀಸರ ಮತ್ತು ಸೊಂಡಾದ ಅರಸರ ದಾಳಿಯಿಂದ ಮುಚ್ಚಲ್ಪಟ್ಟಿತು. ಇದು ಮರಾಠರ ದಾಳಿಗೂ ತುತ್ತಾಯಿತು. ಹೀಗೆ ಕ್ರಿ.ಶ.1799ರಲ್ಲಿ ಬ್ರಿಟಿಷರ ವಶವಾದ ಈ ಪ್ರದೇಶವನ್ನು, ಕ್ರಿ.ಶ.1862ರಲ್ಲಿ ಮದ್ರಾಸ್ ಪ್ರಾಂತ್ಯದಿಂದ ಬೊಂಬೆ ಪ್ರಾಂತ್ಯಕ್ಕೆ ವರ್ಗಾಯಿಸಲಾಯಿತು. 1867ರಿಂದ 1874ರ ಮಧ್ಯೆ ಇದು ಒಂದು ಸುಂದರ ಹಾಗೂ ಸಮೃದ್ಧ ನಗರವಾಗಿ ಬೆಳೆಯಿತು. ಭಾರತದ ವಿವಿಧ ಭಾಗಗಳಲ್ಲಿ 17ನೇ ಶತಮಾನದ ಪ್ರಾರಂಭದಲ್ಲಿಯೇ ಕಾರ್ಮೆಲ್ಲೈಟರು ಅವರ ಮಿಶನನ್ನು ಸ್ಥಾಪಿಸಿದ್ದರು. ಇವರು ಹೆಚ್ಚಾಗಿ ಇಟಲಿ, ಜರ್ಮನ್, ಪ್ರೆಂಚ್ ಅಥವಾ ಸ್ಪೇನಿಶ್ ರಾಷ್ಟ್ರೀಯರಾಗಿದ್ದರು ಹಾಗೂ ಇವರು ಪ್ರೋಪಗಾಂಡದ ನಿಯಂತ್ರಣದಲ್ಲಿದ್ದು, ಇವರನ್ನು ವೈರಿಗಳೆಂದೇ ಬಾವಿಸಿದ್ದ ಪದ್ರಾವ್ದೋ, ಪೋರ್ಚುಗೀಸ್ ಪ್ರದೇಶಗಳಲ್ಲಿ ಇವರಿಗೆ ಮಿಶನರಿ ಕೆಲಸಕ್ಕೆ ಅವಕಾಶ ನೀಡುತ್ತಿರಲಿಲ್ಲ. ಕಾರ್ಮೆಲ್ಲೈಟರು ಪೋರ್ಚುಗೀಸ್ ಪ್ರದೇಶದಲ್ಲಿ ಕೆಲಸ ನಿರ್ವಹಿಸಬೇಕಾದರೆ ಪೋರ್ಚುಗಲ್ ರಾಜನಿಗೆ ವಿಧೇಯನಾಗಿರುವ ಪ್ರತಿಜ್ಞೆ ಮಾಡಬೇಕಿತ್ತು. ಈ ರೀತಿ ಗೋವಾ ಮತ್ತು ಡಿಯುದಲ್ಲಿದ್ದ ಕಾರ್ಮೆಲ್ಲೈಟರು ಪೋರ್ಚುಗೀಸರ ಬಂಧನದಿಂದ ತಪ್ಪಿಸಿ ಗ್ರೇಟ್ ಮೊಗಲ್‌ನ ವಿಕಾರ್ ಅಪೋಸ್ತಲಿಕರಲ್ಲಿಗೆ ತೆರಳಿದರು. ನಂತರ ಇವರನ್ನು ವಿವಿಧ ಭಾಗಗಳಿಗೆ ಕಳುಹಿಸಲಾಯಿತು. ಅದರಲ್ಲಿ ಕ್ರಿ.ಶ.1709ರಲ್ಲಿ ಸ್ಥಾಪನೆಯಾದ ಸುಂಕಾರಿ ಮಿಶನ್ ಒಂದಾಗಿದೆ. ಇಂಗ್ಲೀಷರು ಕಾರ್ಮೆಲ್ಲೈಟರನ್ನು ಉತ್ತಮವಾಗಿ ನೋಡಿಕೊಂಡಿದ್ದು, ಅವರು ರೋಮಿನ ಪ್ರೋಪಗಾಂಡ ಅಥವಾ ಬೊಂಬೆ ಮತ್ತು ಸೂರತ್‌ನ ವಿಕಾರ್ ಅಪೋಸ್ತಲಿಕರೊಂದಿಗೆ ಸಂಪರ್ಕಕ್ಕಾಗಿ ಹಡಗುಗಳ ಸಹಾಯವನ್ನು ಮಾಡಿದ್ದರು. ಅದಕ್ಕೂ ಮಿಗಿಲಾಗಿ ಒಂದು ತುಂಡು ತೆರಿಗೆ ಮುಕ್ತ ಭೂಮಿ ನೀಡಿ, ಅಲ್ಲಿ ನಂತರ ಒಂದು ಚರ್ಚ್ ಮತ್ತು ಮನೆ ನಿರ್ಮಾಣವಾಯಿತು.[43]

ಫಾ। ಜೋನ್ ಬ್ಯಾಪ್ಟಿಸ್ಟ್ ಮೇರಿಯವರು ಸುಂಕಾರಿ ಮಿಶನಿನ ಸ್ಥಾಪಕರು ಹಾಗೂ ಪ್ರಥಮ ವಿಕಾರ್‌ರಾಗಿದ್ದಾರೆ. ಪೋರ್ಚುಗಲ್ ರಾಜನಿಗೆ ವಿಧೇಯರಾಗುವಂತೆ ಪ್ರತಿಜ್ಞೆ ಗೈಯ್ಯದ ಕಾರ್ಮೆಲೈಟರನ್ನು ಬಂಧಿಸಿ ಹೊರಗೆ ಕಳುಹಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಪ್ಟಿಸ್ಟರು ಗ್ರೇಟ್ ಮೊಗಲ್‌ನ ವಿಕಾರ್ ಅಪೋಸ್ತಲಿಕರ ನಿಯಂತ್ರಣವಿದ್ದ ಸುಂಕಾರಿಗೆ ಬಂದರು. ಇಲ್ಲಿ ಒಂದು ಚಿಕ್ಕ ಚಾಪೆಲನ್ನು ಕಟ್ಟಿ, ಇವರು ಎಪ್ರಿಲ್, 1709 ರಂದು ಅವರ ಕೆಲಸ ಆರಂಭಿಸಿದರು. ಕ್ರಿ.ಶ.1712ರಲ್ಲಿ ಮೊಗಲ್‌ನ ವಿಕಾರ್ ಅಪೋಸ್ತಲಿಕರಾದ ಬಿಷಪ್ ಮೌರಿಸ್‌ರವರು ಅವರ ಸಾಮಾನ್ಯ ನೆಲೆಯನ್ನು ಇಲ್ಲಿಗೆ ಬದಲಾಯಿಸಿ, ಕ್ರಿ.ಶ.1717ರವರೆಗೆ ಇಲ್ಲಿದ್ದರು. ಅವರು ಫಾ।ಜೊನ್ ಬ್ಯಾಪ್ಟಿಸ್ಟ್‌ರನ್ನು ವಿಕಾರ್ ಜನರಲ್ ಆಗಿ ನೇಮಿಸಿದಾಗ, ರೋಮ್ ಅವರ ಸ್ಥಾನವನ್ನು ಹೆಚ್ಚಿಸಿ, ಜನವರಿ 31, 1714ರಂದು ವೇರಪೂಲಿಯ ವಿಕಾರ್ ಅಪೋಸ್ತಲಿಕ್ ಆಗಿ ನೇಮಿಸಿತು. ಇವರು ಕ್ರಿ.ಶ.1717 ಎಪ್ರಿಲ್ 4ರಂದು ಸುಂಕಾರಿ ಮಿಶನನ್ನು ಬಿಟ್ಟು ತೆರಳಿದರು. ಇವರು ಯಶಸ್ವಿಯಾಗಿ 30 ವರ್ಷಗಳ ಕಾಲ ಬಿಷಪರಾಗಿ ದುಡಿದರು. ಇವರ ಆಳ್ವಿಕೆಯ ಕಾಲದಲ್ಲಿ ಫಾ।ಡೊಮಿನಿಕ್‌ರವರು ಮಾಹೆಯಲ್ಲಿ ಮಿಶನ್ ಹೌಸ್ ಮತ್ತು ಚರ್ಚನ್ನು ಕಟ್ಟಿದರು. ಕ್ರಿ.ಶ.1750 ಎಪ್ರಿಲ್ 6ರಂದು ತಮ್ಮ 76ನೇ ವಯಸ್ಸಿನಲ್ಲಿ ವೇರಪೊಲಿಯಲ್ಲಿ ಮರಣ ಹೊಂದಿದರು. ನಂತರ ಸುಂಕಾರಿ ಮಿಶನನ್ನು ಫಾ।ಇನೋಸೆಂಟ್ [Innocent] ರವರು ಕ್ರಿ.ಶ.1717ರಿಂದ 1720 ಎಂದರೆ ಫಾ।ಅನಾಸ್ಟಸಿಯಸ್ [Anastasias] ಬರುವವರೆಗೆ ನಿರ್ವಹಿಸಿದರು. ಕ್ರಿ.ಶ.1720ರಲ್ಲಿ ಅವರು ಮಲಬಾರ್‌ಗೆ ತೆರಳಿದರು. ಕ್ರಿ.ಶ.1720ರಿಂದ 1725ರವರೆಗೆ ಫಾ।ಅನಾಸ್ಟಸಿಯಸ್‌ರವರು ಸುಂಕಾರಿ ಮಿಶನಿನ ಮುಖ್ಯಸ್ಥರಾಗಿದ್ದರು. ಇಲ್ಲಿ ಇವರು ಸುಭದ್ರವಾದ ಚರ್ಚನ್ನು ಕಟ್ಟಿ ಅದನ್ನು ಸೆಪ್ಟಂಬರ್ 8, 1722ರಂದು ಸೇವೆಗಾಗಿ ಸಮರ್ಪಿಸಿದರು. ಚರ್ಚ್ ಪಕ್ಕ ಒಂದು ಮನೆಯನ್ನು ಅವರು ನಿರ್ಮಿಸಿದರು. ಇವರು 6 ತಿಂಗಳ ಅಸ್ವಸ್ಥತೆಯಿಂದ ಮುಂಬಾಯಿಯಲ್ಲಿ 1726ರಲ್ಲಿ ಮರಣ ಹೊಂದಿದರು. ಇವರ ನಂತರ 1724ರಲ್ಲಿ ಇವರಿಗೆ ಸಹಾಯಕರಾಗಿದ್ದ ಫಾ।ಇನೋಸೆಂಟ್‌ರವರು ವಿಕಾರ್‌ರಾಗಿ 1725ರಿಂದ 1737ರವರೆಗಿದ್ದರು. ಕ್ರಿ.ಶ.1737ರಲ್ಲಿ ಇವರು ಮಲಬಾರ್‌ಗೆ ತೆರಳಿದರು. ಮುಂದೆ ಜೂನ್ 6, 1753ರಲ್ಲಿ ಸುಂಕಾರಿಯಲ್ಲಿ ಮರಣ ಹೊಂದಿದರು. ಅವರನ್ನು ಈ ಚರ್ಚಿನ ಎತ್ತರದ ವೇದಿಕೆಯ ಬಳಿ ಶವಸಂಸ್ಕಾರ ಮಾಡಲಾಗಿತ್ತು. ಇವರ ನಂತರ ಫಾ। ಸಲ್ವಾದೋರ್ ಡಿ' ಸ 1737ರಿಂದ 1740 ರವರೆಗೆ ಇಲ್ಲಿದ್ದರು. ಇವರ ನಂತರ ಫಾ।ಜೋನ್ ಡೋಮಿನಿಕ್‌ರವರು 1740ರಿಂದ 1769ರವರೆಗೆ ಸುಂಕಾರಿಯಲ್ಲಿದ್ದು, 1769ರಿಂದ 1772ರವರೆಗೆ ಫಾ।ಪೀಟರ್ ಮಸ್ಕರೇನಸ್‌ನರು, ಫಾ।ಲಾಜೌರಸ್‌ರವರ ನಂತರ ಸುಂಕಾರಿಯಲ್ಲಿದ್ದರು. ಸುಂಕಾರಿ ಮಿಶನನ್ನು ಫಾ। ಪೌಲ್ ಕಜೆತನ್ [Cajetan] ಡಿ ಕೋಸ್ಟಾ [1772–77] ಫಾ।ಗ್ರಿಗೋರಿ [1777–80] ಫಾ। ಫಿಲಿಫ್ [1780–83] ಮತ್ತು ಫಾ। ಸೆಬೆಸ್ಟಿಯನ್ ಪೆರ್ನಾಂಡಿಸ್ [1783–84]ರವರು ಮುನ್ನಡೆಸಿದ್ದಾರೆ. ಶ್ರೀರಂಗ ಪಟ್ಟಣದ ಬಂಧನದ ಸಂದರ್ಭದಲ್ಲಿ ಫಾ।ಸೆಬೆಸ್ಟಿಯನ್‌ರವರು ಮಿಶನಿಗೆ ಆಗಾಗ ಭೇಟಿ ನೀಡಿ ಆಳಿದುಳಿದ ಕ್ರೈಸ್ತರ ಆಧ್ಯಾತ್ಮಿಕತೆಯನ್ನು ಪೂರೈಸುತ್ತಿದ್ದರು. ಈ ಸಂದರ್ಭದಲ್ಲಿ ಗೋವಾದ ಫಾ। ಗಸ್ಪರ್ ರವರು 2

ಸಲ ಸುಂಕಾರಿಗೆ ಭೇಟಿ ನೀಡಿದ್ದರು. ಕ್ರಿ.ಶ.1789ರಲ್ಲಿ ಟಿಪ್ಪು ಗೋವಾದ ಆರ್ಚ್ ಬಿಷಪರಲ್ಲಿ ಕೆನರಾಕ್ಕೆ ಪಾದ್ರಿಗಳನ್ನು ಕಳುಹಿಸುವಂತೆ ಹೇಳಿರುವ ಅಂಶವನ್ನು ಇಲ್ಲಿ ಲೇಖಕರು ಗಮನಿಸಿದ್ದಾರೆ.[44] ಇಲ್ಲಿ ಕೂಡ ಲೇಖಕರು ಸಂಪೂರ್ಣ ಸುಂಕಾರಿ ಮಿಶನಿನ ಇತಿಹಾಸವನ್ನು ಪಾದ್ರಿಗಳ ಸಾಧನೆಗಳ ಅಂಶದ ಮೇಲೆ ವಿವರಿಸಿದ್ದಾರೆ.

ಕ್ರಿ.ಶ.1800ರಲ್ಲಿ ಫಾ। ಫ್ರಾನ್ಸಿಸ್ಸ್ ಸವೇರಾರವರು ಸುಂಕಾರಿ ಮಿಶನನ್ನು ಮರು ಸ್ಥಾಪಿಸಿದರು. ಇವರು ಜಿನೇವಾದ ಗೌರನ್ವಾವಿತ ಕುಟುಂಬಕ್ಕೆ ಸೇರಿದ್ದು, ಕ್ರಿ.ಶ.1771 ಎಪ್ರಿಲ್ 25ರಂದು ಹುಟ್ಟಿದರು. ಕ್ರಿ.ಶ.1789ರಲ್ಲಿ ಅವರು ಕಾರ್ಮೆಲೈಟ್ ಪಂಗಡಕ್ಕೆ ಸೇರಿದರು. ಅವರು ಕ್ರಿ.ಶ.1799 ಅಗಸ್ಟ್ 22ರಂದು ಮುಂಬಾಯಿಗೆ ಬಂದು, ಅದೇ ವರ್ಷ ಮುಂಬಾಯಿಯ ವಿಕಾರ್ ಅಪೋಸ್ತಲಿಕ್ ಅವರನ್ನು ಸುಂಕಾರಿಗೆ ಕಳುಹಿಸಿತು. ಇಲ್ಲಿ ಲೇಖಕರು ಕೆನರಾದಲ್ಲಿ ಬ್ರಿಟಿಷ್ ಆಳ್ವಿಕೆ ಇವರಿಗೆ ಮಿಶನನ್ನು ಮರುಸ್ಥಾಪಿಸಲು ಸಹಾಯಿಸಿದ ಬಗ್ಗೆ ಮಾಹಿತಿ ನೀಡಿದ್ದಾರೆ. ನಂತರ ಇವರು ಸುಂಕಾರಿ ಚರ್ಚ್‌ಗೆ ಸೇರಿದ್ದ, ಅಂಜುದೀವದಲ್ಲಿನ ಸಂಪತ್ತನ್ನು ಮರಳಿ ಪಡೆಯಲು ನಡೆಸಿದ ಪ್ರಯತ್ನಗಳ ಬಗ್ಗೆ ವಿವರಿಸಿದ್ದಾರೆ. ಈ ರೀತಿ 1801, ಮೇ 30ರಂದು ಎಲ್ಲಾ ವಸ್ತುಗಳು ಫ್ರಾನ್ಸಿಸರ ಕೈಸೇರಿದವು. ಇವುಗಳನ್ನು ಫಾ।ಮೆಂಡೆಸ್ [Mendes] ಬಂಧನದ [1799] ಸಂದರ್ಭದಲ್ಲಿ ಅಂಜುದೀವಕ್ಕೆ ಸಾಗಿಸಿದ್ದರು. ನಂತರ ಸೆಪ್ಟಂಬರ್ 8 ರಂದು ಹೊಸ ಚರ್ಚು ಕಟ್ಟಲು ಶಂಕು ಸ್ಥಾಪನೆ ನಡೆಸಿದರು. ಮೇ 22, 1803 ರಂದು ಈ ಕೆಲಸ ಪೂರ್ಣಗೊಂಡಿತು. 1804ರಲ್ಲಿ ಇವರು ಬಡ ಕ್ರೈಸ್ತರಿಗೆ ಸರಕಾರದ ಪಾಳುಭೂಮಿಯಲ್ಲಿ ಗುಡಿಸಲುಗಳನ್ನು ಕಟ್ಟಿದರು. ಇಲ್ಲಿ ಲೇಖಕರು ಫಾ। ಫ್ರಾನ್ಸಿಸ್‌ರವರು ಸರಕಾರದಿಂದ ಪೆನ್ಶನ್ [pension] ಪಡೆಯುತ್ತಿದ್ದ ಬಗ್ಗೆ ಹೇಳಿದ್ದು, ಥೋಮಸ್ ಹ್ಯಾರಿಸರು [ಕಲೆಕ್ಟರ್ 1816–22] ಇವರ ಪೆನ್ಶನ್‌ನನ್ನು 35ರೂ.ನಿಂದ 50ರೂ.ಗೆ ಹೆಚ್ಚಿಸಿದರು. ಅದೇ ರೀತಿ ಹ್ಯಾರಿಸರು ಚರ್ಚ್ ಭೂಮಿಗೆ ಮತ್ತು ಸಂಪತ್ತಿಗೆ ತೆರಿಗೆ ವಿನಾಯಿತಿ ನೀಡಿದರು ಹಾಗೂ ಮದ್ರಾಸ್ ಸರಕಾರ 1000ರೂ.ವನ್ನು ಚರ್ಚಿನ ನವೀಕರಣಕ್ಕೆ ನೀಡಿತು ಎಂದು ವಸಾಹತುಶಾಹಿ ಆಳ್ವಿಕೆಯನ್ನು ಕೊಂಡಾಡಿದ್ದಾರೆ. ಇವರು ಶ್ರೀರಂಗಪಟ್ಟಣದಿಂದ ಬಂಧಿತರು ಮರಳುವುದನ್ನು ಕಣ್ಣಾರೆ ಕಂಡಿದ್ದರು. ಈ ರೀತಿ ದೀರ್ಘಸೇವೆಯ ನಂತರ 1844 ಡಿಸೆಂಬರ್ 7ರಂದು ವೇರಪೊಲಿಯಲ್ಲಿ ಮರಣ ಹೊಂದಿದರು. ಬಿಷಪ್ ಫ್ರಾನ್ಸಿಸ್ ಸವೇರಾ [Xavier] ರವರು ಕೊಂಕಣಿ–ಇಟಲಿ, ಪೋರ್ಚುಗೀಸ್–ಕೊಂಕಣಿ ಶಬ್ದಕೋಶಗಳು, ಕೊಂಕಣಿ ವ್ಯಾಕರಣ, ಕೆನರಾ ಮಿಶನಿನ ಇತಿಹಾಸವನ್ನು ಲ್ಯಾಟಿನ್‌ನಲ್ಲಿ, ಲಿಸ್ಬನಿನ ರೋಯಲ್ ಪ್ರೆಸ್‌ನಲ್ಲಿ ಮುದ್ರಿತ ಹಳೆ ಒಡಂಬಡಿಕೆ ಹಾಗೂ ಇತರ ಗ್ರಂಥಗಳನ್ನು ಬಿಟ್ಟು ಹೋಗಿದ್ದಾರೆ. ಸುಂಕಾರಿಯಲ್ಲಿನ ಅವರ 31ವರ್ಷದಲ್ಲಿ ಅವರು 341 ಮಕ್ಕಳಿಗೆ ಪವಿತ್ರಸ್ಥಾನ, 126 ಮದುವೆ ಹಾಗೂ 204 ಶವಸಂಸ್ಕಾರಗಳನ್ನು ನಡೆಸಿದ್ದಾರೆ.[45] ಈ ರೀತಿ ಲೇಖಕರು ಇಲ್ಲಿ ಸಂಪೂರ್ಣವಾಗಿ ಸುಂಕಾರಿ ಮಿಶನಿಗೆ

ಸಂಬಂಧಿಸಿದಂತೆ ಪಾದ್ರಿಗಳ ಸಾಧನೆ ಜೊತೆಗೆ ವಸಾಹತುಶಾಹಿಯ ಬೆಂಬಲದ ಅಂಶಗಳನ್ನು ಬಹಳವಾಗಿ ಪ್ರಾಮುಖ್ಯತೆಯಿಂದ ಗುರುತಿಸಿದ್ದಾರೆ.

ಕ್ರಿ.ಶ.1837ರಿಂದ 1886ರವರೆಗೆ ಕೆನರಾವು ವಿಕಾರ್ ಅಪೋಸ್ತಲಿಕರ ಕೈಕೆಳಗೆ ಇತ್ತು. ಕ್ರಿ.ಶ.1845 ಮೇ 12ರಂದು ಮೊನ್ಸಿಞರ್ ಬರ್ನಾರ್ಡಿನ್[monsignor bernardin] ರವರನ್ನು ವೇರಪೂಲಿಯ ವಿಕಾರ್ ಅಪೋಸ್ತಲಿಕ್ ಹಾಗೂ ಮಂಗಳೂರಿನ ಪ್ರೋ ವಿಕಾರ್ ಅಪೋಸ್ತಲಿಕ್ ಆಗಿ ನೇಮಿಸಿದರು. ಇವರು 1845 ನವೆಂಬರ್ 8 ರಂದು ಸಂಜೆ ಮಂಗಳೂರಿಗೆ ಆಗಮಿಸಿದರು. ಇವರು 1849ರಲ್ಲಿ ಮಂಗಳೂರಿನಲ್ಲಿ ಆಂಗ್ಲಮಾಧ್ಯಮಶಾಲೆ ಸ್ಥಾಪಿಸಿದ್ದರು. ಈ ರೀತಿ 1852ರವರೆಗೆ ಮಂಗಳೂರಿನಲ್ಲಿ ಸೇವೆ ಸಲ್ಲಿಸಿದ ಬಿಷಪ್ ಬರ್ನಾರ್ಡಿನ್ ತನ್ನ ಅಸ್ವಸ್ಥತೆಯಿಂದ ರೋಮಿಗೆ ತೆರಳಿ, ಅದೇ ವರ್ಷ ಮರಣ ಹೊಂದಿದರು. ಇವರ ನಂತರ ವಿಕಾರೇಟನ್ನು ಫಾ। ಲೂಯಿಸ್‌ರವರು ಮೇಲ್ವಿಚಾರಕವಾಗಿ ಆಳ್ವಿಕೆ ನಡೆಸಿದರು. ಕ್ರಿ.ಶ.1853 ಮಾರ್ಚ್‌ರಂದು ಕೆನರಾವನ್ನು ವೇರಪೊಲಿಯಿಂದ ಪೂರ್ಣವಾಗಿ ಪ್ರತ್ಯೇಕಿಸಿ, ಮುಂಬಾಯಿಯ ವಿಕಾರ್ ಅಪೋಸ್ತಲಿಕ್‌ನ ವಿಕಾರ್ ಜನರಲ್ ಆಗಿದ್ದ ಫಾ। ಮೈಕಲ್ ಅಂಟೋನಿಯವರನ್ನು ಮಂಗಳೂರಿನ ವಿಕಾರ್ ಅಪೋಸ್ತಲಿಕರಾಗಿ ಪೋಪರು ನೇಮಿಸಿದರು. ಇವರ ಕಾಲದಲ್ಲಿ ವಿಕಾರೇಟನ್ನು ಉತ್ತಮವಾಗಿ ನಡೆಸಲು ಸಾಧ್ಯವಾಗದೇ ಬದಲಾವಣೆಗಾಗಿ ಕೆನರಾವು ಪೋಪರಿಗೆ ತನ್ನ ಬೇಡಿಕೆಯನ್ನು ಮಂಡಿಸಿತು.[46] ಕ್ರಿ.ಶ.1858ರಲ್ಲಿ ಪೋಪ್ IXನೇ ಪಿಯುಸ್‌ರವರು ಬಿಷಪ್ ಚಾರ್ಲ್ಸ್ ಹ್ಯಾಸಿಂಥ್ [Hyacinth]ರವರನ್ನು ಕೆನರಾದ ಅಪೋಸ್ತಲಿಕ್ ಮಿಶನಿಗೆ ಭೇಟಿ ನೀಡಲು ಹೇಳಿದರು. ಅದೇ ವರ್ಷ ಅವರು ಮಂಗಳೂರಿಗೆ ಬಂದು ಪ್ರೊಪಗಾಂಡಕ್ಕೆ ವರದಿ ಮಾಡಿದರು. ಇದರಿಂದ ಸಂತುಷ್ಟರಾಗದೇ 1860 ಮೇ 15ರಂದು ಪಾಂಡಿಚೇರಿಯ ವಿಕಾರ್ ಅಪೋಸ್ತಲಿಕರಾದ ಮೊನ್ಸಿಞರ್ ಬೋನಾಂಡ್‌ಗೆ [Bonnand] ಮಂಗಳೂರು ಮಿಶನಿಗೆ ಭೇಟಿ ನೀಡಲು ಸೂಚಿಸಲಾಯಿತು. ಅವರು ಮಂಗಳೂರಿಗೆ ಭೇಟಿ ನೀಡಿದಾಗ ಮಂಗಳೂರಿನ 180 ಮಂದಿ ಕೆಥೋಲಿಕರು ಸಹಿ ಮಾಡಿದ ಮನವಿಯನ್ನು ಅವರಿಗೆ ನೀಡಿದರು. ಅವರ ಮುಖ್ಯ ಬೇಡಿಕೆ ಎಂದರೆ ಅವರ (ಕೆನರಾದ ಕ್ರೈಸ್ತರ) ಶೈಕ್ಷಣಿಕ ಬೇಡಿಕೆಗಳನ್ನು ಈಡೇರಿಸಲು ಮಂಗಳೂರು ಮಿಶನನ್ನು ಜೆಸ್ಯೂಟರಿಗೆ ನೀಡಬೇಕೆಂಬುದಾಗಿತ್ತು.[47] ಕ್ರಿ.ಶ 1858 ರಿಂದ 1869ರ ಮಧ್ಯೆ ಮಂಗಳೂರು ಮಿಶನನ್ನು ಜೆಸ್ಯೂಟರಿಗೆ ವರ್ಗಾಯಿಸಬೇಕೆಂದು ಮಂಗಳೂರಿನ ಕೆಥೋಲಿಕರು ಹಲವು ಮನವಿ ಮತ್ತು ಬೇಡಿಕೆಗಳನ್ನು ಮಂಡಿಸಿದರು. ಅವರು ಈ ಸಂದರ್ಭಗಳಲ್ಲಿ ಮಂಡಿಸಿದ ಪ್ರಮುಖ ಬೇಡಿಕೆ ಅಥವಾ ಅಂಶಗಳೆಂದರೆ 1] ಜಿಲ್ಲೆಯ ಯುವ ಕ್ಯಾಥೋಲಿಕರಿಗೆ ಉನ್ನತ ಶಿಕ್ಷಣದ ಉದ್ದೇಶದ ಪೂರೈಕೆ. 2] ಬಿಷಪ್ ಮೈಕಲ್ ರವರ ಕಠಿಣ್ಯದ ಆಳ್ವಿಕೆ. 3] ಮಿಶನ್ ಮತ್ತು ಧಾರ್ಮಿಕ ಸಲಹೆಗಳ ಬಗ್ಗೆ ಕಡೆಗಣಿಸುವಿಕೆ 4] ಬಿಷಪರಿಂದ ಪಾದ್ರಿಗಳೊಂದಿಗೆ ನಿರ್ದಯಿ ನಡವಳಿಕೆಗಳು ಮುಖ್ಯವಾಗಿವೆ.[48]

ಕ್ರಿ.ಶ. 1870 ಜನವರಿ 3ರಂದು ಪೋಪರು ಬಿಷಪ್ ಮೇರಿ ಎಫ್ರೇಮ್ [Mary Ephrem] ರನ್ನು ವಿಕಾರ್ ಅಪೋಸ್ತಲಿಕರಾಗಿ ನೇಮಿಸಿ ಮಿಶನನ್ನು ಪ್ರೆಂಚ್ ಕಾರ್ಮೆಲೈಟರಿಗೆ ವರ್ಗಾಯಿಸಿದರು. ಇದರೊಂಗಿಗೆ ಬಿಷಪ್ ಮೈಕಲ್ ರವರು ತಮ್ಮ ಪದವಿಗೆ ರಾಜೀನಾಮೆ ನೀಡಿ ಜೆಪ್ಪು ಸೇಮಿನರಿಗೆ ತೆರಳಿದರು. ಅಲ್ಲಿ ಪ್ರಬಲ ಭಕ್ತಿಯಿಂದ ವಾಸಿಸಲು ಆರಂಭಿಸಿದರು. ಆದರೆ ಅಲ್ಲಿಯೂ ವಿರೋಧ ಕಂಡು ಬಂದುದರಿಂದ, ಮಿಶನಿನ ಒಳಿತಿಗಾಗಿ 1871 ಸೆಪ್ಟಂಬರ್ 29 ರಂದು ಮಂಗಳೂರನ್ನು ಬಿಟ್ಟು ಕ್ವಿಲೋನ್‌ಗೆ [Quilon] ತೆರಳಿ ಅಲ್ಲಿ 1878 ಡಿಸೆಂಬರ್ 18ರಂದು ಮರಣ ಹೊಂದಿದರು ಎಂದಿರುವ ಲೇಖಕರು, ಬಿಷಪ್ ಮೈಕಲ್ ರವರ ಜೀವನ ಮತ್ತು ಲಕ್ಷಣಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಕೆನರಾದ ವಿಕಾರ್ ಅಪೋಸ್ತಲಿಕ್ ಆಗಿ ಬಂದ ಬಿಷಪ್ ಮೇರಿ ಎಫ್ರೇಮ್ ರವರು 1827 ನವೆಂಬರ್ 18ರಂದು ಪ್ರಾನ್ಸ್ ನಲ್ಲಿ ಹುಟ್ಟಿದರು. ನಂತರ ಪ್ರೆಂಚ್ ಕಾರ್ಮೆಲೈಟ್ ಪಂಗಡಕ್ಕೆ ಸೇರಿ, 1859 ರಲ್ಲಿ ಭಾರತಕ್ಕೆ ಹೊರಟರು. ಆರಂಭದ 6 ವರ್ಷಗಳಲ್ಲಿ ಅವರು ಕಲ್ಲಿಕೋಟೆ, ಮಂಗಳೂರು, ಕಣ್ಣಾನೂರು, ಮಾಹೆ ಮತ್ತು ತಲಚೇರಿಯಲ್ಲಿ ಕೆಲಸ ನಿರ್ವಹಿಸಿದರು. ನಂತರ ಕ್ವಿಲೋನ್ [Quilon]ನಲ್ಲಿ 3 ವರ್ಷವಿದ್ದು, 1870 ನವೆಂಬರ್ 5 ರಂದು ಇವರು ಬಿಷಪರಾಗಿ ಮಂಗಳೂರಿಗೆ ಬಂದರು. ಇವರು ಮಂಗಳೂರಿನಲ್ಲಿ ತಮ್ಮ ಅಲ್ಪಾವಧಿಯ ಕಾಲದಲ್ಲಿ ಪ್ರೆಂಚ್ ಕ್ಲ್ಯಾಸ್ಟರ್ಡ್ ಸನ್ಯಾಸಿನಿಯರ ಸಮುದಾಯವನ್ನು [Community of French Cloistered Carmelite Nuns] ಮತ್ತು ಕಾರ್ಮೆಲೈಟ್ ಟರ್ಶ್ಯರಿ ಸನ್ಯಾಸಿನಿಯವರನ್ನು [Carmelite Tertiary Nuns] ಅವರ ವಿಕಾರೇಟ್ ನಲ್ಲಿ ಸ್ಥಾಪಿಸಿದರು. ಇವರ ಕಾಲದಲ್ಲಿ ಮಂಗಳೂರು ಮಿಶನನ್ನು ಜೆಸ್ಯೂಟರಿಗೆ ನೀಡಬೇಕೆಂದು ಹೋರಾಟಗಳು ನಡೆಯುತ್ತಿದ್ದವು. ಕ್ರಿ.ಶ 1872ರಲ್ಲಿ ಬಿಷಪರು ಹೃದಯಘಾತದಿಂದ ಮೃತ್ಯು ವಶವಾದರು. [49] ಬಿಷಪರಾದ ಮೇರಿ ಎಫ್ರೇಮ್ ಮರಣದ ನಂತರ ವಿಕಾರೇಟನ್ನು 3 ವರ್ಷಗಳ ಕಾಲ ಫಾ। ಪೌಲ್ ಜೋಸೆಫ್ ವೈಡಾಲ್ ರವರು ಮುನ್ನಡೆಸಿದರು. ಈ ಸಂದರ್ಭದಲ್ಲಿ ಮಿಶನನ್ನು ಕರ್ಮೆಲೈಟರಿಂದ ಜೆಸ್ಯೂಟರಿಗೆ ವಯಿಸಬೇಕೆಂಬ ಒತ್ತಾಯ ಇನ್ನೂ ಹೆಚ್ಚಿತು. ಪೋಪರು 1876 ಮಾರ್ಚ್ 24ರ ವರೆಗೆ ಮಂಗಳೂರು ಮಿಶನಿಗೆ ಯಾರನ್ನು ಆಡಳಿತಗಾರರಾಗಿ ಅದಿಕೃತವಾಗಿ ನೇಮಿಸಲಿಲ್ಲ. 1876ರಲ್ಲಿ ಕೆನರಾದ ವಿಕಾರೇಟನ್ನು ವೇರಾಪೂಲಿಗೆ ಮತ್ತೊಮ್ಮೆ ಹೆಚ್ಚುವರಿಯಾಗಿ ವಹಿಸಲಾಯಿತು. ಈ ಸಂದರ್ಭದಲ್ಲಿ ವೇರಪೂಲಿಯು ಅಕ್ಟೋಬರ್ 2, 1876 ರಂದು ಫಾ। ವಿಕ್ಟರ್‌ರವರನ್ನು ಮಂಗಳೂರು ಮಿಶನಿನ ಪ್ರೋ ಆ್ಯಡ್ಮಿಸ್ಟ್ರೇಟರ್ ಅಪೋಸ್ತಲಿಕ್ ಹಾಗೂ ವಿಕಾರ್ ಜನರಲ್ ಆಗಿ ನೇಮಿಸಿತು. ಫಾ। ವಿಕ್ಟರ್‌ರವರು ಅಕ್ಟೋಬರ್ 18, 1876ರಂದು ಮಂಗಳೂರಿಗೆ ಆಗಮಿಸಿದರು. ಅವರು ಜನವರಿ 1879 ರ ವರೆಗೆ ಎಂದರೆ ಫಾ। ನಿಕೋಲಸ್ ಮೇರಿ ಫಾಗನಿ ಎಸ್. ಜೆ ರವರು ಮಂಗಳೂರಿಗೆ ಹೊಸ ಪ್ರೋ ವಿಕಾರ್ ಅಪೋಸ್ತಲಿಕರಾಗಿ ಬರುವವರೆಗೆ ಕಾರ್ಯನಿರ್ವಹಿಸಿದರು. ನಂತರ ಅವರು ವೇರಪೋಲಿಗೆ ಮರಳಿದರು.[50]

ಈ ಮಧ್ಯೆ ಕ್ರಿ.ಶ 1873 ರಿಂದ 1878ರವರೆಗೆ ಮಂಗಳೂರಿನ ಕ್ರೈಸ್ತ ವರ್ಗ ಜೆಸ್ಯೂಟರಿಗಾಗಿ ಪ್ರಬಲ ಹೋರಾಟ ಹಾಗೂ ಬೇಡಿಕೆಗಳನ್ನು ಮಂಡಿಸುತ್ತಾ ಬಂದಿರುತ್ತದೆ. ಬಿಷಪ್ ಮೇರಿ ಎಫ್ರೇಮ್‌ರ ಮರಣದ ನಂತರ ಬಂದ ಫಾ। ವಿಕ್ಟರ್‌ರವರ ಕಾಲಾವಧಿಯಲ್ಲಿ ಕಾರ್ಮೆಲೈಟರು ಕೆನರಾ ಕ್ರೈಸ್ತರ ಮನವಿಗಳಿಗೆ ವಿರೋಧವಾಗಿ, ಅವರೂ ಮನವಿಗಳನ್ನು ಪೋಪರಿಗೆ ಕಳುಹಿಸಿದರು. [Holy See] ಈ ರೀತಿ ಕಾರ್ಮೆಲೈಟರು ಮಂಗಳೂರಿನಲ್ಲಿ ಕ್ರೈಸ್ತರ ಬೇಡಿಕೆಗಳನ್ನು ಪೂರೈಸಲು ವಿಫಲರಾದರೂ, ಇಲ್ಲಿನ ಕ್ರೈಸ್ತರ ವಿರೋಧದ ಮಧ್ಯೆಯೂ, ಇಲ್ಲಿಯೇ ನಿಲ್ಲಲು ಬಯಸಿದ್ದರು ಎಂಬುದು ಅವರ ಕೆಲವೊಂದು ನಡವಳಿಕೆಗಳಿಂದ ಮನದಟ್ಟಾಗುತ್ತದೆ. ಈ ಸಂಧರ್ಭದಲ್ಲಿ ಪೋಪರು ಕ್ಯಾಪುಚಿನ್ ಮೊನ್ಸಿಞರ್ ಪರ್ಸಿಕೋ[Capuchin Monsignor Persico] ರವರನ್ನು ರೋಮಿನಿಂದ ಇಲ್ಲಿಯ ಪರಿಸ್ಥಿತಿ ಅವಲೋಕನಕ್ಕೆ ಕಳುಹಿಸಿದರು. ಅವರು 1877 ಫೆಬ್ರವರಿ 13 ರಂದು ಮಂಗಳೂರಿಗೆ ಬಂದು ಮಾಹಿತಿ ಸಂಗ್ರಹಿಸಿ, ಒಂದು ವಾರದ ನಂತರ ರೋಮಿಗೆ ಮರಳಿದರು. ಮಂಗಳೂರಿನಿಂದ ಫಾ। ಮರ್‌ಟೇಲಿ [Martelli] ಕಾರ್ಮೆಲೈಟರ ಪರವಾಗಿ ರೋಮಿಗೆ ತೆರಳಿದರು. ಆದರೆ ಅವರು ತಮ್ಮ ಪ್ರಭಾವ ಬೀರುವಲ್ಲಿ ವಿಫಲರಾಗಿ ಮರಳಿದರು. ಇದೇ ಸಂದರ್ಭದಲ್ಲಿ ಮಂಗಳೂರಿನ ಕ್ರೈಸ್ತರು ಮತ್ತೊಂದು ಮನವಿಯನ್ನು ಪೋಪ್ IX ನೇ ಪಿಯುಸರಿಗೆ ರವಾನಿಸಿದರು. ಈ ಎಲ್ಲಾ ಮನವಿಗಳನ್ನು ಹಾಗೂ ಪರ್ಸಿಕೋರವರ ವರದಿಯನ್ನು ಪರಿಗಣನೆಗೆ ತೆಗೆದುಕೊಂಡು ಪೋಪರು ಮಿಶನನ್ನು ಜೆಸ್ಯೂಟರಿಗೆ ವಹಿಸುವ ನಿರ್ದಾರಕ್ಕೆ ಬಂದರೂ, ಅದನ್ನು ಜಾರಿಗೆ ತರುವ ಮೊದಲು 1878 ಪೆಬ್ರವರಿ 7ರಂದು ಅವರು ಮೃತ್ಯು ವಶವಾದರು. ಅವರ ಉತ್ತಾರಾಧಿಕಾರಿಯಾದ ಪೋಪ್ 13ನೇ ಲಿಯೋರವರು ಸಂತ ಪೀಟರ್ ನಲ್ಲಿ ಅಧಿಕಾರವಹಿಸಿಕೊಂಡ ತಕ್ಷಣ 1878 ಸೆಪ್ಟೆಂಬರ್ 27ರಂದು ಕೆನರಾ ವಿಕಾರೇಟನ್ನು ವೇರಪೊಲಿಯಿಂದ ಪ್ರತ್ಯೇಕಿಸಿ, ಅದನ್ನು ಇಟಲಿಯ ವೆನಿಸ್ ಪ್ರಾಂತ್ಯದ ಜೆಸ್ಯೂಟರ ಆಧೀನಕ್ಕೆ ಕೊಡುವ ನಿರ್ದಾರ ಕೈಗೊಂಡರು. ಈ ವರದಿಯು 1878 ಅಕ್ಟೋಬರ್ 30ರಂದು ಮಂಗಳೂರಿಗೆ ಮುಟ್ಟಿತು. ಅದೇ ರೀತಿ ಮುಂಬಾಯಿ ಮಿಶನಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಫಾ।ನಿಕೋಲಸ್ ಮೇರಿ ಪಾಗನಿ ಎಸ್. ಜೆ. ರವರಿಗೆ, ಅವರನ್ನು ಕೆನರಾದ ಪ್ರೋ– ವಿಕಾರ್ ಅಪೋಸ್ತಲಿಕರಾಗಿ ನೇಮಿಸಿದ ಮಾಹಿತಿಯು ಮುಟ್ಟುತ್ತದೆ.[51]

ಮಂಗಳೂರು ಮಿಶನನ್ನು ಜೆಸ್ಯೂಟರಿಗೆ ಹಸ್ತಾಂತರಿಸುವುದನ್ನು ತಿಳಿದ ಕೂಡಲೇ ಮಂಗಳೂರಿನಲ್ಲಿ ಅವರನ್ನು ವಿಜೃಂಭಣೆಯಿಂದ ಸ್ವಾಗತಿಸಲು ಮಂಗಳೂರು ಸಜ್ಜಾಯಿತು. ಅದಕ್ಕೆ ಪೂರ್ವ ತಯಾರಿಯಾಗಿ 1878 ನವೆಂಬರ್ 24ರಂದು ಮಂಗಳೂರಿನ ಮಿಲಾಗ್ರಿಸ್‌ನಲ್ಲಿ ಫಾ। ಪಿಯುಸ್ ನಾರೋನ್ಹಾರ ನೇತ್ರತ್ವದಲ್ಲಿ ಸಭೆ ನಡೆದು 6ಮಂದಿಯನ್ನು ಸ್ವಾಗತ ಸಮಿತಿಗೆ ಆರಿಸಿ, ಅವರಿಗೆ ಎಲ್ಲಾ ಜವಾಬ್ದಾರಿ ನೀಡಲಾಯಿತು. ಅತ್ತ ಫಾ। ಅಂಜೆಲೋ ಮುಟ್ಟಿ, ಫಾ। ಅಂಜೆಲೋ ಮಾಫಾಯಿ, ಫಾ। ಅಗಸ್ಟಸ್ ಮುಲ್ಲರ್, ಫಾ। ಕ್ವಿಂಟಿನ್ ಸಾನಿ [Quintin Sani] ಮತ್ತು ಬ್ರದರ್ಸ್‌ಗಳಾದ [Lay- Brothers] ಫ್ರಾನ್ಸಿಸ್ ಜಾಂಬೋನಿ ಮತ್ತು

ಮ್ಯಾಥ್ಯೋ ಮೇನಿಗೇತ್ತಿ [Mathew Meneghetti] ರ ಪಂಗಡ ನೇಪಾಲ್ಸ್ [ಇಟಲಿ]ನಿಂದ ಮುಂಬಾಯಿಗೆ ರುಬಟ್ಟಿನೋ ಎಸ್ ಎಸ್ ಸುಮಾತ್ರಾ [Rubattiono S S Sumatra] ಹಡಗಿನಲ್ಲಿ ಪ್ರಯಾಣ ಬೆಳೆಸಿದತು. ಇವರು ಡಿಸೆಂಬರ್ 19ರಂದು ಮುಂಬಾಯಿಗೆ ಮುಟ್ಟಿದರು. ಡಿಸೆಂಬರ್ 27ರಂದು ಇವರು ಮುಂಬಾಯಿಂದ ಗೋವಾಕ್ಕೆ ಎಸ್ ಎಸ್ ಅಲಾಬಾಮಾ [S S Alabama] ಎಂಬ ಪೋರ್ಚುಗೀಸ್ ಹಡಗಿನಲ್ಲಿ ಹೊರಟರು. ಈ ಸಂದರ್ಭದಲ್ಲಿ ಸೂರತ್ ನಲ್ಲಿದ್ದ ಬಾಂಬೆ ಮಿಶನಿನ ಫಾ। ಅರ್ಬನ್ ಸ್ಟೈನ್ [Urbon Stein] ಮತ್ತು ಫಾ। ಒತೋ ಆರ್ಲ್ ಇಬ್ಬರು ಮಂಗಳೂರು ಮಿಶನಿನ ಸೇವೆಗೆ ಸೇರಿದರು. ಈ ಪಂಗಡ ಗೋವಾಕ್ಕೆ ತಲುಪಿದಾಗ ಅಲ್ಲಿಗೆ ತೆರಳಿದ್ದ ನೂರಾರು ಮಂಗಳೂರಿಗರು ಇವರನ್ನು ಭವ್ಯವಾಗಿ ಸ್ವಾಗತಿಸಿದರು. ಅಲ್ಲಿ ಅವರು ಮಂಗಳೂರು ಮಿಶನಿನ ವರಿಷ್ಠ ಹಾಗೂ ಪ್ರೋ ವಿಕಾರ್ ಅಪೋಸ್ತಲಿಕರಾದ ಫಾ। ಪಾಗನಿಯವರನ್ನು ಸೇರಿದರು. ಅಲ್ಲಿಂದ ಈ 9 ಮಂದಿ ಜೆಸ್ಯೂಟರು ಸುಮಾರು 300 ಮಂಗಳೂರಿಗರ ಜೊತೆ ಬ್ರಿಟಿಷ್ ಇಂಡಿಯಾದ ಎಸ್ ಎಸ್ ಖಾಂಡ್ಲಾ [British India S S Khandalla] ಹಡಗಿನಲ್ಲಿ ಮಂಗಳೂರಿಗೆ ಪ್ರಯಾಣ ಬೆಳೆಸಿದರು. ಡಿಸೆಂಬರ್ 31ರಂದು ಬೆಳಗ್ಗೆ ಹಡಗು ಮಂಗಳೂರಿಗೆ ತಲುಪಿತು. ನಂತರ ಇವರನ್ನು ಭವ್ಯವಾಗಿ ಅಲಂಕರಿಸಿದ ನಾವೆಯಲ್ಲಿ ಮಂಗಳೂರಿನ ತಟಕ್ಕೆ ಕರೆ ತರಲಾಯಿತು. ಈ ಸಂದರ್ಭದಲ್ಲಿ ಬಂದರದಲ್ಲಿ ಇವರ ಭವ್ಯ ಸ್ವಾಗತಕ್ಕೆ ಶಾಮಿಯಾನ ಹಾಕಲಾಗಿತ್ತು. ಹಾಗೂ ಫಾ। ವಿಕ್ಟರ್ ರವರು ಹಲವಾರು ಇತರ ಪಾದ್ರಿಗಳು, ಕೆಥೋಲಿಕರು, ಹಿಂದುಗಳು ಇಲ್ಲಿ ಜಮಾಯಿಸಿದ್ದರು. ಜೆಸ್ಯೂಟರ ಆಗಮನದ ಸಂದರ್ಭದಲ್ಲಿ ಫಾ। ವಿಕ್ಟರ್ ಹಾಗೂ ಕೆತದ್ರೆಲ್‌ನ ವಿಕಾರ್‌ರಾದ ಇರ್ನೇವುಸ್ [Irenaeus] ರವರು ಇಲ್ಲಿ ಇದ್ದ ಇಬ್ಬರೇ ಕಾರ್ಮೆಲ್ಲೈಟರಾಗಿದ್ದರು. ಅವರು ಪೆಬ್ರವರಿ 18, 1879ರಂದು ವೇರಪೋಲಿಗೆ ತೆರಳಿದರು.[52] ಈ ರೀತಿ ಲೇಖಕರು ಮಂಗಳೂರಿಗೆ ಜೆಸ್ಯೂಟರ ಆಗಮನವನ್ನು ಬಹಳ ವಿಜೃಂಭಣೆಯಿಂದ ವಿವರಿಸಿ, ಅದು ಒಂದು ಬಹುಮುಖ್ಯ ಘಟನೆ ಎಂಬಂತೆ ಚಿತ್ರಣ ಮೂಡಿಸಿದ್ದಾರೆ.

ಮುಂದೆ ಲೇಖಕರು ವಿವರಿಸುವಂತೆ, ಸಮಯ ವ್ಯರ್ಥ ಮಾಡದೇ ಜೆಸ್ಯೂಟರು ವಿವಿಧ ಕಾರ್ಯಗಳಲ್ಲಿ ತೊಡಗಿದರು. ಫಾ। ಜೋನ್ ಬ್ಯಾಪ್ಟಿಸ್ಟ್ ರೋಸೀ[Rosi] ಮತ್ತು ಅಗಸ್ಟಸ್ ದಯಮಂತಿ [Diamanti] ರವರು 1879, ಫೆಬ್ರವರಿ 29ರಂದು ಮಂಗಳೂರಿಗೆ ಬಂದರೆ, ಫಾ। ಥೋಮಸ್ ಗಲ್ಲೋ [Gallo] ಮತ್ತು ಬ್ರದರ್ ಲೂಯಿಸ್ ಡೋನೆಡಾ [Brother Louis Doneda] ರವರು ಜೂನ್ 9 ರಂದು ಆಗಮಿಸಿದರು. ಮುಂದೆ ಫಾ। ಜೋಸೆಫ್ ಅಂಟೋನಿ ವಿಲ್ಲಿರವರು ಬಾಂಬೆ ಮಿಶನಿನಿಂದ ಹಾಗೂ ಜೋರ್ಜ್ ಪೋಸ್ಟಲ್ ವೈಟ್ [George Postal White] ರವರು ಇಂಗ್ಲೀಷ್ ಪ್ರಾಂತ್ಯದಿಂದ ಡಿಸೆಂಬರ್ 2ಕ್ಕೆ ಬಂದರೆ, ಜನವರಿ 28, 1880 ರಂದು ಫಾ। ಅಬುಂಡಿಯಸ್ ಕವದಿನಿ [Abundias cavadini] ಫಾ। ಎಡ್ವರ್ಡ್ ಲಾಜಾರಿನಿ [Lazzarini] ಫಾ। ಲೂಯಿಸ್ ಜಾರ್ ಭೀನತಿ, ಫಾ। ಜೋನ್

ಬ್ಯಾಪ್ಟಿಸ್ಟ್ ಸಾರ್‌ಜೆಂಟ್, ಫಾ। ಹಫ್ ರಾಯಾನ್ [Hugh Ryan] ಮತ್ತು ಬ್ರದರ್ ಫಿಲಿಫ್ ವೊಲ್ಪಿನಿ [Volpini] ರವರು ಮಂಗಳೂರು ಮಿಶನನ್ನು ಸೇರಿಕೊಂಡರು. ಇವರು ಮಂಗಳೂರಿನಲ್ಲಿ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡರು. ಇವರು ಕ್ರಿ.ಶ 1879 ರಂದು ಫಾ। ಸ್ಟೈನ್ [Stain] ರವರ ನೇತ್ರತ್ವದಲ್ಲಿ 'ದಿ ಸೋಡ್ಯಾಲಿಟಿ ಆಫ್ ದಿ ಬ್ಲೆಸ್ಸ್‌ಡ್ ವರ್ಜಿನ್ ಮೇರಿ' [The sodality of the Blessed virgin Mary] ಯನ್ನು ಸ್ಥಾಪಿಸಿದರು. ಜೆಸ್ಯೂಟರು ಮಂಗಳೂರಿಗೆ ಬಂದ ಮುಖ್ಯ ಉದ್ದೇಶ ಜಿಲ್ಲೆಯ ಯುವಕರಿಗೆ ಉನ್ನತ ಶಿಕ್ಷಣ ಒದಗಿಸುವುದಾಗಿತ್ತು. ಇದಕ್ಕಾಗಿ ಎಪ್ರಿಲ್ 6, 1879ರಂದು ಕಾಲೇಜು ಸ್ಥಾಪನೆಯ ಬಗ್ಗೆ ಪ್ರಥಮ ಸಭೆ ಜರುಗಿತು. ಹೀಗೆ ಡಿಸೆಂಬರ್ 12, 1879 ರಂದು ಫಾ। ವಿಲ್ಲಿಯವರು ಕಾಲೇಜಿನ ವರಿಷ್ಠರಾಗಿ ನೇಮಕಗೊಂಡರು. ಹೀಗೆ ಜೆಸ್ಯೂಟರು 1879ರಂದು ಅಲೋಶಿಯಸ್ ಕಾಲೇಜನ್ನು ಸ್ಥಾಪಿಸಿದರು. ಸಂತ ಅಲೋಶಿಯಸ್ ಗೊನ್ಜಾಗಾ [Gonzara] ಈ ಕಾಲೇಜಿನ ಪೋಷಕರಾಗಿದ್ದಾರೆ. ಹೀಗೆ 1880 ಜನವರಿ 12 ರಂದು ಮೇರಿ ಮಾಗ್ದಲಿನ್ ಕುಯೆಲ್ಲೊರವರಿಂದ ಬಾಡಿಗೆಗೆ ಪಡೆದ ಬೃಹತ್ ಬಂಗಲೆಯಲ್ಲಿ ಕಾಲೇಜು ವಿದ್ಯುಕ್ತವಾಗಿ ಆರಂಭವಾಯಿತು. 1882ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದೊಂದಿಗೆ ಸಂಯೋಜನೆ ಹೊಂದಿದ ಕಾಲೇಜು, 1885 12 ಜನವರಿಯಂದು ಇಡ್ಯಾ ಗುಡ್ಡದಲ್ಲಿ ಲಾರೆನ್ಸ್ ಲೋಬೋ ಪ್ರಭುರವರು ದಾನ ನೀಡಿದ ಪ್ರದೇಶದಲ್ಲಿ ಬೃಹತ್ ಹೊಸ ಕಟ್ಟಡದ ಉದ್ಘಾಟನೆಯಾಯಿತು. ನಂತರ ಕಾಲೇಜು ವಿವಿಧ ಹಂತಗಳಲ್ಲಿ ಬೆಳೆದು ಇಂದು ಮಂಗಳೂರಿನ ಹೃದಯ ಭಾಗದಲ್ಲಿ ಒಂದು ಬೃಹತ್ ವಿದ್ಯಾಲಯವಾಗಿ ಬೆಳೆದು ನಿಂತಿದೆ.[53]

ಕ್ರಿ.ಶ 1881, ಮೇ 1ರಂದು ಫಾ। ಮಾಫಾಯಿರವರು ಅವರ ಮಿಶನರಿ ಕಾರ್ಯವನ್ನು ಉಡುಪಿ, ಕಲ್ಯಾಣಪುರ, ಕಾರ್ಕಳ ಹಾಗೂ ಇತರೆಡೆ ಮಾಡಿದ್ದ ಬಗ್ಗೆ ಲೇಖಕರು ಮಾಹಿತಿ ನೀಡಿದ್ದಾರೆ. ಇವರು ಕ್ರಿ.ಶ 1880ರಲ್ಲಿ ಕೊಡಿಯಾಲ್ ಬೈಲ್ ನಲ್ಲಿ ಒಂದು ಕ್ಯಾಥೋಲಿಕ್ ಲೈಬ್ರರಿ ಹಾಗೂ ಓದುವ ಕೊಠಡಿಯನ್ನು [Reading Room] ಪ್ರಾರಂಭಿಸಿದರು. 1880ರಲ್ಲಿ ಕೆಥೋಲಿಕ್ ಕ್ಲಬ್, 1882ರಲ್ಲಿ ಕೊಡಿಯಾಲ್ ಬೈಲಿನಲ್ಲಿ ಛಾಪಖಾನೆ, 1883ರಲ್ಲಿ ಜಪ್ಪಿನಲ್ಲಿ ಒಂದು ಸೆಮಿನರಿ, ನಂತರ ಜಪ್ಪಿನಲ್ಲಿ ಬಡವರ ಮತ್ತು ರೋಗಿಗಳ ಆಶ್ರಮ, 1885ರಲ್ಲಿ ಕುಷ್ಠರೋಗಿಗಳ ಆಶ್ರಮ, 1888ರಲ್ಲಿ ಕೆಥೋಲಿಕರ ಪ್ರೊವಿಡೆಂಟ್ ಫಂಡ್, 1891 ರಲ್ಲಿ ಫಾದರ್ ಮುಲ್ಲರ್ ಆಸ್ಪತ್ರೆ ಇತ್ಯಾದಿ ಮಂಗಳೂರಿಗೆ ಜೆಸ್ಯೂಟರ ಪ್ರಮುಖ ಕೊಡುಗೆಗಳಾಗಿವೆ.[54] ಸಂತ ಅಲೋಶಿಯಸ್ ಕಾಲೇಜಿನ ಆವರಣದಲ್ಲಿ ಬಹು ಸುಂದರವಾದ ಚಾಫೆಲನ್ನು ಜೆಸ್ಯೂಟರು ನಿರ್ಮಿಸಿದ್ದು, ಇದು ಸುಂದರವಾದ ವರ್ಣಚಿತ್ರಗಳನ್ನು ಹೊಂದಿದ್ದು ಇದನ್ನು ಬ್ರ। ಮೊಸ್ಚೆನಿ [Moscheni]ರವರು 1902, ಆಗಸ್ಟ್ 22 ರಂದು ಸಂಪೂರ್ಣಗೊಳಿಸಿದ್ದರು. ಇದು ಜೆಸ್ಯೂಟರ ಕಲೆ ವಾಸ್ತುಶಿಲ್ಪಕ್ಕೆ ದರ್ಪಣದಂತಿದೆ.[55] ನಂತರ ಪೆಬ್ರವರಿ 21, 1885 ರಂದು ಪೋಪರು ಮೊನ್ಸಿಞರ್ [Monsignor] ಪಾಗನಿಯವರನ್ನು ಟಿರಿಕೋಮಿಯಮ್‌ನ [Tricomium] ಬಿಷಪರಾಗಿ ಹಾಗೂ

ಕೆನರಾದ ವಿಕಾರ್ ಅಪೋಸ್ತಲಿಕರಾಗಿ ನೇಮಿಸಿದರು. ಅವರು ಅಧಿಕಾರ ವಹಿಸುವ ಕಾರ್ಯಕ್ರಮವನ್ನು ಕೆತದ್ರೆಲ್‌ನಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಿದ ಬಗ್ಗೆ ಲೇಖಕರು ಮಾಹಿತಿ ನೀಡಿದ್ದಾರೆ.[56] ಕ್ರಿ.ಶ 1887 ರಲ್ಲಿ ಕೆನರಾವು ವಿಕಾರೇಟ್‌ನಿಂದ ಬಡ್ತಿ ಪಡೆದು ಒಂದು ಧರ್ಮಪ್ರಾಂತ್ಯವಾಗಿ ರಚನೆಯಾಯಿತು. ಆದರ ವಿಕಾರ್ ಆಪೋಸ್ತಲಿಕ್ ಆಗಿದ್ದ ಪಾಗನಿ [Pagani] ಯವರು ಪ್ರಥಮ ಬಿಷಪರಾದರು. ಕ್ರಿ.ಶ. 1888ರಲ್ಲಿ ಮಂಗಳೂರು ಧರ್ಮಪ್ರಾಂತ್ಯವು 3 ವರಾಡೋಗಳನ್ನು ಹೊಂದಿತ್ತು. ಅವುಗಳೆಂದರೆ 1) ಬಂಟ್ವಾಳ 2) ಪೇಜಾರ್ ಮತ್ತು ಕಲ್ಯಾಣಪುರ. ಈ ಪ್ರತಿಯೊಂದು ವಾರಾಡೋ ವಿಕಾರ್ ಆಫ್ ವಾರಾ ಅಥವಾ ವಿಕಾರ್ ಫೋರೇನ್ [Forane]ನ ಆಳ್ವಿಕೆಯಲ್ಲಿತ್ತು.[57] ಬಿಷಪ್ ನಿಕೋಲಸ್ ಮರಿಯ ಪಾಗನಿ ಎಸ್.ಜೆ. ರವರು ಎಪ್ರಿಲ್ 30,1895ರಂದು ಮರಣಹೊಂದಿದರು. 1895 ಡಿಸೆಂಬರ್ 2 ರಂದು ಫಾ। ಅಬುಂಡಿಯಸ್ ಕವದಿನಿ ಎಸ್. ಜೆ. [Abundius cavadini S.J]ರವರು ಮಂಗಳೂರಿನ ಬಿಷಪರಾದದು. ಅವರು ಮಾರ್ಚ್ 23, 1910 ರಂದು ಮೃತ್ಯುವಶವಾದರು.[58]

ಮಂಗಳೂರು ಧರ್ಮಪ್ರಾಂತ್ಯವು 1896ರಲ್ಲಿ 79,454 ಕೆಥೋಲಿಕ್ ಜನಸಂಖ್ಯೆಯನ್ನು ಹೊಂದಿತ್ತು. ಅದು 1903ಕ್ಕೆ 89, 372ಕ್ಕೆ ಹೆಚ್ಚಿತು.[59] ಮಂಗಳೂರು ಧರ್ಮಪ್ರಾಂತ್ಯದ ಕೆಥೋಲಿಕ್ ಕ್ಯಾಲಂಡರ್ ಪ್ರಕಾರ 1980 ರಲ್ಲಿ ಕೆಥೋಲಿಕ್ ಜನಸಂಖ್ಯೆಯು, ಇಲ್ಲಿನ ಒಟ್ಟು ಜನಸಂಖ್ಯೆಯಾದ 22, 85, 270ರಲ್ಲಿ 2,37,100ರಷ್ಟಿತು.[60] ಇಲ್ಲಿ ಲೇಖಕರು 20ನೇ ಶತಮಾನದ ಪ್ರಾರಂಭದ [1903] ಧರ್ಮಪ್ರಾಂತ್ಯದ ಬಗ್ಗೆ ಮಾಹಿತಿ ನೀಡಿದ್ದಾರೆ. ಧರ್ಮಪ್ರಾಂತ್ಯವು 70 ಶಾಲೆಗಳನ್ನು ಹೊಂದಿದ್ದು, ಸುಮಾರು 6000 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಸುಮಾರು 88 ರಷ್ಟು ಪಾದ್ರಿಗಳಿದ್ದು, ಸುಮಾರು 137 ರಷ್ಟು ಸನ್ಯಾನಿಸಿಯರು ಮಿಶನರಿ ಕಾರ್ಯದಲ್ಲಿ ತೊಡಗಿದ್ದಾರೆ. ಅದೇ ರೀತಿ ಕ್ರಿ.ಶ. 1898ರಲ್ಲಿ ಮಂಗಳೂರು ಧರ್ಮಪ್ರಾಂತ್ಯದಲ್ಲಿ ಸಿಸ್ಟರ್ ಆಫ್ ಚಾರಿಟಿ ಧರ್ಮಭಗೀನಿಯರನ್ನು ಪರಿಚಯಿಸಿದ್ದರ ಬಗ್ಗೆ ಮಾಹಿತಿ ನೀಡಿದ್ದಾರೆ. ಲೇಖಕರು 1903 ರಲ್ಲಿಸಂಭ್ರಮಿಸಲಾದ ಪೋಪ್ XIIIನೇ ಲಿಯೋರವರ ಬೆಳ್ಳಿ ಮಹೋತ್ಸವದ ಸಂಭ್ರಮದ ಬಗ್ಗೆ ಮಾಹಿತಿ ನೀಡಿದ್ದಾರೆ. ಲೇಖಕರು ಮಂಗಳೂರು ಧರ್ಮಪ್ರಾಂತ್ಯದಲ್ಲಿನ ಚರ್ಚುಗಳು, ಅದನ್ನು ಆಳ್ವಿಕೆ ನಡೆಸಿರುವ ವಿಕಾರ್‌ಗಳ ಬಗ್ಗೆ ಹಾಗೂ ಚರ್ಚಿನ ಇತಿಹಾಸಗಳ ಬಗ್ಗೆ ಬೆಳಕು ಹರಿಸಿದ್ದಾರೆ. ಮಂಗಳೂರು ನಗರವು ಮುಖ್ಯವಾಗಿ ಮಿಲಾಗ್ರಿಸ್ ಮತ್ತು ರೊಜಾರಿಯೋ ಚರ್ಚ್‌ಗಳನ್ನು ಹೊಂದಿದೆ. ರೊಜಾರಿಯೋ ಚರ್ಚ್ 8,240 ಕೆಥೋಲಿಕರನ್ನು ಹೊಂದಿದ್ದು, ಇದರ ವ್ಯಾಪ್ತಿಯಲ್ಲಿ 12 ಶಾಲೆಗಳಿವೆ. ಇದರಲ್ಲಿ 495 ವಿದ್ಯಾರ್ಥಿ ಮತ್ತು 531 ವಿದ್ಯಾರ್ಥಿನಿಯರಿದ್ದಾರೆ. ಮತ್ತೊಂದೆಡೆ ಮಿಲಾಗ್ರಿಸ್ ಚರ್ಚು 6,680 ಕೆಥೋಲಿಕರನ್ನು ಹೊಂದಿದ್ದು, 7 ಶಾಲೆಗಳನ್ನು ಹೊಂದಿದೆ. ಅದರಲ್ಲಿ 365 ವಿದ್ಯಾರ್ಥಿ ಮತ್ತು 353 ವಿದ್ಯಾರ್ಥಿನಿಯರಿದ್ದರು. 1864 ರಲ್ಲಿ ಕಟ್ಟಿದ ಉರ್ವ ಚರ್ಚಿನಲ್ಲಿ 1903ಕ್ಕೆ ಸಂಬಂಧಿಸಿದಂತೆ 1,686ರಷ್ಟು ಕೆಥೋಲಿಕರಿದ್ದರು.[61]

ಕ್ರಿ.ಶ. 1888ರಲ್ಲಿ ಧರ್ಮಪ್ರಾಂತ್ಯವು ಕಲ್ಯಾಣಪುರ, ಪೇಜಾರ್, ಮತ್ತು ಬಂಟ್ವಾಳ ಎಂಬ 3 ವಾರಾಡೋಗಳನ್ನು ಹೊಂದಿದ್ದು, ಇವು ವಿಕಾರ್ ಆಫ್ ವಾರಾ [Vara]ನ ಆಳ್ವಿಕೆಯಲ್ಲಿದ್ದುವು. ಇವುಗಳನ್ನು ಉತ್ತರ, ಮಧ್ಯ ಮತ್ತು ದಕ್ಷಿಣ ವಿಭಾಗಳೆಂದು [Districts] ಮಾಡಲಾಗಿತ್ತು. ಉತ್ತರ ವಿಭಾಗದ ವಿಕಾರ್ ವಾರನ ನಿಯಂತ್ರಣದಲ್ಲಿ ಕುಂದಾಪುರ, ಗಂಗೊಳ್ಳಿ, ಬಾರಕೂರು, ಕಲ್ಯಾಣಪುರ [ಮಿಲಾಗ್ರಿಸ್ ಮತ್ತು ರೊಜಾರಿಯೋ] ಕಾರ್ಕಳ, ಉಡುಪಿ, ಉದ್ಯಾವರ, ಮತ್ತು ಶಿರ್ವ ಚರ್ಚುಗಳಿದ್ದು, ಈ ಸಂಪೂರ್ಣ ವಾರಾಡೋದ ಕೆಥೋಲಿಕ್ ಜನಸಂಖ್ಯೆಯು 25,416 ರಷ್ಟಿದ್ದು, ಈ ಕ್ರೈಸ್ತರ ಆದ್ಯಾತ್ಮಿಕ ಒಳಿತಿಗಾಗಿ 13 ಮಂದಿ ಪಾದ್ರಿಗಳು ಹಾಗೂ 15 ಕೆಟಕಿಸ್ಟರಿದ್ದರು.[62] [catechist] ಮಧ್ಯ ಅಥವಾ ಕೇಂದ್ರ ವಿಭಾಗವು [District] ಪೇಜಾರ್, ಕಿರೆಂ, ಮೂಲ್ಕಿ, ಬಜ್ಪೆ, ಹೊಸಪೇಟ್, ತಾಕೋಡೆ ಮತ್ತು ಕೂಳೂರು ಚರ್ಚುಗಳನ್ನು ಹೊಂದಿದ್ದು, 17,836ರಷ್ಟು ಕೆಥೋಲಿಕ್ ಜನಸಂಖ್ಯೆಯನ್ನು ಹೊಂದಿತ್ತು. ಇವರ ಸೇವೆಗಾಗಿ 10 ಮಂದಿ ಪಾದ್ರಿಗಳಿದ್ದು, 6 ಕೆಟಕಿಸ್ಟರಿದ್ದರು.[63] ದಕ್ಷಿಣ ವಿಭಾಗವು 11 ಚರ್ಚುಗಳನ್ನು ಹೊಂದಿದ್ದು ಅವುಗಳೆಂದರೆ ಬಂಟ್ವಾಳ, ವಾಮಂಜೂರು [oomzur], ಮಡಂತ್ಯಾರು, ಬೆಳ್ತಂಗಡಿ, ಅಗ್ರಾರ್, ಮೋಗರ್‌ನಾಡು, ಪುತ್ತೂರು, ಪೇಜಾರ್, ಬೇಳ, ಉಳ್ಳಾಲ ಮತ್ತು ಬೊರಿಮಾರ್ [Brimar] ಗಳಾಗಿವೆ. ಈ ವಾರಡೊದ ಆಗಿನ ಒಟ್ಟು ಕೆಥೋಲಿಕ್ ಜನಸಂಖ್ಯೆಯು 22,544 ರಷ್ಟಿದ್ದು, 13ಮಂದಿ ಪಾದ್ರಿಗಳಿದ್ದರು.[64] ಉತ್ತರ ಮಲಬಾರ್ ಧರ್ಮಪ್ರಾಂತ್ಯದ ಅತೀ ದಕ್ಷಿಣದ ಭಾಗವಾಗಿದೆ. ಇದು 3 ಚರ್ಚುಗಳನ್ನು ಹೊಂದಿದೆ. ಅವುಗಳೆಂದರೆ ಕಣ್ಣನೂರು, ತಲಚೇರಿ ಮತ್ತು ಕ್ಯಾಲಿಕಟ್‌ಗಳಾಗಿವೆ. ಇದರ ಒಟ್ಟು ಕೆಥೋಲಿಕ್ ಜನಸಂಖ್ಯೆ 7,277 ಆಗಿದ್ದು, 9 ಮಂದಿ ಪಾದ್ರಿಗಳು ಸೇವೆಯಲ್ಲಿ ತೊಡಗಿದ್ದು, ಅಲ್ಲಿ 13 ಕೆಥೋಲಿಕ್ ಶಾಲೆಗಳಿದ್ದು 579 ವಿದ್ಯಾರ್ಥಿ ಮತ್ತು 637 ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದರು.[65]

ಈ ರೀತಿ ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಪೋರ್ಚುಗೀಸರು ಬರುವುದಕ್ಕಿಂತ ಮೊದಲು ಇಲ್ಲಿ ಇದ್ದಿರಬಹುದಾದ ಕ್ರೈಸ್ತಧರ್ಮದ ಚರ್ಚೆಯಿಂದ ಪ್ರಾರಂಭಿಸಿ, 1903ರವರೆಗಿನ ಧರ್ಮಪ್ರಾಂತ್ಯದ ಇತಿಹಾಸವನ್ನು ನೀಡಲಾಗಿದೆ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬಹುದಾದ ಅಂಶಗಳೆಂದರೆ ಪೋಪರು, ಬಿಷಪರು, ಪಾದ್ರಿಗಳು ಮತ್ತು ಅವರ ಸಾಧನೆಗಳ ಬಗ್ಗೆ ಸವಿಸ್ತಾರವಾದ ವಿವರಗಳು ದೊರಕುತ್ತವೆ. ಇವರ ಸಾಧನೆಯೇ ಕ್ರೈಸ್ತರ ಸಾಧನೆ ಎಂಬ ಚಿತ್ರಣ ಸಿಗುತ್ತದೆ. ಹಾಗಾಗಿ 19ನೇ ಶತಮಾನದ ಇತಿಹಾಸ ರಚನೆಯ ದಾಟಿಯಲ್ಲೇ ಇದು ರಚನೆ ಹೊಂದಿದೆ. ಕ್ರೈಸ್ತ ಜನರು ಅದರಲ್ಲೂ ಸಾಮಾನ್ಯ ಕ್ರೈಸ್ತರಿಗೆ ಈ ಇತಿಹಾಸದಲ್ಲಿ ಎಂದೂ ಅವಕಾಶ ಪಡೆಯಲಿಲ್ಲ. ಲೇಖಕರು ವಿವರಣೆಯ ಬಹುಪಾಲು ಭಾಗವನ್ನು ಪೋರ್ಚುಗೀಸ್ ಗೋವಾದ ನಿಯಂತ್ರಣ, ಟಿಪ್ಪುವಿನ ಕ್ರೂರತ್ವ ಹಾಗೂ ಜೆಸ್ಯೂಟರ ಸಾಧನೆಗಳ ವಿವರಣೆಗೆ ಬಳಸಿಕೊಂಡಿದ್ದಾರೆ. ಬ್ರಿಟಿಷ್ ವಸಾಹತುಶಾಹಿಯನ್ನು ಕ್ರೈಸ್ತಧರ್ಮದ ಪೋಷಕರನ್ನಾಗಿ ಚಿತ್ರಿಸಿದ್ದಾರೆ. ಕೆನರಾದ ಕ್ರೈಸ್ತರ ಇತಿಹಾಸದಲ್ಲಿ ಪೋರ್ಚುಗೀಸರು ಬಹುಮುಖ್ಯ ಪಾಲು ಪಡೆದಿದ್ದಾರೆ. ಯಾಕೆಂದರೆ

ಕೆನರಾವು ಗೋವಾದಿಂದ ಕ್ರೈಸ್ತಧರ್ಮವನ್ನು ಪಡೆದಿತ್ತು ಎನ್ನುತ್ತಾ, ಇವರನ್ನು ವಿಜಯನಗರ ಮತ್ತು ಕೆಳದಿ ಅರಸರು ಪ್ರೋತ್ಸಾಹಿಸಿದರು ಹಾಗೂ ಹೈದರಾಲಿಯ ಕಾಲದಲ್ಲಿ ಇವರು ಕಷ್ಟ ಪಡಲಿಲ್ಲ ಎಂಬ ಅವಸರದ ವಿವರಣೆಯೊಂದಿಗೆ ಟಿಪ್ಪುವಿನ ಕಡೆ ದಾವಿಸಿ ಟಿಪ್ಪುವಿನ ಕ್ರೂರತ್ವವನ್ನು ವಿವರಣಾತ್ಮಕವಾಗಿ ಚರ್ಚಿಸಿದ್ದಾರೆ. ಪೋರ್ಚುಗಲ್ ಕೇವಲ ವಸಾಹತು ಮತ್ತು ವಾಣಿಜ್ಯದಕಡೆ ಮಾತ್ರ ಗಮನ ಹರಿಸದೇ, ಅದು ಕ್ರೈಸ್ತಧರ್ಮದ ವಿಸ್ತರಣೆಗೆ ಗಮನಹರಿಸಿತ್ತು. ಅದು ಪೂರ್ವದಲ್ಲಿ ಒಂದು ಪ್ರಬಲ ಶಕ್ತಿಯಾಗಿತ್ತು ಹಾಗೂ ಅದು ಧಾರ್ಮಿಕವಾಗಿ 'ಪಾದ್ರಾವ್ದೋ' ಎಂಬ ಹಕ್ಕಿನೊಂದಿಗೆ ಧಾರ್ಮಿಕ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿತು ಎಂದು ವರ್ಣಿಸುತ್ತಾ,ಅದು ಕೆನರಾದ ಮಿಶನಿಗೆ ಹಾಗೂ ಜನರ ಅದ್ಯಾತ್ಮಿಕ ಅಂಶಗಳ ಪೂರೈಕೆಗೆ ಶ್ರಮಿಸಿತು ಎಂದಿದ್ದಾರೆ. ಲೇಖಕರು ಕ್ರಿ.ಶ.17ನೇ ಶತಮಾನದಲ್ಲಿ ಉದ್ಭವಿಸಿದ ಬಿಕ್ಕಟ್ಟಾದ 'ಪದ್ರಾವ್ದೋ' ಬಗ್ಗೆ ವಿವರಣೆ ನೀಡಿದ್ದಾರೆ. ಸುಂಕಾರಿ ಮಿಶನಿನ ಬಗ್ಗೆ ಲೇಖಕರು ಅಪಾರ ಆಸಕ್ತಿ ಹೊಂದಿದ್ದಂತೆ ತೋರುತ್ತದೆ. ಇಲ್ಲಿ ಲೇಖಕರು ಕೆನರಾ ಕ್ರೈಸ್ತರು ಜೆಸ್ಯೂಟರಿಗಾಗಿ ಬೇಡಿಕೆ ಮಂಡಿಸಿದರು. ಅವರ ಮುಖ್ಯ ಉದ್ದೇಶವೆಂದರೆ ಶೈಕ್ಷಣಿಕ ಪ್ರಗತಿಯಾಗಿತ್ತು ಎನ್ನುತ್ತಾ, ಜೆಸ್ಯೂಟರು ಮಂಗಳೂರಿಗೆ ಬಂದು 50 ವರ್ಷಗಳಷ್ಟು ಕಡಿಮೆ ಅವಧಿಯಲ್ಲಿ ಶಿಕ್ಷಣ, ವೈದ್ಯಕೀಯ ಮತ್ತು ಸೇವಾ ಕ್ಷೇತ್ರಗಳಲ್ಲಿ ಅಪಾರ ಸಾಧನೆಗೈದಿದ್ದಾರೆ ಎಂದು ಅದನ್ನು ವಿಜ್ರಂಭಿಸಿ ಬರೆದಿದ್ದಾರೆ. ಒಂದು ಜೆಸ್ಯೂಟ್ ಪತ್ರಿಕೆಯಾದ 'ಮ್ಯಾಂಗಲೋರ್ ಮ್ಯಾಂಗಜೀನ್" ಅವರದೇ ಇತಿಹಾಸವನ್ನು ಹೊಗಳಿಕೆಯಿಂದ ವಿವರಿಸುವುದು ಆಶ್ಚರ್ಯ ಪಡಬೇಕಾದ ಸಂಗತಿಯೇನಲ್ಲ.

ಸಂದರ್ಭ ಸೂಚಿ

1. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:2, 1901, ಪುಟ 49.
2. *ಸಂತ ಅಲೋಶಿಯಸ್ ಕಾಲೇಜು: ಸೆಂಟಿನರಿ ಸವೆನಿರ್*, ಶಾರದ ಪ್ರೆಸ್, ಮಂಗಳೂರು, 1980, ಪುಟ 19. ಫಾ। ಮೊಫೇಯವರು ಕೊಂಕಣಿ–ಇಂಗ್ಲೀಷ್ ಡಿಕ್ಷನರಿ ಹಾಗೂ ಕೊಂಕಣಿ ವ್ಯಾಕರಣ ಪುಸ್ತಕಗಳನ್ನು ಬರೆದಿದ್ದಾರೆ.
3. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:3, 1901, ಪುಟ 77. ಗಣಪತಿರಾವ್ ಐಗಳ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಶಾರದ ಪ್ರೆಸ್, ಮಂಗಳೂರು, 1923, ಪುಟ 138. *ಸಂತ ಅಲೋಶಿಯಸ್ ಕಾಲೇಜು: ಸೆಂಟಿನರಿ ಸವೆನಿರ್, ಸಂತ ಅಲೋಶಿಯಸ್ ಕಾಲೇಜು* ವಾರ್ಷಿಕ, ಶಾರದಪ್ರೆಸ್, ಮಂಗಳೂರು, 1980, ಪುಟ 14. ಸೆವ್ರಿನ್ ಸಿಲ್ವಾ, *ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ*, ಸಂಪುಟ I, ಸ್ಟರ್ ಆಫ್ ಕೆನರಾ ಪ್ರೆಸ್, ಕುಮುಟಾ, 1957, ಪುಟ 19.
4. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:3, 1901, ಪುಟ 77. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 138–139. *ಸಂತ ಅಲೋಶಿಯಸ್ ಕಾಲೇಜು: ಸೆಂಟಿನರಿ ಸವೆನಿರ್*, ಪೂರ್ವೋಕ್ತ, ಪುಟ 14.
5. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:3, 1901, ಪುಟ 77–78.
6. ಅದೇ, ಪುಟ 78–82.
7. ಅದೇ, ಪುಟ 82.
8. ಅದೇ, ಪುಟ 82. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 139. *ಸಂತ ಅಲೋಶಿಯಸ್ ಕಾಲೇಜು: ಸೆಂಟಿನರಿ ಸವೆನಿರ್*, ಪೂರ್ವೋಕ್ತ, ಪುಟ 14. ಸೆವ್ರಿನ್ ಸಿಲ್ವಾ, ಪೂರ್ವೋಕ್ತ, ಪುಟ 37.
9. ಸೆವ್ರಿನ್ ಸಿಲ್ವಾ, ಪೂರ್ವೋಕ್ತ, ಪುಟ 37.
10. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:3, 1901, ಪುಟ 82.
11. ಪಿಯುಸ್ ಫಿಡೆಲಿಸ್ ಪಿಂಟೊ, *ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (ಕ್ರಿ.ಶ.1500–1763)* ಸಮನ್ವಯ ಪ್ರಕಾಶನ, ಮಂಗಳೂರು, 1999, ಪುಟ 110–131. ಪಿಯುಸ್ ಫಿಡೆಲಿಸ್ ಪಿಂಟೋ, *ಆಂಗ್ಲೋ–ಮೈಸೂರು ಸಂಬಂಧದ ಹಿನ್ನಲೆಯಲ್ಲಿ ಕರಾವಳಿ ಕರ್ನಾಟಕದ ಕೊಂಕಣಿ ಕ್ರೈಸ್ತರು [ಕ್ರಿ.ಶ.1761–1799]*, ಸಮನ್ವಯ ಪ್ರಕಾಶನ, ಮಂಗಳೂರು, 1999, ಪುಟ 12–17.

ಗೋವೆಯ ಕ್ರೈಸ್ತರಿಗೆ ಧಾರ್ಮಿಕವಾಗಿ, ತಮ್ಮ ಧರ್ಮವನ್ನು ಬಹಿರಂಗವಾಗಿ ಆಚರಿಸಲು ಅವಕಾಶವಿಲ್ಲದಿದ್ದದ್ದು, ಅದು ಸದಾ ಕಾಲವೂ ಎದುರಿಸುತ್ತಿದ್ದ ಆರ್ಥಿಕ ಸಮಸ್ಯೆಗಳು, ಪೋರ್ಚುಗೀಸ್ ಕ್ರೈಸ್ತರು ದೇಶಿಯ ಕ್ರೈಸ್ತರನ್ನು ಸಾಮಾಜಿಕವಾಗಿಯೂ, ಸಾಂಸ್ಕೃತಿಕವಾಗಿಯೂ ತಮಗೆ ಸಮಾನರೆಂದು ಅಂಗೀಕರಿಸಲು ಸಿದ್ಧವಾಗಿಲ್ಲದಿರುವುದು; ರಾಜಕೀಯವಾಗಿ ಗೋವೆಯ ಮೇಲಿನ ನಿರಂತರ ಆಕ್ರಮಣಗಳು, ಕಾಯಿಲೆಗಳು, ಸಾಂಕ್ರಾಮಿಕ ಪಿಡುಗು, ಕ್ಷಾಮ ಡಾಮರಗಳು, ಜನಸಂಖ್ಯೆಯ ಸಮಸ್ಯೆ, ಗೋವೆಯ ದೇಶೀಯ ಕ್ರೈಸ್ತರಿಗೂ, ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ವಾಸವಾಗಿದ್ದ ಜನರಿಗೂ ನಡುವೆ ಇದ್ದ ಸಮಾನ ಭಾವನೆಯ ನಂಟು ಇವೆಲ್ಲವೂ ಅವರ ವಲಸೆಗೆ ಕಾರಣಗಳಾದುವು.

12. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:3, 1901, ಪುಟ 82–83.
13. ಅದೇ, ಪುಟ 83–84, ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 139–140.
14. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:3, 1901, ಪುಟ 84. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:9, 1903, ಪುಟ 284.
15. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 110.
16. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 109–110.
17. ಅದೇ, ಪುಟ 110.
18. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 111. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 140.
19. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 111.
20. ಅದೇ, ಪುಟ 111. ಪಿಯುಸ್ ಫಿಡೆಲಿಸ್ ಪಿಂಟೊ, *ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ [ಕ್ರಿ.ಶ.1500–1763]* ಸಮನ್ವಯ ಪ್ರಕಾಶನ, ಮಂಗಳೂರು, 1999, ಪುಟ 187–189.
21. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:7, 1902, ಪುಟ 207–210. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:8, 1902, ಪುಟ 244.
22. ಅದೇ, ಪುಟ 111–112.
23. ಅದೇ, ಪುಟ 113. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 140.
24. ಅದೇ, ಪುಟ 113. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 140. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ III, ನಂ:1, 1904, ಪುಟ 37.

"Should the Europeans come again by sea, you come over the Ghauts [to Bednore] or if you wish, become settlers in Bednore and pay tribute as others".

25. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 113.

26. ಅದೇ, ಪುಟ 113. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ III, ನಂ:1, 1904, ಪುಟ 37–38.

27. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 114.

These are the terms of the order issued to the officers:-
"you shall seize all padres and cullistauns [Christians] that are to be found within your District and send them under guard to the Huzur, and you shall inquire and ascertain what zindigie [property] grain, cattle, land, plantations etc. they possess and shall sequestrate the whole there of for the Government, and you shall deliver over the lands and plantations to other ryots, whom you shall encourage to cultivate them, as in case they are not kept in cultivation, you shall be required to make good what they should have produced. In future if any person of the caste of cullistaun shall take up his abode in your District, you shall, according to the above directions, seize him with his family and children and send him and them to the Huzur".
ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 141.

28. ಪಿಯುಸ್ ಫಿಡೆಲಿಸ್ ಪಿಂಟೊ, ಪೂರ್ವೋಕ್ತ, ಪುಟ 96. ಸೆವ್ರಿನ್ ಸಿಲ್ವಾ, ಪೂರ್ವೋಕ್ತ, ಪುಟ 125.

29. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 113. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:5, 1902, ಪುಟ 147.

30. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 114.

31. ಅದೇ, ಪುಟ 114. ಪಿಯುಸ್ ಫಿಡೆಲಿಸ್ ಪಿಂಟೊ, *ಆಂಗ್ಲೋ–ಮೈಸೂರು ಸಂಬಂಧದ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ಕೊಂಕಣಿ ಕ್ರೈಸ್ತರು [ಕ್ರಿ.ಶ.1761–1799]*, ಸಮನ್ವಯ ಪ್ರಕಾಶನ, ಮಂಗಳೂರು 1999, ಪುಟ 91–92. ಗಣಪತಿರಾವ್ ಐಗಳ್, ಪೂರ್ವೋಕ್ತ ಪುಟ 142–143.

32. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 114–116. ಪಿಯುಸ್ ಫಿಡೆಲಿಸ್ ಪಿಂಟೊ, ಪೂರ್ವೋಕ್ತ, ಪುಟ 92–95. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 143–144.

33. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:5, 1902, ಪುಟ 143.

34. ಪಿಯುಸ್ ಫಿಡೆಲಿಸ್ ಪಿಂಟೊ, ಪೂರ್ವೋಕ್ತ, ಪುಟ 96–97.

35. ಸೆವ್ರಿನ್ ಸಿಲ್ವಾ, ಪೂರ್ವೋಕ್ತ, ಪುಟ 126.
36. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:5, 1902, ಪುಟ 143–144. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 144.
37. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:5, 1902, ಪುಟ 144.
38. ಪಿಯುಸ್ ಫಿಡೆಲಿಸ್ ಪಿಂಟೊ, ಪೂರ್ವೋಕ್ತ, ಪುಟ 98.
39. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:5, 1902, ಪುಟ 144–145. ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 144.
40. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:5, 1902, ಪುಟ 145.
41. ಅದೇ, ಪುಟ 140–141.
42. ಅದೇ, ಪುಟ 142–143.
43. *ಮ್ಯಾಂಗಲೋರ್ ಮ್ಯಾಗಜೀನ್* , ಸಂಪುಟ II, ನಂ:6, 1902, ಪುಟ 173–174.
44. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:6, 1902, ಪುಟ 175–180.
45. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:7, 1902, ಪುಟ 205–207.
46. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:8, 1902, ಪುಟ 238–240.
47. ಅದೇ, ಪುಟ 243–244.
48. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:9, 1903, ಪುಟ 271–272.
49. ಅದೇ, ಪುಟ 272–276.
50. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:10, 1903, ಪುಟ 306.
51. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:11, 1903, ಪುಟ 332–333.
52. ಅದೇ, ಪುಟ 333.
53. ಅದೇ, ಪುಟ 334–337. *ಸಂತ ಆಲೋಶಿಯಸ್ ಕಾಲೇಜು, ಮಂಗಳೂರು: ಸೆಂಟಿನರಿ ಸವೆನಿರ್*, ಪೂರ್ವೋಕ್ತ, ಪುಟ 64.
54. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:11, 1903, ಪುಟ 339, ಗಣಪತಿರಾವ್ ಐಗಳ್, ಪೂರ್ವೋಕ್ತ, ಪುಟ 144.
55. *ಸಂತ ಆಲೋಶಿಯಸ್ ಕಾಲೇಜು, ಮಂಗಳೂರು: ಸೆಂಟಿನರಿ ಸವೆನಿರ್*, ಪೂರ್ವೋಕ್ತ, ಪುಟ 64.
56. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:11, 1903, ಪುಟ 339–340.
57. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:12, 1903, ಪುಟ 364.
58. ಎ.ಎಲ್.ಪಿ.ಡಿ'ಸೋಜ, *ಹಿಸ್ಟರಿ ಆಫ್ ದಿ ಕ್ಯಾಥೋಲಿಕ್ ಕಮ್ಯುನಿಟಿ ಆಫ್ ಸೌತ್ ಕೆನರಾ*, ಸಲಾಕ್ ಪ್ರಿಂಟರ್ಸ್, ಮಂಗಳೂರು, 1983, ಪುಟ 71–75.

59. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ III, ನಂ:2, 1904, ಪುಟ 46.

60. ಎ.ಎಲ್.ಪಿ.ಡಿ'ಸೋಜ, ಪೂರ್ವೋಕ್ತ, ಪುಟ 71.

61. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ III, ನಂ:2, 1904, ಪುಟ 48-49

62. ಅದೇ, ಪುಟ 49.

63. ಅದೇ, ಪುಟ 52.

64. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ III, ನಂ:3, 1904, ಪುಟ 80.

65. ಮ್ಯಾಂಗಲೋರ್ ಮ್ಯಾಗಜೀನ್, ಸಂಪುಟ III, ನಂ:4, 1904, ಪುಟ.

ಅಧ್ಯಾಯ : ಐದು

ವಸಾಹತುಶಾಹಿ ಆಡಳಿತ ಹಾಗೂ 'ಮ್ಯಾಗಜೀನ್'

ಅಧ್ಯಾಯ : ಐದು

ವಸಾಹತುಶಾಹಿ ಆಡಳಿತ ಹಾಗೂ 'ಮ್ಯಾಗಜೀನ್'

ಈ ಅಧ್ಯಾಯದಲ್ಲಿ 'ಮ್ಯಾಂಗಲೋರ್ ಮ್ಯಾಗಜೀನ್' ನಲ್ಲಿ ಬಿಂಬಿತವಾದ ವಸಾಹತುಶಾಹಿ ಪರವಾದ ಹಾಗೂ ನೆಲೆಯುಳ್ಳ ಅಂಶಗಳನ್ನು ಗುರುತಿಸುವ ಮತ್ತು ಚರ್ಚಿಸುವ ಒಂದು ಪ್ರಯತ್ನ ಮಾಡಲಾಗಿದೆ. ಕ್ರಿ.ಶ.1799ರಲ್ಲಿ ಬ್ರಿಟಿಷರು ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪುವನ್ನು ಸೋಲಿಸುವುದರೊಂದಿಗೆ ಕೆನರಾವು ವಸಾಹತುಶಾಹಿಯ ನೇರ ಆಳ್ವಿಕೆಗೆ ಗುರಿಯಾಯಿತು. ಬ್ರಿಟಿಷರು ಮಿಶನರಿಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ವಸಾಹತುಶಾಹಿ ಪ್ರಕ್ರಿಯೆ ಎಂಬುದು ಆ ಪ್ರದೇಶದ ಆರ್ಥಿಕ ಮತ್ತು ರಾಜಕೀಯ ಅಂಶಗಳ ಮೇಲೆ ಮಾತ್ರ ಪ್ರಭಾವ ಬೀರದೇ ಅದು ಸಂಸ್ಕೃತಿಯನ್ನು ವಸಾಹತುಕರಣಗೊಳಿಸಿದೆ.[1] ಅಥವಾ ವಸಾಹತುಶಾಹಿಯು ಅದರ ಜನರ ಮೇಲೆ ತನ್ನ ರಾಜ್ಯ ಸಂಘಟನೆಯ ಮೂಲಕ ಮಾತ್ರ ತಮ್ಮ ಅಸ್ಥಿತ್ವವನ್ನು ಸ್ಥಾಪಿಸದೇ, ಅದು ತತ್ವಶಾಸ್ತ್ರ, ಇತಿಹಾಸ, ಮಾನವಶಾಸ್ತ್ರ ಇತ್ಯಾದಿಗಳ ಮೂಲಕ ತನ್ನ ನಿಯಂತ್ರಣವನ್ನು ಹೊಂದಿದೆ.[2]

ಬ್ರಿಟಿಷರಿಂದ ಕೆನರಾದ ಆಕ್ರಮಣ, ನಂತರ ದೀರ್ಘಕಾಲದ ವಸಾಹತುಶಾಹಿ ಆಳ್ವಿಕೆಯ ಅನುಭವ ಹಾಗೂ ಈ ಕಾಲದಲ್ಲಿ ಈ ಪ್ರದೇಶ ಕಂಡ ಹಲವು ಬದಲಾವಣೆಗಳು ಇತಿಹಾಸದ ಪುಟದಲ್ಲಿ ಚರ್ಚಿಸಬೇಕಾದ ಪ್ರಮುಖ ಅಂಶಗಳಾಗಿವೆ ಎಂದು ಪ್ರೊ.ಬಿ.ಸುರೇಂದ್ರರಾವ್ ಅಭಿಪ್ರಾಯಪಟ್ಟಿದ್ದಾರೆ. ಈ ಕಾಲದ ಕೆನರಾದ ಇತಿಹಾಸದ ಅಧ್ಯಾಯನ ಕೇವಲ ಕೆನರಾದ ಆಧುನಿಕ ಕಾಲದ ಇತಿಹಾಸವನ್ನು ಪುನ:ರಚಿಸಲು ಮಾತ್ರ ಪ್ರಮುಖ್ಯವಾದುದಲ್ಲ. ಬದಲು ವಸಾಹತುಶಾಹಿ ಕಾಲದಲ್ಲಿ ಭಾರತದಲ್ಲಿ ಒಂದು ಚಿಕ್ಕ ಸಿನೇಮಾ ಮಂದಿರವಾಗಿದ್ದ ಕೆನರಾದಲ್ಲಿ ವಸಾಹತುಶಾಹಿಯ ನೀತಿಗಳೇನು ಎಂದು ತಿಳಿಯುವ ಉದ್ದೇಶದಿಂದಲೂ ಬಹುಮುಖ್ಯವಾಗಿದೆ ಎಂದೂ ಅವರು ವಾದಿಸುತ್ತಾರೆ. ಬ್ರಿಟಿಷ್ ಆಳ್ವಿಕೆಯ ಕಾಲದ ಬಗ್ಗೆ ಹಲವು ಅಧಿಕಾರಿಗಳ ಬರವಣಿಗೆಗಳಿದ್ದು, ಅವು ವಸಾಹತುಶಾಹಿಯ ನಂಬಿಕೆ ಮತ್ತು ಆಚರಣೆಯ ಸ್ವರೂಪದ ಬಗ್ಗೆ ವಿವರಣೆ ನೀಡುತ್ತದೆ. ಅವರಂತೆ ಬ್ರಿಟಿಷ್ ಆಳ್ವಿಕೆ ಈ ಪ್ರದೇಶದಲ್ಲಿ ಶಾಂತಿ ಮತ್ತು ಸುಭದ್ರತೆಯನ್ನು ಸ್ಥಾಪಿಸಿತು. ಇದು ಅವರು ಆಳ್ವಿಕೆ ಮಾಡುವವರ ಮೇಲೆ ನಂಬಿಕೆಗಳಿಸಲು ಅತ್ಯಗತ್ಯವೂ ಆಗಿದೆ. ಆದರೆ ಅವು ನಿಜವಾಗಿಯೂ ಜನರಿಗೆ ಸಂತೋಷದ ದಿನಗಳಾಗಿದ್ದವೇ ಎಂಬುದನ್ನು ಗಮನಿಸಬೇಕಾಗಿದೆ.[3]

'ಮ್ಯಾಂಗಲೋರ್ ಮ್ಯಾಗಜೀನ್' ಹೇಳಿಕೊಂಡಿರುವಂತೆ ಅದು ಕಾಲೇಜಿನ ಮಾಧ್ಯಮ ಮತ್ತು ದಾಖಲೆ ಎಂದಿದ್ದರೂ, ವಸಾಹತುಶಾಹಿ ಕಾಲದಲ್ಲಿ ನಡೆದ ವಿಶೇಷ ಘಟನೆಗಳಲ್ಲಿ ತನಗೆ ಬೇಕಾದ್ದನ್ನು ಪ್ರಕಟಿಸದೆ ಬಿಡುತ್ತಿರಲಿಲ್ಲ. ಭಾರತದ ಆಗುಹೋಗುಗಳ ಬಗ್ಗೆ ಅತೀ ಸೂಕ್ಷ್ಮತೆಯಿಂದ ಅದು ಅವಲೋಕಿಸುತ್ತಿದ್ದು, ಅದು ಎಂದೂ ನಿರ್ಲಿಪ್ತವಾಗಿರಲಿಲ್ಲ. ಸಂತ ಅಲೋಶಿಯಸ್ ಕಾಲೇಜಿನ ಹಾಲ್‌ನಲ್ಲಿ ಕ್ರಿ.ಶ.1897 ಜೂನ್ 22ರಂದು ಬ್ರಿಟಿಷ್ ಸಾಮ್ರಾಜ್ಞಿಯ ವಜ್ರಮಹೋತ್ಸವವನ್ನು ಸಂಭ್ರಮಿಸಲಾಗಿತ್ತು. ರಾಣಿಯು 1837, ಜೂನ್ 21 ರಂದು ತನ್ನ 18ನೇ ವಯಸ್ಸಿನಲ್ಲಿ ಪಟ್ಟಾಭಿಷಿಕ್ತಳಾಗಿದ್ದಳು. ಈ ಸಂದರ್ಭದಲ್ಲಿ ಈ ಪತ್ರಿಕೆಯ ಸಂಪಾದಕರಾದ ಫಾ।ಮೋರ್ ಮಾಡಿದ ಭಾಷಣವನ್ನು ಸಂಪೂರ್ಣವಾಗಿ ಪತ್ರಿಕೆಯಲ್ಲಿ ಮುದ್ರಿಸಲಾಗಿದೆ. ಫಾ। ಮೋರ್ ಒಬ್ಬ ಐರಿಷ್ ನಾಗರೀಕರಾಗಿದ್ದರು. ಅವರು ರಾಣಿಯು ಪ್ರಾರಂಭದ ಆಳ್ವಿಕೆಯ ಕಷ್ಟಕಾಲದ ದಿನಗಳ ಬಗ್ಗೆ ಗಮನಹರಿಸಿ, ಅವುಗಳನ್ನು ಸಮರ್ಥವಾಗಿ ಎದುರಿಸಿ, ಬೃಹತ್ ಸಾಮ್ರಾಜ್ಯ ರಚಿಸಿದಳು ಎಂದಿದ್ದಾರೆ. ರಾಣಿಯು ಅಧಿಕಾರಕ್ಕೆ ಬರುವುದರೊಂದಿಗೆ ಮೊದಲು ಅಸ್ತಿತ್ವದಲ್ಲಿದ್ದ ಕೆಟ್ಟ ಆಳ್ವಿಕೆ, ಸಾಮಾಜಿಕ ಪದ್ಧತಿಗಳಾದ ಗುಲಾಮತನ ನಾಶವಾಯಿತು. ಜನರ ಸ್ವಾತಂತ್ರ್ಯ ಹೆಚ್ಚಿತು. ಸಂವಿಧಾನಿಕ ಹಾಗೂ ಪಾರ್ಲಿಮೆಂಟರಿ ಸರಕಾರ ವ್ಯವಸ್ಥಿತವಾಗಿ ಜಾರಿಗೆ ಬಂತು. ಅದೇ ರೀತಿ ಉಗಿಯಂತ್ರ ಹಾಗೂ ವಿದ್ಯುತ್ ಬಳಕೆಯೊಂದಿಗೆ ಭೂಮಿ, ಸಮುದ್ರದಲ್ಲೆರಡರಲ್ಲೂ ಸಂಪರ್ಕ ವ್ಯವಸ್ಥೆ ಕ್ಷಿಪ್ರವಾಗಿ ಬೆಳೆಯಿತು. ಕ್ರಿ.ಶ.1837ರ ಮೊದಲು ಬ್ರಿಟನ್ ಕಾಣದಂತಹ ಬೆಳವಣಿಗೆಗಳು ಈಕೆಯ ಕಾಲದಲ್ಲಿ ಕಂಡು ಬಂದವು. ಹೀಗೆ ಬ್ರಿಟನ್ ಒಂದು ಬೃಹತ್ ಸಾಮ್ರಾಜ್ಯವಾಗಿ ಬೆಳೆದುಕೊಂಡು ಹಲವು ವಸಾಹತುಗಳನ್ನು ಸ್ಥಾಪಿಸಿದೆ. ಅವು ಸ್ವಾಯತ್ತ ಅಧಿಕಾರವಿರುವ ವಸಾಹತುಗಳಾಗಿದ್ದು, ಸಾಮ್ರಾಜ್ಯದ ಬೆನ್ನೆಲುಬುಗಳಂತಿವೆ ಎಂದಿದ್ದಾರೆ. ಪ್ರಾಚೀನ ಕಾಲದಲ್ಲಿ ರೋಮ್ ಸಾಮ್ರಾಜ್ಯ ಇದ್ದ ಹಾಗೆ, ಈಗ ಬ್ರಿಟಿಷ್ ಸಾಮ್ರಾಜ್ಯ ಆಧುನಿಕ ಜಗತ್ತಿನ ಜಾತ್ಯಾತೀತ ಹರಿಕಾರ ಎಂದು ಲಾರ್ಡ್ ರೋಸಿ ಬೆರ್ರಿ [Berry] ಹೇಳಿರುವುದನ್ನು ಉಲ್ಲೇಖಿಸಿ, ವಸಾಹತು ಆಳ್ವಿಕೆಯನ್ನು ವೈಭವಯುತ ಯುಗವೆಂದೂ, ಬ್ರಿಟನ್ ಸತಂತ್ರ್ಯ ಹಾಗೂ ಸಮಾನತೆಯ ಏಜೆನ್ಸಿ ಎಂದು ಹೊಗಳಿದ್ದಾರೆ.[4] ರಾಣಿಯ ವಜ್ರಮಹೋತ್ಸವ ಸಂದರ್ಭದಲ್ಲಿ ಮಂಗಳೂರು ಧರ್ಮಪ್ರಾಂತ್ಯದ ಎಲ್ಲಾ ಕೆಥೋಲಿಕ್ ಚರ್ಚ್‌ಗಳಲ್ಲಿ ಇದನ್ನು ಧನ್ಯವಾದ ಸಮರ್ಪಿಸುವ ಪೂಜೆಗಳೊಂದಿಗೆ ಆಚರಿಸಿದ ಬಗ್ಗೆಯೂ 'ಮ್ಯಾಂಗಲೋರ್ ಮ್ಯಾಗಜೀನ್' ತಿಳಿಸುತ್ತದೆ.[5]

ಕ್ರಿ.ಶ.1901ರಲ್ಲಿ ರಾಣಿಯು ಮರಣ ಹೊಂದಿದ ವಾರ್ತೆಯು ಮಂಗಳೂರಿಗೆ ಮುಟ್ಟಿದಾಗ ಎಲ್ಲಾ ಶಾಲೆಗಳನ್ನು ಮುಚ್ಚಲಾಯಿತು ಹಾಗೂ ಆಟೋಟಗಳನ್ನು ಮುಂದಿನ ವಾರಕ್ಕೆ ಮುಂದೂಡಿದ ಬಗ್ಗೆ ವಿವರಗಳಿವೆ. ಈ ವಿಷಯದ ಬಗ್ಗೆ ನಡೆದ ವಿವಿಧ ಸಭೆಗಳ ಬಗ್ಗೆ 'ಮ್ಯಾಂಗಲೋರ್ ಮ್ಯಾಗಜೀನ್' ಉಲ್ಲೇಖ ಮಾಡಿದೆ. 1901 ಫೆಬ್ರವರಿ 1ರಂದು ಸಂಜೆ 5ಗಂಟೆಗೆ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಮಂಗಳೂರಿನ ಜನಪ್ರತಿನಿಧಿಗಳ ಸಭೆಯು ಮುನ್ಸಿಪಾಲ್ ಕೌನ್ಸಿಲ್‌ನ ಅಧ್ಯಕ್ಷರಾದ ರಾವ್ ಸಾಹೇಬ್

ಎಸ್.ಎಸ್.ಬ್ರಿಟ್ಟೋರ ನೇತೃತ್ವದಲ್ಲಿ ನಡೆದಿತ್ತು. ಶೇಷನ್ಸ್ ಜಡ್ಜ್ ಜೆ.ಡಬ್ಲ್ಯೂ.ಎಫ್ ಡುಮರ್‌ಗ್ಯೂ [Dumergue]ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಸಭೆಯ ಉದ್ದೇಶವೆಂದರೆ ರಾಣಿಯ ಮರಣಕ್ಕೆ ಶೋಕ ವ್ಯಕ್ತಪಡಿಸುವುದು ಹಾಗೂ ರಾಜ ಏಳನೇ ಎಡ್ವರ್ಡ್‌ಗೆ ತಮ್ಮ ನಂಬಿಕೆ ಮತ್ತು ರಾಜನಿಷ್ಠೆಯನ್ನು ವ್ಯಕ್ತ ಪಡಿಸುವುದಾಗಿತ್ತು. ಪ್ರಥಮ ನಿರ್ಣಯವನ್ನು ಮಂಗಳೂರಿನ ಬಿಷಪರಾದ ರೆವರೆಂಡ್ ಎ.ಕವದಿನಿ ಎಸ್.ಜೆ.ರವರು ಹೊರಡಿಸಿದರು. ಎರಡನೇ ನಿರ್ಣಯವನ್ನು ರಾವ್ ಸಾಹೇಬ್ ಬ್ರಿಟ್ಟೋರವರು ಹೊರಡಿಸಿದರು. ಇಲ್ಲಿ ಲೇಖಕರು ಈ ಸಭೆಯಲ್ಲಿ ಭಾಗವಹಿಸಿದ ಬೇರೆ ಬೇರೆ ಸಮುದಾಯಗಳ ನಾಯಕರುಗಳ ಬಗ್ಗೆ ಮಾಹಿತಿ ನೀಡಿದ್ದಾರೆ.[6] ಬಾಂಬೆಯಲ್ಲಿ ವಾಸವಾಗಿರುವ ಕೆನರಾದ ಕೆಥೋಲಿಕರು ಸಭೆ ಸೇರಿ ಹೊರಡಿಸಿದ ನಿರ್ಣಯಗಳ ಬಗ್ಗೆಯೂ ಪತ್ರಿಕೆಯಲ್ಲಿ ಉಲ್ಲೇಖವಿದೆ. ಕ್ರಿ.ಶ.1799ರ ಟಿಪ್ಪುಪತನದ ನಂತರ ರಾಣಿಯ ಆಳ್ವಿಕೆ ಸಂದರ್ಭದಲ್ಲಿ ಕೆನರಾದಲ್ಲಿನ ಕ್ರೈಸ್ತರು ಯಾವಾತ್ತೂ ಶಾಂತಿಯುತವಾಗಿ ಜೀವನ ನಡೆಸಿದರು ಹಾಗೂ ಅವರ ಸಂಪತ್ತಿಗೆ ಬದ್ರತೆ, ಧಾರ್ಮಿಕವಾಗಿ ಸ್ವಾಯತ್ತತೆ ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ದೊರಕಿತು. ಈ ರೀತಿಯಾಗಿ ಕೆನರಾದ ಕ್ರೈಸ್ತರು ಬ್ರಿಟಿಷ್ ಆಳ್ವಿಕೆಯ ಸಂಪೂರ್ಣ ಲಾಭವನ್ನು ಪಡೆದಿದ್ದರು ಎಂಬ ಶ್ಲಾಘನೀಯ ಮಾತುಗಳನ್ನು ಹೇಳಿದ ಬಗ್ಗೆ ಉಲ್ಲೇಖಗಳಿವೆ.[7] 'ಮ್ಯಾಂಗಲೋರ್ ಮ್ಯಾಗಜೀನ್' ನ 'ಔಟ್‌ಲೈನ್ಸ್ ಆಫ್ ದಿ ಹಿಸ್ಟರಿ ಆಫ್ ಕೆನರಾ'ದ ಲೇಖಕರಾದ ಸಲ್ಡಾನರು ರಾಣಿಯ ಮರಣದ ಬಗ್ಗೆ ಉಲ್ಲೇಖಿಸುತ್ತಾ, ಕೆನರಾ ಪ್ರದೇಶವು ಅವರ ಪೂರ್ವಜರು ಅನುಭವಿಸಿದ ಕೆಟ್ಟ ಆಳ್ವಿಕೆಯಿಂದ ಮುಕ್ತವಾಗಿ, ಬ್ರಿಟಿಷ್ ಅಧಿಪತ್ಯಕ್ಕೆ ಸೇರಿದ ನಂತರ ರಾಣಿಯ ಆಳ್ವಿಕೆಯ ಕಾಲದಲ್ಲಿ ಇದು ಕಂಡ ಬದಲಾವಣೆಯನ್ನು ಜನರು ಸ್ವಾಗತಿಸಿದ್ದು, ನ್ಯಾಯವಾದ ಮತ್ತು ಸ್ಥೈರನೆಯುಳ್ಳ ಆಳ್ವಿಕೆಯನ್ನು ಕಂಡಿದೆ ಎಂದಿದ್ದಾರೆ.[8] ಈ ರೀತಿ ಸಲ್ಡಾನರು ಅವರ ಬರವಣಿಗೆಗಳೂದ್ದಕ್ಕೂ ಸಾಧ್ಯವಾದಷ್ಟು ವಸಾಹತುಶಾಹಿ ಆಳ್ವಿಕೆಯನ್ನು ವಿಜ್ರಂಬಿಸಿ ಬರೆದಿದ್ದಾರೆ.

ಬ್ರಿಟಿಷ್ ಸಾಮ್ರಾಟ ಏಳನೇ ಎಡ್ವರ್ಡ್ ಭಾರತದ ಸಾಮ್ರಾಟನಾಗಿ ಅಧಿಕಾರ ಸ್ವೀಕರಿಸಿದ ನೆನಪಿಗಾಗಿ ನಡೆಸಿದ ದೆಹಲಿ ದರ್ಬಾರಿನ ಸಂಭ್ರಮವನ್ನು ಮಂಗಳೂರಿನಲ್ಲಿಯೂ ವೈಭವದಿಂದ ಆಚರಿಸಿದ ಬಗ್ಗೆ ಮಾಹಿತಿ ಇದೆ. ಈ ಸಂದರ್ಭದಲ್ಲಿ ಕಾಲೇಜಿನಲ್ಲಿ ಸಂಜೆ 6 ಗಂಟೆಗೆ "ಸೆಡೀಸಿಯಸ್ ದಿ ಲಾಸ್ಟ್ ಕಿಂಗ್ ಆಫ್ ಜೂದಾ" [Sedecias, the Last king of Judah] ಎಂಬ ನಾಟಕದೊಂದಿಗೆ ಈ ಘಟನೆಯನ್ನು ಆಚರಿಸಿದ ಬಗ್ಗೆ ಸವಿಸ್ತಾರವಾಗಿ ವಿವರಿಸಿದೆ. ಮಂಗಳೂರು ಮೈದಾನದಲ್ಲಿ ಈ ಸಂಭ್ರಮವನ್ನು ಆಚರಿಸುವ ಸಲುವಾಗಿ ಜೆ.ಎಸ್.ಅಲ್ಬುಕರ್ಕ್ ಮತ್ತು ಎಸ್.ಡಿ.ಸಲ್ಡಾನರು ಚಪ್ಪರ ಸಿದ್ದಪಡಿಸಿದ್ದು, ಸುಡುಮದ್ದು ಹಾಗೂ ವಿವಿಧ ಆಟೋಟಗಳನ್ನು ಈ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು. ಮಂಗಳೂರಿನ ಬಂದರು ಪ್ರದೇಶದಲ್ಲಿ ಹೆಚ್.ಎಸ್.ಬಿಯವರು ದೋಣಿ ಸ್ಪರ್ದೆಗಳನ್ನು ಏರ್ಪಡಿಸಿದ್ದರು.[9] ಅಂತೆಯೇ ಮಂಗಳೂರಿಗೆ ಬೇರೆ ಬೇರೆ ಸಮಯದಲ್ಲಿ ಭೇಟಿ ನೀಡಿದ ಬ್ರಿಟಿಷ್ ಅಧಿಕಾರಿಗಳ ಬಗ್ಗೆ ಮಾಹಿತಿ ಇಲ್ಲಿ ಸಿಗುತ್ತದೆ. 'ಮ್ಯಾಂಗಲೋರ್

ಮ್ಯಾಗಜೀನ್' ಬ್ರಿಟಿಷ್ ಗವರ್ನರುಗಳು ಮಂಗಳೂರಿಗೆ ಭೇಟಿ ನೀಡಿದುದರ ಬಗ್ಗೆ ವಿವರಣೆಗಳನ್ನು ನೀಡುತ್ತದೆ. ಕ್ರಿ.ಶ.1901ರಲ್ಲಿ ಮದ್ರಾಸ್ ಪ್ರಾಂತ್ಯದ ಗವರ್ನರ್ ಆಗಿದ್ದ ಆ್ಯಮ್‌ಟ್ಹಿಲ್ [Ampthill] ರವರು, ಅವರ ಪತ್ನಿ ಹಾಗೂ ಇತರ ಬ್ರಿಟಿಷ್ ಸಹ ಅಧಿಕಾರಗಳೊಂದಿಗೆ ಮಂಗಳೂರಿಗೆ ಬಂದು, ಜೆಸ್ಯೂಟ್ ಸಂಸ್ಥೆಗಳಿಗೆ ಸೇರಿದಂತೆ ಹಲವಾರು ಇತರ ಸಂಸ್ಥೆಗಳಿಗೆ ಭೇಟಿ ನೀಡಿದುದರ ಬಗ್ಗೆ ವಿವರವಾದ ಮಾಹಿತಿಯನ್ನು ಮ್ಯಾಗಜೀನ್ ನೀಡುತ್ತದೆ. ಇದೇ ಸಂದರ್ಭದಲ್ಲಿ ಗವರ್ನರ್‌ರವರು ಕೋಣಗಳ ಓಟದ ಸ್ಪರ್ದೆ ವೀಕ್ಷಣೆ ಹಾಗೂ ಮೂಡಬಿದರೆಗಳಿಗೆ ಭೇಟಿ ನೀಡಿದ್ದರು[10] ಎಂಬುದರ ಬಗ್ಗೆಯೂ ತಿಳಿಸುತ್ತದೆ. ಕ್ರಿ.ಶ.1907ರಲ್ಲಿ ಮದ್ರಾಸ್ ಪ್ರಾಂತ್ಯದ ಗವರ್ನರ್ ಆಗಿದ್ದ ಸರ್ ಅರ್ಥರ್ ಲಾವ್ಲೇ [Lawley]ರವರು ಮಂಗಳೂರು ಹಾಗೂ ಕಾಲೇಜಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಗಿತ್ತು.[11] ಈ ರೀತಿ ಬ್ರಿಟಿಷ್ ಅಧಿಕಾರಿಗಳ ಬಗ್ಗೆಯೂ 'ಮ್ಯಾಂಗಲೋರ್ ಮ್ಯಾಗಜೀನ್' ತನ್ನ ಪುಟಗಳೂದ್ದಕ್ಕೂ ಮೆಚ್ಚುಗೆಯ ಮಾತುಗಳನ್ನು ಆಡಿದೆ.

ಜೋಸೆಫ್.ಎಮ್.ಸಲ್ದಾನರು ಬಾಂಬೆಯ ಕೆನರಾ ಕೆಥೋಲಿಕ್ ಅಸೋಶಿಯೆಷನ್‌ನಲ್ಲಿ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಯಶಸ್ವಿನ ಬಗ್ಗೆ ಮಾಡಿದ್ದ ಭಾಷಣವನ್ನು ಇದರಲ್ಲಿ ಮುದ್ರಿಸಲಾಗಿದೆ. ಲೇಖಕರು ಅಭಿಪ್ರಾಯಪಡುವಂತೆ ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತವು ಯಾವ ರೀತಿಯ ಅಭಿವೃದ್ಧಿಯನ್ನು ಹೊಂದಿದೆ ಎಂದು ತಿಳಿದುಕೊಳ್ಳುವುದು ಆಸಕ್ತಿಯ ವಿಷಯವಾಗಿದೆ. ಈ ಇಡೀ ಖಂಡದಲ್ಲಿ ಬ್ರಿಟಿಷ್ ಆಳ್ವಿಕೆ ಸ್ಥಾಪಿಸಿರುವ ಸ್ಥಿರ ಅಭಿವೃದ್ಧಿಯನ್ನು ತಿಳಿಯಲು ಲೇಖಕರು ಅವರದೇ ಊರಾದ ಕೆನರಾವನ್ನು ಬಳಸಿ, ಬ್ರಿಟಿಷ್ ಸರಕಾರದ ಆಳ್ವಿಕೆಯಡಿಯಲ್ಲಿ ಕೆನರಾಗಳಿಸಿರುವ ಭೌತಿಕ ಸಮೃದ್ಧಿ, ಶಿಕ್ಷಣ, ಜನಸಂಖ್ಯೆಯ ಹೆಚ್ಚಳ, ವಾಣಿಜ್ಯ, ಉತ್ಪಾದನೆ ಹಾಗೂ ರಾಷ್ಟ್ರಮಟ್ಟದ ಉನ್ನತ ಸಂಸ್ಥೆಗಳನ್ನು ಇದು ಪಡೆದುಕೊಂಡಿದೆ ಎಂದಿದ್ದಾರೆ. 1799ರ ಟಿಪ್ಪುವಿನ ಪಥನದ ನಂತರ ಇಲ್ಲಿ ಕ್ರೈಸ್ತರು ಯಾವ ರೀತಿ ಅಭಿವೃದ್ಧಿ ಹೊಂದಿದ್ದಾರೆ ಎಂಬುದರ ಕಡೆ ಗಮನಹರಿಸಿದ್ದಾರೆ.[12] ಲೇಖಕರು ಇಲ್ಲಿ ಕ್ರೈಸ್ತರ ಬೆಳವಣಿಗೆಯನ್ನು ಇಡೀ ಕೆನರಾದ ಅಭಿವೃದ್ಧಿ ಎಂಬ ವಾದ ಮಂಡಿಸಿರುವುದನ್ನು ಕಾಣಬಹುದು. ಇಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಎತ್ತಿ ಹಿಡಿಯುವ ಉದ್ದೇಶದೊಂದಿಗೆ 1799ರ ಮೊದಲಿನ ಟಿಪ್ಪುವಿನ ಕಾಲದ ಕೆಟ್ಟ ಆಳ್ವಿಕೆಯ ಕಾಲದಲ್ಲಿ ಕೆನರಾ ಎಲ್ಲಾ ರೀತಿಯಲ್ಲೂ ಹಿಂದುಳಿದಿತ್ತು ಎಂಬ ಚಿತ್ರಣವನ್ನು ನೀಡಿದ್ದಾರೆ. ಆದರೆ ಕ್ರಿ.ಶ.1799ರಲ್ಲಿ ಟಿಪ್ಪುವಿನ ಪಥನ ಹೊಂದುವುದರೊಂದಿಗೆ ಮುನ್ರೋ ಕೆನರಾದಲ್ಲಿ ತನ್ನ ಚಾಕಚಕ್ಯತೆಯಿಂದ ಶಾಂತಿ ಸ್ಥಾಪಿಸಿದ ಎಂದಿರುವ ಲೇಖಕರು, ಬ್ರಿಟಿಷ್ ಆಳ್ವಿಕೆಯಿಂದಾಗಿ ಹಾಗೂ ಪ್ರೋತ್ಸಾಹದಿಂದಾಗಿ ತೋಟಗಾರಿಕೆ ವಿಸ್ತಾರವಾಗಿದೆ. ಬೆಳವಣಿಗೆಗೆ ತೊಡಕಾಗಿರುವ ಅಡ್ಡಿ, ಆತಂಕಗಳು ನಿವಾರಣೆಯಾಗಿವೆ. ಬ್ರಿಟಿಷರ ಕಾಲದಲ್ಲಾದ ಶ್ರೇಷ್ಠಮಟ್ಟದ ನಿವೇಶನಗಳು, ಹೊಸ ಕೈಗಾರಿಕೆಗಳು ಕಾಣಸಿಗುತ್ತದೆ. ಉನ್ನತ ಮಟ್ಟದ ಶಿಕ್ಷಣ ಎಲ್ಲರಿಗೂ ಸಿಗಲು ಪ್ರಾರಂಭವಾಗಿದೆ. ಹಾಗಾಗಿ ಕೆನರಾದಲ್ಲಿ ಬ್ರಿಟಿಷ್ ಯುಗದಲ್ಲಿ ಭೂಮೌಲ್ಯ

ಹೆಚ್ಚಾಗಿದೆ. ಈ ನಾಡಿನ ಸಮೃದ್ಧತೆಯನ್ನು ಸಾರಲು ಬೇರೆ ಉದಾಹರಣೆಗಳೇ ಬೇಕಿಲ್ಲ ಎಂದಿದ್ದಾರೆ. ಕೆನರಾ ಬ್ರಿಟಿಷರ ವಶವಾದಾಗ ಅದು 5,92,000 ಜನಸಂಖ್ಯೆಯನ್ನು ಹೊಂದಿದ್ದರೆ, ಅರ್ಧ ಶತಮಾನದಲ್ಲಿ ಅದು 9,99,011ಕ್ಕೆ ಇಮ್ಮಡಿಗೊಂಡಿತು. ಇದೇ ರೀತಿಯ ಅಭಿವೃದ್ಧಿಯನ್ನು ವಾಣಿಜ್ಯ ಕ್ಷೇತ್ರದಲ್ಲಿ, ರಫ್ತು ಮತ್ತು ಆಮದಿನಲ್ಲಿ ಗಮನಿಸಬಹುದು. ಈ ಕಾಲದಲ್ಲಿ ರಸ್ತೆಗಳು ಅಭಿವೃದ್ಧಿಯಾಗಿವೆ. ಲೇಖಕರಾದ ಜೋಸೆಫ್ ಸಲ್ಡಾನರು ಬುಕನಾನ್‌ರನ್ನು ಉಲ್ಲೇಖಿಸಿ ಆತ ಕೆನರಾಕ್ಕೆ ಭೇಟಿ ನೀಡಿದಾಗ ಇಲ್ಲಿ ಸುಮಾರು 8000 ಜೀತದಾಳುಗಳನ್ನು ಗಮನಿಸಿದ್ದ ಬಗ್ಗೆ ಹೇಳಿದ್ದ. ಆದರೆ ಇದು ಈಗ ಸಂಪೂರ್ಣವಾಗಿ ನಾಶವಾಗಿದೆ. ಕೃಷಿ ಕ್ಷೇತ್ರವು ಬೆಳವಣಿಗೆಯನ್ನು ಕಂಡಿದ್ದು, ಪರ್ವತದ ತಪ್ಪಲು ಪ್ರದೇಶಗಳನ್ನು ಕೃಷಿಯಡಿ ತರಲಾಗಿದೆ ಎಂದು ಲೇಖಕರು ವಸಾಹತುಶಾಹಿ ಆಳ್ವಿಕೆಗೆ ಪೂರ್ಣ ಪ್ರಮಾಣದ ಅಂಕಗಳನ್ನು ನೀಡಿದ್ದಾರೆ. ಭೂಕಂದಾಯವು ಅಭಿವೃದ್ಧಿಯಾಗಿದ್ದು, ಜನರ ನೈತಿಕ ಹಾಗೂ ಭೌತಿಕ ಕ್ಷೇತ್ರಗಳೆರಡರಲ್ಲಿಯೂ ಬೆಳವಣಿಗೆಯಾಗಿದೆ. ಈ ಅಭಿವೃದ್ಧಿ ಎಂಬುದು ಜನಸಂಖ್ಯೆ, ವಾಣಿಜ್ಯ, ಉತ್ಪಾದನೆ, ನೇಯ್ಗೆ, ಕೈಗಾರಿಕೆ, ಶಿಕ್ಷಣ, ಸಾರಿಗೆ–ಸಂಪರ್ಕ, ಹೊಸ ಕೈಗಾರಿಕೆಗಳಾದ ಇಟ್ಟಿಗೆ ತಯಾರಿ, ಕಬ್ಬಿಣ, ಕಾಫಿ ಕೀಳುವುದು ಹೀಗೆ ಎಲ್ಲಾ ಕ್ಷೇತ್ರಗಳಿಗೆ ತಲುಪಿದೆ ಎಂದು ಬ್ರಿಟಿಷ್ ಕಾಲಾವದಿಯನ್ನು ವೈಭವಿಕರಿಸಲಾಗಿದೆ. ಜೊತೆಗೆ 1799ರ ನಂತರ, ಬ್ರಿಟಿಷ್ ಆಡಳಿತಾವಧಿಯಲ್ಲಿ ಕ್ರೈಸ್ತರು ಅಭಿವೃದ್ಧಿಯಾಗಿದ್ದಾರೆ ಎಂದು ಲೇಖಕರು ಪ್ರತ್ಯೇಕವಾಗಿ ವಾದಿಸಿದ್ದಾರೆ. ಮುಂದುವರಿದು ಕ್ರೈಸ್ತರ ಮತ್ತು ಇಂಗ್ಲೀಷರ ಸಂಬಂಧವೆಂಬುದು 17ನೇ ಶತಮಾನದ ಮಧ್ಯಭಾಗಕ್ಕೆ ಸಂಬಂಧಿಸಿದೆಂದು, ಕ್ರೈಸ್ತರು ಅಂದಿನಿಂದ ಕ್ರಿ.ಶ.1857ರ ಸಿಪಾಯಿದಂಗೆಯ ಸಂದರ್ಭದಲ್ಲಿಯೂ ಬ್ರಿಟಿಷರನ್ನು ಬೆಂಬಲಿಸಿದ್ದರು ಎಂದು ಕ್ರೈಸ್ತರ ವಿಧೇಯತೆಯನ್ನು ಪ್ರತಿಪಾದಿಸಿದ್ದಾರೆ. ಈ ರೀತಿ ಬ್ರಿಟಿಷರು ದೇಶವನ್ನು ಸರ್ವನಾಶದಿಂದ ರಕ್ಷಿಸಿ, ಈಗ ಅದನ್ನು ಎಲ್ಲಾ ಕ್ಷೇತ್ರಗಲ್ಲಿಯೂ ಅಭಿವೃದ್ಧಿ ಕಡೆ ಮುಂದುವರಿಸುತ್ತಿದ್ದು, ಈ ಶ್ರೇಷ್ಟ ಮಟ್ಟದ ಬೆಳವಣಿಗೆಯನ್ನು ಕೆನರಾ ಈ ಮೊದಲು ಕಂಡಿರಲಿಲ್ಲ ಎನ್ನುತ್ತಾ, ವಸಾಹತುಶಾಹಿ ಸರಕಾರ ಮುಂದುವರಿಯುವಂತೆ ಪ್ರಾರ್ಥಿಸುವುದು ನಮ್ಮ ಕರ್ತವ್ಯ ಎಂದು ಕೆನರಾದಲ್ಲಿ ವಸಾಹತುಶಾಹಿ ಆಳ್ವಿಕೆಯ ಇರುವಿಕೆಯನ್ನು ಬಲಿಷ್ಟವಾಗಿ ಸಮರ್ಥಿಸಿದ್ದಾರೆ.[13]

'ಮ್ಯಾಂಗಲೋರ್ ಮ್ಯಾಗಜೀನ್'ನ ಉದ್ದಗಲಕ್ಕೂ ಟಿಪ್ಪು ಹಲವು ಲೇಖಕರಿಂದ ಟೀಕೆಗೆ ಒಳಗಾಗಿದ್ದರೆ, ಕ್ರಿ.ಶ.1799ರ ನಂತರ ಆಳ್ವಿಕೆ ನಡೆಸಿದ ಬ್ರಿಟಿಷರ ಆಳ್ವಿಕೆಯ ಬಗ್ಗೆ ಪ್ರಶಂಸನೀಯ ಮಾತುಗಳನ್ನೇ ಕಾಣಬಹುದು. ಶ್ರೀರಂಗಪಟ್ಟಣದ ಪಥನದ ನಂತರ ಕರ್ನಲ್ ವೆಲ್ಲೆಸ್ಲಿಯು, ಈ ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಕೆಲಸವನ್ನು ಸಮರ್ಥವಾಗಿ ನಿಭಾಯಿಸಿದ್ದಾನೆ ಎಂದು ಜೆ.ಎ.ಸಲ್ಡಾನರು ಹೊಗಳಿದ್ದಾರೆ. ಕೆನರಾವು ರಾಜಕೀಯವಾಗಿ ಸುಭದ್ರವಾದ, ಸ್ಥಿರವಾದ ಆಳ್ವಿಕೆಯನ್ನು ಕಾಣಲಿಲ್ಲ ಎಂದು ಆಪಾದಿಸುತ್ತಾ 'ಭಾರತಕ್ಕೆ ಅಗತ್ಯವಾಗಿರುವುದೇನೆಂದರೆ ಅದರ ಅಸಂಖ್ಯಾತ ಪಂಗಡ, ಸಮುದಾಯ, ಜಾತಿ, ಪಂಥ ಮತ್ತು ಧರ್ಮಗಳಿಗೆ ವಿದೇಶಿ ಆಕ್ರಮಣದಿಂದ ರಕ್ಷಣೆ ನೀಡುವಂತಹ,

ಎಲ್ಲರಿಗೂ ಸಮಾನವಾದ ನ್ಯಾಯದಾನ ಹಾಗೂ ಜೀವನಕ್ಕೆ, ಸಂಪತ್ತಿಗೆ ಬದ್ರತೆ ಮತ್ತು ಮುಕ್ತವಾಗಿ ಅವರ ಧರ್ಮಪಾಲನೆಗೆ ಅವಕಾಶ ಕಲ್ಪಿಸುವ ಕೇಂದ್ರೀಕೃತ ಆಡಳಿತ ಅಗತ್ಯವಿದೆ' ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. ಆದ್ದರಿಂದ ಭಾರತಕ್ಕೆ ವಿದೇಶಿ ಆಳ್ವಿಕೆಯ ಅಗತ್ಯವಿದೆ. ಆದರೆ ಎಲ್ಲಾ ಯುರೋಪಿನ ರಾಷ್ಟ್ರಗಳು ಸುಭದ್ರ ಆಡಳಿತ ನೀಡಲು ಶಕ್ತರಾಗಿಲ್ಲ. ಅದು ಸೂರ್ಯ ಮುಳುಗದಿರುವ ನಾಡಗಿರುವ ಇಂಗ್ಲೆಂಡ್‌ಗೆ ಸಾಧ್ಯ ಎನ್ನುತ್ತಾ, ಅದು ಸ್ವಾತಂತ್ರ್ಯ ಮತ್ತು ಸಂವಿಧಾನಿಕ ಸರಕಾರವನ್ನು ಶತಮಾನಗಳಿಂದ ಅನುಭವಿಸುತ್ತಿದ್ದು, ಅದು ಹೋದ ಕಡೆ ತನ್ನ ದ್ವಜದ ಜೊತೆಗೆ, ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ಒದಗಿಸಿದೆ. ಭಾರತದಲ್ಲಿ ಅದು ಇಲ್ಲಿನ ಜನರ ನೆಮ್ಮದಿಗಾಗಿ ದುಡಿಯುತ್ತದೆ. ಹೀಗೆ ಮೇ4, 1799ರಂದು ಕೆನರಾ ಇಂಗ್ಲೇಡ್‌ನ ವಶವಾಗಿ, ಅದರ ಚತುರ ಆಳ್ವಿಕೆಯನ್ನು ಅನುಭವಿಸುತ್ತಾ, ದಶಕಗಳ ಕಾಲ ಶಾಂತಿ, ಸ್ಥಿರ ಅಭಿವೃದ್ಧಿ ಹಾಗೂ ಸಮೃದ್ದಿಯನ್ನು ಕಂಡಿತು ಎನ್ನುತ್ತಾ "ನಾವು ಈ ಶತಕದ (1899) ಸಂಭ್ರಮವನ್ನು ಹಾಡಿ ಕೊಂಡಾಡಬೇಕೆಂದು" ಹೇಳಿರುವ ಸಲ್ದಾನರು ವಸಾಹತುಶಾಹಿ ಆಳ್ವಿಕೆಯನ್ನು ಅಪಾರವಾಗಿ ಮೆಚ್ಚಿ, ಅದರ ಅಗತ್ಯತೆ ಇದೆಯೆಂದು ಅಭಿಪ್ರಾಯಪಟ್ಟದ್ದಾರೆ.[14] 'ಮ್ಯಾಂಗಲೋರ್ ಮ್ಯಾಗಜೀನ್' ನಲ್ಲಿನ ಲೇಖನವೊಂದು ಮಸೀದಿಯನ್ನು ಗುರುತಿಸಿ, ಅದು ಟಿಪ್ಪುವಿನ ಕತ್ತಲೆಯ ಕಾಲವನ್ನು ನೆನಪಿಸುತ್ತದೆಂದೂ, ಬ್ರಿಟಿಷ್ ಕಾಲದಲ್ಲಿ ಬಂದ ಪೋಲಿಸ್ ಠಾಣೆ, ಅಂಚೆ ಕಛೇರಿ, ಟೆಲಿಗ್ರಾಫ್ ತಂತಿ, ಪ್ರಾಥಮಿಕ ಶಾಲೆ ಇವು ಬ್ರಿಟಿಷರ ಆಳ್ವಿಕೆಯ ಕಾಲದ ಶಾಂತಿ ಮತ್ತು ಸುಭದ್ರತೆಯ ಕುರುಹುಗಳಾಗಿವೆ ಎಂದು ವಿವರಿಸುತ್ತದೆ.[15]

ಪತ್ರಿಕೆಯು ವಸಾಹತುಶಾಹಿಯ ಕಾರ್ಯಚರಣೆಯನ್ನು ಸರಿ ಎಂದು ಸಮರ್ಥಿಸುತ್ತಾ, ಅದಕ್ಕೆ ಬೆಂಬಲ ವ್ಯಕ್ತಪಡಿಸಿದೆ. ಭಾರತವು ತನ್ನನ್ನು ತಾನೇ ಆಳ್ವಿಕೆ ನಡೆಸಲು ಶಕ್ತವಾಗಿಲ್ಲ. ಆದ್ದರಿಂದ ಅದಕ್ಕೆ ಪ್ರಜಾಪ್ರಭುತ್ವ ಮಾದರಿಯ ಆಳ್ವಿಕೆಯ ಅನುಭವವಿರುವ ಬ್ರಿಟನಿನ ಆಳ್ವಿಕೆಯ ಅಗತ್ಯವಿದೆ ಎಂದು ಬ್ರಿಟಿಷ್ ವಸಾಹತುಶಾಹಿತ್ವವನ್ನು ಕೆನರಾದಲ್ಲಿ ಸಮರ್ಥಿಸಿರುವ ಪತ್ರಿಕೆ, ಈ ರೀತಿಯ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆ ಮುಂದುವರಿಯಲು ನಾವು ಪ್ರಾರ್ಥಿಸಬೇಕೆಂದು ಹಾಗೂ ಅದರ ಅಗತ್ಯತೆಯನ್ನು ಒತ್ತಿ ಹೇಳಿರುವುದನ್ನು ಕಾಣಬಹುದು. ಈ ಪತ್ರಿಕೆಯು ವಸಾಹತುಶಾಹಿಯ ಆಳ್ವಿಕೆಯ ಕಾಲದಲ್ಲಿ ನಡೆದ ಬ್ರಿಟಿಷ್ ವಿರೋಧಿ ಚಟುವಟಿಕೆಗಳು, ರಾಷ್ಟ್ರೀಯ ಚಳುವಳಿಗಳ ಕುರಿತು ಏನನ್ನು ಉಲ್ಲೇಖಿಸುವುದಿಲ್ಲ. ಈ ಮ್ಯಾಗಜೀನ್ ಅಸ್ಥಿತ್ವಕ್ಕೆ ಬಂದಾಗ ಭಾರತದಲ್ಲಿ ಆಗಲೇ ರಾಷ್ಟ್ರೀಯ ಚಳುವಳಿಯ ಮೊದಲ ಹಂತವು ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನ ಮೂಲಕ ಪ್ರಾರಂಭವಾಗಿದೆ. ಇದರ ಪ್ರಭಾವ ಕರ್ನಾಟಕ ಕರಾವಳಿಯಲ್ಲಿಯೂ ನಾವು ಕಾಣಬಹುದು. ಕಾಲೇಜು ವಿದ್ಯಾರ್ಥಿಗಳು, ವಕೀಲರು, ಶಿಕ್ಷಕರು ಹಾಗೂ ಈ ಪ್ರದೇಶದ ಇನ್ನಿತರ ಜನರು ರಾಷ್ಟ್ರೀಯ ಚಳುವಳಿಗಳಲ್ಲಿ ಪಾಲ್ಗೊಂಡಿರುವುದನ್ನು ನಾವು ಕಾಣುತ್ತೇವೆ. ಆದರೆ ಈ ಬಗ್ಗೆ ಮ್ಯಾಗಜೀನ್ 'ಮೌನ' ಉತ್ತರವನ್ನೇ ಕೊಡುತ್ತದೆ. ಮ್ಯಾಗಜೀನ್‌ನ 'ಮೌನತೇ' ಅದರ ನಿಲುವನ್ನು ಸ್ಪಷ್ಟಪಡಿಸುತ್ತದೆ. ರಾಷ್ಟ್ರೀಯತೆಯ ಬಗ್ಗೆಗಿನ ಯಾವುದೇ ಬಗೆಯ ಲೇಖನಕ್ಕೂ ಈ

'ಮ್ಯಾಗಜೀನ್' ನಲ್ಲಿ ಅಸ್ಪದವಿರದಿದ್ದುದು ಸ್ಪಷ್ಟವಾಗಿ ಕಾಣುತ್ತದೆ. ಈ ಕಾಲೇಜಿನಲ್ಲಿ ಕಲಿತು ಉನ್ನತ ಹುದ್ದೆಗಳನ್ನು ಅಲಂಕರಿಸಿದ ವಿವಿಧ ವ್ಯಕ್ತಿಗಳ ಪರಿಚಯವನ್ನು ಕಾಲೇಜಿನ ಕ್ರೋನಿಕಲ್‌ನಲ್ಲಿ, ಅವರ ಮರಣದ ನಂತರ ಶ್ರದ್ಧಾಂಜಲಿ ಅರ್ಪಿಸಿರುವುದನ್ನು ಈ ಮ್ಯಾಗಜೀನ್‌ನಲ್ಲಿ ಕಾಣಬಹುದು. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಯಾವುದೇ ಹಳೆ ವಿದ್ಯಾರ್ಥಿಯ ಪರಿಚಯ ಅಥವಾ ಶೃದ್ಧಾಂಜಲಿ ಈ ಮ್ಯಾಗಜೀನ್‌ನಲ್ಲಿ ಕಂಡು ಬರುವುದಿಲ್ಲ. ಈ ಮ್ಯಾಗಜೀನ್ ಓದುಗರಲ್ಲಿ ವಸಾಹತುಕಾಲದ ಕೆನರಾದಲ್ಲಿ ಯಾವುದೇ ಲೋಪದೋಷಗಳಿರಲಿಲ್ಲ, ಯಾವುದೇ ತೊಡಕಿರಲಿಲ್ಲ ಹಾಗೂ ಯಾವುದೇ ಚಳುವಳಿಗಳಿರಲಿಲ್ಲ ಎಂಬ ಅಭಿಪ್ರಾಯ ಮೂಡಿಸಿದ್ದರೆ ಆಶ್ಚರ್ಯಪಡಬೇಕಿಲ್ಲ.

ಸಂದರ್ಭ ಸೂಚಿ

1. ಶಿವರಾಮ ಪಾದೇಕಲ್, *ಸಂಮ್ ಮುಮೆಂಟ್ಸ್ ಇನ್ ದಿ ಹಿಸ್ಟರಿ ಆಫ್ ಕನ್ನಡ, ಪರ್ಸ್ಪೆಕ್ಟಿವ್ಸ್ ಆನ್ ದಕ್ಷಿಣ ಕನ್ನಡ ಆ್ಯಂಡ್ ಕೊಡಗು*, ದಶವಾರ್ಷಿಕ ಸಂಪುಟ, ಮಂಗಳೂರು ವಿಶ್ವವಿದ್ಯಾನಿಲಯ, ಶಾರದ ಪ್ರೆಸ್, ಮಂಗಳೂರು ,1991, ಪುಟ 33.
2. ಡೆನಿಸ್ ಫೆರ್ನಾಂಡಿಸ್, *ಯೂಸಿಂಗ್ ದಿ ಪಾಸ್ಟ್ : ಮ್ಯಾಂಗಲೋರ್ ಮ್ಯಾಗಜೀನ್ ಆ್ಯಂಡ್ ದಿ ಹಿಸ್ಟರಿ ಆಫ್ ಕೆನರಾ*, ಪ್ರೋಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, 66ನೇ ಅಧಿವೇಶನ, ಶಾಂತಿನಿಕೇತನ, 2005–06, ಪುಟ 918.
3. ಬಿ.ಸುರೇಂದ್ರ ರಾವ್, *ಸೌತ್ ಕೆನರಾ ಇನ್ ದಿ 19th ಸೆಂಚುರಿ : ಕಾಂಟ್ರಡಿಕ್ಷನ್ ಇನ್ ದಿ ಕೊಲೋನಿಯಲ್ ಡಿಸ್‌ಕೋರ್ಸ್, ಪರ್ಸ್ಪೆಕ್ಟಿವ್ಸ್ ಆನ್ ದಕ್ಷಿಣ ಕನ್ನಡ ಆ್ಯಂಡ್ ಕೊಡಗು*, ದಶವಾರ್ಷಿಕ ಸಂಪುಟ, ಮಂಗಳೂರು ವಿಶ್ವವಿದ್ಯಾನಿಲಯ, ಶಾರದ ಪ್ರೆಸ್, ಮಂಗಳೂರು 1991, ಪುಟ 64.
4. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ I, ನಂ:1, 1897, ಪುಟ 13.
5. ಅದೇ, ಪುಟ 18.
6. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:2, 1901, ಪುಟ 18–19.
7. ಅದೇ, ಪುಟ 22.
8. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:2, 1901, ಪುಟ 48.
9. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:8, 1902, ಪುಟ 245.
10. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:4, 1901, ಪುಟ 101–102.
11. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ IV, ನಂ:4, 1907, ಪುಟ 149.
12. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ III, 1905, ಪುಟ 249.
13. ಅದೇ, ಪುಟ 251–253.
14. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ I, ನಂ:5, 1899, ಪುಟ 142–143.
15. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ II, ನಂ:2, 1901, ಪುಟ 35.

ಅಧ್ಯಾಯ:ಆರು

ಉಪ ಸಂಹಾರ

ಅಧ್ಯಾಯ:ಆರು

ಉಪ ಸಂಹಾರ

'ಮ್ಯಾಂಗಲೋರ್ ಮ್ಯಾಗಜೀನ್' ಯಾವುದೇ ಒಂದು ವಿಷಯದ ಬಗ್ಗೆ ಚರ್ಚೆ ನಡೆಸದೇ ಅದು ಹಲವು ವಿಷಯಗಳಿಗೆ ಸಂಭಂದಿಸಿದಂತೆ ಚರ್ಚೆ ಹಾಗೂ ಮಾಹಿತಿಯನ್ನು ನೀಡುತ್ತದೆ. ಇದು ಸೌತ್ ಕೆನರಾದ 19ನೇ ಶತಮಾನ ಕೊನೆಯ ಹಾಗೂ 20ನೇ ಶತಮಾನದ ಪ್ರಾರಂಭದ ಕಾಲದ ಬಗ್ಗೆ ಚಿತ್ರಣವನ್ನು ನೀಡುತ್ತದೆ. ಮ್ಯಾಂಗಲೋರ್ ಮ್ಯಾಗಜೀನ್ ತನ್ನ ಪ್ರಥಮ ಪ್ರಕಟನೆಯಲ್ಲಿಯೇ ಇದು ಸಂತ ಆಲೋಶಿಯಸ್ ಕಾಲೇಜಿನ ಮಾಧ್ಯಮ ಹಾಗೂ ದಾಖಲೆ ಎಂದು ಸ್ಪಷ್ಟವಾಗಿ ತಿಳಿಯಪಡಿಸಿದೆ. ಆದರೆ ಇದು ಕಾಲೇಜು ಹಾಗೂ ಶೈಕ್ಷಣಿಕ ವಿಷಯಗಳೊಂದಿಗೆ ಕೆಲವೊಂದು ಕಡೆ ಕ್ರೈಸ್ತರಿಗೆ ಸಂಬಂಧಿಸಿದ, ವಸಾಹತುಶಾಹಿ ಅಧಿಕಾರಿಗಳ ಹಾಗೂ ಆಳ್ವಿಕೆಗೆ ಸಂಬಂದಿಸಿದಂತೆ ಮಾಹಿತಿಯನ್ನು ನೀಡುತ್ತದೆ. ಇದು ಬಹುಮುಖ್ಯವಾಗಿ ಒಂದು ಜೆಸ್ಯೂಟ್ ಸಂಸ್ಥೆಯ ಪತ್ರಿಕೆಯಾದುದರಿಂದ ಧಾರ್ಮಿಕ ಲೇಖನಗಳನ್ನು ಪ್ರಕಟಿಸುವಲ್ಲಿ ಆಸಕ್ತಿವಹಿಸಿದೆ. ಈ ಧಾರ್ಮಿಕ ವಿಷಯಗಳು ಕೆಲವು ಪ್ರಮುಖ ಜೆಸ್ಯೂಟರ ಜೀವನ ಸಾಧನೆ ಹಾಗೂ ಮಿಶನರಿಗಳ ಕಾರ್ಯಚರಣೆಗಳನ್ನು ವೈಭವಪೂರಿತವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಶೈಕ್ಷಣಿಕವಾಗಿ ಹಲವು ಲೇಖನಗಳಿದ್ದು ಇವು ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣ ವ್ಯವಸ್ಥೆ ಸಂಬಂಧಿಸಿವೆ. ಜೆಸ್ಯೂಟರು ಶಿಕ್ಷಣದ ಗುಣಮಟ್ಟವನ್ನು ಉನ್ನತಮಟ್ಟಕ್ಕೆ ಏರಿಸಲು ಆಸಕ್ತರಾಗಿದ್ದು ಆ ಅಂಶಗಳನ್ನು ಅವರು ತಮ್ಮ ಲೇಖನಗಳಲ್ಲಿ ಸ್ಪಷ್ಟವಾಗಿ ಬಿಂಬಿಸಿರುವುದನ್ನು ಕಾಣಬಹುದು. ಐತಿಹಾಸಿಕವಾಗಿ ಹಲವು ಲೇಖನಗಳಿದ್ದು, ಅವು ಕೆನರಾ ಸೇರಿದಂತೆ ಭಾರತದ ವಿವಿಧ ಪ್ರದೇಶಗಳ ಚರಿತ್ರೆಯ ಮೇಲೆ ತನ್ನ ಬೆಳಕು ಹರಿಸುತ್ತವೆ. ಈ ವಿಷಯಗಳನ್ನು ಬಿಟ್ಟರೆ ಕಾಲೇಜಿಗೆ ಸಂಬಂಧಿಸಿದ ಮಾಹಿತಿಯನ್ನು, ಮಂಗಳೂರಿನ ಶ್ರೀಮಂತ ಕ್ರೈಸ್ತರ ಬಗ್ಗೆ ಹಾಗೂ ಧಾರ್ಮಿಕ ವ್ಯಕ್ತಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಪತ್ರಿಕೆಯಲ್ಲಿ ಪ್ರಾರಂಭದ ಕೆಲವು ಸಂಪುಟಗಳಲ್ಲಿನ ಲೇಖನಗಳು ಒಬ್ಬನೇ ವ್ಯಕ್ತಿ ಬರೆದಂತಿವೆ. ಇದಕ್ಕೆ ಕಾರಣ ಫಾ। ಮೋರ್‌ರವರು ಲೇಖನಗಳನ್ನು ಸಂಗ್ರಹಿಸಿ ಅದನ್ನು ಪುನರ್ ರಚಿಸುತ್ತಿದ್ದಿರಬೇಕು. ಈ ರೀತಿ ಮ್ಯಾಂಗಲೋರ್ ಮ್ಯಾಗಜೀನ್ ತನ್ನ ಉತ್ಕೃಷ್ಟ ದರ್ಜೆಯ ಲೇಖನಗಳು ಹಾಗೂ ಅದ್ಭುತ ಶೈಲಿಯ ಆಂಗ್ಲ ಸಾಹಿತ್ಯಕ್ಕೆ ಸಂಭಂದಿಸಿದಂತೆ ಪ್ರಖ್ಯಾತವಾಗಿತ್ತು ಎಂದು ಹೇಳಬಹುದು. ಆದರೆ ಕೊನೆಯ ಸಂಪುಟಗಳು ಈ ಮೇಲಿನ ಅಂಶಗಳೆರಡನ್ನು ಹಾಗೂ ಅಮೂಲ್ಯವಾದ ಲೇಖನಗಳ ಸಂಗ್ರಹವನ್ನು ಕಳಕೊಂಡು ಕ್ಷೀಣಿಸುತ್ತಾ ಬಂದಿರುವುದನ್ನು ಕಾಣಬಹುದು.

ಈ ಪತ್ರಿಕೆಯಲ್ಲಿನ ಕೆಲವೊಂದು ಪ್ರಮುಖ ಬರವಣಿಗೆಗಳ ಮೇಲೆ ಬೆಳಕು ಹರಿಸುವುದಾದರೆ ಹಲವು ಜೆಸ್ಯೂಟರ, ಮಿಶನರಿಗಳ ಜೀವನ ಸಾಧನೆಗಳ ಬಗ್ಗೆ ಲೇಖನಗಳಿವೆ. ಪಾದ್ರೆ ಸೆಬಾಸ್ಟಾವೋ ಡೋ

ರೇಗೋ [Padre Sebastao da Rego] ಹೆಚ್. ಬುಜೋನಿ ಎಸ್.ಜೆ[H. Buzzoni] ಹಾಗೂ ಡೆನಿಸ್ ಲೂಯಿಸ್‌ರವರ ಆಕಾರಗಳ ಆದಾರದಿಂದ ಪೂಜ್ಯ ಜೋಸೆಫ್ ವಾಜ್‌ರ ಬಗ್ಗೆಗಿನ ಹಲವಾರು ಲೇಖನಗಳು, ಅದೇ ರೀತಿ ಸಾಲ್ಸೆಟ್‌ನ ಹುತ್ಮಾರ ಬಗ್ಗೆಗಿನ ಲೇಖನಗಳಿವೆ. ಎಸ್.ಜೆ.ಥೋಮಸ್ ವಾಜ್‌ರ 'ಫೇಸಸ್ ಆಪ್ ಸೆಂಟ್ರಲ್ ಆಪ್ರಿಕನ್ ಲೈಪ್' [Phases of central African life], ಬಲ್ತು ಚೆಟ್ನಿ ಹೇಳಿರುವ ಟಿಪ್ಪುವಿನ ಬಗ್ಗೆಗಿನ ಹಲವು ಕಥೆಗಳು, ಹೆಚ್. ಎಸ್,ಬ್ರೌನ್ [H.S.B] ರವರ 'ದಿ ಟಿನ್ನಿವೆಲ್ಲಿ ಪಾರ್ಲ್ ಫಿಶರೀಸ್' [The Tinnevelly pearl Fisheries (ಇಲ್ಲಿ ಲೇಖಕರು ಸ್ವತಃ ಈ ಮೀನುಗಾರಿಕೆಯ ಮುಖ್ಯಸ್ಥರಾಗಿದ್ದು, ಮಂಗಳೂರು ಬಂದರಿನ ಒಬ್ಬ ಬ್ರಿಟಿಷ್ ಅಧಿಕಾರಿಯಾಗಿದ್ದರು.)] 'ಟಿನ್ನಿವೆಲ್ಲಿ ಚಾಂಕ್ ಫಿಶರೀಸ್' [Tinnevelly Chank Fisheries] ಹಾಗೂ ಪ್ರಾಚೀನ ನಾವಿಕರ ಕಥೆಗಳು ಎಂಬ ಲೇಖನಗಳಿದ್ದರೆ, ಜೆ.ಎ.ಸಲ್ಡಾನರ 'ಔಟ್‌ಲೈನ್ಸ್ ಆಫ್ ದಿ ಹಿಸ್ಟರಿ ಆಫ್ ಕೆನರಾ' ಹಾಗೂ 'ಲ್ಯಾಂಡ್ ಟೆನ್ಯೂರ್ ಇನ್ ದಿ ನೇಟ್ಟಿವ್ ಸ್ಟೇಟ್ಸ್ ಆಫ್ ವೆಸ್ಟರ್ನ್ ಇಂಡಿಯಾ' ಎಂಬ ಹಲವು ಕಂತುಗಳ ದೀರ್ಘ ಐತಿಹಾಸಿಕ ಲೇಖನಗಳು; ಜೆಸ್ಯೂಟ್ ಸಂಸ್ಥೆಗಳಾದ ಸಂತ ಜೋಸೆಫ್ ಕಾಲೇಜಿನ ಬಗ್ಗೆ ಫಾ। ಮಾಫಾಯಿರವರ ಹಸ್ತಪ್ರತಿಗಳಿಂದ ' ಎ ಹಿಸ್ಟರಿ ಆಫ್ ದಿ ಡಯೋಸಿಸ್ ಆಫ್ ಮ್ಯಾಂಗಲೋರ್' ಎಂಬ ಹಲವು ಕಂತುಗಳ ಲೇಖನಗಳು; ಡಬ್ಲ್ಯು. ಎಲ್. ಹೆಚ್‌ರ ' ಮೇಮೋರಿಸ್ ಆಫ್ ಮೊಕಾವೋ' [Macao]; ರೆ। ಪ್ರೇಡ್ರಿಕ್ ಸಿ. ಕೋಲ್‌ಬೇ ಡಿ. ಡಿ. [Rev Frederick c. Kolbe D. D.] ರವರ 'ಡಿ ಮಿಸ್ಟ್ರಿ ಆಪ್ ಶ್ಹಲ್ [Shall] ಆ್ಯಂಡ್ ಮ್ಹಿಲ್' ಲೇಖನಗಳು, ಪಾಮಾರ್‌ರವರ ಮಂಗಳೂರು ಬಂದರು ಮತ್ತು ರೈಲ್ವೆ ಹಾಗೂ ಗೇರುಸೊಪ್ಪ್ ಪಾಲ್ಸ್ ಬಗ್ಗೆ ಲೇಖನಗಳು, ಆಂಗ್ಲ ಭಾಷೆಯಲ್ಲಿ ಹಲವು ಕವನಗಳಿದ್ದು ಅವುಗಳನ್ನು ಮುಖ್ಯವಾಗಿ ಜೋಸೆಫ್ ಸಲ್ಡಾನ, ಹೆಚ್. ವೈಟ್‌ಹೆಡ್ಡ್, ಸಿಸ್ಟರ್. ಎಮ್. ಕ್ರಿಸ್ಟೋಫರ್, ಹೆಚ್. ಎಸ್.ಬಿ ಹಾಗೂ ಎಮ್. ಡಬ್ಲ್ಯು .ಎಸ್‌ರ ಆಂಗ್ಲ ಕವನಗಳಿದ್ದರೆ, ಲ್ಯಾಟಿನ್ ಭಾಷೆಯಲ್ಲಿ ಎಲ್. ಎಮ್. ರೆಝಡ್ಡ್. ಎಸ್.ಜೆ [L.M.Z.S.J] ರವರ ಕವನಗಳಿವೆ. ಇವುಗಳಿಲ್ಲದೇ 'ಪರ್ಸನಲ್ ಪ್ಯಾರಗ್ರಾಫ್ಸ್ [Personal Paragraphs] ಎಂಬ ಶೀರ್ಷಿಕೆಯಡಿ ಕಾಲೇಜಿಗೆ, ಮಂಗಳೂರಿಗೆ ಸಂಬಂಧಿಸಿದ ಕೆಲವು ಪ್ರತಿಷ್ಠಿತರ ಬಗ್ಗೆ ಮಾಹಿತಿ, ಜೆಸ್ಯೂಟರ ಬಗ್ಗೆ ವಿವರಣೆ, ಹಾಗೂ ವಸಾಹತು ಅಧಿಕಾರಿಗಳ ಬಗ್ಗೆ ಮಾಹಿತಿಯನ್ನು ಪ್ರತಿ ಪ್ರಕಟನೆಯಲ್ಲೂ ಮುದ್ರಿಸಲಾಗಿದೆ. ಅದೇ ರೀತಿ ಪ್ರತಿ ಪ್ರಕಟನೆಯಲ್ಲಿ ಕಾಲೇಜಿಗೆ ಸಂಬಂಧಿಸಿದಂತೆ ವಿಷಯಗಳನ್ನು 'ಕಾಲೇಜ್ ಕ್ರೋನಿಕಲ್' [College Chronicle] ಎಂಬ ಶೀರ್ಷಿಕೆಯಡಿ ಪ್ರಕಟಿಸಲಾಗಿದ್ದು, ಪ್ರತಿ ಪುಸ್ತಕದಲ್ಲಿ ಮಂಗಳೂರಿನ, ಕಾಲೇಜಿಗೆ ಸಂಬಂಧಿಸಿದವರಿಗೆ ಜೆಸ್ಯೂಟರಿಗೆ ಹಾಗೂ ಕೆಲವು ಧಾರ್ಮಿಕ ಸನ್ಯಾಸಿನಿಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಗಿದೆ. ಕಾಲೇಜಿಗೆ ಸಂಬಂಧಿಸಿದಂತೆ ಕ್ರಿಕೆಟ್ ಪಂದ್ಯಾಟಗಳ ಫಲಿತಾಂಶವನ್ನು ವಿವರವಾಗಿ

ನೀಡಲಾಗಿದೆ. ಅದೇ ರೀತಿ ಎಲ್ಲಾ ಪ್ರಕಟನೆಗಳಲ್ಲೂ ಸಂಪಾದಕರ ವಿವರಣೆಗಳನ್ನು ಹೊಂದಿದ್ದು, ಅಲ್ಲಿ ಲೇಖಕರು ಆ ಪತ್ರಿಕೆಯಲ್ಲಿನ ಲೇಖನಗಳ ಮೇಲೆ ಸ್ವಲ್ಪ ಮಟ್ಟದ ವಿವರಣೆ ಹಾಗೂ ಈ ಪತ್ರಿಕೆ ಬೇರೆ ಪತ್ರಿಕಾ ಸಂಪಾದಕರ ಕೈ ತಲುಪಿರುವುದರ ಬಗ್ಗೆ ವಿವರಣೆಗಳಿವೆ. ಮ್ಯಾಂಗಲೋರ್ ಮ್ಯಾಗಜೀನ್‌ನ ನಾಲ್ಕನೇ ಸಂಪುಟದಲ್ಲಿ ಫಾ। ಮುಟ್ಟಿ ಎಸ್. ಜೆ, ಆರ್ಥರ್ ಲಾವ್ಲೇ [Lawley] ಹಾಗೂ ಫಾ। ಮುಲ್ಲರ್ ಎಸ್. ಜೆ. ರವರ ಭಾವಚಿತ್ರಗಳನ್ನು ಹೊಂದಿದೆ. ಕೊನೆಯ (8) ಸಂಪುಟವು ಕಾಲೇಜಿಗೆ ಸಂಬಂಧಿಸಿದಂತೆ ಹಲವು ಫೋಟೋಗಳನ್ನು ಹೊಂದಿದ್ದು, 'ಮ್ಯಾಂಗಲೋರ್ ಮ್ಯಾಗಜೀನ್' ತನ್ನ ನಾಲ್ಕನೇ ಸಂಪುಟದಿಂದ ಮಂಗಳೂರಿನ ಹಲವು ಪ್ರಖ್ಯಾತ ಸಂಸ್ಥೆಗಳ ಜಾಹಿರಾತುಗಳನ್ನು ಒಳಗೊಂಡಿದೆ.

'ಮ್ಯಾಂಗಲೋರ್ ಮ್ಯಾಗಜೀನ್' ಒಂದು ಜೆಸ್ಯೂಟ್ ಸಂಸ್ಥೆಯ ಪತ್ರಿಕೆಯಾಗಿದ್ದು, ಕಾಲೇಜು ಪತ್ರಿಕೆಗಿಂತ ಉನ್ನತ ಶ್ರೇಣಿಯಲ್ಲಿ ಮುದ್ರಣ ಹೊಂದಿದೆ. ಜೊತೆಗೆ ಫಾ। ಮೋರರ ಸಮರ್ಥ ಸಂಪಾದಕತ್ವದಿಂದ ಇದು ಬಹು ಸಮೃದ್ಧವಾಗಿ ಮೂಡಿಬಂದಿದೆ. ಆದರೆ ಕೊನೆಯವರೆಗೆ ಇದೇ ಗುಣಮಟ್ಟವನ್ನು ಅದು ಉಳಿಸಿಕೊಳ್ಳವಲ್ಲಿ ವಿಫಲವಾಗಿದೆ, 'ಮ್ಯಾಂಗಲೋರ್ ಮ್ಯಾಗಜೀನ್'ನ ಅಧ್ಯಾಯನದಿಂದ ಅದಕ್ಕೆ ಕ್ರೈಸ್ತ ಧರ್ಮ ಹಾಗೂ ವಸಾಹತುಶಾಹಿ ಆಳ್ವಿಕೆಯ ಬಗ್ಗೆ ಬಹಳಷ್ಟು ಕಾಳಜಿ ಇತ್ತು ಎಂದು ತಿಳಿಯಬಹುದು. ಆದುದರಿಂದಲೇ ಈ ಪತ್ರಿಕೆಯಲ್ಲಿ ಪೋರ್ಚುಗೀಸರು ಬಿದನೂರು ಅರಸರು ಹಾಗೂ ಬ್ರಿಟಿಷರು ಹೊಗಳಿಕೆ ಗಳಿಸಿಕೊಂಡು, ಇನ್ನೊಂದು ದಿಕ್ಕಿನಲ್ಲಿ ಟಿಪ್ಪುಸುಲ್ತಾನ್ ಎಲ್ಲಾ ರೀತಿಯಲ್ಲೂ ಟೀಕೆಗೆ ಗುರಿಯಾಗಿದ್ದಾನೆ. ಈ ಪತ್ರಿಕೆಯಲ್ಲಿನ ವಿವಿಧ ಲೇಖಕರಿಂದ ಪೋರ್ಚುಗೀಸರು ವಿಜ್ರಂಭಿಸಿಕೊಂಡಿದ್ದಾರೆ. ಅದಕ್ಕೆ ಕಾರಣವೆಂದರೆ ಕೆನರಾದ ಕ್ರೈಸ್ತರ ಚರಿತ್ರೆಯ ಹಿನ್ನಲೆ ಪೋರ್ಚುಗೀಸರೊಂದಿಗೆ ನೇರವಾಗಿ ಬೆಸೆದು ಕೊಂಡಿದೆ. ಪೋರ್ಚುಗೀಸರ ರಕ್ಷಣೆಯಲ್ಲಿ ಕ್ರೈಸ್ತರು ಕೆನರಾಕ್ಕೆ ಬಂದರು. ನಂತರ ಪೋರ್ಚುಗೀಸರು ಗೋವಾದಿಂದ ಇವರ ಅಧ್ಯಾತ್ಮಿಕತೆಗಳನ್ನು ಪೂರೈಸಲು ಮಿಶನರಿಗಳನ್ನು ಕಳುಹಿಸಿದರು ಎಂಬ ವಿವರಣೆಯನ್ನು ನೀಡಿದ್ದಾರೆ. ಜೊತೆಗೆ ಪೋರ್ಚುಗೀಸರು ಕೆನರಾದಲ್ಲಿ ಸ್ಥಳೀಯ ಅರಸು ಮನೆತನಗಳ ಮೇಲೆ ಕಪ್ಪ ಪಡೆಯುವ ಉದ್ದೇಶದಿಂದ ದಾಳಿ ನಡೆಸಿದ್ದು, ಅವರು ಇಲ್ಲಿನ ಕರಾವಳಿಯ ಬಾರಕೂರು, ಮಂಗಳೂರು ಇತ್ಯಾದಿ ನಗರಗಳನ್ನು ಹಲವುಬಾರಿ ಧ್ವಂಸಗೈದ ಬಗ್ಗೆ ಮಾಹಿತಿ ಇದೆ. ಆದರೆ ಇದು ಲೇಖಕರಿಗೆ ಕ್ರೂರತ್ವದ ಸ್ವರೂಪ ಎಂದು ಅನಿಸಲೇ ಇಲ್ಲ. ಆದರೆ ಇಲ್ಲಿನ ಸ್ಥಳೀಯ ಅರಸರು ಅವರ ಹತೋಟಿಯನ್ನು ಇಲ್ಲಿ ವಿರೋಧಿಸಿದಾಗ ಆ ಸಂಧರ್ಭದಲ್ಲಿ ಪೋರ್ಚುಗೀಸರು ಇಲ್ಲಿನ ಅರಸರಿಂದ ಭಾರೀ ವಿರೋಧವನ್ನು ಎದುರಿಸಿ, ಬಹಳ ಕಷ್ಟದಿಂದ ಅವರ ನೆಲೆಗಳನ್ನು ಸಂರಕ್ಷಿಸಿದರು ಎಂದು ಪೋರ್ಚುಗೀಸರ ಬಗ್ಗೆ ಕರುಣೆಯುಳ್ಳ ವಿವರಣೆ ಇದೆ.

ಕ್ರೈಸ್ತರು ಇಲ್ಲಿಗೆ ಗೋವಾದಿಂದ ವಲಸೆ ಬಂದರು ಎಂದು ಹೇಳುತ್ತಾ ಅಲ್ಲಿ ಲೇಖಕರು ಇವರ ವಲಸೆಗೆ ಕಾರಣವಾದ ವಿವಿಧ ಕಾರಣಗಳನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ. ಆದರಲ್ಲೂ ಅವರು ಪೋರ್ಚುಗೀಸರಿಂದ ಮಾತಾಂತರ ಹೊಂದಿದರೂ. ನಂತರ ಆದರ ಮತೀಯ ನೀತಿಯಿಂದಾಗಿ ವಲಸೆ

ಬಂದರು ಎಂಬುದನ್ನು ಸಂಪೂರ್ಣವಾಗಿ ಮರೆಮಾಚಲಾಗಿದೆ. ಈ ವಿಷಯದ ಕಡೆ ಒಂದಿಷ್ಟಾದರೂ ಬೆಳಕು ಹರಿಸಲೇ ಇಲ್ಲ. ಇಲ್ಲಿ ಕೆನರಾದ ಸಮಾಜದ ಬಗ್ಗೆ ತಿಳಿಸುವ ಕೆಲವು ಲೇಖನಗಳಿದ್ದು ಅವು ಇಲ್ಲಿನ ಸಮಾಜವನ್ನು ಸರಿಯಾಗಿ ಅರ್ಥೈಸುವಲ್ಲಿ ವಿಫಲವಾಗಿವೆ ಅಥವಾ ಅವು ಪೂರ್ವಗ್ರಹ ಪೀಡಿತವಾಗಿ ರಚಿತವಾಗಿವೆ ಎನ್ನಬಹುದು. ಜೊತೆಗೆ ಇಲ್ಲಿ ಸಮಾಜದಲ್ಲಿ ಕ್ರೈಸ್ತರು ಉನ್ನತವರ್ಗದವರು ಹಾಗೂ ಸುಸಂಸ್ಕೃತರೆಂಬ ವಿವರಣೆಗಳನ್ನು ಕಾಣಬಹುದು. ಕೆನರಾ ಬಹುಸಂಖ್ಯಾತ ಕ್ರೈಸ್ತರು ಕೃಷಿಕರಾಗಿದ್ದು, ಸಮಾಜದ ಇತರರಂತೆ ಏಳುಬೀಳುಗಳಿಂದ ಕೂಡಿದ ಜೀವನ ಶೈಲಿ ಅವರದ್ದಾಗಿತ್ತು.

ಈ ಪತ್ರಿಕೆಯಲ್ಲಿ ಎಲ್ಲಾ ಲೇಖಕರಿಂದ ನಡೆದಿರುವ ಒಂದು ಪ್ರಯತ್ನವೆಂದರೆ ಟಿಪ್ಪುವಿನ ಖಂಡನೆ ಹಾಗೂ ವಸಾಹತು ಆಳ್ವಿಕೆಯ ಸಮರ್ಥನೆಯಾಗಿದೆ. 'ಮ್ಯಾಂಗಲೋರ್ ಮ್ಯಾಗಜೀನ್' ಇದು ರಾಜಕೀಯ ವಿಷಯಗಳಿಂದ ಮುಕ್ತವಾಗಿದೆ ಎಂದು ಹೇಳಿಕೊಂಡಿದೆ. ಆದರೆ ಹಾಗೆ ಅದು ಎಂದೂ ನಡೆದುಕೊಂಡಿಲ್ಲ. ಒಂದು ಕಡೆ ವಸಾಹತುಶಾಹಿ ಆಡಳಿತದ ಸಮರ್ಥನೆ ಕಂಡು ಬಂದರೆ, ಇನ್ನೊಂದೆಡೆ ಇದೇ ಆಳ್ವಿಕೆಯ ವಿರುದ್ಧ ನಡೆದ ರಾಷ್ಟ್ರೀಯ ಚಳುವಳಿಯ ಬಗ್ಗೆ ಮೌನವಹಿಸಿದೆ. ಈ ಚಳುವಳಿಯ ಪ್ರಸ್ತಾಪ ಅದು ಮಾಡಿರುವುದಿಲ್ಲ. ಒಂದೆರಡು ಕಡೆ ಅದರ ಉಲ್ಲೇಖ ಮಾಡಿದರೂ ಅದು ದಂಗೆಕೋರರು ಸಮಾಜದ ಶಾಂತಿಯನ್ನು ಕದಡುವ ಪ್ರಯತ್ನ ಮಾಡಿದ್ದಾರೆ ಎಂಬ ಚಿತ್ರಣವನ್ನು ನೀಡಲು ಪ್ರಯತ್ನಿಸಿದೆ. ಕ್ರಿ.ಶ.1799ರಲ್ಲಿ ಕೆನರಾವನ್ನು ತಮ್ಮ ಸ್ವಾಧೀನ ಮಾಡಿಕೊಂಡ ಬ್ರಿಟಿಷರು ತಮ್ಮ ಆಳ್ವಿಕೆಯ ಸಮರ್ಥನೆಗಾಗಿ ಹಿಂದಿನ ಆಡಳಿತೆಯನ್ನು ದೂಷಿಸುವುದು ಸರ್ವೇಸಾಮಾನ್ಯ. ಸ್ಟರಕರ "ಮೆಡ್ರಾಸ್ ಡಿಸ್‌ಟ್ರಿಕ್ಟ್ ಮ್ಯಾನ್‌ವಲ್ ಆಫ್ ಸೌತ್‌ಕೆನರಾ" ಈ ಅಭಿಪ್ರಾಯವನ್ನು ಒಳಗೊಂಡಿದೆ. ಟಿಪ್ಪುವಿನ ಆಡಳಿತದಿಂದ ಜನರು ರೋಸಿ ಹೋಗಿದ್ದರು, ಕಷ್ಟ ಅನುಭವಿಸಿದ್ದರು ಹಾಗಾಗಿ ಬ್ರಿಟಿಷರು ಕೆನರಾವನ್ನು ವಶಪಡಿಸಿಕೊಂಡರು ಎಂದು ಸ್ಟರಕ್ ಕೆನರಾವನ್ನು ಬ್ರಿಟಿಷರು ವಶ ಪಡಿಸಿದ್ದಕ್ಕೆ ಸಮರ್ಥನೆಯನ್ನು ನೀಡುತ್ತಾರೆ. ಇದೇ ವಾದವನ್ನು ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿಯೂ ಕಾಣಬಹುದು. ಯುರೋಪಿನ ಮಿಶನರಿಗಳಿಗೆ ಬ್ರಿಟಿಷ್ ಆಳ್ವಿಕೆಯ ಪ್ರಮುಖವಾಗಿತ್ತು ಅದೇ ಮುಂದುವರಿಯಬೇಕಿತ್ತು. ಅದೇ ಆಶಯ ಕೆನರಾ ಇತಿಹಾಸದಲ್ಲಿ ಕಂಡು ಬರುತ್ತದೆ.

ಇದರಲ್ಲಿನ ವಾದಗಳು ಕ್ರೈಸ್ತರನ್ನು ಕೇಂದ್ರೀಕರಿಸಿಯೇ ಇವೆ. ಉದಾಹರಣೆಗೆ ಕ್ರೈಸ್ತರಿಗೆ ಆಶ್ರಯ ನೀಡಿದಕ್ಕಾಗಿ ಬ್ರಿಟಿಷರು, ಬಿದನೂರು ಅರಸರು ಇಲ್ಲಿ ಹೀರೋಗಳಾಗಿದ್ದಾರೆ. ಈ ಪತ್ರಿಕೆಯನ್ನು ಕ್ರೈಸ್ತರ ರಕ್ಷಣೆಗಾಗಿ ಬಳಸಿ ಕೊಂಡಿರುವುದನ್ನು ಕಾಣಬಹುದು. ಅದಕ್ಕೆ ಅದು ಕೊಟ್ಟಿರುವ ಸಮರ್ಥನೆ ಎಂದರೆ ಕ್ರೈಸ್ತರ ರಕ್ಷಣೆಗಾಗಿ ನಮ್ಮ ಪತ್ರಿಕೆಯ ಕೆಲವು ಪುಟಗಳನ್ನು ಬಳಸಿಕೊಂಡರೆ ಅದು ತಪ್ಪೆಂದು ನಮಗೆ ಅನಿಸುವುದಿಲ್ಲ. ಅದೇ ರೀತಿ ಕೆಥೋಲಿಕರಿಗೆ ಇಲ್ಲಿ ಬೇರೆ ವೇದಿಕೆಗಳಿಲ್ಲ ಎಂದು ಹೇಳುತ್ತಾ, ಕೆಥೋಲಿಕ್ ಹಾಗೂ ಜೆಸ್ಯೂಟ್ ವಿರುದ್ಧ ಕಾರ್ಯಚರಿಸುತ್ತಿರುವ ಬಾಸೆಲ್ ಮಿಶನಿನ ವಿರುದ್ಧ ವಾಗ್ದಾಳಿ ನಡೆಸುವುದನ್ನು ಕಾಣಬಹುದು.

ಅದೇ ರೀತಿ 'ಮ್ಯಾಂಗಲೋರ್ ಮ್ಯಾಗಜೀನ್' ಒಂದು ಉನ್ನತ ವರ್ಗದ ಜನರಿಗೆ ಹಾಗೂ ಪ್ರತ್ಯೇಕವಾಗಿ ಕ್ರೈಸ್ತರಿಗೆ ಮೀಸಲಿಟ್ಟ ಪತ್ರಿಕೆ ಎಂದು ಅಭಿಪ್ರಾಯ ಪಡಬಹುದು. ಇದು ಜನ ಸಾಮಾನ್ಯರಿಗೆ ಎಟಕದಂತಹ ಪತ್ರಿಕೆಯಾಗಿತ್ತು. ಅದೇ ರೀತಿ ಇದು ಕೇವಲ ಶಿಕ್ಷಿತ ವರ್ಗದವರ ಪತ್ರಿಕೆಯಾಗಿತ್ತು. ಇದರ ವಾರ್ಷಿಕ ಚಂದಾವು ಒಂದು ರೂಪಾಯಿಯಾಗಿದ್ದು, ಆಕಾಲದಲ್ಲಿ ಇದು ಬಡವರಿಗೆ ಕನಸಿನ ಮಾತಾಗಿತ್ತು. ಸಂತ ಅಲೋಶಿಯಸ್ ಕಾಲೇಜು ಪತ್ರಿಕೆಯ ಮೂಲಕ ತನ್ನ ಕಾಲೇಜಿನ ಹಳೇ ವಿದ್ಯಾರ್ಥಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿತ್ತು. ಇದು ಹಳೇ ಮತ್ತು ಪ್ರಸಕ್ತ ವಿದ್ಯಾರ್ಥಿಗಳ ಹಾಗೂ ಕಾಲೇಜಿನ ನಡುವಿನ ಒಂದು ಕೊಂಡಿಯಾಗಿತ್ತು. ಈ ಪತ್ರಿಕೆಯಲ್ಲಿರುವ ಲೇಖನಗಳನ್ನು ಕೂಡಾ ಕಾಲೇಜಿನ ಹಳೇ ವಿದ್ಯಾರ್ಥಿಗಳು ಬರೆದಿರುವುದನ್ನು ಕಾಣಬಹುದು. ಉದಾಹರಣೆಗೆ ಕೆನರಾದ ಇತಿಹಾಸ ಬರೆದ ಜೆ.ಎ.ಸಲ್ಡಾನರು ಕಾಲೇಜಿನ ಹಳೇ ವಿದ್ಯಾರ್ಥಿಯಾಗಿದ್ದರು, ಜೊತೆಗೆ ಈ ಪತ್ರಿಕೆಗೆ ಐರೋಪ್ಯರಾದ ಹೆಚ್.ಎಸ್.ಬಿ.ಪಾಮಾರ್‌ರವರು ಲೇಖನಗಳನ್ನು ಬರೆದಿರುವುದನ್ನು ಕಾಣಬಹುದು. "ಮಾಂಗಲೋರ್ ಮ್ಯಾಗಜೀನ್" ಒಂದು ಕಾಲೇಜ್ ಪತ್ರಿಕೆಯಾಗಿದ್ದರೂ, ಇತಿಹಾಸದ ಪುಟಗಳಲ್ಲಿ ಅದು ಒಂದು ಪ್ರಖ್ಯಾತ ಪತ್ರಿಕೆಯಾಗಿಯೇ ವಿಜ್ರಂಭಿಸಿದೆ. ಪ್ರಸ್ತುತ ಇದು ಸಂತ ಅಲೋಶಿಯಸ್ ಕಾಲೇಜು ಗ್ರಂಥಾಲಯ ಹಾಗೂ ಮದ್ರಾಸ್ ಪತ್ರಾಗಾರದಲ್ಲಿ (ಆರ್‌ಕೈಯಿಸ್‌ನಲ್ಲಿ) ಮಾತ್ರ ಲಭ್ಯವಿದ್ದು ಒಂದು ಅಪೂರ್ವ ಐತಿಹಾಸಿಕ ದಾಖಲೆಯಾಗಿದೆ.

ಮ್ಯಾಂಗಲೋರ್ ಮ್ಯಾಗಜೀನ್‌ನ ಮುಖ ಪುಟ

ಅನುಬಂಧ – ಒಂದು

THE

MANGALORE MAGAZINE

THE ORGAN AND RECORD

OF

ST. ALOYSIUS' COLLEGE

MANGALORE

VOLUMES I AND II.

MANGALORE:

...NTED AND PUBLISHED BY J. M. S...

CODIALBAIL PRESS.

ಮ್ಯಾಂಗಲೋರ್ ಮ್ಯಾಗಜೀನ್‌ನ ಪ್ರಥಮ ಪ್ರಕಟಣೆಯಲ್ಲಿನ ಸಂಪಾದಕೀಯ

ಅನುಬಂಧ – ಎರಡು

THE MANGALORE MAGAZINE.

MANGALORE, CHRISTMAS, 1897.

This Magazine is published in the interests of the College, its graduates and undergraduates, and incidentally in those of the city of Mangalore and South Canara. It is the organ of the College and the record of its doing, as well as a bond of union between its present and past students. It will be issued quarterly for the first year. The subscription for the four numbers is one Rupee, or four annas a copy.

The Editor's Chair.

REV. Denis Fernandes, S. J., writes to us from Shembaganur, Madura:—"It may interest you to know that years ago Father Sergeant started a monthly. His pupils of the College Department were contributors in prose and poetry, and a serial story was written for it by an uncommonly clever Brahmin lad. The paper was in manuscript and meant for circulation in the College classes only; but it had a very short life and never went beyond two or three numbers." This is certainly an interesting bit of news. Should any of our friends chance to have a copy of that short-lived Magazine he would gratify us exceedingly by letting us have a peep at it.

—In this first number of our Magazine we devote considerable space, but not more than the subject deserves, to an account of the life, work, and obsequies of the late Father Willy, first Rector and Principal of this College. The sketch of his life was written by one of his brethren in Bombay for the *Catholic Examiner;* the account of his work in Mangalore is a letter from His Lordship the Bishop of Mangalore, who had ample opportunities of knowing him; and the account of the obsequies was furnished from the College to the *Catholic Examiner*. A likeness of Father Willy would be a fitting frontispiece to the initial number of the Magazine. We live in hope of being able to furnish one for binding along with the index when the first volume comes to a happy termination. Our thanks are due to His Lordship for making so valuable a contribution to the Magazine.

—We have in hand a sketch of the life of the late Father Hugh Ryan, S. J., who rendered service so marked to the College during the ten years he laboured in it as a professor. Should any of his old pupils or acquaintances have any reminiscences beyond the common that might be of service, they will be gratefully received by the Editor. Father Ryan raised to himself a monument more durable than brass by his zealous labour in the College. It is the only one that has been raised to him so far. We are given to understand that the College authorities are about to put up a mural slab or tablet to mark his last resting place. Would it not be proper for his old pupils to forestall them and pay that tribute to their great benefactor? Should this idea be taken up we offer our humble services and those of the Magazine to bring it to a happy conclusion.

—The design on the cover of the Magazine, as well as that of the three youths sitting Humpty-Dumpty-like on the wall, is from the pen of Father Joseph Gioanini, S. J., of Jeppoo Seminary. It may interest many to hear that there is a tradition that one of the Three Kings, or Wise Men from the East, who followed the Star of Bethlehem eighteen hundred and ninety-seven years ago, was from Malabar. The design of the three young Mangaloreans was suggested by a cut in *The Clongownian*, a very excellent College paper published twice a year by the students of Clongowes Wood College (S. J.), County Kildare, Ireland. The engraving was done in the Codialbail Press.

—We tender our sincerest thanks to the many kind friends who have interested themselves in the bringing out of *The Mangalore Magazine*. It is mainly due to them that we are enabled to present it to our readers as it appears. The next issue may be expected about Easter. Contributions in prose and verse from Aloysians or Mangaloreans, on subjects within the scope and purpose of the Magazine, will be thankfully received. It is our aim and intention to make it as racy of the soil as possible.

—To one and all of our subscribers and readers we wish "A Merry Xmas and a Happy New Year."

ಮ್ಯಾಂಗಲೋರ್ ಮ್ಯಾಗಜೀನ್‌ನ ಪ್ರಥಮ ಸಂಪುಟದಲ್ಲಿ ಪ್ರಕಟವಾದ ಮಂಗಳೂರು ನಗರದ ಭೂಪಟ


ಅನುಬಂಧ - ಮೂರು





ಮ್ಯಾಂಗಲೋರ್ ಮ್ಯಾಗಜೀನ್‌ನ ಪ್ರಥಮ ಸಂಪುಟದಲ್ಲಿ ಪ್ರಕಟವಾದ ದಕ್ಷಿಣ ಭಾರತದ ರೈಲ್ವೆಯ ಭೂಪಟ

ಅನುಬಂಧ – ನಾಲ್ಕು



ಆಕರ ಸೂಚಿ

ಪ್ರಾಥಮಿಕ ಆಕರಗಳು

1. *ಅವರ್ ಲೇಡಿ ಆಫ್ ರೆಮೇಡಿಯಸ್ ಪ್ಯಾರಿಶ್ ಕಿರೆಂ: ಸವೆನಿರ್* (Bicentennial Jubilee celebration) 1997.
2. ಜೆ, ಸ್ಪರಕ್, ಮೆಡ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್ಸ್ : *ಸೌತ್ ಕೆನರಾ*, ಸಂಪುಟ1, ಗವರ್ನಮೆಂತ್ ಪ್ರೆಸ್, ಮದ್ರಾಸ್, 1894.
3. *ಮ್ಯಾಂಗಲೋರ್ ಮ್ಯಾಗ್‌ಜೀನ್*, ಎಂಟು ಸಂಪುಟಗಳು (1897– 1933), ಕೊಡ್ಯಾಲ್‌ಬೈಲ್ ಪ್ರೆಸ್, ಮಂಗಳೂರು.
4. ಸಂತ ಅಲೋಶಿಯಸ್ ಕಾಲೇಜು, ಮಂಗಳೂರು: *ಸೆಂಟಿನರಿ ಸವೆನಿರ್*, ಶಾರದ ಪ್ರೆಸ್, ಮಂಗಳೂರು, 1980.
5. ಸ್ಟೋಕ್ಸ್, ಜಾನ್, *ಸಿಲೆಕ್ಷನ್ ಫ್ರಮ್ ದಿ ರೆಕಾರ್ಡ್ ಆಫ್ ದಿ ಕಲೆಕ್ಟರ್ ಆಫ್ ಸೌತ್ ಕೆನರಾ*, ಮಂಗಳೂರು, 1885.

ದ್ವಿತೀಯ ಆಕರಗಳು

1. ಭಟ್, ಪಿ ಗುರುರಾಜ್, *ಸ್ಟಡಿಸ್ ಇನ್ ತುಳುವ ಇಸ್ಟರಿ ಆ್ಯಂಡ್ ಕಲ್ಚರ್*, ಮಣಿಪಾಲ, 1975.
2. ಭಟ್, ಪಿ ಗುರುರಾಜ್, *ತುಳುನಾಡು*, ಭವ್ಯವಾಣಿ ಪಬ್ಲಿಕೇಶನ್, ಉಡುಪಿ, 1963.
3. ಭಟ್, ಪಿ ಗುರುರಾಜ್, *ಅಂಟ್ಯಿಕ್ವಿಟೀಸ್ ಆಫ್ ಸೌತ್ ಕೆನರಾ*, ಉಡುಪಿ, 1969.
4. ಭಟ್, ಎನ್. ಶ್ಯಾಮ್, *ಸೌತ್ ಕೆನರಾ 1799–1960: ಎ ಸ್ಟಡಿ ಇನ್ ಕೊಲೋನಿಯಲ್ ಎಡ್‌ಮಿನಿಸ್ಟ್ರೇಶನ್ ಆ್ಯಂಡ್ ರಿಜೀನಲ್ ರೇಸ್ ಪೋನ್ಸ್*, ಮಿತ್ತಲ್ ಪಬ್ಲಿಕೇಶನ್, ನವದೆಹಲಿ, 1998.
5. ಬೌರಿಂಗ್ , ಎಲ್. ಬಿ, *ಹೈದರಾಲಿ ಆ್ಯಂಡ್ ಟಿಪ್ಪು ಸುಲ್ತಾನ್*, ಆಕ್ಸ್‌ಪರ್ಡ್, 1969.
6. *ಚರಿತ್ರೆ ಅಧ್ಯಯನ*, ಸಂಪುಟ : 1, ಸಂಚಿಕೆ:1, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 2005. ಆದಿತ್ಯ ಪ್ರಿಂಟರ್ಸ್, ಬೆಂಗಳೂರು,
7. ಡಿ'ಸೋಜ, ಎ. ಎಲ್. ಪಿ, *ಹಿಸ್ಟರಿ ಆಫ್ ದಿ ಕೆಥೋಲಿಕ್ ಕಮ್ಯೂನಿಟಿ ಆಫ್ ಸೌತ್ ಕೆನರಾ*, ಸಲಕ್ ಪ್ರಿಂಟರ್ಸ್, ಮಂಗಳೂರು. 1983.

8. ಐಗಳ್, ಗಣಪತಿ ರಾವ್, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*, ಶಾರದ ಪ್ರೆಸ್, ಮಂಗಳೂರು, 1923.

9. ಕಾಮತ್, ದೇವದತ್ತ್, *ದಿ ಬರ್ನಿಂಗ್ ಬುಶ್: ದಿ ಹಿಸ್ಟರಿ ಆಫ್ ದಿ ಕರ್ನಾಟಕ ಜೆಸ್ಯೂಟ್ ಪ್ರಾವಿನ್ಸ್*, ಸಂಪುಟ 1, ಡೆಕ್ಕನ್ ಡಾಟಾ ಫೋರ್ಮ್ಸ್ ಬೆಂಗಳೂರು, 2006.

10. ಪಿಂಟೊ, ಪಿಯುಸ್ ಫಿಡೆಲಿಸ್, *ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (ಕ್ರಿ.ಶ. 1500– 1763)* ಸಮನ್ವಯ ಪ್ರಕಾಶನ, ಮಂಗಳೂರು, 1999.

11. ಪಿಂಟೊ, ಪಿಯುಸ್ ಫಿಡೆಲಿಸ್, *ಆಂಗ್ಲೋ– ಮೈಸೂರು ಸಂಬಂಧದ ಹಿನ್ನಲೆಯಲ್ಲಿ ಕರಾವಳಿ ಕರ್ನಾಟಕದ ಕೊಂಕಣಿ ಕ್ರೈಸ್ತರು (ಕ್ರಿ.ಶ. 1761–1799)* ಸಮನ್ವಯ ಪ್ರಕಾಶನ, ಮಂಗಳೂರು, 1999.

12. *ಪ್ರೋಸಿಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್*, 66ನೇ ಅಧಿವೇಶನ, 2005–06, ಲೈಥೋ –ಕಲರ್ ಪ್ರಿಂಟರ್ಸ್, ಅಲಿಘರ್, 2006.

13. *ಪರ್ಸ್ಪೆಕ್ಟಿವ್ಸ್ ಆನ್ ದಕ್ಷಿಣ ಕನ್ನಡ ಆ್ಯಂಡ್ ಕೊಡಗು:* ಮಂಗಳೂರು ವಿಶ್ವವಿದ್ಯಾನಿಲಯ, ದಶವಾರ್ಷಿಕ ಸಂಪುಟ, ಶಾರದ ಪ್ರೆಸ್ , ಮಂಗಳೂರು 1991.

14. ರಮೇಶ, ಕೆ. ವಿ, *ಎ ಹಿಸ್ಟರಿ ಆಫ್ ಸೌತ್ ಕೆನರಾ*, ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ, 1970.

15. ರಮೇಶ, ಕೆ. ವಿ, *ತುಳುನಾಡಿನ ಇತಿಹಾಸ*, ಗೀತಾ ಬುಕ್ ಹೌಸ್, ಮೈಸೂರು , 1969.

16. ರಾಜ, ಉದಯ ವರ್ಮ, *ತುಳುನಾಡಿನ ಗತ ವೈಭವ* , ಕನ್ನಡ ಸಾಹಿತ್ಯ ಪರಿಷತ್ತು, ಕೇರಳ ವಿಶೇಷ ಘಟಕ, ಕಾಸರಗೋಡು, 1998.

17. ಸಾಲೆತ್ತೋರ್, ಬಿ. ಎ, *ಎನ್ಸಿಯೆಂಟ್ ಕರ್ನಾಟಕ*, ಸಂಪುಟ 1 : ಹಿಸ್ಟರಿ ಆಫ್ ತುಳುವ, ಓರಿಯಂಟಲ್ ಬುಕ್ ಎಜೆನ್ಸ್, ಪೂನಾ, 1936.

18. ಸಿಕ್ವೇರಾ, ಜೋರ್ಜ್ ಪೌಲಿನೋ ಡಾ ಪ, *ಟೈಗರ್ ಆಫ್ ಮೈಸೂರ್ ಆ್ಯಂಡ್ ಕೆನರಾ ಕ್ರಿಶ್ಚಿಯನ್*, ಕೋಡಿಯಾಲ್ ಬೈಲ್ ಪ್ರೆಸ್, ಮಂಗಳೂರು, 1986.

19. ಶರ್ಮ, ಕಡವ ಶಂಭು, *ತುಳುದೇಶ ಭಾಷಾ ವಿಚಾರವು*, ಜನತಾ ಪವರ್ ಪ್ರೆಸ್, ದ. ಕನ್ನಡ, 1970.

20. ಸಿಲ್ವಾ, ಸೆವ್ರಿನ್, *ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ*, ಸಂಪುಟ 1,ಸ್ಟಾರ್ ಆಫ್ ಕೆನರಾ ಪ್ರೆಸ್, ಕುಮುಟಾ,1957.

21. ಟೆಲ್ಶ್ಬರ್ , ಕೆಟ್, *ಇಂಡಿಯಾ ಇನ್ಸ್ಕ್ರಾಬ್ಡ್ :ಯುರೋಪಿಯನ್ ಆ್ಯಂಡ್ ಬ್ರಿಟಿಷ್ ರೈಟಿಂಗ್ಸ್ ಆನ್ ಇಂಡಿಯಾ : 1600– 1800* , ನವದೆಹಲಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, 1994.